ಮೈಸೂರು ವಿಧಾನಸಭೆ

MYSORE LEGISLATIVE ASSEMBLY

Thursday, 31st May 1973/Jaishta 10, 1895 S.E.

The House met in the Council Chamber, Vidhana Soudha, at Nine of the Clock.

MADAM SPEAKER (SMT. K. S. NAGARATHNAMMA) in the Chair.

MYSORE LAND REFORMS AMENDMENT BILL, 1973
as repoted by the J.S.C.:—(Conssideration of clause).

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) :— ಸರ್ಕಾರದ ಭೂ ಸುಧಾರಣಾ ನೀತಿಗೆ ಧಿಕ್ಕಾರ, ಮಂತ್ರಾಧಿಪತಿಗಳಿಗೆ ಧಿಕ್ಕಾರ ......

(ಕೆಲವು ಮಾನ್ಯ ಸದಸ್ಯರು ಎದ್ದು ಘೋಷಣೆಗಳನ್ನು ಮಾಡುತ್ತಿದ್ದರು).

ಅಧ್ಯಕ್ಷರು :— ಈ ಸಭೆಯಲ್ಲಿ ಈ ರೀತಿ ಘೋಷಣೆಗಳನ್ನು ಮಾಡಬಾರದು ಕೆಲವು ಸದಸ್ಯರು ಹೊಸಬರು ಇರಬಹುದು. ಆದರೆ ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು ಇನ್ನು ಇತರರು ಇಲ್ಲಿಗೆ ಹೊಸಬರೇನೂ ಅಲ್ಲ. ಈ ಘೋಷಣೆಗಳನ್ನು ಎಲ್ಲಿ ಮಾಡಬೇಕೋ ಅಲ್ಲಿ ಮಾಡಬೇಕು ಹೊರತು ಇಲ್ಲಿ ಈರೀತಿ ಮಾಡುವುದು ಸರಿಯಲ್ಲ. ತಾವು ಇಲ್ಲಿ ಸದಸ್ಯರು ಆಗಿದ್ದೀರಿ. ನೀವು ಒಬ್ಬೊಬ್ಬ ಸದಸ್ಯರು ಕೂಡ ಒಂದೊಂದು ಲಕ್ಷದ ಪ್ರತಿನಿಧಿಗಳಾಗಿ ಇಲ್ಲಿಗೆ ಬಂದಿದ್ದೀರಿ. ನಿಮ್ಮನ್ನು ಆರಿಸಿ ಕಳುಹಿಸಿರುವುದು ಈ ಘೋಷಣೆ ಮಾಡುವುದಕ್ಕಲ್ಲ. ಏನಾದರೂ ಇದ್ದರೆ ವಿಧಿನಿಯಮಗಳಿಗನುಗುಣವಾಗಿ ಹೋಗಿ, ಬೇಕಾದರೆ ಈ ಬಿಲ್ಲನ್ನು ವೋಟ್ ಡೌನ್ ಮಾಡಬಹುದು. ಆದರೆ ಅದು ಬಿಟ್ಟು ಈ ರೀತಿ ನೀವು ಪ್ರತಿಭಟನೆ ಮಾಡುವುದು ಸರಿಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್ :— ಈ ಸಭೆಯಲ್ಲಿ ಸರ್ಕಾರದವರು ತಿದ್ದುಪಡಿಗಳ ಮೇಲೆ ತಿದ್ದುಪಡಿಗಳನ್ನು ತರುತ್ತಿದ್ದಾರೆ. ಅದಕ್ಕೆ ನಾನು ಕೇಳುವುದು, ಈಗ ತಂದಿರುವ ತಿದ್ದುಪಡಿಗಳು ಅಖೈರು ತಿದ್ದುಪಡಿಗಳೇ ಅಥವಾ ಇನ್ನೂ ಇದೆಯೋ ಎನ್ನುವುದನ್ನು ತಾವು ಸ್ಪಷ್ಟಪಡಿಸಬೇಕು.

ಅಧ್ಯಕ್ಷರು :— ಈ ಸಭೆಗೆ ತಾವೇನು ಹೊಸಬರಲ್ಲ, ಇಂತ ದೊಡ್ಡ ಬಿಲ್ಲು ಇಲ್ಲಿ ಪಾಸು ಮಾಡುವಾಗ ಈ ರೀತಿ ಆಗುತ್ತದೆ. ಆದ್ದರಿಂದ ಈ ಬಿಲ್ಲು ಪಾಸು ಮಾಡಲು ತಾವೆಲ್ಲಾ ತಮ್ಮ ಸಹಕಾರವನ್ನು ನೀಡಬೇಕು.

ಶ್ರೀ. ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ) :— ಹಿಂದೆಯೂ ಕೂಡ ಲ್ಯಾಂಡ್ ರೀಫಾರಂಸ್ ಬಿಲ್ಲು ಬಂತು. ಆಗಲೂ ಕೂಡ ಸರ್ಕಾರದವರು ತಮ್ಮ ಅಭಿಪ್ರಾಯವನ್ನು ಸಷ್ಟವಾಗಿ ತಿಳಿಸಿದ್ದಾರೆ. ಪುನಃ ಅದು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಹೋಯಿತು. ಆ ಸಂದರ್ಭದಲ್ಲಿ ಅವರು ಮೂಲಭೂತವಾದ ತಿದ್ದುಪಡಿಗಳನ್ನು ತೆಗೆದುಕೊಂಡು ಬರಲಿಲ್ಲ. ಆದುದರಿಂದ ಈಗ ನಾನು ಹೇಳುತ್ತಾ ಇರುವುದು ಏನೆಂದರೆ ಈಗ ಈ ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿರುವ ಸದಸ್ಯರು ಇದರ ಬಗ್ಗೆ ಎಲ್ಲಾ ಚರ್ಚೆ ಮಾಡಿದ್ದಾರೆ. ಮತ್ತೆ ಪುನಃ ಅದರ ಮೇಲೆ ತಿದ್ದುಪಡಿಗಳನ್ನು ತೆಗೆದುಕೊಂಡು ಬಂದರೆ ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಈ ಬಿಲ್ಲು ಹೋಗಿ ಏನು ಪ್ರಯೋಜನವಾಯಿತು ? ಪುನಃ ಅದರ ಮೇಲೆ ತಿದ್ದುಪಡಿ ತಂದು ಜನಗಳಿಗೆ ವಂಚನೆ ಮಾಡಿ, "ರೈತರಿಗೆ ವಂಚನೆ ಮಾಡುವ ರೀತಿಯಲ್ಲಿ ಕೆಲಸ ಮಾಡಿದರೆ ನಮಗೆ ಸಿಟ್ಟು ಬರುತ್ತದೆ, "ರೈತರಿಗೆ ಆಕ್ರೋಶವೂ ಬರುತ್ತದೆ," ಕೋಪವೂ ಬರುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ (ಬಂಟವಾಳ) :— ಸರ್ಕಾರದವರು ಈ ಮಸೂದೆ ತೆಗೆದುಕೊಂಡು ಬಂದು ಒಂದು ವರ್ಷವಾಯಿತು. ಆದರೂ ಕೂಡ ಇದರ ಬಗ್ಗೆ ಒಂದು ಸರಿಯಾದ ತೀರ್ಮಾನಕ್ಕೆ ಬರಲಿಲ್ಲ ಎಂದರೆ ಏನು ಅರ್ಥ ?

ಅಧ್ಯಕ್ಷರು :— ಆ ಬಗ್ಗೆ ನಾನು ಮೊದಲೆ ಹೇಳಿದ್ದೇನೆ.

ಶ್ರೀ ಟಿ. ಆರ್. ಶಾಮಣ್ಣ (ಕೋಟೆ) :— ನನ್ನದು ಒಂದು ಕ್ರಿಯಾಲೋಪ ಇದೆ. ಅದೇನೆಂದರೆ, In a democratic set up is it the opinion of the few or of the majority that has to be taken into consideration ?

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್ (ಸಿರ್ಸಿ) :— ಅಧ್ಯಕ್ಷರೆಲ್ಲ, ನಾನು ರೂಲು ३೧೨ರ ಪ್ರಕಾರ ಒಂದು ಕ್ರಿಯಾಲೋಪವನ್ನು ಎತ್ತುತ್ತೇನೆ. ಅದೇನೆಂದರೆ ಈ ದಿವಸದ ಕಾರ್ಯಕ್ರಮದ ಪಟ್ಟಿಯಲ್ಲಿ ಇಲ್ಲದೇ ಇರುವ ಪಟ್ಟಿಯನ್ನು ಮಾನ್ಯ ಸದಸ್ಯರುಗಳು ಎತ್ತಿದ್ದಾರೆ. ಸೋಷಿಯಲಿಸ್ಟ್ ಪಕ್ಷ ಮತ್ತು ಕಮ್ಯೂನಿಸ್ಟ್ ಪಕ್ಷದ ಮಾನ್ಯ ಸದಸ್ಯರಿಬ್ಬರೂ ಕೂಡ ಈ ಭೂ ಸುಧಾರಣೆ ಬಗ್ಗೆ ಮಾಡಿರತಕ್ಕಂಥ ಪ್ರತಿಭಟನೆ ಸ್ಲೋಗೆನ್ಸ್ ಈ ಸಭೆಯ ನೀತಿನಿಯಮಕ್ಕೆ ವಿರುದ್ಧವಾಗಿದೆ. ಅವರು ಈ ಮನೆಯಲ್ಲಿ ಈ ರೀತಿ ಹೇಳತಕ್ಕದ್ದು ಕ್ರಮಬದ್ಧವೇ, ಅದು ಪಾರ್ಲಿಮೆಂಟರಿಯೋ ಅಥವಾ ಅನ್‌ಪಾರ್ಲಿಮೆಂಟರಿಯೋ ಏನು ಎನ್ನುವುದಕ್ಕೆ ತಾವು ರೂಲಿಂಗ್ ಕೊಡಬೇಕು.

ಅಧ್ಯಕ್ಷರು :— ಮಾನ್ಯ ಸದಸ್ಯರು ಕೇಳುವುದದಕ್ಕೆ ಮುಂಚೆಯೇ ನಾದು ಆಗಲೇ ಹೇಳಿಬಿಟ್ಟಿದ್ದೇನೆ.

ಶ್ರೀ ಎನ್ ಹುಚ್ಚಮಾಸ್ತಿಗೌಡ (ಕಂದಾಯ ಶಾಖೆಯ ಮಂತ್ರಿಗಳು) :— ಅಧ್ಯಕ್ಷರೇ, ಕ್ಲಾಜ ೨೦ರ ವಿಷಯದಲ್ಲಿ ನಾನು ಪುನರಾಲೋಚನೆ ಮಾಡುವುದು ಅವಶ್ಯಕ ಎಂದು ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಹೇಳಿದ ಮೇಲೆ ನಾನು ಅದನ್ನು ತಡೆಹಿಡಿಯಬೇಕೆಂದು ಕೇಳಿಕೊಂಡಿದ್ದೆ. ನಂತರ ಅದನ್ನು ಪುನರಾಲೋಚನೆ ಮಾಡಿದ್ದರ ಮೇಲೆ ನಾನು ತಂದಿರತಕ್ಕ ತಿದ್ದುಪಡಿ ಕ್ರಮಬದ್ಧವಾಗಿದೆ. ಇದರ ಜೊತೆಗೆ ಸೀಮನ್ ಅಥವಾ ಸೋಲ್ಜರ್ ಆಗಲಿ ಅವರನ್ನು ಬಿಟ್ಟು ಇನ್ನು ಬೇರೆ ಯಾವ ಗೇಣಿದಾರರೂ ಇರುವುದಿಲ್ಲ. ಗೇಣಿದಾರರ ಹತ್ತಿರ ಇರುವ ಜಮೀನೆಲ್ಲಾ ಕಾನೂನು ಜಾರಿಗೆ ಬಂದ ದಿವಸದಿಂದ ಅದು ಸರ್ಕಾರದಲ್ಲಿ ವೆಸ್ಟ್ ಆಗಬೇಕು. ವೆಸ್ಟ್ ಆದಮೇಲೆ ಅದನ್ನು ಗೇಣೀದಾರರಿಗೆ ಕೊಟ್ಟು ಯಾವರೀತಿ ಅವರಿಂದ ಹಣ ಪಡೆದು ಕೊಳ್ಳಬೇಕು ಅಂತ ಇದೆ. ಅದಲ್ಲದೇ ಬೇರೆ ಗೇಣೀದಾರರೂ ಕೂಡ, ಮಿಲಿಟರಿಯವರರೂ ಕೂಡ ಯಾವ ರೀತಿ ಸರೆಂಡರ್ ಮಾಡಬೇಕು ಎಂದು ಈ ಕ್ಲಾಜನಲ್ಲ ತಿದ್ದುಪಡಿ ತಂದಿರತಕ್ಕಂಥಾದ್ದರಲ್ಲಿ ಇದೆ. ಆದುದರಿಂದ ಮಾನ್ಯ ಸದಸ್ಯರು ಇದನ್ನು ದಯಮಾಡಿ ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರೇ, ಇನ್ನು ನನ್ನ ತಿದ್ದುಪಡಿ ಸಬ್ ಸೆಕ್ಷನ್ (೧)ರಲ್ಲಿ 'no tenant' ಆದಮೇಲೆ 'of a soldier or seaman ಅಂತ ಸೇರಿಸಬೇಕು. ಮತ್ತು ಸಬ್ ಸೆಕ್ಷನ್ ३ರಲ್ಲಿ after the words "to any person", the words "if possession thereof is not claimed by the soldier or the seaman for personal cultivation" ಸೇರಿಸಬೇಕು ಅಂತ ಇದೆ. ಇದನ್ನು ಸರ್ಕಾರದ ವಶಕ್ಕೆ ಸರೆಂಡರ್ ಮಾಡಿದ ಮೇಲೆ, ಸೀಮನ್ ಆಗಲಿ ಸೋಲ್ಜರ್ ಆಗಲಿ ಸ್ವಂತ ವ್ಯವಸಾಯಕ್ಕೆ ಬೇಕು ಎಂದು ಕೇಳದೇ ಇದ್ದರೆ ಆ ಸಂದರ್ಭದಲ್ಲಿ ಏನು ಮಾಡಬೇಕು ಅಂತ ಇದೆ. ಆದುದರಿಂದ ದಯಮಾಡಿ ಮಾನ್ಯ ಸದಸ್ಯರು ಇದನ್ನು ಒಪ್ಪಿಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಮಾನ್ಯ ಮಂತ್ರಿಗಳು ಈ ಸೆಕ್ಷನ್ ಬಗ್ಗೆ ಬಂದಾಗ ಏನು ಅಭಿಪ್ರಾಯ ವ್ಯಕ್ತಪಡಿಸಿದರು ? ಸೀಮನ್ ಅಥವಾ ಸೋಲ್ಜರ್‌ಗೆ ಸಂಬಂಧ ಪಟ್ಟಂತೆ ಚರ್ಚೆ ಆಯಿತೇ ? ಅಥವಾ ಬರೀ ಗೇಣೀದಾರರ ಬಗ್ಗೆ ಚರ್ಚೆ ಆಯಿತೇ ಅದನ್ನು ಸ್ಪಷ್ಟವಾಗಿ ಹೇಳಬೇಕು. ಆ ಬಗ್ಗೆ ಪ್ರೊಸಿಕೆಡಿಂಗ್ ಬೇಕಾದರೆ ತರಿಸುವುದಕ್ಕೆ ತಯಾರಿದ್ದೇನೆ.

ಅಧ್ಯಕ್ಷರು :— ಜಾಯಿಂಟ್ ಸೆಲೆಕ್ಟ್ ಕಮಿಟಿ ರಿಪೋರ್ಟ್‌ಗೂ ಇದಕ್ಕೂ ಸಂಬಂಧವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :— ಹೌದು. ಯಾವ ಚರ್ಚೆ ಮೇಲೆ ಮಾತನಾಡಿದೆವೋ ಈಗ ತಂದಿರುವ ತಿದ್ದುಪಡಿ ಅದರ ತದ್ವಿರುದ್ಧವಾಗಿದೆ. ಆದುದರಿಂದ ಅಲ್ಲಿ ಚರ್ಚೆ ಆಗಿರುವುದಕ್ಕೂ ಇಲ್ಲಿ ಮಾತನಾಡುವುದಕ್ಕೂ ಅರ್ಥ ಏನು ಇದೆ ಎಂದು ಕೇಳಬೇಕಾಗಿದೆ.

CLAUSE 20

Madam Speaker —: I will put amendment to clause 20 to the vote of the House. The question is :—

"That In the proposed section 25, —

(i) in sub-section (1), after the words "no tenant", the words "fo a soldier or seaman" shall be inserted;

(ii) in sub-section (3), after the words "to any person", the words "if possession therof is not claimed by the soldier or the seaman for personal cultivation" shall be inserted.

The motion was adopted

Madam Speaker :— The question is :—

"That clause 20 as amended do stand part of the Bill."

The motion was adopted

Clause 20 as amended was added to the Bill.

CLAUSES 21 to 23

Madam Speaker :— The question is :—

"That clauses 21 to 23, both inclusive, do stand part of the Bill."

The motion was adopted

Clauses 21 to 23 both inclusive were added to the Bill.

CLAUSE 24

Sri M. S. Krishnan :— I beg to move :

"That for clause 24 the following clause shall be substituted :—

"24. AMENDMENT TO SECTION 35. ... In sub-section (1) the word 'unless' at the end clauses (a) and (b) shall be deleted."

Madam Speaker :— Amendment moved :—

"That for clause 24 the following clause shall be substituted :—

"24. AMENDMENT TO SECTION 35. In sub–section (1) the word 'unless' at the end and clauses (a) and (b) shall be deleted."

† Sri M. S. Krishnan :— My amendment is very simple. We want the deletion of the word 'unless' because we consider that the tenant who is in occupation of the dwelling house should not be evicted. As per the existing provision, he could be evicted and the materials and the site thereof shall also be taken over. We are opposed to this and that is why we have brought forward this amendment, and I request the Hon. Minister to agree to my amendment.

† ಶ್ರೀ ಎನ್. ಹುಚ್ಚಮಾಸ್ತಿಗೌಡ :—

ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರು ತಂದಿರತಕ್ಕಂಥ ತಿದ್ದುಪಡಿಯನ್ನು ಒಪ್ಪಿಕೊಂಡರೆ ಏನಾಗುತ್ತದೆ ಎಂದರೆ ಸಾಮಾನ್ಯವಾಗಿ ಈಗ ಜಮೀನ್ದಾರ ಜಮೀನಿನಲ್ಲಿ ಮನೆಯನ್ನು ಕಟ್ಟಿಕೊಂಡಿದ್ದರೆ ಸಾಮಾನ್ಯವಾಗಿ ಈಗ ಗೇಣೀದಾರನನ್ನು ಬಿಡಿಸಕೂಡದು ಎಂದು ಅರ್ಥ ಬರುತ್ತದೆ. ಅವರೆ ಬಿಡಿಸಬೇಕಾದಂಥ ಸಂದರ್ಭ ಯಾವಾಗ ಬರುತ್ತದೆ ಎಂದರೆ ಗೇಣಿದಾರ ಕಟ್ಟಿಕೊಂಡಂಥ ಮನೆ ಅಲ್ಲ ಎಂದು ಜಮೀನ್ದಾರ ರುಜುವಾತು ಮಾಡಿದಾಗ ಮಾತ್ರ ಬಿಡಿಸಬಹುದು ಉಳಿದ ಕಾಲದಲ್ಲಿ ಬಿಡಿಸಬಾರದು ಎನ್ನುವುದು ಈ ಕ್ಲಾಸ್‌ನ ಉದ್ದೇಶ. ಇಂತಹ ಕೇಸುಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಾಗಿವೆ. ಮನೆ ಕಟ್ಟಿದಂಥ ಖರ್ಚು ಗೇಣಿದಾರನದೇ ಅಥವಾ ಜಮೀನುದಾರನದೇ ಎಂದು ರುಜುವಾತು ಮಾಡತಕ್ಕಂಥ ಜವಾಬ್ದಾರಿ ಮಾಲೀಕನಿಗೆ ಇದೆ. ಆ ಮಾಲೀಕ ಇದು ಗೇಣೀದಾರ ಖರ್ಚಿನಿಂದ ಕಟ್ಟಿಲ್ಲಾ ಎಂದು ರುಜುವಾತು ಮಾಡಿರೆದ ಆ ಸಂದರ್ಭದಲ್ಲಿ ಖಿಲ್ಲಾ ಮಾಡಿಸಬಹುದೇ ಹೊರತು ಇಲ್ಲದಿದ್ದರೆ ಇಲ್ಲ. ಅಲ್ಲಿಯ ಪರಿಸ್ಥಿತಿ ನೋಡಿ ಅಕ್ಷಿಯ ವಿದ್ಯಮಾನವನ್ನು ತಿಳಿದು ಗೇಣಿದಾರರ ಹಿತರಕ್ಷಣೆ ಮಾಡುವುದಕ್ಕೋಸ್ಕರ ಇವನ್ನು ತಂದಿದ್ದೇವೆ ಅನಾವಶ್ಯಕವಾಗಿ ಜಮೀನ್ದಾರರಿಗೆ ತೊಂದರೆ ಆಗಬಾರದು ಗೇಣೀದಾರರು ಸ್ವತಃ ಕಟ್ಟಿದ್ದರೆ ಮಾತ್ರ ಸ್ವಾಧೀನ ತೆಗೆದುಕೊಳ್ಳಬಹುದೇ ವಿನಾ ಜಮೀನ್ದಾರ ಕಟ್ಟಿದ್ದರೆ ಸ್ವಾಧೀನಕ್ಕೆ ಕೊಡಬಾರದು ಅಂತ ಈಗ ನಾವು ತಂದಿರತಕ್ಕಂಥ ತಿದ್ದುಪಡಿಯ ಉದ್ದೇಶ ಇದ. ಆದುದರಿಂದ ಮಾನ್ಯ ಶ್ರೀಮಾನ್ ಎಂ. ಎಸ್. ಕೃಷ್ಣನ್ ಅವರು ತಂದಿರತಕ್ಕಂಥ ತಿದ್ದುಪಡಿ ಏನು ಇದೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತೇನೆ.

ಶ್ರೀ ಬಿ. ವಿ. ಕಕ್ಕಿಲಾಯ.—ದಕ್ಷಿಣ ಕನ್ನಡ ಜಿಲ್ಲೆಯ ವಿಚಾರ ಹೇಳಿದಿರಿ. ಅಲ್ಲಿ ಎಲ್ಲ ಜಮೀನೂ ಕೂಡ ಅಗ್ರಿಕಲ್ಚರಲ್ ಲ್ಯಾಂಡ್ ಎಂದು ರೆವಿನ್ಯೂ ಆಕ್ಟ್ ಪ್ರಕಾರ ಇದೆ. ಗುಡ್ಡ, ಬೆಟ್ಟಗಳು ಕೂಡ ಅಗ್ರಿಕಲ್ಚರಲ್ ಲ್ಯಾಂಡ್ ಎಂದು ಇದೆ. ವ್ಯವಸಾಯ ಮಾಡುವಂಥ ಜಮೀನಲ್ಲದೆ ಬೇರೆ ಕಡೆ ಮನೆ ಕಟ್ಟಿಕೊಂಡು ವಾಸ ಮಾಡುವುದಕ್ಕೆ ಯೋಗ್ಯವಿರುವ ಕಡೆ, ಬೆಟ್ಟದ ತಪ್ಪಲು ಇಂಥ ಕಡೆ ಮನೆ ಕಟ್ಟಿಕೊಂಡು ಎಷ್ಟೋ ವರ್ಷದಿಂದ ಇದ್ದಂಥ ಪರಿಸ್ಥಿತಿಯಲ್ಲಿಯೂ ಕೂಡ ಮಾಲೀಕನೇ ಕಟ್ಟಿದ್ದು ಎಂದು ರುಜುವಾತು ಮಾಡಬೇಕೆಂದು ಷರತ್ತು ಹಾಕಿದರೆ ಗೇಣಿದಾರನು ಮನೆ ಬಿಟ್ಟು ಹೋಗಬೇಕಾಗುತ್ತದೆ.

೨೮ನೇ ಸೆಕ್ಷನ್‌ನಲ್ಲಿ ವ್ಯವಸಾಯ ಕೂಲಿಕಾರರಿಗೆ, ಹಳ್ಳಿಯಲ್ಲಿ ಇರುವ ಮರಗೆಲಸ, ಕಬ್ಬಿಣದ ಕೆಲಸ ಮಾಡುವವರಿಗೆ ಕೂಡ ವಾಸವಾಗಿರುವ ಮನೆಯಲ್ಲಿ ರಕ್ಷಣೆ ಸಿಕ್ಕಬೇಕು ೨೫ನೇ ಸೆಕ್ಷನ್ ಇದಕ್ಕೆ ಅನ್ವಯಿಸಿದರೆ ಮುಖ್ಯವಾಗಿ ಅಗ್ರಿಕಲ್ಚರಲ್ ಲೇಬರರ್ಸ್, ವಿಲೇಜ್ ಆರ್ಟಿಸಾನ್ಸ್ ಅವರು ಇರುವ ಮನೆಗಳಿಂದ ಅವರನ್ನು ಬಿಡಿಸಿ ಹೊರಗೆ ಹಾಕಿ ಮನೆಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಈ ಎರಡು ವಿಷಯಗಳಿಗೆ ಸ್ವಲ್ಪ ವಿವರಣೆ ಕೊಡಬೇಕು.

ಶ್ರೀ ಎನ್. ಹೆಚ್. ಹುಚ್ಚಮಾಸ್ತಿ ಗೌಡ.—ಗೇಣಿದಾರನೇ ಮನೆ ಕಟ್ಟಿದ್ದರೆ ಅವನನ್ನು ಬಿಡಿಸುವುದಕ್ಕಾಗುವುದಿಲ್ಲ. ಗೇಣಿದಾರ ಕಟ್ಟಿದ್ದಾನೆಯೋ ಇಲ್ಲವೇ ಎನ್ನುವುದನ್ನು ರುಜುವಾತು ಮಾಡತಕ್ಕ ಜವಾಬ್ದಾರಿ ಮಾಲೀಕನದು. ಆ ಜವಾಬ್ದಾರಿಯನ್ನು ವಹಿಸಿ ಅದನ್ನು ಗೇಣಿದಾರನು ಕಟ್ಟಿದ್ದಲ್ಲ ಎಂದು ಹೇಳಿದರೆ ಬಿಡಿಸುವುದಕ್ಕೆ ಅವಕಾಶವಿದೆ. ಗೇಣಿದಾರನೇ ಕಟ್ಟಿಕೊಂಡಿದ್ದರೆ ಬಿಡಿಸುವುದಕ್ಕಾಗುವುದಿಲ್ಲ. ಇದು ವ್ಯವಸಾಯ ಭೂಮಿ ಬಿಟ್ಟು ಬೇರೆ ಭೂಮಿಯಲ್ಲಿರತಕ್ಕ ಮನೆಗಳಿಗೆ ಸಂಬಂಧಪಟ್ಟ ವಿಷಯ.

> "(2) The provisions of sub-section (1) shall not apply to a dwelling house which is situated on any land used for the purposes of agriculture from which a tenant has been evicted under section 22."

ಇದು ವ್ಯವಸಾಯ ಭೂಮಿಯಲ್ಲಿ ಗೇಣಿದಾರ ಕಟ್ಟಿಕೊಂಡಿರತಕ್ಕ ಮನೆಗೆ ಅನ್ವಯಿಸುವುದಿಲ್ಲ. ವ್ಯವಸಾಯ ಭೂಮಿ ಅಲ್ಲದೆ ಬೇರೆ ಜಮೀನಿನಲ್ಲಿ ಕಟ್ಟಿರುವುದಕ್ಕೆ ಅನ್ವಯಿಸುತ್ತದೆ. ಮನೆ ಯಾರು ಕಟ್ಟಿರುವುದು ಎನ್ನುವುದು ಮುಖ್ಯ. ಗೇಣಿದಾರ ಮನೆಯನ್ನು ಕಟ್ಟದೆ ಜಮೀನ್ದಾರ ಕಟ್ಟಿಸಿದರೆ ಬಿಡಿಸುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದೇವೆ.

CLAUSE 24.

MADAM SPEAKER.—I will now put the amendment to the vote of the House. The question is, "that for clause 24, the following clause shall be substituted :

> "24. Amendment of section 35.—In sub-section (1) the word 'unless' at the end of the clauses (a) and (b) shall be deleted."

The motion was negatived.

MADAM SPEAKER.—The question is :

"That clause 24 do stand part of the Bill."

The motion was adopted.

Clause 24 was added to the Bill.

CLAUSE 25

MADAM SPEAKER.—There are amendments to clause 25 by the Hon. Minister for Revenue and Sri T. R. Shamanna. Both the amendments may be moved now.

SRI N. HUTCHMASTHY GOWDA.—I beg to move :

> "that in the proposed section 36, in sub section (2), for the words "payable thereon". the words "payable thereon and where such site not assessed to land revenue an amount equal to ten times the land revenue which may be assessed if it had been used for agricultural purposes" shall be substituted."

MADAM SPEAKER.—Amendment moved:

> "That in the proposed section 36, in sub-section (2), for the words "payable thereon", the words "payable thereon and where such site is not assessed to land revenue, an amount equal to ten times the land revenue which may be assessed if it had been used for agricultural purposes" shall be substituted."

SRI T. R. SHAMANNA.—I beg to move:

"After 55 in proposed section 36 in sub-section 2 add the following proviso.

1. Provided if he is a small land holder the amount payable shall be twenty time the land revenue.

2. The land lord shall in addition be paid the cost of the building if it is built by the owner."

MADAM SPEAKER.—Amendment moved:

"that after 55 in proposed section 36, in sub-section 2 add the following proviso.

1. Pr vided if he is a small land holder the amount payable shall be twenty time the land revenue.

2. The land lord shall in addition be paid the cost of the building if it is built by the owner."

† ಶ್ರೀ ಬಿ. ಆರ್. ಶಾಮಣ್ಣ.—ನಾನು ತಂದಿರತಕ್ಕ ತಿದ್ದುಪಡಿಯ ಉದ್ದೇಶವಿಷ್ಟೆ. ಈಗ ನಾವು ರೆಫ್ಯೂಸ್ ಮಾಡತಕ್ಕ ಜಾಗದಲ್ಲಿ ಯಾವುದಾದರೂ ಕಟ್ಟಡಗಳಿದ್ದರೆ ಆ ಕಟ್ಟಡದಲ್ಲಿ ಗೇಣಿದಾರ ವಾಸ ಮಾಡುತ್ತಿದ್ದರೆ ಆ ಮನೆ ಗೇಣಿದಾರನಿಗೇ ಸೇರಬೇಕು ಎಂದು ಇದೆ. ಭೂಮಿಗೆ ಪರಿಹಾರ ಗೊತ್ತು ಮಾಡುವಾಗ ಕಂದಾಯದ ಹತ್ತರಷ್ಟು ಕೊಡಬೇಕು ಎಂದು ಇದೆ. ಸಾಧಾರಣವಾಗಿ ಒಂದೂವರೆ ರೂಪಾಯಿ ಕಂದಾಯ ಎಂದು ಇಟ್ಟುಕೊಂಡರೆ ೧೫೦ ರೂಪಾಯಿ ಆಗುತ್ತದೆ. ಮನೆ ಇರತಕ್ಕ ಜಾಗ ೩೦ ಅಡಿ ಅಗಲ ೬೦ ಅಡಿ ಉದ್ದ ಎಂದು ಇಟ್ಟುಕೊಂಡರೆ ಹತ್ತನೇ ಒಂದು ಭಾಗವಾಗುತ್ತದೆ ಎಂದರೆ ೧೫ ರೂಪಾಯಿ ಅವರಿಗೆ ಪರಿಹಾರ ಕೊಟ್ಟ ಹಾಗೆ ಆಗುತ್ತದೆ. ಪರಿಹಾರ ಕೇವಲ ೧೫ ರೂಪಾಯಿ ಇರುವುದರಿಂದ ಭೂ ಮಾಲೀಕನಿಗೆ ಯಾವ ವಿಧವಾದ ಪರಿಹಾರವೂ ಸಿಕ್ಕುವುದಿಲ್ಲ. ಆದುದರಿಂದ ಪರಿಹಾರವನ್ನು ಹತ್ತರಷ್ಟು ಎನ್ನುವುದಕ್ಕೆ ಬದಲಾಗಿ ೨೦ರಷ್ಟು ಎಂದು ಮಾಡಬೇಕೆಂದು ಸೂಚಿಸಿದ್ದೇನೆ. ಹೀಗೆ ಮಾಡುವುದರಿಂದ ೧೫ ರೂಪಾಯಿಗಳಿಗೆ ಬದಲಾಗಿ ೩೦ ರೂಪಾಯಿ ಮಾತ್ರ ಬರುತ್ತದೆ.

ಎರಡನೆಯದಾಗಿ ಅನೇಕ ಸಂದರ್ಭಗಳಲ್ಲಿ ಭೂಮಿಯಲ್ಲಿ ಕಟ್ಟಿರತಕ್ಕ ಮನೆಗಳನ್ನು ಭೂಮಾಲೀಕ ಕಟ್ಟಿ ಕೊಟ್ಟಿರುತ್ತಾನೆ. ಭೂ ಮಾಲೀಕ ಮನೆ ಕಟ್ಟಿ ಕೊಟ್ಟಿರತಕ್ಕ ಜಾಗವನ್ನು ತೆಗೆದುಕೊಂಡರೆ ಮನೆ ಕಟ್ಟುವುದಕ್ಕೆ ಮಾಡಿರುವ ಖರ್ಚು ಏನಾಗಬೇಕು ಎನ್ನುವ ಪ್ರಶ್ನೆ ಬರುತ್ತದೆ. ಗೇಣಿದಾರ ಮನೆ ಕಟ್ಟಿಕೊಂಡಿದ್ದರೆ ಆಗ ಆ ಪ್ರಶ್ನೆ ಉದ್ಭವವಾಗುವುದಿಲ್ಲ, ಜಾಗ ಬಿಟ್ಟು ಕೊಡಬೇಕು ಎಂದು ಇದೆ. ಕೆಲವು ಸಲ ಭೂ ಮಾಲೀಕನೇ ಮನೆ ಕಟ್ಟಿಕೊಟ್ಟಿದ್ದ ಪಕ್ಷದಲ್ಲಿ ಅದರ ಬಗ್ಗೆ ಏನು ಮಾಡಬೇಕು ಎನ್ನುವ ಪ್ರಶ್ನೆ ಇದರಲ್ಲಿ ಬಂದಿಲ್ಲ. ನಾನು ತಂದಿರತಕ್ಕ ತಿದ್ದುಪಡಿಯ ಪ್ರಕಾರ the landlord shall in addition be paid the cost of the building if it is built by the owner' ಎಂದು ಇದೆ.

ಇದು ಸಮಂಜಸವಾದುದು. ಅನೇಕ ಸಂದರ್ಭಗಳಲ್ಲಿ ಮನೆಗಳನ್ನು ಕಟ್ಟಿಕೊಟ್ಟಿದ್ದಾರೆ. ಶ್ರೀಮತಿ ದೇವಿಕಾ ರಾಣಿ ಅವರ ಎಸ್ಟೇಟಿನಲ್ಲಿ ಲಿನೋಲಿಯಂ ಬೆಳೆಸುತ್ತಿರುವುದಕ್ಕೆ ವಿನಾಯಿತಿ ಕೊಟ್ಟಿದ್ದಾರೆ ಅವರು ೧೫೦ ಕುಟುಂಬಗಳಿಗೆ ಮನೆ ಕಟ್ಟಿ ಕೊಟ್ಟಿದ್ದಾರೆ. ಅದಕ್ಕೆ ಬಿದ್ದಿರುವ ಖರ್ಚನ್ನೆಲ್ಲ ಮಾಲೀಕರೇ ವಹಿಸಿಕೊಂಡಿದ್ದಾರೆ. ಈ ಕ್ಲಾಜ್ ಪ್ರಕಾರ ಮಾಲೀಕನಿಗೆ ಕೇವಲ ೧೫ ರೂಪಾಯಿ ಕೊಟ್ಟರೆ ಸಾವಿರಾರು ರೂಪಾಯಿ ಖರ್ಚು ಮಾಡಿ ಮನೆಗಳನ್ನು ಕಟ್ಟಿ ಕೊಟ್ಟಿರುವವರ ಗತಿ ಏನಾಗಬೇಕು? ಅವರಿಗೆ ಯಾವ ರೀತಿಯ ಪರಿಹಾರವನ್ನೂ ಕೊಡದೆ ಹೋದರೆ ಅನ್ಯಾಯವಾಗುತ್ತದೆ. ಆದುದರಿಂದ ಭೂ ಮಾಲೀಕ ಮನೆಗಳನ್ನು ಗೇಣಿದಾರನಿಗೆ ಕಟ್ಟಿಕೊಟ್ಟಿದ್ದ ಪಕ್ಷದಲ್ಲಿ ಆ ಮನೆಗಳಿಗೆ ಕೂಡ ಸ್ವಲ್ಪ ಪರಿಹಾರವನ್ನು ಕೊಡಬೇಕೆಂಬ ತಿದ್ದುಪಡಿಯನ್ನು ತಂದಿದ್ದೇನೆ. ಇದು ಸಹಜವಾಗಿದೆ, ನ್ಯಾಯವಾಗಿದೆ. ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ತಂದಿರತಕ್ಕ ತಿದ್ದುಪಡಿಯನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಕಾರಣವೇನೆಂದರೆ ಇಲ್ಲಿ ಭೂಮಾಲೀಕನಲ್ಲ ಮನೆಯನ್ನು ಕಟ್ಟಿರುವವನು. ಗೇಣಿದಾರನಾದವನು ತಾನು ಗೇಣಿಗೆ ಮಾಡುತ್ತಿರುವ ಜಮೀನಿನಲ್ಲಿ ಕಟ್ಟಿರುವ ಮನೆ. ಆ ಮನೆಯನ್ನು ಗೇಣಿದಾರನಿಗೆ ಕೊಡತಕ್ಕ ಸಂದರ್ಭದಲ್ಲಿ ಆಗಲೇ ಕಂದಾಯ ವಿಧಿವತ್ತಾಗಿ ಹಾಕಿದ್ದರೆ ಆ ಕಂದಾಯದ ಹತ್ತರಷ್ಟು ಕೊಡಬೇಕು ಅಥವಾ ಕಂದಾಯ ಹಾಕದೆ ಇದ್ದರೆ ಯಾವ ರೀತಿ ಕೊಡಬೇಕು ಎನ್ನುವುದನ್ನು ತಿದ್ದುಪಡಿಯಲ್ಲಿ ಸೂಚಿಸಲಾಗಿದೆ. ಅದು ಈ ರೀತಿಯಾಗಿದೆ.

"(2), for the words "payable thereon", the words "payable thereon and where such site is not assessed to land revenue, an amount equal to ten times the land revenue which may be assessed if it had been used for agricultural purposes".

ವ್ಯವಸಾಯಕ್ಕೆ ಉಪಯೋಗಿಸತಕ್ಕ ಭೂಮಿಯಾಗಿದ್ದರೆ ಎಷ್ಟು ಜಮೀನು ಕಂದಾಯ ವಿಧಿಸಬಹುದಾಗಿತ್ತೋ ಅದರ ಹತ್ತರಷ್ಟು ಎಂದು ವಿವರಣ ಕೊಟ್ಟಿದೆ. ಅದಕ್ಕಿಂತ ಹೆಚ್ಚು ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಮನೆಗೆ ಬೆಲೆಯನ್ನು ಪ್ರತ್ಯೇಕವಾಗಿ ಕೊಡುವುದಕ್ಕೆ ಸಾಧ್ಯವಿಲ್ಲ. ಮಾನ್ಯ ಸದಸ್ಯರ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ಕೊಟ್ಟಿರತಕ್ಕ ವಿವರಣೆಗೆ ಸಭೆ ಒಪ್ಪಿಗೆ ಕೊಡಬೇಕು.

ಶ್ರೀ ಟಿ. ಆರ್. ಶಾಮಣ್ಣ.—ಮಾಲೀಕ ಕಟ್ಟಿಕೊಟ್ಟಿದ್ದರೂ ಕೊಡುವುದಕ್ಕೆ ಆಗುವುದಿಲ್ಲವೆಂದು ಹೇಳುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಇಗಿನ ವಿಧಿಯಲ್ಲಿ ಮನೆ ಯಾರು ಕಟ್ಟಿದ್ದು ಎನ್ನುವುದಕ್ಕೆ ರೆಫರೆನ್ಸ್ ಇದೆ. ಅಂಥ ಸಂದರ್ಭದಲ್ಲಿ ಮಾಲೀಕ ಮನೆ ಕಟ್ಟಿಕೊಟ್ಟಿದ್ದರೆ ಅದಕ್ಕೆ ಬೇರೆ ರೀತಿ ಎವಿಕ್ಟ್ ಮಾಡಿಸುವುದಕ್ಕೆ ಸಾಧ್ಯ ಇದು ಗೇಣಿದಾರನೇ ಕಟ್ಟಿಕೊಂಡಿರತಕ್ಕ ಮನೆ.

Madam Speaker —I shall put the amendment of Sri T. R. Shamanna to the vote of the House.

The question is ;

"That in proposed section 36, in sub-section 2 add the following proviso.

1. Provided if he is a small land holder the amount payable shall be twenty time the land revenue.

2. The landlord shall in addition be paid the cost of the building if it is built by the owner.

The motion was negatived.

9-30 a. m.

Madam Speaker —I will put Amendment moved by the Minister for Revenue to vote. The question is :

"That in the proposed section 36 in sub-section (2), for the words "payable thereon", the words "payable thereon and where such site is not assessed to land revenue, an amount equal to ten times the land revenue which may be assessed if it had been used for agricultural purposes" shall be substituted."

The motion was adopted.

Madam Speaker —The question is :

"That Clause 25, as amended, do stand part of the Bill."

The motion was adopted.

Clause 25, as amended, was added to the Bill.

Clause 26

MADAM SPEAKER.—The question is:
"That Clause 26 do stand part of the Bill."

The motion was adopted.

Clause 26 was added to the Bill.

Clause 26-A

SRI N. HUTCHMASTHY GOWDA.—Madam, I move:

"That after clause 26, the following clause shall be inserted, namely :—

"26A. *Amendment of section 38.*—In Section 38 of the principal Act, clause (b) shall be omitted."

MADAM SPEAKER.—Amendment moved:

"That after clause 26, the following clause shall be inserted, namely :—

"26A. *Amendment of Section 38.*—In Section 38 of the principal Act, clause (b) shall be omitted."

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ಉದ್ದೇಶ ಅಗ್ರಿಕಲ್ಚರು ಎನ್ನುವ ಡಿಫನಿಷನ ಕ್ಲಾಸಿನಲ್ಲೇ ವಿವರವಾಗಿ ಸೇರಿಸಿರುವುದರಿಂದ ಇದು ಇಲ್ಲಿ ಪ್ರತ್ಯೇಕವಾಗಿ ಇರಬೇಕಾದ ಅಗತ್ಯವಿಲ್ಲ ಎನ್ನುವುದಕ್ಕಾಗಿ ಇಲ್ಲಿ ಅಮೆಂಡುಮೆಂಟು ತಂದು ಇದನ್ನು ಕೈಬಿಡಲಾಗಿದೆ.

MADAM SPEAKER.—The question is:

"That after Clause 26, the following clause shall be inserted, namely :—

"26A. Amendment of Section 38.—In section 38 of the principal Act, clause (b) shall be omitted."

The motion was adopted.

Clause 26-A was added to the Bill.

Clauses 27, to 30

MADAM SPEAKER.—There are no amendments. The question is:
"That Clauses 27 to 30 both inclusive do stand part of the Bill.

The motion was adopted.

Clauses 27 to 30, both inclusive were added to the Bill.

Clause 31

Sri N. Hutchmasthy Gowda.—Madam, I move.

"That in the proposed Section 44, in sub-section (1) for the words "All lands held by tenants", the words "All lands held by or in the possession of tenants (including a tenant against whom a decree or order for eviction or a certificate for resumption is made or issued)" shall be substituted."

Madam Speaker.—Amendment moved.

"That in the proposed Section 44, in sub-section (1) for the words "All lands held by tenants", the words "All lands held by or in the possession of tenants (including a tenant against whom a decree or order for eviction or a certificate for resumption is made or issued) shall be substituted."

There is an amendment to Clause 31 proposed by Hon. Member Sri T. R. Shamanna

Sri T. R. Shamanna.—Madam, I beg to move :

"That new clause "26A" Amendment of Section 38, as now provided in the Joint Select Committee Report be deleted and in its place the provisions of the original Act be inserted."

Madam Speaker.—Amendment moved :

"That new clause 26A.—Amendment to Section 38 as now provided in the Joint Select Committee Report be deleted and in its place the provisions of the original Act be insctred."

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಗೇಣಿದಾರರ ಹಿತಕ್ಕಾಗಿಯೇ ಇಂತಹ ಒಂದು ತಿದ್ದುಪಡಿ ತಂದಿರುವುದು. ಇದರಲ್ಲಿ ವಿವರವಾಗಿ ಹೇಳಲಾಗಿದೆ. ಅದು ಹೀಗಿದೆ :

> 'All lands held by or in the possession of tenants (including a tenant against whom a decree or order for eviction or a certificate for resumption is made or issued) shall be substituted.

ಆದುದರಿಂದ ಇದು ಗೇಣಿದಾರರ ಹಿತರಕ್ಷಣೆ ಮಾಡುವುದರಿಂದ ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಅಧ್ಯಕ್ಷರೇ,

ಇದು ಹೇಗಿದೆ ಎಂದರೆ ನ್ಯಾಯಾಂಗ ಎಂದು ಏನು ಇದೆಯೋ ಅದಕ್ಕೆ ಒಂದೇ ಸಾರಿ ಮುಟ್ಟುಗೋಲು ಹಾಕುವುದಾಗಿದೆ. ಇದಕ್ಕಾಗಿ ನಾನು ಸಲಹೆ ಮಾಡುವುದು ಇರುವ ಕೋರ್ಟುಗಳನ್ನು ಕಿತ್ತು ಹಾಕುವುದೇ ಉತ್ತಮ ಎಂದು ಕಾಣುತ್ತದೆ. ಏಕೆಂದರೆ ಇದನ್ನು ನ್ಯಾಯವಾಗಿ ಹಾಗೂ ಧಾರ್ಮಿಕವಾಗಿ ಮಾಡಿಲ್ಲ, ಅನ್ಯಾಯವಾಗಿದೆ ಎಂದು ಜನರು ಕೋರ್ಟಿಗೆ ಹೋಗಿ ಡಿಗ್ರಿ ತೆಗೆದುಕೊಂಡು ತೀರ್ಮಾನ ಪಡೆಯಲು ಇಂತಹ ಒಂದು ಕಾಯಿದೆ ತಂದು, ಅವರಲ್ಲಿರುವ ಭೂಮಿಯನ್ನು ವಶಪಡಿಸಿಕೊಳ್ಳುವುದು ಎಂದರೆ ಇದಕ್ಕಿಂತ ಬೇರೆ ಅನ್ಯಾಯಗಳು ಏನು ಬೇಕು ? ಕೋರ್ಟಿನ ತೀರ್ಮಾನ ಕೊಟ್ಟಿದರೆ ಇದರ ಮೇಲೆ ಅಪೀಲು ಮಾಡಲು ಹೈ ಕೋರ್ಟು ಇದೆ. ಇದಕ್ಕೆ ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ನನ್ನ ಅಕ್ಕನ ಹೆಸರಿನಲ್ಲಿ ಒಂದು ಜಮೀನು ಇದೆ. ಇದನ್ನು ಯಾವ ರೈತನೂ ಗೇಣಿ ಮಾಡುತ್ತಿರಲಿಲ್ಲ.

(ಶ್ರೀ ಟಿ. ಆರ್. ಶಾಮಣ್ಣ.)

ಅದು ಅವರ ವಶದಲ್ಲೇ ಇತ್ತು. ಅದರ ಬಗ್ಗೆ ಶ್ರೀರಂಗಪಟ್ಟಣದ ಕೋರ್ಟಿನಲ್ಲಿ ಅವರೇ ಇಟ್ಟುಕೊಳ್ಳಬಹುದು ಎಂದು ತೀರ್ಮಾನವಾಗಿದೆ. ಆದರೆ ಕೋರ್ಟಿನಲ್ಲಿ ಒಂದು ಕಡೆ ಇದರಲ್ಲಿ ಕೂಲಿಗಾಗಿ ಬೆಳೆಯುತ್ತಿದ್ದೇನೆ ಎಂದು ಒಂದು ಕಡೆ ಒಬ್ಬ ಬರೆದುಕೊಟ್ಟಿದ್ದಾನೆ. ಇದರ ಮೇಲೆ ಮೂರು ಕೋರ್ಟುಗಳಿಗೂ ಅಪೀಲು ಹೋಗಿ ಡಿಕ್ರಿ ಪಡೆದು ಅದನ್ನು ವಶಕ್ಕೆ ತೆಗೆದುಕೊಳ್ಳಬೇಕಾದರೆ ಅವಕಾಶವಿಲ್ಲ ಎಂದರೆ ಹೇಗೆ ? ಇಂತಹ ಒಂದು ಮಸೂದೆ ತಂದು ಇರುವುದನ್ನೆಲ್ಲಾ ಕಿತ್ತುಕೊಳ್ಳಲು ಹೋದರೆ ಇದು ನ್ಯಾಯಮಾಡಿದಂತಾಗುತ್ತದೆಯೇ ? ನಿಜವಾಗಿಯೂ ಇಂತಹ ಕಾನೂನು ತರಬಾರದು. ನಿಜವಾಗಿಯೂ ನ್ಯಾಯ ಹಾಗೂ ಧರ್ಮದ ದೃಷ್ಟಿಯಿಂದ ಡೆಮಾಕ್ರಸಿಯಲ್ಲಿ ಇರುವ ನಂಬಿಕೆ ಇನ್ನು ಮುಂದೆ ಕಿತ್ತು ಹಾಕುವುದು ಒಳ್ಳೆಯದು ಇದರ ಬದಲು ಡಿಕ್ಟೇಟರುಷಿಪ್ ಎನ್ನುವುದನ್ನು ಈಗಲೇ ಜಾರಿಗೆ ತಂದ ಹಾಗಾಯಿತು. ಇದು ಖಂಡಿತ ನ್ಯಾಯವಲ್ಲ ಸಾವಿರಾರು ರೂಪಾಯಿಗಳಷ್ಟು ಕೋರ್ಟಿಗೆ ಖರ್ಚು ಮಾಡಿ ಮೂರು ಕೋರ್ಟುಗಳಲ್ಲೂ ಕೊಟ್ಟಿರುವ ತೀರ್ಮಾನಕ್ಕೆ ಬದ್ಧರಲ್ಲ ಎಂದರೆ ಹೇಗೆ ಇದು ನ್ಯಾಯವಾಗುತ್ತದೆರೆ ಇದರಿಂದ ನ್ಯಾಯಾಂಗಕ್ಕೆ ಬೆಲೆ ಬರುವುದಿಲ್ಲ ಇನ್ನು ಮುಂದೆ ಕಾರ್ಯಾಂಗಕ್ಕೆ ಬೆಲೆ ಎಂದು ಹೇಳುವುದಾದ? ಅದಕ್ಕೆ ಏನೂ ಬೆಲೆ ಇರುವುದಿಲ್ಲ, ಇದಕ್ಕಾಗಿ ನಾನು ತಿದ್ದುಪಡಿ ತಂದಿರುವುದು ತಾವು ಪ್ಲಾಂಟೇಶನುಗಳಿಗೆ ಸಾವಿರಗಟ್ಟಲೆ ಎಕರೆ ಜಮೀನನ್ನು ಕೊಡಬಹುದು ; ಮಠಾಧಿಪತಿಗಳಿಗೆ ಬೇಕಾದಷ್ಟು ಜಮೀನನು ಬಿಟ್ಟು ಕೊಡಬಹುದು. ಆದರೆ ಕೋರ್ಟು ತೀರ್ಮಾನವಾದ ಮೇಲೆ ಅದು ಲೆಕ್ಕಕ್ಕೆ ಬರುವುದಿಲ್ಲ ಅಂದರೆ ಎಂಥ ನೀತಿ ಮತ್ತು ಎಂಥ ಪ್ರಜಾಪ್ರಭುತ್ವದ ತತ್ವ ಎಂದು ಕೇಳುತ್ತೇನೆ. ಯಾವುದಾದರೂ ಕೋರ್ಟು ಕೊಟ್ಟ ತೀರ್ಮಾನಗಳಿಗೆ ಬೆಲೆ ಕೊಡದಿದ್ದರೆ ನ್ಯಾಯಾಂಗ ಇರುವುದಾದರೂ ಏಕೆ ? ನ್ಯಾಯಾಂಗದ ತೀರ್ಮಾನಕ್ಕೆ ನೀವು ಬೆಲೆ ಕೊಡದಿದ್ದರೆ ಅದಕ್ಕೆ ನನ್ನ ಧಿಕ್ಕಾರವೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಮಸೂದಾ ಕಾನೂನಿನ ಮೂಲ ಉದ್ದೇಶ ಗೇಣೀದಾರನ ಹಿತರಕ್ಷಣೆ ಮಾಡತಕ್ಕದ್ದು. ಇದರಲ್ಲಿ ಎಷ್ಟು ದೂರ ಹೋಗುವುದಕ್ಕೆ ಸಾಧ್ಯವಿದೆಯೋ ಅಷ್ಟು ದೂರ ಹೋಗುವುದಕ್ಕೆ ಪ್ರಯತ್ನ ಮಾಡಿದ್ದೇವೆ. ಅನೇಕ ಸಂದರ್ಭಗಳಲ್ಲಿ ಅವನ ಹಿತಕ್ಕೆ ವಿರುದ್ಧವಾದ ರೀತಿಯಲ್ಲಿ ವ್ಯಾಜ್ಯಗಳನ್ನು ಹೂಡಲಾಗಿದೆ. ಆದ್ದರಿಂದ ಯಾರ್ಯಾರ ಸ್ವಾಧೀನದಲ್ಲಿರುತ್ತದೋ ಅವರಿಗೆ ಅವರ ಫಲ ಸಿಗಬೇಕೆಂಬುದು ನಾವು ಮಾಡಿರುವುದು. ಅದಕ್ಕೆ ವಿರುದ್ಧವಾಗಿ ಶಾಮಣ್ಣನವರ ಅಭಿಪ್ರಾಯ ಇರುವುದರಿಂದ ಅದನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

MADAM SPEAKER.—I will now put the amendment moved by Sri T. R. Shamanna to the vote of the House. The question is :

> "That new clause "26A" Amendment to section 38 as now provided in the Joint Select Committee Report be deleted and in its place the provisions original Act be inserted".

The motion was negatived

I will now put the amendment moved by the Hon. Minister for Revenue. The question is :

> "That in the proposed Section 44, in sub-section (1) for the words "All lands held by tenants", the words "All lands held by or in the possession of tenants (including a tenant against whom a decree or order for eviction or a certificate for resumption is made or issued) "shall be substituted".

The motion was adopted

I will now put clause 31, as amended, to the vote of House. The question is :

"That clause 31, as amended, do stand part of the Bill".

The motion was adopted

Clause 31, as amended. was added to the Bill.

Clause 32

MADAM SPEAKER.—There are amendments to clause 32 given notice of by the Hon. Minister for Revenue, Sri T. R. Shamanna, Sri M. S. Krishnan and Sri B. V. Kakkilaya.

SRI N. HUTCHMASTY GOWDA (Madam Speaker, I beg to move).—

That in the proposed Section 47, (1) in sub-section (1)—

(*a*) for the words and figures "under Section 20" the words, figures and brackets ",under sub-section (6) of section 15 or section 20" shall be substituted ;

(*b*) for item (iii) of the proviso, the following item shall be substituted, namely :—

"(iii) if the land vesting in the Statement Government is D class land referred to in Part A of Schedule I or if the landlord is—

(i) a small holder ;

(ii) a minor ;

(iii) a widow ;

(iv) a woman who has never been married ;

(v) a person who is subject to physical or mental disability ; or

(vi) such soldier or seaman whose lands vest in the State Government under section 14,

an amount equal to twenty times the net annual income for such land shall be payable ;

(2) in sub-section (2), the words, brackets and letter ' clause (b) and the proviso to that clause (if applicable to that land) of" shall be omitted."

MADAM SPEAKER (Amendment moved).—

"That in the proposed section 47, (1) in sub-section (1)—

(*a*) for the words and figures "under section 20" the words, figures and brackets "under sub-section (6) of section 15 or section 20" shall be substituted ;

(*b*) for item (iii) of the proviso, the following item shall be substituted, namely :—

"(iii) if the land vesting in the State Government is D class land referred to in part A of Schedule I or if the landlord is—

(i) a small holder ;

(MADAM SPEAKER)

(ii) a minor ;

(iii) a widow ;

(iv) a woman who has never been married ;

(v) a person who is subject to physcal or mental disability ; or

(vi) such soldier or seaman whose lands vest in the State Government under section 41.

an amount equal to twenty times the net annual income for such land shall be payable." ;

(2) in sub-section (2), the words brackets and letter 'clause (b) and the proviso to that clause (if applicable to that land) of" shall be omitted.

ಶ್ರೀ ಕಾಗೋಡು ತಿಮ್ಮಪ್ಪ.—ನಮಗೆ ಸರ್ಕಾರದವರು ೫ನೇ ಲಿಸ್ಟ್ ಏನು ಕೊಟ್ಟಿರು ಅದಕ್ಕೆ ತಿದ್ದುಪಡಿಯನ್ನು ಕೊಟ್ಟಿದ್ದೇವೆ. ಆದರೆ ಆ ಮೇಲೆ ರಾತ್ರಿ ೯ ಗಂಟೆಯ ಮೇಲೆ ೬ನೇ ಲಿಸ್ಟನ್ನು ಕಳಿಸಿದ್ದಾರೆ. ರಾತ್ರಿ ಇದನ್ನು ಕಳಿಸುವಾಗ ನಾವು ಹೇಗೆ ಅದಕ್ಕೆ ಅಮೆಂಡ್‌ಮೆಂಟ್ ಕಳಿಸುವುದು ? ಆದ್ದರಿಂದ ಇದಕ್ಕೆ ಸ್ವಲ್ಪ ಸಮಯ ಬೇಕಾಗುತ್ತದೆ. ನಾವು ಒರಿಜಿನಲ್ ಆಕ್ಟ್, ತಿದ್ದುಪಡಿ, ಮತ್ತು ಇವುಗಳ ಕಂಪೇರಿಸನ್ ಮಾಡಿಕೊಂಡು ತಿದ್ದುಪಡಿ ಕಳಿಸಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನಾವು ಒರಿಜಿನಲ್ ಬಿಲ್ಲಿಗೆ ಅಮೆಂಡ್‌ಮೆಂಟ್ ಮೂವ್ ಮಾಡಿದ್ದು, ನಿನ್ನೆ ಬೆಳಿಗ್ಗೆ ಕೊಟ್ಟ ತಿದ್ದುಪಡಿಗಳನ್ನು ತೆಗೆದುಕೊಳ್ಳಲಿ ; ರಾತ್ರಿ ಕಳಿಸಿದ್ದನ್ನು ಆ ಮೇಲೆ ತೆಗೆದುಕೊಳ್ಳಬಹುದು.

ಅಧ್ಯಕ್ಷರು.—ತಾವು ಯಾವ ತಿದ್ದುಪಡಿ ಬೇಕಾದರೂ ಸೂಚಿಸಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—ಹಾಗೆ ಮಾಡುವುದಕ್ಕಾಗುವುದಿಲ್ಲ. ನಮ್ಮ ಕರ್ತವ್ಯವನ್ನು ನಾವು ಮಾಡಬೇಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ರೆಂಟಿಗೆ ಸಂಬಂಧಪಟ್ಟ ತಿದ್ದುಪಡಿಯನ್ನು ನಾವು ಮಧ್ಯಾಹ್ನ ತೆಗೆದುಕೊಳ್ಳಬಹುದು.

ಶ್ರೀ ಕಾಗೋಡು ತಿಮ್ಮಪ್ಪ.—೫ನೇ ಲಿಸ್ಟ್‌ನಲ್ಲಿ ಸೆಕ್ಷನ್ ೭೦ರ ವರೆಗೆ ಇದೆ. ಈ ಕ್ಲಾಜ್‌ಗಳು ಸೀರಿಯಲಾಗಿ ಇದ್ದರೆ ನಾವು ಸುಲಭವಾಗಿ ನೋಡಿಕೊಳ್ಳಬಹುದು. ಆದ್ದರಿಂದ ಈ ತಿದ್ದುಪಡಿಗಳ ಒಂದು ಪಟ್ಟಿ ಕೊಟ್ಟರೆ, ನಾವು ವೆರಿಫೈ ಮಾಡುವುದಕ್ಕಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ತಿದ್ದುಪಡಿಗಳನ್ನು ಕಳಿಸುವಾಗ ಸ್ವಲ್ಪ ಹಿಂದು ಮುಂದಾಗುತ್ತದೆ. ಇದು ಒಂದು ಮಹತ್ವಪೂರಿತವಾದ ಬಿಲ್ ಆಗಿರುವುದರಿಂದ ಚರ್ಚೆ ಮಾಡುವಾಗ ಇವೆಲ್ಲ ಕಾರಣಗಳಿಂದ ಸ್ವಲ್ಪ ತೊಂದರೆಯಾಗುತ್ತದೆ. ಆದ್ದರಿಂದ ಇದರ ಬಗ್ಗೆ ಒಂದು ತೀರ್ಮಾನ ಮಾಡುವುದಕ್ಕೆ ಸಹಕಾರ ನೀಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ : ಸರ್ಕಾರದವರು ಕೊಟ್ಟಿರತಕ್ಕ ಐದನೇ ಪಟ್ಟಿಯಲ್ಲಿರುವ ತಿದ್ದುಪಡಿಗಳನ್ನು ಈಗ ಚರ್ಚೆಗೆ ತೆಗೆದುಕೊಂಡು ಅವುಗಳನ್ನು ತೀರ್ಮಾನ ಮಾಡೋಣ.

ಶ್ರೀ ಎಚ್. ಡಿ. ದೇವೇಗೌಡ.—ಅಧ್ಯಕ್ಷರೇ, ನಾನೊಂದು ಸಲಹೆ ಮಾಡಬಯಸುತ್ತೇನೆ. ಅದು ಏನೆಂದರೆ ತಾವು ಸಭೆಯನ್ನು ಅರ್ಧಗಂಟೆ ಮುಂದಕ್ಕೆ ಹಾಕಿ ಶ್ರೀಮಾನ್ ಕಾಗೋಡು ತಿಮ್ಮಪ್ಪನವರನ್ನೂ, ಶ್ರೀ ಟಿ. ಆರ್. ಶ್ಯಾಮಣ್ಣನವರನ್ನೂ ಶ್ರೀ ಎಂ. ಎಸ್. ಕೃಷ್ಣನ್ ಅವರನ್ನೂ ಮತ್ತು ರೆವಿನ್ಯು ಮಂತ್ರಿಗಳನ್ನೂ ತಮ್ಮ ಛೇಂಬರಿಗೆ ಬರಮಾಡಿಕೊಂಡು ಅಲ್ಲಿ ತಾವುಗಳೆಲ್ಲರೂ ಸೇರಿ ಅಲ್ಲಿ ಏನು ಒಂದು ತೀರ್ಮಾನಕ್ಕೆ ಬರುತ್ತೀರೋ ಅದನ್ನು ಸಭೆಗೆ ಮತ್ತೆ ಸೇರಿದಾಗ ತಿಳಿಸಿಬಿಡಿ ಅದಕ್ಕೆ ನಾವೆಲ್ಲರೂ ಒಪ್ಪಿಗೆಯನ್ನು ಕೊಟ್ಟುಬಿಡುತ್ತೇವೆ. ಅಲ್ಲಿಗೆ ಮಸೂದೆ ಪಾಸಾದಂತಾಗುತ್ತದೆ.

ಅಧ್ಯಕ್ಷರು.—ಸದಸ್ಯರಿಗೆ ರಾತ್ರಿ ೯ ಗಂಟೆಯಲ್ಲಿ ಸರ್ಕಾರದವರು ಕೊಟ್ಟ ತಿದ್ದುಪಡಿಗಳ ಪ್ರತಿಯನ್ನು ಕಳುಹಿಸಿದ್ದರೂ ಈ ದಿವಸ ಇಲ್ಲಿಯವರೆಗೂ ಅದಕ್ಕೆ ತಿದ್ದುಪಡಿ ಕೊಡವುದಕ್ಕಾಗಲಿಲ್ಲ ಎಂದರೆ, ನಾನು ಏನೂ ಹೇಳಬೇಕೋ ಗೊತ್ತಾಗುವುದಿಲ್ಲ. ಸರ್ಕಾರದವರು ಕೊಟ್ಟಿರತಕ್ಕ ಪ್ರತಿಯೊಂದು ತಿದ್ದುಪಡಿಯನ್ನೂ ನಾನು ಎಲ್ಲಾ ಮಾನ್ಯ ಸದಸ್ಯರಿಗೂ ಸರ್ಕುಲೇಟ್ ಮಾಡಿಸಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಕೊಟ್ಟ ಕಡೇ ತಿದ್ದುಪಟಿಗಳು ಈ ದಿವಸ ಬೆಳಗ್ಗೆ ನನ್ನ ಕೈಗೆ ಬಂದವು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಕ್ಲಾಜ್ ೫ರಲ್ಲಿ ಪರಿಹಾರ ಕೊಡತಕ್ಕ ವಿಚಾರದಲ್ಲಿ ಅದು ರೆಂಟಿನ ಎಷ್ಟುಭಾಗ ಇರಬೇಕೆಂಬ ವಿಷಯ ಬರುವುದರಿಂದ ಅದನ್ನು ಸಧ್ಯಕ್ಕೆ ಕೈಬಿಟ್ಟು ಮುಂದಿನ ತಿದ್ದುಪಡಿಗಳನ್ನು ಚರ್ಚೆಗೆ ತೆಗೆದುಕೊಳ್ಳಬಹುದಲ್ಲವೇ ?

ಅಧ್ಯಕ್ಷರು.—ನಾನು ಅದನ್ನೂ ಆಲೋಚನೆ ಮಾಡಿದ್ದೇನೆ. ಆದರೆ ಕ್ಲಾಜ್ ೩೩ಕ್ಕೂ ಮತ್ತೆ ಇದೇ ತಕರಾರು ಬರುತ್ತೆ. ಅದಕ್ಕೂ ಸರ್ಕಾರದ ಅಮೆಂಡ್‌ಮೆಂಟಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಸರ್ಕಾರದವರು ಮತ್ತೆ—ವಾಟರ್ ರೇಟ್‌ನ್ನು ಸೇರಿಸಿದ್ದಾರೆ ? ಮೊದಲು ಇದು ಸೇರಿರಲಿಲ್ಲ.

ಶ್ರೀ ಕೆ. ಎಂ. ನಾಗಣ್ಣ.—ಅಧ್ಯಕ್ಷರೇ, ನನ್ನ ಒಂದು ಸಲಹೆ ಏನೆಂದರೆ—ಈಗ ಸಭೆ ಅರ್ಧಗಂಟೆ ಅಡ್ಜರ್ನ್ ಆಗಿ ಸೇರುವುದರ ಬದಲು ನಾವು ಒಂದೇ ಸಾರಿ ಸಭೆಯನ್ನು ಈಗ ಅಡ್ಜರ್ನ್ ಮಾಡಿ ಮಧ್ಯಾಹ್ನ ನಂತರ ೧ ಗಂಟೆಗೆ ಸೇರೋಣ ಎಂದು ಹೇಳುತ್ತೇನೆ.

ಶ್ರೀ ಸಿ. ಎಚ್. ಡಿ. ದೇವೇಗೌಡ.—ಈಗ ಸಭೆಯನ್ನು ಅಧ್ಯಕ್ಷರು ಅಡ್ಜರ್ನ್ ಮಾಡಿ ಮಧ್ಯಾಹ್ನ ಒಂದು ಗಂಟೆಗೆ ಸೇರುವುದರ ಬದಲು ೧೨ ಗಂಟೆಗೇ ಸೇರೋಣ ; ರಾತ್ರಿ ೯ರ ವರೆಗೂ ಕುಳಿತು ಇದನ್ನು ದಿವಸ ಸಂಪೂರ್ಣವಾಗಿ ಮುಗಿಸಿ ಬಿಡೋಣ. ತಿದ್ದುಪಡಿಯನ್ನು ಕಳುಹಿಸಿರತಕ್ಕವವರಿಗೆಲ್ಲಾ ಮಾತನಾಡಲು ೩ ನಿಮಿಷ ಅವಕಾಶ ಕೊಟ್ಟರೆ ಸಾಕು. ಇನ್ನು ನಾಳೆ ಮತ್ತು ನಾಡಿದ್ದು ನಾವು ಕುಳಿತು ಆ ಕಿತ್ತೂರು ಪ್ರಕರಣ, ಹಾವನೂರು ಪ್ರಕಾರಣ ಬ್ಯಾಂಕುಗಳ ಪ್ರಕರಣ ಇತ್ಯಾದಿಗಳನ್ನೆಲ್ಲಾ ಮುಗಿಸಿ ನಮ್ಮನ್ನು ತಾವು ಶನಿವಾರ ಮನೆಗಳಿಗೆ ಹೋಗುವುದಕ್ಕೆ ಅವಕಾಶ ಮಾಡಿಕೊಟ್ಟರೆ ನಾವೆಲ್ಲರೂ ತಮಗೆ ಕೃತಾರ್ಥರಾಗಿರುತ್ತೇವೆ. ನಾವು ಸಭೆಸೇರಿ ಇಲ್ಲಿಗೆ ೧೧೦ ದಿನಗಳಾಯಿತು. ನಾವು ಶನಿವಾರದ ನಂತರ ಇಲ್ಲಿ ಇರುವುದಕ್ಕೆ ಖಂಡಿತಾ ಸಾಧ್ಯವಿಲ್ಲ.

Madam Speaker.—He will take up this clause later on. The House stands adjourned to meet again at 12 noon to-day.

The House adjourned at Ten of the Clock and reassembled at Minutes past Twelve of the Clock.

Madam Speaker (in the Chair).

CLAUSE 5

MADAM SPEAKER.—Now we will take up the need over clause 5. There are amendments given notice of by the Hon. Minister Sri M. S. Krishna and Sri T. R. Shammannas they may be moved.

SRI N. HUTCHMASTHY GOWDA (Minister for Revenue).—Madam, I beg to move.—

That for clause 5, the following clause shall be substituted, namely :—

"5. *Substitution of new section for section 8.*—For section 8 of the principal Act, the following section shall be substituted, namely :—

'8 *Rent.*—(1) Subject to the provisions of this Act and notwithstanding anything in any law, custom, usage agreement, decree or order of a Court to the contrary,—

(*a*) the rent payable in respect of any land by the tanant shall be payable annually ; and

(*b*) such rent shall be ten times the aggregate of the land revenue and water rate, if any, payable in respect of such land :

Provided that in the case of A class, B class and C class lands (other than lands specified in item (ii) of C class) referred to in Part A of Schedule I, the amount of water rate to be taken into account shall not exceed the amount specified below :—

(i) *A* class lands	...	Rupees sixteen and paise fifty per acre
(ii) *B* class lands	...	Rupees eleven per acre.
(iii) *C* class lands other than lands specified in item (ii) of that class.	...	Rupees five and paise fifty per acre.

Provided further that where the rent payable by a tenant under any contract is less than the rent specified in clause (b), such tenant shall not be liable to pay more than such rent and where under any contract made prior to the date of commencement of the Amendment Act such lesser rent is payable in kind, the amount payable shall be calculated by converting rent in kind to its cash equivalent in the prescribed manner ;

Provided also that in any area notified as malnad area the rent in respect of lands specified as dry land, but used exclusively for grazing or removing leaves, shall be equal to the land revenue payable for such land.

Explanation.—In this section 'water rate' means the water rate payable in respect of land classified for purposes of land revenue settlement as dry land and irrigated by water obtained from any source of water which is the property of the State Government."

MADAM SPEAKER.—Amendment moved : "That for clause 5, the following clause shall be substituted, namely :—

"5. *Substitution of new section for section 8.*—For section 8 of the principal Act, the following section shall be substituted namely :—

'8. *Rent.*—(1) Subject to the provisions of this Act and notwithstanding anything in any law, custom, usage agreement, decree or order of a Court to the contrary,—

(*a*) the rent payable in respect of any land by the tenant shall be payable annually ; and

(*b*) such rent shall be ten times the aggregate of the land revenue and water rate, if any, payable in respect of such land :

Provided that in the case of A class, B class and C class lands (other than lands specified in item (ii) of C class) referred to in Part A of Schedule I, the amount of water rate to be taken into account shall not exceed the amount specified below :—

(i)	*A* class lands	...	Rupees sixteen and paise fifty per acre.
(ii)	*B* class lands	...	Rupees eleven per acre.
(iii)	*C* class lands other than lands specified in item (ii) of that class.	...	Rupees five and paise fifty per acre.

Provided further that where the rent payable by a tenant under any contract is less than the rent specified in clause (b), such tenant shall not be liable to pay more than such rent and where under any contract made prior to the date of commencement of the Amendment Act such lesser rent is payable in kind, the amount payable shall be calculated by converting rent in kind to its cash equivalent in the prescribed manner :

Provided also that in any area notified as malnad area the rent in respect of lands specified as dry land, but used exclusively for grazing or removing leaves, shall be equal to the land revenue payable for such land.

Explanation.—In this section 'water rate' means the water rate payable in respect of land classified for purposes of land revenue settlement as dry land and irrigated by water obtained from any source of water which is the property of the State Government."

SRI M. S. KRISHNAN.—Madam, I beg to move—

"That in sub-section 1 (b) of the proposed Section 8 for the words "ten times" the words "five times" shall be substituted and the words "and water rate, if any, payable in respect of such land" shall be deleted. (6)

"That the first proviso to sub-section ( ) of the proposed Section 8 shall be deleted (7)

And ;

"That at page 37 in the second proviso to the proposed Section 8, line 1, for the words "Amendment Act" the words "principal Act" shall be substituted ( )

MADAM SPEAKER.—Amendments moved

"That in sub-section 1 (b) of the proposed Section 8 for the words "ten times" the words "five times" shall be substituted and the words "and water rate, if any, payable in respect of such land" shall be deleted.

"That the first proviso to Sub section (1) of the proposed Section 8 shall be deleted.

And,

"That at page 37, in the second proviso to the proposed Section 8, line 1, for the words "Amendment Act" the words "principal Act" shall be substituted.

SRI T. R. SHAMANNA.—Madam, I beg to move—

"That at page 36, in the proposed Section 8 (b) for the words "ten times" the words "twenty times" shall be substituted."

MADAM SPEAKER.—Amendment moved :

"That at page 36, in the proposed Section 8 (b) for the words "ten times" the words "twenty times" shall be substituted."

SRI T. R. SHAMANNA.—I beg to move the following amendment to the amendment of the Minister for Revenue :

"That in clause 5, after sub-clause (b) add a proviso, namely :—

"The Government my fix up higher or lower rent provided the yield of the land is altered or reduced for causes beyond the control of the tiller."

In the same Section, before Explanation, in the third proviso add the following words ; namely :—

"and other areas where the land is used exclusively for livestock breeding."

After the above para, add the following proviso, namely :—

"Provided that if the tiller has less than three units, the water rate to be reduced by 50 per cent."

Madam Speaker.—**Amendment moved :—**

"That in clause 5, after sub-clause (b) add a proviso, namely :—

The Government may fix up higher or lower rent provided the yield of the land is altered or reduced for causes beyond the control of the tiller."

In the same Section, before Explanation, in the third proviso add the following words, namely :—

"and other areas where the land is used exclusively for livestock breeding."

After the above para, add the following proviso, namely :—

"Provided that if the tiller has less than three units, the water rate to be reduced by 50 per cent."

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ ನನ್ನ ತಿದ್ದುಪಡಿ ಉದ್ದೇಶ ಏನೆಂದರೆ ಗೇಣಿಯನ್ನು ವರ್ಷವರ್ಷ ಕೊಡತಕ್ಕದ್ದು, ಮತ್ತು ಆ ಗೇಣಿ ಭೂ ಕಂದಾಯದ ಹತ್ತರಷ್ಟು ಆಗಿರಬೇಕು. ವಾಟರ್‌ರೇಟ್ ಇವರುಕಡೆ ಭೂ ಕಂದಾಯದ ೧೦ರಷ್ಟು ಮತ್ತು ವಾಟರ್‌ರೇಟ್ ಕೊಡಬೇಕು. ಯಾವ ತರಗತಿ ಭೂಮಿಗೆ ಯಾವರೀತಿ ನೀರಿನ ತೆರಿಗೆ ಅನ್ವಯವಾಗುತ್ತದೆ ಎಂದರೆ, ಎ ಕ್ಲಾಸ್ ಭೂಮಿಗೆ, ೧೬ ೧/೨ ರೂಪಾಯಿಗಳು, ಬಿ, ತರಗತಿಗೆ ಹನ್ನೊಂದು ರೂಪಾಯಿಗಳು (ಸಿ)ನಲ್ಲಿ (ii)ನ್ನು ಬಿಟ್ಟು ಉಳಿದಿದ್ದಕ್ಕೆ ಐದೂವರೆ ರೂಪಾಯಿಗಳು. ಇದು ನೀರಿನ ತೆರಿಗೆ. ಈ ಕಾನೂನು ಬರುವುದಕ್ಕೆ ಮುಂಚಿತವಾಗಿ ಗೇಣಿದಾರರಿಗೂ ಭೂಮಾಲಿಕರಿಗೂ ಒಂದು ಒಪ್ಪಂದವಾಗಿದ್ದು ರೆಂಟ್ ನಿಗಧಿಯಾಗಿದ್ದರೆ, ಆ ರೀತಿ ನಿಗಧಿಯಾಗಿರತಕ್ಕ ರೆಂಟು ಈ ಶಾಸನದ ಪ್ರಕಾರ ನಿಗದಿ ಮಾಡತಕ್ಕ ರೆಂಟಿಗಿಂತ ಕಡಿಮೆ ಇದ್ದ ಪಕ್ಷದಲ್ಲಿ, ಹೆಚ್ಚಿಗೆ ರೆಂಟು ಕೊಡಬೇಕಾಗಿಲ್ಲ. ಒಂದು ವೇಳೆ ಕರಾರು ಮಾಡಿರತಕ್ಕ ರೆಂಟು ಹೆಚ್ಚಿಗೆ ಇದ್ದ ಪಕ್ಷದಲ್ಲಿ ಈಗ ನಿಗದಿಮಾಡುವ ರೆಂಟು ಕೊಡಬೇಕಾಗುತ್ತದೆ. ಆ ರೆಂಟು ಕ್ಯಾಷ್ ಅಥವಾ ದವಸದ ರೂಪದಲ್ಲಿ ಇದ್ದರೆ ಅದನ್ನು ಈಗಿನ ಬೆಲೆ ನಿರ್ಧಾರಮಾಡಿ ಅದನ್ನು ಕೊಡಬೇಕಾಗುತ್ತದೆ. ಮತ್ತೆ ಮಲೆನಾಡು ಏರಿಯಾ ಪ್ರದೇಶದಲ್ಲಿ ಖುಷ್ಕಿ ಜಮೀನು ಇರುತ್ತದೆ ಅದರಲ್ಲಿ ಜನರು ವ್ಯವಸಾಯ ಮಾಡದೆ, ಸೊಪ್ಪು ಬೆಳೆಯುವುದಕ್ಕೆ ದನಗಳನ್ನು ಮೇಯಿಸುವುದಕ್ಕೆ ಇಟ್ಟುಕೊಂಡಿರತಕ್ಕ ಭೂಮಿ ಇದ್ದರೆ, ಭೂ ಕಂದಾಯದಷ್ಟೇ ಗೇಣಿ ಕೊಡಬೇಕೆಂದು ಎಂದು, ಗೊತ್ತುಮಾಡಿದೆ. ಇದು ನಮ್ಮ ಈಗಿನ ಹೊಸ ತಿದ್ದುಪಡಿಯ ಮುಖ್ಯ ಸಾರಾಂಶ, ದಯಮಾಡಿ ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲ್ಲಾಯ.—ಮಾನ್ಯ ಅಧ್ಯಕ್ಷಣಿಯವರೇ, ಈ ಗೇಣಿ ಬಗ್ಗೆ ಮಾನ್ಯ ಸಚಿವರು ತಂದಿರುವ ತಿದ್ದುಪಡಿ ಏನಿದೆ ಇದು ಈಗ ಇರುವ ಗೇಣಿಗಿಂತಲೂ ಜಾಸ್ತಿಯಾಗುವ ಸಂಭವವಿದೆ ಎಂದು ಕಂಡುಬರುತ್ತದೆ. ಈ ಗೇಣಿ ಬಗ್ಗೆ ಇರುವ ನಿಯಮಕ್ಕೆ ಪ್ರಾಮುಖ್ಯತೆ ಏನೆಂದರೆ, ಒಂದನೆಯದು ಇನ್ನು ಮುಂದೆ ಸೀಮನ್ ಮತ್ತು ಸೋಲ್ಜರುಗಳಿಗೆ ಗೇಣಿ ರೂಪದಲ್ಲಿ ಕೊಡಬೇಕಾಗುತ್ತದೆ. ಎರಡನೆಯದು ಪರಿಹಾರ ಕೊಡುವ ಬಗ್ಗೆ ತಪ್ಪು ಒಂದು ತಿದ್ದುಪಡಿಯ ಪ್ರಕಾರ ಗೇಣಿ ಆಧಾರದ ಮೇಲೆ ಪರಿಹಾರ ಗೊತ್ತುಮಾಡಬೇಕಾಗಿದೆ. ಮುಖ್ಯವಾಗಿ ರೈತರು ಕೊಡಬೇಕಾದಂಥ ಪ್ರೀಮಿಯಮನ್ನು ಇದರ ಪ್ರಕಾರ ಲೆಕ್ಕ ಹಾಕಿದರೆ ಎಷ್ಟಾಗುತ್ತದೆ ಎಂಬುದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಇಲ್ಲಿ ಕೆಲವು ಅಂಕಿ ಅಂಶಗಳನ್ನು ನಮಗೆ ಒದಗಿಸಿರುವ ಪ್ರಕಾರ ನೋಡಿದರೆ, ಈ ಅಂಕಿ ಅಂಶಗಳನ್ನು ಸಂಗ್ರಹ ಮಾಡುವುದರಲ್ಲಿ ನಮ್ಮ ಅಧಿಕಾರಿಗಳು ಒಂದೊಂದು ಸಂದರ್ಭದಲ್ಲಿ ಒಂದೊಂದು ತರಹ ಅವರ ಬುದ್ಧಿವಂತಿಕೆಯನ್ನು ಉಪಯೋಗ ಮಾಡಿರುವುದು ಕಂಡುಬರುತ್ತದೆ. ಕಂದಾಯ ಇಲಾಖೆಯವರು ಕೊಟ್ಟಿರುವ ಅಂಕಿಅಂಶಗಳ ಪ್ರಕಾರ ನೋಡುವುದಾದರೆ ಭೂ ಕಂದಾಯವನ್ನು ಬೆಳೆಯ ನಾಲ್ಕನೇ ಒಂದು ಭಾಗ ಒಂದು ನಿಗದಿ ಮಾಡಿದ್ದಾರೆ. ಹಿಂದೆ ಜಮೀನಿನ ಭೂಕಂದಾಯ ಬಹಳ ಕಡಿಮೆ ಇರಬೇಕು ಎಂದು ಈ ರೀತಿ ಲೆಕ್ಕ ಮಾಡಿರಬಹುದು. ಈ ಬಗ್ಗೆ ನಮ್ಮ ಸೌತ್‌ಕೆನರ ಜೊತೆಗೆ ಸಂಬಂಧಪಟ್ಟಂತೆ ನೋಡುವುದಾದರೆ ಒಂದು ಎಕರೆಯಲ್ಲಿ ಬತ್ತ ಬೆಳೆದರೆ ೨೬೬.೭೫ ಆದಾಯ ಬರುತ್ತದೆಂದು ಇಲ್ಲಿ ಹೇಳಿದ್ದಾರೆ. ಇದರಲ್ಲಿ ಕಲ್ಟಿವೇಷನ್ ಚಾರ್ಜ್ ೧೧೫ ರೂಪಾಯಿ ಹೋದರೆ ನೆಟ್ ಇನ್‌ಕಮ್ ೧೫೧.೭೫ ರೂಪಾಯಿಯಾಗುತ್ತದೆಂದು ಹೇಳಿದ್ದಾರೆ. ಈ ಬಗ್ಗೆ ತಹಶೀಲ್‌ದಾರರ ಲೆಕ್ಕವೇ ಬೇರೆ ಇದೆ. ಮತ್ತು ಅವರ ಪ್ರಕಾರ ಒಂದೊಂದು ತಾಲ್ಲೂಕಿಗೆ ಒಂದೊಂದು ರೀತಿಯ ಲೆಕ್ಕ ಇದೆ. ಅದೇ ಮಂಗಳೂರಿನಲ್ಲಿ ಸುಪೀರಿಯರ್ ಲ್ಯಾಂಡನಲ್ಲಿ ೧೧.೨೦

(ಶ್ರೀ ಬಿ. ವಿ. ಕಕ್ಕಿಲಾಯ)

ಕ್ವಿಂಟಾಲ್ ಮೀಡಿಯಮ್ ಲ್ಯಾಂಡ್‌ನಲ್ಲಿ ೯.೮೦ ಕ್ವಿಂಟಾಲ್ ಇನ್‌ಫೀರಿಯರ್ ಲ್ಯಾಂಡ್‌ನಲ್ಲಿ ೮.೪ ಕ್ವಿಂಟಾಲ ಬತ್ತದ ಉತ್ಪಾದನೆ ಒಂದು ಎಕರೆಗೆ ಆಗುತ್ತದೆಂದು ಬರೆದಿದ್ದಾರೆ. ಒರಿಜನಲ್ ಆಕ್ಟ್ ಪ್ರಕಾರ ಗೇಣಿ ನಿಗದಿ ಮಾಡುವುದು ಉತ್ಪತ್ತಿಯ ನಾಲ್ಕನೇ ಒಂದು ಅಂಶ ಇಲ್ಲವೇ ಐದನೇ ಒಂದು ಅಂಶ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಐದನೇ ಒಂದು ಅಂಶ ಎಂದು ಲೆಕ್ಕ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಅದು ನೀರಾವರಿ ಪ್ರದೇಶ ಅಲ್ಲದಿರುವುದರಿಂದ ಐದನೇ ಒಂದು ಅಂಶ ಎಂದು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ, ಈ ರೀತಿ ಲೆಕ್ಕಕ್ಕೆ ತೆಗೆದುಕೊಂಡರೆ ರೈನಫೆಡ್ ಏರಿಯಾದಲ್ಲಿ ಎಕರೆಗೆ ೯.೮ ಕ್ವಿಂಟಾಲ್ ಮಾತ್ರ ಬೆಳೆಯಾಗುತ್ತದೆ. ಆದೇ ಅವರೇಜ್ ತೆಗೆದುಕೊಂಡರೆ ೭ ಕ್ವಿಂಟಾಲ್ ಮಾತ್ರ ಆಗುತ್ತದೆ. ಇದರಲ್ಲಿ ಐದನೇ ಒಂದು ಅಂಶ ಎಂದರೆ ೧.೪ ಆಗುತ್ತದೆ. ತಾವು ಬೆಲೆ ಏನು ಕೊಡುತ್ತೀರೋ ಅದಕ್ಕಿಂತ ಜಾಸ್ತಿ ಬೆಲೆಯನ್ನೇ ಲೆಕ್ಕಕ್ಕೆ ತೆಗೆದುಕೊಂಡರೂ ಮತ್ತು ೫ ವರ್ಷದ ಆವರೇಜ್ ಬೆಲೆಯನ್ನು ಲೆಕ್ಕಕ್ಕೆ ತೆಗೆದುಕೊಂಡರೂ ಸಹ ಕ್ವಿಂಟಾಲ್ ಬತ್ತದ ಬೆಲೆ ೮೪ ರೂಪಾಯಿಗಳು ಎಂದು ಇಟ್ಟುಕೊಳ್ಳಬಹುದು. ಇದರ ೫ ರಷ್ಟು ಗೇಣಿ ಎಂದರೆ ೪೨೦ ರೂಪಾಯಿ ಆಗುತ್ತದೆ. ಗೇಣಿಯ ೧೫ ಪಟ್ಟು ಪರಿಹಾರ ಎಂದರೆ ೧೨೬೦ ರೂಪಾಯಿಗಳಾಗುತ್ತದೆ. ಇದನ್ನು ಇಪ್ಪತ್ತು ವಾರ್ಷಿಕ ಕಂತುಗಳಲ್ಲಿ ಕೊಡಬೇಕೆಂದರೆ ವರ್ಷಕ್ಕೆ ೬೩ ರೂಪಾಯಿ ಕೊಡಬೇಕಾಗುತ್ತದೆ ನಂತರ ಆತ ಆ ಭೂಮಿಯ ಮಾಲೀಕನಾಗುತ್ತಾನೆ. ಅದೇ ಸೆಟಲಿಮೆಂಟ್ ಇಲಾಖೆಯವರ ಲೆಕ್ಕದ ಪ್ರಕಾರ ಲೆಕ್ಕ ಹಾಕುತ್ತಾ ಹೋದರೆ, ಭೂಕಂದಾಯದ ಹತ್ತರಷ್ಟು ಎಂದು ಹೇಳಲಾಗಿದೆ. ಈ ತರಹದ ಭೂಮಿಯ ಭೂಕಂದಾಯ ೯.೪೦ ಪೈಸೆ ಇದೆ. ಇದಕ್ಕೆ ವಾಟರ್ ರೇಟ್ ೯.೪೪ ಪೈಸೆ ಬೇರೆ ಸೇರಿಸಬೇಕಾಗಿದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಈ ಲೆಕ್ಕದ ಪ್ರಕಾರ ಗೇಣಿ ಜಾಸ್ತಿಯಾಗುತ್ತದೆ. ಹಳೆಯ ಆಕ್ಟ್ ಪ್ರಕಾರ ಲೆಕ್ಕ ಹಾಕಿದರೂ ಸಹ ಜಾಸ್ತಿಯಾಗುತ್ತದೆ. ಇಪ್ಪೊಂದು ರೇಟನ್ನು ಗೇಣಿದಾರ ಕೊಡಬೇಕೆಂದರೆ, ಮಾರ್ಕೆಟ್ ರೇಟನ್ನು ಕೊಟ್ಟಂತೆಯೇ ಆಗುತ್ತದೆ. ಇದು ಸರಿಯಲ್ಲ ಅಡಿಕೆ ಬೆಳೆ ಬಗ್ಗೆ ಒಂದು ಮಾತನ್ನು ಹೇಳಬೇಕೆಂದರೆ, ನಮ್ಮ ಪುತ್ತೂರು ತಾಲ್ಲೂಕಿನ ಬಗ್ಗೆಯೇ ಹೇಳುವುದಾದರೆ ಒಂದು ಕ್ವಿಂಟಾಲ್ ಅಡಿಕೆಯ ಬೆಲೆ ೩೦೦ ರಿಂದ ೪೦೦ ರೂಪಾಯಿ ಎಂದು ಲೆಕ್ಕ ಇಟ್ಟುಕೊಂಡರೂ ಸಹ ಒಂದು ಎಕರೆಗೆ ೧೨,೪೫೦ ರೂಪಾಯಿ ಕೊಡಬೇಕಾಗುತ್ತದೆ. ತರೀಕೆರೆಯ ಬಗ್ಗೆ ಹೇಳುವುದಾದರೆ ಒಂದು ಎಕರೆಗೆ ೯೩೩೦ ರೂಪಾಯಿ ಪರಿಹಾರ ಸಾಮಾನ್ಯವಾಗಿ ಕೊಡಬೇಕಾಗುತ್ತದೆ. ಇಪ್ಪೊಂದು ಪರಿಹಾರ ಕೊಡುವುದೆಂದರೆ, ಅದು ಎಂತಹ ಭೂಸುಧಾರಣೆಯಾಗುತ್ತದೆಂದು ಕೇಳುತ್ತೇನೆ. ಈಗ ವಾಟರ್ ರೇಟ್ ಬೇರೆ ಸೇರಿಸಬೇಕೆಂದು ಹೇಳುತ್ತಿದ್ದಾರೆ. ಮತ್ತು ಪರಿಹಾರವನ್ನು ಹಣದ ರೂಪದಲ್ಲಿಯೇ ಕೊಡುವುದಕ್ಕೆ ತೀರ್ಮಾನ ಮಾಡಿದ್ದೀರಿ. ಈಗ ತಾವು ತಂದಿರುವ ತಿದ್ದುಪಡಿ ಏನಿದೆ, ಇದು ಎಲ್ಲ ದರ್ಜೆಯ ಭೂಮಿಗೂ ಸಹ ಅನ್ವಯವಾಗುತ್ತದೆ. ೧೬ ರೂಪಾಯಿ ಹನ್ನೆರಡೂವರೆ ರೂಪಾಯಿ, ಐದೂವರೆ ರೂಪಾಯಿ ಎಂದು ತಾವು ಹೇಳುವುದಾದರೆ ಮತ್ತು ಈ ರೇಟನ್ನು ಎಲ್ಲ ಜಮೀನುಗಳಿಗೂ ಸಹ ಅನ್ವಯ ಮಾಡುವುದಾದರೆ, ಅದು ಒಂದಕ್ಕೆ ಎರಡರಷ್ಟು ಜಾಸ್ತಿಯಾಗುತ್ತದೆಯಾದ್ದರಿಂದ ಇದನ್ನು ಮತ್ತೊಮ್ಮೆ ಪರಿಶೀಲನೆ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

2-30 P. M.

† ಟಿ. ಆರ್. ಶಾಮಣ್ಣ.—ಈ ಗುತ್ತಿಗೆ ಸಮಸ್ಯೆ ಇಲ್ಲಿಗೆ ಮುಗಿಯಿತೆಂದು ಹೇಳುವುದಕ್ಕಾಗುವುದಿಲ್ಲ ಇದೊಂದು ಮುಗಿಯದ ಸಮಸ್ಯೆ ಎಂದು ನಾನು ತಿಳಿದುಕೊಂಡಿದ್ದೇನೆ. ಸೈನ್ಯದಲ್ಲಿರತಕ್ಕವರಿಗೆ ಇನ್ನು ಮುಂದೆ ಗುತ್ತಿಗೆ ಕೊಡತಕ್ಕ ಒಂದು ಸಂದರ್ಭವನ್ನು ಬಿಟ್ಟರೆ, ನಾಳೆ ಈ ಮಸೂದೆ ಆಕ್ಟಾದ ಮೇಲೆ ಈ ಗುತ್ತಿಗೆ ಪ್ರಶ್ನೆಯೇ ಉದ್ಭವ ಆಗುವುದಿಲ್ಲ. ಆದುದರಿಂದ ಇದರ ವ್ಯಾಪ್ತಿ ಬಹಳ ಕಡಿಮೆ ಸಂಖ್ಯೆಯ ಜನರಿಗೆ ಅನ್ವಯಿಸುವುದರಿಂದ ಸರ್ಕಾರದವರು ಇದನ್ನು ಪುನರ್‌ಪರಿಶೀಲನೆ ಮಾಡಬೇಕೆಂದು ನಾನು ಈ ತಿದ್ದುಪಡಿಯನ್ನು ತಂದಿದ್ದೇನೆ ಇನ್ನು ಈ ಗುತ್ತಿಗೆ ಪ್ರಶ್ನೆ ಯಾವಾಗ ಉದ್ಭವಿಸುತ್ತೆಂದರೆ ಕಾಂಪನ್‌ಸೇಷನ್ ಕೊಡತಕ್ಕ ಸಂದರ್ಭದಲ್ಲೂ ಇದು ಬರುತ್ತದೆ. ಸಾಮಾನ್ಯವಾಗಿ ಮೊದಲಿದ್ದ ರೀತಿಯಲ್ಲಿ ಗುತ್ತಿಗೆಯನ್ನು ಬೆಳೆಯ ನಾಲ್ಕನೇ ಒಂದು ಭಾಗ ಕೆಲವು ಕಡೆ, ಇನ್ನು ಕೆಲವು ಕಡೆಗಳಲ್ಲಿ ಮೂರನೇ ಒಂದು ಭಾಗ ಎಂದೂ ಇನ್ನು ಕೆಲವು ಕಡೆಗಳಲ್ಲಿ ಅರ್ಧ ಭಾಗವೆಂದೂ ಕೊಡತಕ್ಕ ಪದ್ಧತಿ ಇತ್ತು. ಆದರೆ ಭೂಮಿಯಲ್ಲಿ ಏನು ಉತ್ಪನ್ನ ಬರುತ್ತದೆ ಮತ್ತು ಆ ಭೂಮಿ ಕಂದಾಯದ ಎಷ್ಟು ಪಟ್ಟಿದೆ ಎಂಬುದನ್ನು ಲೆಕ್ಕ ಹಾಕುವುದು ಒಂದೊಕ್ಕೊಂದಕ್ಕೂ ಅರ್ಥಾತ್ ಸಂಬಂಧವಿಲ್ಲ ಲ್ಯಾಂಡ್‌ರೆವಿನ್ಯೂ ನಿಗದಿಯಾದದ್ದು ಓಬೀರಾಯನ ಕಾಲದಲ್ಲಿ ಕೆಲವು ಭೂಮಿಗಳಲ್ಲಿ ಒಳ್ಳೆ ಉತ್ಪನ್ನ ಬರುತ್ತೆ ಅವು ಒಳ್ಳೆ ಫಲವತ್ತಾದ ಪ್ರದೇಶದಲ್ಲಿರುತ್ತವೆ. ಇನ್ನು ಕೆಲವು ಭೂಮಿಗಳಲ್ಲಿ ಉತ್ಪನ ಬಹಳ ಕಡಿಮೆ ಕಾರಣ ಅವುಗಳು ಬಂಜರ್ ಭೂಮಿಗಳು ಹೀಗೆ ಒಟ್ಟಿನಲ್ಲಿ ಎಲ್ಲ ಬಗೆಯ ಭೂಮಿಯಲ್ಲಿ ಬರತಕ್ಕ ಉತ್ಪನ್ನವನ್ನು ಲೆಕ್ಕಕ್ಕೆ ತೆಗೆದುಕೊಂಡು ಹಿಂದೆ ಈ

ಕಂದಾಯವನ್ನು ಎಕರೆ ಒಂದಕ್ಕೆ ಒಂದೂವರೆ ರೂಪಾಯಿಯಿಂದ ಏಳು ರೂಪಾಯಿಗಳ ವರೆಗೂ ನಿಗದಿ ಮಾಡಿದ್ದಾರೆ. ಆದುದರಿಂದ ಇಲ್ಲಿ ನಾವು ಮುಖ್ಯವಾಗಿ ಗಮನಿಸಬೇಕಾದ್ದು ಭೂಮಿಯಲ್ಲಿ ಬರತಕ್ಕ ಉತ್ಪನಕ್ಕೂ ಮತ್ತು ಆ ಭೂಮಿಗೆ ನಿಗದಿ ಮಾಡತಕ್ಕ ಕಂದಾಯಕ್ಕೂ ಯಾವತ್ತೂ ಒಂದು ಸಮನಾಗಿರುವುದಿಲ್ಲ ಹಾಗೆ ಸಮನಾಗಿರುವುದಕ್ಕೆ ಸಾಧ್ಯವೂ ಇಲ್ಲ ಆದುದರಿಂದ ನಾನು ಹೇಳುತ್ತಿರುವುದು ಕಂದಾಯವನ್ನು ಆಧಾರವಾಗಿ ಇಟ್ಟುಕೊಂಡು ಗುತ್ತಿಗೆಯನ್ನು ನಿರ್ಧಾರ ಮಾಡುವುದು ನ್ಯಾಯವಾದ್ದಲ್ಲ ಎಂದು ಹೇಳುತ್ತೇನೆ. ಈಗ ಉದಾಹರಣೆಗೆ ಖುಷ್ಕಿ ಭೂಮಿಯ ಬೆಲೆ ಒಂದು ಸಾವಿರ ರೂಪಾಯಿ ಒಂದು ಎಕರೆಗೆ ಎಂದಿಟ್ಟುಕೊಂಡರೆ ಅದಕ್ಕೆ ಕಂದಾಯ ಎಕರೆಗೆ ಒಂದು ರೂಪಾಯಿ ಇರುತ್ತೆ. ಅದಕ್ಕೆ ಗುತ್ತಿಗೆ ಎಷ್ಟಾಗುತ್ತದೆ ಎಂದರೆ ಕಂದಾಯದ ಹತ್ತು ಪಟ್ಟು ಎಂದರೆ ಅದು ಅಮ್ಮಾಮ್ಮ ಎಂದರೆ ೧೫-೨೦ ರೂಪಾಯಿಗಳಾದರೆ ತಲೆಬೆಲೆಯಾಯಿತು. ದುಡ್ಡನ್ನೆ ಕೊಡದೆ ಇದನ್ನು ಧಾನ್ಯ ರೂಪದಲ್ಲಿ ಕೊಟ್ಟಿದ್ದರೆ ಅವನಿಗೆ ಎಷ್ಟೋ ಕಡಿಮೇ ಎಂದರೂ ೧೦೦-೧೫೦ ರೂಪಾಯಿಗಳು ಸಿಕ್ಕುತ್ತಿತ್ತು. ಆದುದರಿಂದ ನಗದು ಹಣದ ರೂಪದಲ್ಲಿ ಕೊಡತಕ್ಕ ಗುತ್ತಿಗೆ ಏನಿದೆ ಇದು ಬಹಳ ಕಡಿಮೆ ಆಯಿತು ಇನ್ನು ಭತ್ತ ಬೆಳೆಯುವ ತರೀ ಜಮೀನಿನ ವಿಚಾರಕ್ಕೆ ಬಂದರೆ ಒಂದು ಎಕರೆಗೆ ಈ ದಿವಸ ೫ ಸಾವಿರದಿಂದ ೧೦ ಸಾವಿರದವರೆಗೂ ಬೆಲೆ ಇದೆ ನಾವು ೮ ಸಾವಿರ ಎಂದೇ ಇಟ್ಟುಕೊಂಡರೂ ಅದರ ಕಂದಾಯ ಎಕರೆಗೆ ೬ ರೂಪಾಯಿ ಇದರ ಹತ್ತು ಪಟ್ಟು ಎಂದರೆ ೬೦ ರೂಪಾಯಿಗಳಾಯಿತು. ಇದು ಬಹಳ ಕಡಿಮೆ ಈ ಪರಿಹಾರ ಏನಿದೆ ಯಾರು ಹಿಂದಿನಿಂದಲೂ ಭೂಮಿಯನ್ನು ಇಟ್ಟುಕೊಂಡು ರೈತರನ್ನು ಶೋಷಣೆ ಮಾಡಿಕೊಂಡು ಬಂದಿದ್ದಾರೋ ಅವರಿಗೆ ಸರಿಯಾಗಿದೆ ಎಂದರೂ ಅನೇಕರು ಇತ್ತೀಚೆಗೆ ಭೂಮಿಯನ್ನು ಕೊಂಡಿದ್ದಾರೆ ಹೆಚ್ಚಿನ ಬೆಲೆಯನ್ನು ಕೊಟ್ಟಿದ್ದಾರೆ. ಎಕರೆಗೆ ಎಂಟು ಸಾವಿರ ಕೊಟ್ಟಿದ್ದಾನೆಂದು ಇಟ್ಟುಕೊಂಡರೂ ಅವನು ಭೂಮಿಯ ಮೇಲೆ ಆ ಹಣವನ್ನು ಹಾಕದೆ ಬ್ಯಾಂಕಿನಲ್ಲಿಟ್ಟಿದ್ದರೆ ಆ ೮ ಸಾವಿರಕ್ಕೆ ಶೇ ೬ ರಂತೆ ವರ್ಷಕ್ಕೆ ೪೮೦ ರೂಪಾಯಿ ಆದಾಯ ಬರುತ್ತಿತ್ತು ಆದರ ಈ ದಿವಸ ಸರ್ಕಾರ ನಿಗದಿ ಮಾಡುತ್ತಿರುವುದು ೬೦ ರೂಪಾಯಿಗಳು ಮಾತ್ರ ಇದು ಬಹಳ ಕಡಿಮೇ ಆಯಿತು ಆದುದರಿಂದ ಇಲ್ಲಿ ಸರ್ಕಾರದವರು ಹತ್ತು ಪಟ್ಟು ಎಂದು ಹೇಳಿರುವುದನ್ನು ಇಪ್ಪತ್ತು ಪಟ್ಟು ಎಂದು ತಿದ್ದುಪಡಿ ಮಾಡಬೇಕೆಂದು ಇದನ್ನು ತಂದಿದ್ದೇನೆ ಇದನ್ನು ಸರ್ಕಾರದವರು ದಯಮಾಡಿ ಒಪ್ಪಿಕೊಳ್ಳಬೆಕೆಂದು ಹೇಳುತ್ತೇನೆ.

ಇನ್ನು ಎರಡನೇಯದಾಗಿ ಈ ನೂರಾರು ತಿದ್ದುಪಡಿಗಳನ್ನು ಮಾಡಿ ಇಲ್ಲಿ ಗೊಂದಲವೆಬ್ಬಿಸುವುದರ ಬದಲು ಸರ್ಕಾರ ಒಂದು ಪ್ರತ್ಯೇಕವಾಗಿ ಹೊಸ ಬಿಲ್ಲನ್ನೇ ತಂದಿದ್ದರೆ ಚೆನ್ನಾಗಿತ್ತೆಂದು ನನಗೆ ಅನಿಸುತ್ತದೆ. ಈಗ ಸರ್ಕಾರದವರು ಕೊಟ್ಟಿರತಕ್ಕ ತಿದ್ದುಪಡಿಯಲ್ಲಿ ವಾಟರ್ ರೇಟನ್ನು ಸೇರಿಸಿದ್ದಾರೆ. ಇದನ್ನು ಸರ್ಕಾರದವರು ಮೊದಲೆ ಸೇರಿಸಬಹುದಿತ್ತು ಆಗ ಏಕೆ ಸೇರಿಸಲಿಲ್ಲ ? ಸರ್ಕಾರದವರು ಬಡವರಿಗೆ ದೀನದಲಿತರಿಗೆ ಹರಿಜನ ಗಿರಿಜನರಿಗೆ ಅನುಕೂಲ ಮಾಡುತ್ತೇವೆಂದು ಹೇಳಿಕೊಳ್ಳುತ್ತಿರುವ ಸಮಯದಲ್ಲಿ ಅವರಿಗೆ ಕಂದಾಯ ಮತ್ತು ವಾಟರ್ ರೇಟ್ ಮತ್ತು ಪ್ರಿಮಿಯರ್ ಇವೆಲ್ಲಾ ಸೇರಿದರೆ ಅವರಿಗೆ ಬಹಳ ಹೊರೆಯಾಗುತ್ತದೆ. ಆದುದರಿಂದ ಈ ದಿವಸ ಸರ್ಕಾರದವರು ಆ ಸ್ಲಂ ಏರಿಯಾದಲ್ಲಿರತಕ್ಕ ಜನರಿಗಾಗಿ ಒಂದೂವರೆ ಕೋಟಿ ಖರ್ಚು ಮಾಡುತ್ತಿರುವಾಗ ಯಾರಲ್ಲಿ ೫ ಯೂನಿಟಿಗಿಂತ ಭೂಮಿ ಕಡಿಮೆ ಇರತಕ್ಕವರಿಗೆ ವಾಟರ್ ರೇಟನ್ನು ೫೦% ಕಡಿಮೆ ಮಾಡಬೇಕೆಂದು ಈ ಒಂದು ತಿದ್ದುಪಡಿಯನ್ನು ತಂದಿದ್ದೇನೆ ಸಭೆಯವರು ಇದನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ನನ್ನ ಇನ್ನೊಂದು ತಿದ್ದುಪಡಿ ಎಂದರೆ ದನಗಳ ಮೇವಿಗೆ ಬಿಡತಕ್ಕ ಜಮೀನು ಎಂದು ಕೇವಲ ಮಲೆನಾಡಿಗೆ ಮಾತ್ರ ಅದರ ರಿಯಾಯಿತಿಯನ್ನು ಹೇಳಿದ್ದಾರೆ. ಈಗಾಗಲೇ ಹಾಲಿನ ಕ್ಷಾಮ ಎಲ್ಲ ಕಡೆಗಳಲ್ಲೂ ತಲೆದೋರುತ್ತಿದೆ. ಆದುದರಿಂದ ಈ ಸೌಲಭ್ಯವನ್ನು ಎಲ್ಲ ಪ್ರದೇಶಗಳಿಗೂ ಅನ್ವಯವಾಗುವಂತೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಕೊನೆಯದಾಗಿ ಹೇಳುವುದಾದರೆ ಟಿಲ್ಲರೆಗೆ ೫ ಯೂನಿಟಿಗಿಂತ ಕಡಿಮೆ ಇದ್ದರೆ ಅವನಿಗೆ ವಾಟರ್ ರೇಟನ್ನು ಶೇಕಡ ೫೦ ಪರ್ಸೆಂಟ್ ಅಷ್ಟು ಕಡಿಮೆ ಮಾಡಿಕೊಡಬೇಕು ಎಂದು ನಾನು ಈ ತಿದ್ದುಪಡಿಯನ್ನು ತಂದಿದ್ದೇನೆ, ಇದು ತಮ್ಮ ಸಮಾಜವಾದಕ್ಕೇನೂ ವಿರುದ್ಧವಾಗಿಲ್ಲ ಅದಕ್ಕನುಗುಣವಾಗಿಯೇ ಇದೆ, ಆದುದರಿಂದ ಇದನ್ನು ಒಪ್ಪಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ. — ಅಧ್ಯಕ್ಷರೇ ಸೆಕ್ಷನ್ ೧೫೮ ರ ಪ್ರಕಾರ ಗೇಣಿಯನ್ನು ನಿರ್ಧರಿಸಬೇಕಾದ ಸಂದರ್ಭದಲ್ಲಿ ಹಿಂದೆ ಇದ್ದದಂಥ ಕ್ರಮ ಲೋಪದೋಷವಾದುದು ಈಗ ಅದನ್ನು ಸುಲಭವಾಗಿ ಮಾಡೋಣ ಎಂದು ಕೆಲವು ತಿದ್ದುಪಡಿಯನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ತಂದಿದ್ದಾರೆ. ಅದಕ್ಕೆ ಮತ್ತೆ ಕಂದಾಯ ಸಚಿವರು ಒಂದು ಹೊಸ ತಿದ್ದುಪಡಿ ತಂದಿದ್ದಾರೆ. ಹಿಂದೆ ಇದ್ದದ್ದು ಎಷ್ಟು ಕ್ಲಿಷ್ಟವಾಗಿತ್ತೋ ಅದಕ್ಕಿಂತಲೂ ಇದು ಕ್ಲಿಷ್ಟವಾಗಿದೆ ಎಂದು ಹೇಳುತ್ತೇನೆ. ಇದು ಅಷ್ಟು ಸಹಾಯಕವಾಗಿಲ್ಲ.

(ಶ್ರೀ ಕಾಗೋಡು ತಿಮ್ಮಪ್ಪ)

ತಾವು ಗೇಣಿಯನ್ನು ಕಂದಾಯದ ೧೦ ರಷ್ಟು ಕೊಡಬೇಕೆಂದು ಮಾಡಿದ್ದೀರಿ. ಆದರೆ ಲೇವೊತ್ತಿನವರೆಗೂ ಕೂಡ ಅಂದರೆ ೧೯೬೪ ರಲ್ಲಿ ಆಕ್ಟ್ ಏನು ಬಂತೋ ಅಂದಿನಿಂದ ಈವೊತ್ತಿನವರೆಗೂ ಕೂಡ ಯಾವ ವರ್ಗದ ಜಮೀನುಗಳಿಗೆ ಯಾವ ಯಾವ ಕಂದಾಯ ಇರಬೇಕು ಎಂದು ನಿಗದಿ ಮಾಡಿಲ್ಲ. ಆದುದರಿಂದ ಇದು ಇನ್ನೂ ಕ್ಲಿಷ್ಟವಾದ ಸಮಸ್ಯೆ ಆಗುತ್ತದೆ. ಇದರ ಜೊತೆಗೆ ಈಗ ವಾಟರ್‌ರೇಟ್ ಕೊಡಬೇಕೆಂದು ಮಾಡಿದ್ದೀರಿ. ಆದರೆ ಇದಕ್ಕೂ ಕೂಡ ಯಾವ ಯಾವ ವರ್ಗದ ಜಮೀನುಗಳಿಗೆ ಯಾವರೀತಿ ವಾಟರ್ ರೇಟ್ ಕೊಡಬೇಕು ಎಂದು ನಿಗದಿ ಮಾಡಿಲ್ಲ. ಈಗ ೧೯೬೪ ರಿಂದ ಇಲ್ಲಿಯವರೆಗೂ ವಾಟರ್ ರೇಟ್ ಹಾಕಿದ್ದೀರಿ; ಆದರೆ ಈವೊತ್ತಿನವರೆಗೂ ಆ ಜಮೀನುಗಳಿಗೆ ಕಂದಾಯ ಮಾತ್ರ ನಿಗದಿ ಮಾಡಿಲ್ಲ. ಆದುದರಿಂದ ಈ ಕಂದಾಯ ಮತ್ತು ವಾಟರ್ ರೇಟ್ ಇವೆರಡೂ ಕೂಡ ಗೇಣಿಯಲ್ಲಿ ಸೇರಿಹೋಗುತ್ತದೆ. ಈವೊತ್ತಿನ ದಿವಸ ಗೇಣಿದಾರನು ಇವೆರಡನ್ನೂ ಕೊಡುವ ಸಂದರ್ಭ ಬಂದಿದೆ. ಆದುದರಿಂದ ನಾನು ಹೇಳುವುದು ಏನೆಂದರೆ ಗೇಣಿದಾರನಿಗೆ ಪರಿಹಾರ ಕೊಡತಕ್ಕಂಥ ಸಂದರ್ಭದಲ್ಲಿ ಇವೆಲ್ಲಾ ಗೊಂದಲ ಉಂಟಾಗುತ್ತದೆ. ಈ ಗೊಂದಲವನ್ನು ತಪ್ಪಿಸುವುದಕ್ಕೋಸ್ಕರ ನಾವು ಈ ಒಂದು ತಿದ್ದುಪಡಿಯನ್ನು ಸೂಚಿಸಿದ್ದೇವೆ. ಅದು ಏನೆಂದರೆ ಕಂದಾಯದ ೫ರಷ್ಟು ಅಂತ ಇದ್ದರೆ ಇದು ಸುಲಭವಾಗಿ ಪರಿಹಾರ ವಾಗುತ್ತದೆ. ನಮ್ಮ ರಾಜ್ಯಕ್ಕೆ ಮುಂಬೈ ಕರ್ನಾಟಕದಿಂದ ಬಂದಂಥವರು ಏನೋ ನಾವು ಕರ್ನಾಟಕಕ್ಕೆ ಬಂದಮೇಲೆ ಸ್ವಲ್ಪ ಪರಿಹಾರ ಸಿಕ್ಕುತ್ತದೆ ಎಂದು ತಿಳಿದುಕೊಂಡಿದ್ದರು. ಆದರೆ ಈವೊತ್ತಿನ ದಿವಸ ನೀವು ತಂದಿರತಕ್ಕಂಥ ತಿದ್ದುಪಡಿ ನೋಡಿದರೆ ಅವರ ತಲೆಮೇಲೆ ಕಲ್ಲು ಹಾಕಿದಂತಾಗಿದೆ. ಅವರಿಗೆ ಹಿಂದೆ ಇದ್ದ ಸ್ಥಿತಿಯೇ ಉಂಟಾಗಿದೆ. ಆದುದರಿಂದ ನಾವು ಕೇಳಿಕೊಳ್ಳುತ್ತಿದ್ದೇವೆ. ಇಲ್ಲದಿದ್ದರೆ ಆ ಬಗ್ಗೆ ಪ್ರಸ್ತಾಪ ಮಾಡುತ್ತಿರಲಿಲ್ಲ. ಗೇಣಿದಾರರಿಗೆ ಗೇಣಿಯನ್ನು ನಿಗದಿ ಮಾಡಿದ್ದೀರಿ. ಈ ರೀತಿ ಮಾಡಿರುವುದು ರೈತರಿಗೆ ಕಂಠಕಪ್ರಾಯವಾಗಿದೆ. ಒಂದೊಂದು ಸಾರಿ ಅವನಿಗೆ ಗೇಣಿಯೇ ಸಿಕ್ಕುವುದಿಲ್ಲ. ತಮ್ಮ ಪಕ್ಷದ ಬಹುಮತದಿಂದ ತಾವು ಅಧಿಕಾರಕ್ಕೆ ಬಂದಿದ್ದೀರಿ. ಜೊತೆಗೆ ಅಧಿಕಾರ ವರ್ಗದವರೂ ಕೂಡ ನಿಮ್ಮ ಕೈಗೆ ಸಿಕ್ಕಿರುವುದರಿಂದ ಇದರ ಒಂದು ಚಿತ್ರವನ್ನುರೂಪಿಸಿ ಕೊಟ್ಟಿದ್ದಾರೆ. ಈ ರೀತಿ ತಾವು ಗೊಂದಲಕ್ಕೆ ಸಿಕ್ಕಿ ಈ ಒಂದು ತಿದ್ದುಪಡಿಯನ್ನು ತಂದಿದ್ದೀರಿ. ಈಗ ನಮ್ಮ ಮಲೆನಾಡು ಪ್ರದೇಶ ತೆಗೆದುಕೊಂಡರೆ ಅಲ್ಲಿ 'ಸಿ' ಕ್ಲಾಸ್ ವರ್ಗದ ಜಮೀನೇ ಹೆಚ್ಚಾಗಿದೆ. ಅಲ್ಲಿ ಕೆರೆ ಅಚ್ಚುಕಟ್ಟಿನಿಂದ ಬೆಳೆ ತರತಕ್ಕಂಥ ಜಮೀನೆಲ್ಲ ಜಾಸ್ತಿ ಇವೆ. ಆ ಕೆರೆಯಲ್ಲಿ ಮಳೆಗಾಲದಲ್ಲಿ ನೀರು ತುಂಬಿ ಹರಿಯುತ್ತದೆ, ಬಿಸಿಲುಗಾಲದಲ್ಲಿ ಆ ಕೆರೆಗಳು ಒಣಗಿ ಹೋಗಿರುತ್ತದೆ. ಇದನ್ನು ತಾವು ನೀರಾವರಿ ಅಚ್ಚುಕಟ್ಟಿನ ಲಿಸ್ಟ್‌ನಲ್ಲಿ ಸೇರಿಸಿದ್ದೀರಿ. ನೀವು ಹೇಳಿದ ಪ್ರಕಾರ ಆ ಗೇಣಿದಾರನು ವಾಟರ್‌ರೇಟು ಮತ್ತು ಕಂದಾಯವನ್ನು ಕೊಡುತ್ತಾ ಹೋದರೆ ಅವನಿಗೆ ಏನು ಉಳಿಯುತ್ತದೆ ? ಆದುದರಿಂದ ಇವೆರಡನ್ನೂ ಅವನು ಕೊಡುವುದು ಜಾಸ್ತಿ ಎಂದು ಹೇಳುತ್ತೇನೆ. ಈಗ ಮೊನ್ನೆ ತಾನೇ ಶ್ರೀಮಾನ್ ಬದ್ರಿನಾರಾಯಣ್‌ರವರು ಎಕರೆ ಒಂದಕ್ಕೆ ೭೦೦-೮೦೦ ರೂಪಾಯಿನಂತೆ ಕೊಟ್ಟಿರು. ಅದನ್ನು ಈಗ ೧೦೦೦-೧೫೦೦ ರೂಪಾಯಿಗೆ ಕೊಡುವ ಪ್ರಯತ್ನ ಮಾಡುತ್ತೀರಿ. ಆದುದರಿಂದ ನಾನು ಹೇಳುವುದು ಸೆಕ್ಷನ್ ೮ಕ್ಕೆ ಗೇಣಿಯನ್ನು ನಿಗದಿ ಮಾಡುವಾಗ ಒಂದು ಸರಿಯಾದ ಕ್ರಮವನ್ನು ಅನುಸರಿಸಬೇಕು. ವಾಟರ್ ರೇಟ್ ಎಲ್ಲವೂ ಕೂಡ ಗೇಣಿಯಲ್ಲಿ ಸೇರಿಸಿದರೆ ಬಹಳ ಕಷ್ಟ ವಾಗುತ್ತದೆ. ಏಕೆಂದರೆ ಗೇಣಿ ಮಾಡತಕ್ಕಂಥವನು ತಾನು ಬೆಳೆಯತಕ್ಕಂಥ ಉತ್ಪತ್ತಿಯಲ್ಲಿ ಸ್ವಲ್ಪ ಭಾಗದಷ್ಟು ಜಮೀನ್ದಾರನಿಗೆ ಹೋಗುತ್ತದೆ, ಜೊತೆಗೆ ವಾಟರ್ ರೇಟ್ ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಸರ್ಕಾರಕ್ಕೆ ಹೋಗಬೇಕಾದಂಥ ಮೊಬಲಗೂ ಕೂಡ ಗೇಣಿದಾರ ಕೊಡುವುದಾದರೆ ಅದು ಸರಿಯೇ ? ಇದು ಬಹಳ ಜಾಸ್ತಿಯಾಗುತ್ತದೆ. ಆದುದರಿಂದ ಗೇಣಿ ಮೊಬಲಗು ಮತ್ತು ವಾಟರ್ ರೇಟ್ ಇವೆರಡನ್ನೂ ಗೇಣಿದಾರರಿಗೆ ಸೇರಿಸುವುದು ಸರಿಯಲ್ಲ. ಆದುದರಿಂದ ವಾಟರ್ ರೇಟನ್ನು ಗೇಣಿಯಲ್ಲಿ ಸೇರಿಸುವುದಕ್ಕೆ ಪ್ರಯತ್ನ ಮಾಡದೆ ಅದನ್ನು ಕೈ ಬಿಡಬೇಕು ಎಂದು ಹೇಳುತ್ತೇನೆ. ಮತ್ತು ಅವನಿಗೆ ಕಂದಾಯದ ೫ರಷ್ಟು ಮೊಬಲಗನ್ನು ಇಡಬೇಕು. ಅದನ್ನು ಕಂದಾಯದ ಮೊಬಲಗಿಗೆ ಸೇರಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

†ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ನಾನು ಮುಖ್ಯವಾಗಿ ಒಂದು ತತ್ವದ ಆಧಾರದ ಮೇಲೆ ಮಾತ್ರ ಮಾತನಾಡುತ್ತೇನೆ. ಅದು ಏನೆಂದರೆ ಈಗ ಸರ್ಕಾರದವರು ಏನು ಒಂದು ಬಿಲ್ಲನ್ನು ತೆಗೆದುಕೊಂಡು ಬಂದಿದ್ದಾರೋ ಅದರ ಮೇಲೆ ಕೆಲವು ಸೂಚನೆಗಳನ್ನು ಕೊಟ್ಟಿದ್ದೇವೆ. ಹಿಂದೆ ಇದ್ದ ಒಂದು ಆಕ್ಟ್‌ನಲ್ಲಿ ಗ್ರಾಸ್ ಪ್ರೊಡಕ್ಷನ್ ಮೇಲೆ ರೆಂಟ್ ಫಿಕ್ಸ್ ಮಾಡಬೇಕೆಂದು ನಿಗದಿ ಮಾಡಿದ್ದಾರೆ. ಪುನಃ ಈಗ ಆಡಿಷನಲ್ ರೆಂಟ್ ಇಷ್ಟು ಕೊಡಬೇಕು ಎಂದು ಫಿಕ್ಸ್ ಮಾಡಿದರೆ ನಿಜವಾಗಿಯೂ ಗೇಣಿದಾರನಿಗೆ ತುಂಬಾ ದುಬಾರಿಯಾಗುತ್ತದೆ. ಅವನು ರೆಂಟ್ ಕೊಡುವ ಬಗ್ಗೆ ತಾವು ಒಂದು ಸರಿಯಾದ ಅಭಿಪ್ರಾಯವನ್ನು ಹೊಂದಿರಬೇಕು. ಈಗಾಗಲೇ ಗೇಣಿದಾರ ಬಗ್ಗೆ ಶೋಷಣೆಯಾಗಿದೆ, ಇನೂ

ಹೆಚ್ಚಾಗಿ ಶೋಷಣೆ ಮಾಡುವುದು ಬೇಡ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲೂ ಕೂಡ ಈ ಬಗ್ಗೆ ಒಂದು ಅಭಿಪ್ರಾಯವನ್ನು ತೆಗೆದುಕೊಂಡು ಬಂದಾಗ ಆವಾಗ ಏನು ಒಂದು ರೆಂಟ್ ಫಿಕ್ಸ್ ಆಗಿತ್ತೋ ಅದಕ್ಕಿಂತ ಜಾಸ್ತಿ ರೆಂಟ್ ಕೊಡಬಾರದು ಎಂದು ಚರ್ಚೆ ಆದಾಗ ಪುನಃ ನೀವು ಇನ್ನೂ ಮುಂದು ಹೋಗಿ ಈಗ ಇರುವುದಕ್ಕಿಂತ ಇನ್ನೂ ಜಾಸ್ತಿ ರೆಂಟ್ ಕೊಡಬೇಕು ಎಂದು ಹೇಳಿದರೆ ಅದರ ಅರ್ಥ ಏನು ಎಂದು ಗೊತ್ತಾಗುವುದಿಲ್ಲ. ತಾವು ಈ ರೀತಿ ಮಾಡುವುದಾದರೆ ನಿಮ್ಮ ತತ್ವಕ್ಕೆ ತಿಲಾಂಜಲಿ ಕೊಟ್ಟ ಹಾಗೆ ಆಗುತ್ತದೆ. ಆದುದರಿಂದ ನಾನು ಕೇಳುವುದು ಈಗ ಇರುವುದಕ್ಕಿಂತ ಜಾಸ್ತಿ ರೆಂಟ್ ಕೊಡಬೇಕಾಗಿದೆಯೋ ಎನ್ನುವ ಪ್ರಶ್ನೆ. ಅದಕ್ಕೆ ತಮ್ಮ ಸ್ಪಷ್ಟ ಅಭಿಪ್ರಾಯಬೇಕು.

ಇನ್ನು ಎರಡನೆಯದಾಗಿ ಈ ಬಗ್ಗೆ ಇದೇ ಶಾಸನ ಸಭೆಯಲ್ಲಿ ಚರ್ಚೆಯಾದಾಗ ಬಾಂಬೆ ಮತ್ತು ಹೈದಾರಾಬಾದ್ ಪ್ರದೇಶದಿಂದ ಬಂದಿರತಕ್ಕಂಥ ಟೆನೆನ್ಸಿಯವರು ೫ ಪಟ್ಟು ಕೊಡುತ್ತಾ ಇದ್ದಾರೆ ಎಂದು ಹೇಳಿದಿರಿ. ಈಗ ಅವರಿಗೆ ೧೦ ಪಟ್ಟು ಕೊಡಬೇಕೆಂದು ಹೇಳುತ್ತಾ ಇದ್ದೀರಿ. ಇದೂ ಕೂಡ ನ್ಯಾಯವಾದುದಲ್ಲ ಎಂದು ಹೇಳುತ್ತೇನೆ. ನಾನು ಈ ಬಗ್ಗೆ ಒಂದು ತತ್ವದ ದೃಷ್ಟಿಯಿಂದ ಹೇಳುತ್ತಿದ್ದೇನೆಯೇ ಹೊರತು ಬೇರೆ ಫ್ಯಾಕ್ಟ್ಸ್ ವಿಚಾರದಲ್ಲಿ ಹೇಳುತ್ತಾ ಇಲ್ಲ. ಆದುದರಿಂದ ಈ ರೀತಿ ಅಡಿಷನಲ್ ರೆಂಟ್ ಕೊಡಬೇಕೆಂದು ಮಾಡಿದರೆ ಅವರಿಗೆ ದುಬಾರಿಯಾಗುತ್ತದೆ ಮತ್ತು ಜನಗಳಿಗೆ ಅನುಕೂಲವಾಗುವುದಿಲ್ಲ. ಆದುದರಿಂದ ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ನಾನು ಸೂಚನೆ ಕೊಡುತ್ತೇನೆ.

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಧ್ಯಕ್ಷರೇ ಶ್ರೀಮಾನ್ ಶಾಮಣ್ಣನವರು, ಶ್ರೀಮಾನ್ ಕಕ್ಕಿಲಾಯ ಅವರು ಮತ್ತು ಇನ್ನು ಉಳಿದ ಸದಸ್ಯರು ಏನು ಹೇಳಿದ್ದಾರೆ ಅದನ್ನು ನೋಡಿದರೆ ಉತ್ತರ ದಕ್ಷಿಣ ಧ್ರುವಗಳು ಇದ್ದ ಹಾಗೆ ಇದೆ. ನಾವು ಅದರ ಮಧ್ಯ ಮಾರ್ಗದಲ್ಲಿ ಹೊರಟಿದ್ದೇವೆ.

ಶ್ರೀ ಎಂ. ಎಸ್. ಕೃಷ್ಣನ್.—ಗಂಡೂ ಅಲ್ಲ, ಹೆಣ್ಣೂ ಅಲ್ಲ ಶಿಖಂಡಿ ರೀತಿಯಾಗಿ ಆಗಿದೆ, ಅಲ್ಲವೇ ಸ್ವಾಮಿ !

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ಪರಿಸ್ಥಿತಿ ಏನು ಇದೆ ಎಂದು ಹೇಳಿದರೆ ರೆಂಟ್ ಈಗ ಇರುವುದಕ್ಕಿಂತ ಜಾಸ್ತಿಯಾಗಿದೆ ಎಂದು ಒಂದು ತರಹವಾದ ಇದೆ, ಇನ್ನು ಕೆಲವರು ಇದು ಸಾಲದು ಇನ್ನೂ ಹೆಚ್ಚು ಮಾಡಬೇಕು ಅಂತ ಇನ್ನೊಂದು ವಾದ ಇದೆ.

ಈಗ ಕಂದಾಯ ಒಂದು ರೂಪಾಯಿ ಇದ್ದರೆ ಅದರ ಹತ್ತರಷ್ಟು ಎಂದರೆ ೧೦ ರೂಪಾಯಿ ಆಗುತ್ತದೆ. ತರೀ ಜಮೀನಿದ್ದರೆ ಆ ಹತ್ತು ರೂಪಾಯಿ ಜೊತೆಗೆ ೬೬ ರೂಪಾಯಿ ಸೇರಿಸಿದರೆ ೬೬ ರೂಪಾಯಿ ಎಂದು ಸೆಲೆಕ್ಟ್ ಸಮಿತಿಯ ವರದಿಯಲ್ಲಿತ್ತು. ಈಗ ಎಷ್ಟಾಗುತ್ತದೆ ಎನ್ನುವುದನ್ನು ನೋಡೋಣ. ಸೆಲೆಕ್ಟ್ ಸಮಿತಿ ವರದಿ ಬರುವುದಕ್ಕೆ ಮುಂಚೆ ಇರತಕ್ಕದು ತರಿ ಜಮೀನಿನಲ್ಲಿ ಬರತಕ್ಕ ಬೆಳೆ ಮುಖ್ಯ ಬೆಳೆಯ ಗ್ರಾಸ್ ಇನ್‌ಕಂನಲ್ಲಿ ನಾಲ್ಕನೇ ಒಂದು ಭಾಗ. ಎರಡು ಬೆಳೆ ಬರತಕ್ಕ ಪ್ರದೇಶವನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಕಡೇ ಪಕ್ಷ ೧೫—೧೬ ಪಲ್ಲ ಬರಬಹುದು. ಅದರಲ್ಲಿ ನಾಲ್ಕನೇ ಒಂದು ಭಾಗ ಎಂದರೆ ನಾಲ್ಕು ಪಲ್ಲ ಆಗುತ್ತದೆ. ಇದಕ್ಕೆ ಮಾರ್ಕೆಟ್ ರೇಟ್ ಕೊಡಬೇಕೆಂದು ಕೋರ್ಟಿನವರು ತೀರ್ಮಾನ ಮಾಡಿದ್ದಾರೆ. ನಾವು ಈ ನಾಲ್ಕು ಪಲ್ಲಕ್ಕೆ ಲೆವಿ ದರವನ್ನು ಹಾಕಿದರೂ ೨೧೨ ರೂಪಾಯಿ ಆಗುತ್ತದೆ. ಸೆಲೆಕ್ಟ್ ಕಮಿಟಿಯವರು ಕಡಿಮೆ ಮಾಡಿದ್ದು ನಿಜ. ಆದರೆ ಈ ಹೊತ್ತಿನ ಪರಿಸ್ಥಿತಿಯಲ್ಲಿ ಈ ಕಾನೂನು ಜಾರಿಗೆ ಬಂದ ಮೇಲೆ ಎಲ್ಲರಿಗೂ ರೆಂಟ್ ಕೊಡತಕ್ಕ ಸಂದರ್ಭವಿಲ್ಲ. ಸೈನಿಕರು, ನಾವಿಕರು ಇಂಥವರಿಗೆ ಮಾತ್ರ ರೆಂಟ್ ಕೊಡತಕ್ಕ ಸಂದರ್ಭ ಉಳಿಯುತ್ತದೆ. ಆದರೆ ಕಾಂಪೆನ್‌ಸೇಷನ್ ಕೊಡುವಾಗ ಇದರ ಪರಿಣಾಮವಾಗುತ್ತದೆ ಎಂದು ಹೇಳಿದ್ದಾರೆ. ಅದು ಸ್ವಲ್ಪಮಟ್ಟಿಗೆ ಆಗುತ್ತದೆ. ಆದರೆ ಈ ಹೊತ್ತು ಜಮೀನಿನ ಬೆಲೆ ಎಷ್ಟು, ಅದರಿಂದ ಪ್ರತಿವರ್ಷ ಬರತಕ್ಕ ವರಮಾನವೆಷ್ಟು ಎನ್ನುವುದನ್ನು ಲೆಕ್ಕ ಹಾಕಿಕೊಳ್ಳಬೇಕಾಗುತ್ತದೆ.

ಮಾನ್ಯ ಸ್ನೇಹಿತರುಗಳು ಮಾತನಾಡುತ್ತ ಎರಡು ಮೂರು ವಿಷಯ ಹೇಳಿದರು. ಮಲೆನಾಡು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ವಾಟರ್ ರೇಟನ್ನು ಸೇರಿಸಿ ಜಮೀನುಕಂದಾಯ ತೆಗೆದುಕೊಳ್ಳುತ್ತಾರೆಂದು ಹೇಳಿದರು. ಇದರಲ್ಲಿ ಸ್ಪಷ್ಟವಾಗಿ ಎರಡಕ್ಕೆ ವಿನಾಯಿತಿ ಕೊಡಬೇಕೆಂದಿದೆ, ಯಾವುದಕ್ಕೆ ವೆಟ್ ಅಸೆಸ್‌ಮೆಂಟ್ ಇದೆ ಆ ಪ್ರದೇಶಕ್ಕೆ ವೆಟ್ ಲ್ಯಾಂಡ್ ಎಂದು ಕರೆಯಬೇಕು ಎಂದು ಸ್ಪಷ್ಟವಾಗಿ ಲ್ಯಾಂಡ್ ರೆವೆನ್ಯೂ ಆಕ್ಟಿನಲ್ಲಿದೆ. ಆ ವೆಟ್‌ಲ್ಯಾಂಡ್, ರೇನ್‌ಫೆಡ್ ಏರಿಯಾದಲ್ಲಿ ಯಾವುದು ಬರುತ್ತದೆ ಅದಕ್ಕೆ ಎಷ್ಟು ಕಂದಾಯ ವಿಧಾಯಕವಾಗಿದೆಯೋ ಅದರ ಹತ್ತರಷ್ಟು ಮಾತ್ರ ಗೇಣಿ ಕೊಡಬೇಕು. ಇದರ ಜೊತೆಗೆ ವಾಟರ್ ರೇಟ್ ಸೇರುವುದಿಲ್ಲ. ಇಂಥ ಜಮೀನಿಗೆ ಆರೇಳು ರೂಪಾಯಿ ಕಂದಾಯ ಇರಬಹುದು. ಕೆಲವು ಪ್ರದೇಶಗಳಲ್ಲಿ ಅಲ್ಪಸ್ವಲ್ಪ ಜಾಸ್ತಿ ಇರಬಹುದು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೯ ರೂಪಾಯಿ ಇದೆ ಎಂದು ಶ್ರೀ ಕಕ್ಕಿಲಾಯ ಅವರು ಹೇಳಿದರು. ಉಳಿದ ಪ್ರದೇಶಗಳಲ್ಲಿ ಮೂರು ರೂಪಾಯಿಗಳಿಂದ ಆರು ರೂಪಾಯಿಗಳವರೆಗೂ ಇದೆ. ಅದರ ಹತ್ತರಷ್ಟು ಗೇಣಿಯಾಗುತ್ತದೆ.

(ಶ್ರೀ ಎಸ್. ಹುಚ್ಚೆಮಾಸ್ತಿಗೌಡ)

ಶ್ರೀ ಕಾಗೋಡು ತಿಮ್ಮಪ್ಪನವರು ಭೂ ಕಂದಾಯ ನಿರ್ಧಾರವೇ ಆಗಿಲ್ಲವೆಂದು ಹೇಳಿದರು. ಲ್ಯಾಂಡ್ ರೆವಿನ್ಯೂ ಸೆಟಲ್‌ಮೆಂಟ್ ಆಗಿದೆ. ಎಲ್ಲೆಲ್ಲಿ ವ್ಯಾಜ್ಯಗಳಿವೆಯೋ ಅಂಥ ಕಡೆ ನಿರ್ಧಾರವಾಗದೆ ಇದ್ದರೂ ಅಲ್ಲಿ ಹಿಂದಿನ ಕಂದಾಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತೇವೆ. ವಾಟರ್ ರೇಟ್ ಎಂದು ಹೆಸರು ಇಲ್ಲದೇ ಇದ್ದರೂ ತರೀ ಕಂದಾಯವಿದೆ. ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಆದರೆ ವಾಟರ್ ರೇಟ್ ದಾಖಲು ಮಾಡಿದಾಗ ಮಲೆನಾಡಿನ ತರೀ ಭೂಮಿ ಇರುವುದನ್ನು ಬಿಟ್ಟು ಉಳಿದದ್ದು ಎಲ್ಲ ಖುಷ್ಕಿ ಎಂದು ಗಮನಕ್ಕೆ ತೆಗೆದುಕೊಂಡರೆ, ಇದಕ್ಕೆ ನೀರನ್ನು ಒದಗಿಸಿದಾಗ ವಾಟರ್ ರೇಟ್ ಪ್ರತ್ಯೇಕವಾಗಿ ಹಾಕಿದೆ.

ಶ್ರೀ ಕಾಗೋಡು ತಿಮ್ಮಪ್ಪ :—ಲ್ಯಾಂಡ್ ರೆವೆನ್ಯೂ ಆಕ್ಟ್ ಸೆಕ್ಷನ್ ೨(ಬಿ) ಪ್ರಕಾರ ಡ್ರೈ ಲ್ಯಾಂಡ್ ಏನಿದೆ ಅದಕ್ಕೆ ಸರ್ಕಾರದ ಕಾಲುವೆಯಿಂದ ನೀರು ಪಡೆಯುತ್ತಿದ್ದಾರೆ. ಭತ್ತ ಬೆಳೆಯುವ ಸಂದರ್ಭದಲ್ಲಿ ಡ್ರೈ ಎಂದು ಪರಿಗಣನೆ ಮಾಡಿ ಅದರ ಪ್ರಕಾರ ಕಂದಾಯ ನಿರ್ಧಾರಮಾಡಿದ್ದಾರೆ. ಅದಕ್ಕೆ ವಾಟರ್ ರೇಟನ್ನು ಹಾಕುತ್ತಿದ್ದಾರೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ :—ಖುಷ್ಕಿ ಜಮೀನು ಎನ್ನುವುದು ಸ್ಪಷ್ಟವಾಗಿದೆ. ವಾಟರ್ ರೇಟ್ ಜಾರಿಗೆ ಬಂದಮೇಲೆ ೧೯೬೫ ರಿಂದ ಏನಾಗಿದೆ ಎಂದರೆ ಸರ್ಕಾರದವರು ನೀರನ್ನು ಒದಗಿಸಿಕೊಡತಕ್ಕ ಪ್ರದೇಶವನ್ನೆಲ್ಲ ಖುಷ್ಕಿ ಎಂದು ಮಾಡಿ ಅದಕ್ಕೆ ಎಷ್ಟು ಕಾಲ ನೀರನ್ನು ಒದಗಿಸುತ್ತಾರೆ ಆ ಆಧಾರದ ಮೇಲೆ ವಾಟರ್ ರೇಟ್ ಹಾಕಿದ್ದಾರೆ. ಆದುದರಿಂದ ಆ ಕಾನೂನು ಎಲ್ಲ ಕಡೆಗೂ ಅನ್ವಯಿಸುವುದಿಲ್ಲ. ವಾಟರ್ ಇಲ್ಲದೆ ಇರುವ ಪ್ರದೇಶ ಯಾವುದು, ವೆಟ್ ಲ್ಯಾಂಡ್ ಎಂದು ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿದೆ. ಮಳೆ ಬಿದ್ದು ಬತ್ತ ಬರುವ ಪ್ರದೇಶ ವೆಟ್ ಲ್ಯಾಂಡ್ ಎಂದು ಉಳಿದುಕೊಂಡಿದೆ. ಅದಕ್ಕೆ ಆ ಕಂದಾಯ ಬರುತ್ತದೆ. ಎರಡೂ ಸೇರಿಸಿ ಲೆಕ್ಕ ಹಾಕುವುದಿಲ್ಲ.

ಶ್ರೀ ಬಿ ವಿ. ಕಕ್ಕಿಲಾಯ :—ಒಂಬತ್ತು ರೂಪಾಯಿ ನಲವತ್ತು ಪೈಸೆ ಕಂದಾಯ ಇರುವುದಕ್ಕೆ ವಾಟರ್ ರೇಟ್ ಸೇರುವುದಿಲ್ಲವೆ ?

ಶ್ರೀ ಎಸ್. ಹುಚ್ಚೆಮಾಸ್ತಿಗೌಡ :—ಎಲ್ಲಿ ತರಿ ಜಮೀನು ಎಂದು ತರೀ ಕಂದಾಯವನ್ನು ಮಲೆನಾಡ ಪ್ರದೇಶದಲ್ಲಿ, ರೇನ್‌ಫೆಡ್ ಏರಿಯಾದಲ್ಲಿ ಹಾಕಿದ್ದಾರೆ ಅದರ ಹತ್ತರಷ್ಟು ಗೇಣಿಯಾಗುತ್ತದೆಯೋ ಹೊರತು ಅದರ ಜೊತೆಗೆ ವಾಟರ್ ರೇಟ್ ಸೇರಿಸಿ ಅದರ ಹತ್ತರಷ್ಟು ಆಗುವುದಿಲ್ಲ. ಈಗಿರುವ ಕಾನೂನು ಪ್ರಕಾರ ಅದನ್ನೆಲ್ಲ ಭೂಮಾಲೀಕ ಸರ್ಕಾರಕ್ಕೆ ಕೊಡಬೇಕಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ: —ಸೆಕ್ಷನ್ ೧೨ರ ಪ್ರಕಾರ ಭೂಕಂದಾಯದ ಮೇಲೆ ವಾಟರ್ ರೇಟ್, ಸೆಸ್ ಎಲ್ಲವನ್ನೂ ಗೇಣಿದಾರ ಸರ್ಕಾರಕ್ಕೆ ಕೊಡಬೇಕಾಗುತ್ತದೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ:—ಈ ಕಾನೂನು ಜಾರಿಗೆ ಬರುವುದಕ್ಕೆ ಮುಂಚಿತವಾಗಿ ಭೂಮಾಲೀಕ ಕಂದಾಯ ಅಥವಾ ವಾಟರ್ ರೇಟ್ ಸರ್ಕಾರಕ್ಕೆ ಕೊಡುತ್ತಿದ್ದ. ಇನ್ನು ಮುಂದೆ ಗೇಣಿದಾರನೇ ಭೂಮಾಲೀಕನಾಗುವುದರಿಂದ, ಅವನು ಪ್ರೀಮಿಯಂ ಕೊಟ್ಟು ಮಾಲೀಕನಾಗುವುದಕ್ಕೆ ಮುಂಚೆ ಆ ಭೂಮಿಯೆಲ್ಲ ಸರ್ಕಾರಕ್ಕೆ ವೆಸ್ಟ್ ಆಗುತ್ತದೆ. ಈ ಅವಧಿಯಲ್ಲಿ ಸರ್ಕಾರಕ್ಕೆ ವಾಟರ್ ರೇಟ್ ಮತ್ತು ಭೂಕಂದಾಯವನ್ನು ಗೇಣಿದಾರ ಕೊಡಬೇಕು. ಎರಡು ಸಾರಿ ಕೊಡುವ ಸಂದರ್ಭವೇ ಬರುವುದಿಲ್ಲ. ಈ ಕಾನೂನು ಜಾರಿಗೆ ಬರುವವರೆಗೂ ರೇಟ್ ಕೊಡುತ್ತಾನೆ. ಗೇಣಿದಾರ ಭೂಕಂದಾಯ ಮತ್ತು ವಾಟರ್ ರೇಟ್ ಸರ್ಕಾರಕ್ಕೆ ಕೊಡುವುದಿಲ್ಲ. ಈ ಕಾನೂನು ಜಾರಿಗೆ ಬಂದಮೇಲೆ ಕೊಡುತ್ತಾನೆ. ಎರಡು ಕಡೆಗೂ ಕೊಡುವುದೇ ಇಲ್ಲ.

ಈಗ ಇರತಕ್ಕ ಬೆಳೆಯ ಬೆಲೆ, ಇರತಕ್ಕ ಪರಿಸ್ಥಿತಿಯನ್ನು ನಾವು ನೋಡಿ ಈ ಗೇಣಿಯನ್ನು ನಾವು ಗೊತ್ತು ಮಾಡಿದ್ದೇವೆ. ಗೇಣಿ ಇತರ ಯಾರಿಗೂ ಅನ್ವಯವಾಗುವುದಿಲ್ಲ. ಸೈನ್ಯದಲ್ಲಿರುವವರಿಗೆ, ನಾವಿಕರಿಗೆ ಮಾತ್ರ ಅನ್ವಯಿಸುತ್ತದೆ. ಅವರಿಗೆ ಸ್ವಲ್ಪ ಹೆಚ್ಚು ಕೊಡಬೇಕಾದ್ದು ಅಗತ್ಯ ಎನ್ನುವುದು ಸರ್ಕಾರದ ಭಾವನೆ. ಇದನ್ನು ಮಾನ್ಯ ಸದಸ್ಯರು ಒಪ್ಪುತ್ತಾರೆಂದು ಕಾಣುತ್ತದೆ. ಗೇಣಿದಾರನ ಹಿತವನ್ನು ಗಮನದಲ್ಲಿಟ್ಟುಕೊಂಡಿರುವಂತೆಯೇ ರಾಷ್ಟ್ರಕ್ಕಾಗಿ ತನ್ನ ದೇಹವನ್ನು ಸಮರ್ಪಿಸುವುದಕ್ಕೆ ಸೈನಿಕ ಸಿದ್ಧನಾಗಿದ್ದಾನೆ ಎನ್ನುವ ದೃಷ್ಟಿಯಿಂದ ಹೆಚ್ಚು ಮಾಡಿರುವುದು ಸೂಕ್ತವಾಗಿದೆ. ಇದಕ್ಕೆ ಮಾನ್ಯ ಸಭೆ ಒಪ್ಪಿಗೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಸದಸ್ಯರು ಇದರ ಬಗ್ಗೆ ತಂದಿರುವ ತಿದ್ದುಪಡಿಗಳನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ.

Madam Speaker :—I will now put amendment to amendment moved by Sri. M.S Krishnan to the vote of the House.

The question is :

"That in sub-section 1 (b) of the proposed section 8 for the words "ten times" the words "five times" shall be substituted and words "and water rate, if any, payable in respect of such land" shall be deleted.

"That the first Proviso to sub-section (1) of the proposed section 8 shall be deleted."

"That at page 37 in the second Proviso to the proposed section 8, line 1, for the words" Amendment Act, the word 'principal Act" Shall be substituted"

The motion was negatived

Now the amendment of Sri T. R. Shamanna. The question is "That at page 36 in the proposed section 8(b) for the words 'ten times' the word 'twenty times' shall be substituted".

The motion was negatived

Now next amendment the question is :

That in clause 5, sub-clause (b) add a proviso, namely :—

"The Government may fix up higher or lower rent provided the yield of the land is altered or reduced for causes beyond the control of the tiller."

"And in the same Section, before Explanation, in the para provided also as malnad area add the following words:—

"and other areas where the land is ussd exclusively for livestock breeding."

After the above para, add the following proviso, namely:—

"Provided that if the tiller has less than three units, the water rate to be reduced by 50 per cent."

The Motion was negatived

Madam Speaker.—I was put the amendment of the Hon. Minister. The question is :

That for clause 5, the following clause shall be substituted, namely:

"5. Substitution of new section for section 8.—For section 8 of the principal Act, the following section shall be substituted, namely:—

'8. Rent :—(1) Subject to the provisions of this Act and notwithstanding anything in any law, custom, usage agreement, decree or order of a court to the contrary,—

(*a*) the rent payable in respect of any land by the tenant shall be payable annually ; and

(Madam Speaker)

(*b*) such rent shall be ten times the aggregate of the land revenue and water rate, if any, payable in respect of such land:

Provided that in the case of A class, B class and C class lands (other than lands specified in item (*ii*) of C class) referred to in Part A of Schedule I, the amount of water rate to be taken into account shall not exceed the amount specified belew : —

(*i*)	A class lands	Rupees sixteen and paise fifty per acre.
(*ii*)	B class lands	Rupees eleven per acre.
(*iii*)	C class lands other than lands specified in item (*ii*) of that class.	Rupees five and paise fifty per acre.

Provided further that where the rent payable by a tenant under any contract is less than the rent specified in clause (b), such tenant shall not be liable to pay more than such rent and where under any contract made prior to the date of commencement of the Amendment Act such lesser rent is payable in kind the amount payable shall be calculated converting rent in kind to its cash equivalent in prescribed manner;

Provided also that in any area notified as malnad area the rent in respect of lands specified as dry land, but used exclusively for grazing or removing leaves, shall be equal to the land revenue payable for such land.

Explanation.—In this section "water rate means the water rate payable in respect of land classified for purposes of land revenue settlement as dry land and irrigated by water obtained from any source of water which is the property of the State Government."

The Motion was adopted

MADAM SPEAKER :—I will put the clause to the vote of the House.

The question is :

"That Clause 5, as amended, do stand part of the Bill."

The motion was adopted

Clause 5 as amended is added to the Bill.

Clause 32 (Contd)

Sri B. V. Kakkilaya :—I beg to move :

"That at page 50, after sub-section (4) of the proposed section 47 the following sub-section shall be inserted.

"(5) Notwithstanding anything in the foregoing sub-sections of this section, the amount paid by or recovered from the tenant by way of rent after the 2nd day of October 1965 shall be deemed to be payment made towards the premium payable by the tenant for getting himself registered as the occupant."

Madam Speaker :—Amendment moved :

"That at page 50, after sub-section (4) of the proposed section shall be inserted,"

"(5) Notwithstanding anything in the foregoing sub-sections of this section, the amount paid by or recovered from the tenant by way of rent after the 2nd day of October 1965 shall be deemed to be payment made towards the premium payable by the tenant for getting himself registered as the occupant."

Sri T. R. Shamanna :—I beg to move the following amendment to the amendment of the Minister for Revenue.

"That in clause 32, in sub-section (iii), in the last line, omit the word 'twenty, and insert the word 'forty.,

And after sub-section (b) (iii), insert the new proviso, namely:—

"The extra cost of premium to be paid between twenty to forty times be metout of the Government funds.

Madam Speaker. —Amendment moved " That in clause 33 in sub-section (iii) in the last line omit the word twenty and insert the word for

Add after sub-section (6) (iii) insert the new provisio namely.

The extra of the price to be paid between twenty to forty times be met out of the Government funds.

Then there is amendment to the original clause Sri T. R. Shamanna I move the following amendment.

That at Page 49, in item (i) of sub-section ( ) of the proposed section 47 for the words 'fifteen times' the words 'thirty times' shall be substituted.

In item (ii) of sub-section (1) of the proposed section 47 for the words 'twelve times' the words 'twenty-four times shall be substituted.

In item (i) of the proviso to sub-section (1) of the proposed section 47, for the words 'six times', the words twelve times' shall be substituted.

MADAM SPEAKER :—Amendment moved.

That at page 49, in item (i) of sub-section (1) of the proposed Section 47 for the words 'Fifteen times, the words 'thirty times shall be substituted.

In item (ii) of sub section (1) of the proposed section 47 for the words 'twelve times, the words 'twenty-four times, shall be substituted.

In item (i) of the proviso to sub-section (1) of the section 47, for the words 'six times, the words 'twelve times, shall be substituted.

ಶ್ರೀ ಎಂ. ಎಸ್. ಕೃಷ್ಣನ್ —ಮಾನ್ಯ ಅಧ್ಯಕ್ಷರೇ, ಈ ಅಮೆಂಡ ಮೆಂಟು ಬಗ್ಗೆ ಒಂದು ವಿಚಾರ ಹೇಳಬೇಕಾಗಿದೆ. ಸಣ್ಣ ಹಿಡುವಳಿದಾರರಿಗೆ ಮತ್ತು ಮೈನರುಗಳಿಗೆ, ವಿಧವೆಯರಿಗೆ ಹಾಗೂ ಮದುವೆ ಆಗದೆ ಇರುವ ಹೆಣ್ಣುಮಕ್ಕಳಿಗೆ ಮತ್ತು ಶಕ್ತಿ ಇಲ್ಲದೆ ಇರುವವರಿಗೆ, ಸೈನಿಕರಿಗೆ ಹಾಗೂ ನಾವಿಕರಿಗೆ ಅನುಕೂಲವನ್ನು ಮಾಡಿಕೊಡಬೇಕು ಎಂದು ಇಲ್ಲಿ ಸಲಹೆ ಮಾಡುತ್ತಿರುವುದು, ಇವರು ಭೂಮಿಯನ್ನೇ ಹೊಂದಿಕೊಂಡಿರುವುದರಿಂದ, ಇವರಿಗೆ ಕೊಡುವ ಪರಿಹಾರ ಬಹಳ ಕಡಿಮೆ ಇದೆ, ಇದಕ್ಕಾಗಿ ಜಾಸ್ತಿ ಪರಿಹಾರ ಕೊಡಬೇಕೆಂದು ಹೇಳುತ್ತಿರುವುದು. ಅಂಥವರಿಗೆ ಇಪ್ಪತ್ತು ಪಟ್ಟು ಕೊಡುವ ಬಗ್ಗೆ ನಮ್ಮ ಭಿನ್ನಾಭಿಪ್ರಾಯವಿಲ್ಲ. ಆದರೆ ಬೇರೆ ರೀತಿಯ ವರಮಾನ ಇರತಕ್ಕವರಿಗೆ ಇಪ್ಪತ್ತು ಪಟ್ಟು ಕೊಡಬೇಕೆಂದು ಮಾಡುವುದು ಸಮಂಜಸವಲ್ಲ ಮತ್ತು ನ್ಯಾಯವು ಅಲ್ಲ. ಗೇಣಿದಾರನ ವಿಷಯ ಯೋಚನೆ ಮಾಡಿಲ್ಲ ಎಂದು ಕಾಣುತ್ತದೆ. ಬೇರೆ ವರಮಾನ ಇಟ್ಟು ಕೊಂಡಿರುವವರಿಗೆ ೨೦ ಪಟ್ಟು ಪರಿಹಾರ ಕೊಡುವುದು ಸರಿಯಲ್ಲ ಇದನ್ನು ಗಮನದಲ್ಲಿಟ್ಟುಕೊಂಡು ನಮ್ಮ ಅಮೆಂಡಮೆಂಟ್ ತರಲಾಗಿದೆ. ಇದನ್ನು ಸರಕಾರ ಒಪ್ಪಬಹುದು ಇದು ಸಮಂಜಸವಾಗಿದೆ.

ಶ್ರೀ ಬವಿ ಕಕ್ಕಿಲಾಯ ;—ಮಾನ್ಯ ಅಧ್ಯಕ್ಷರೇ. ಇದರ ಮೂಲ ಕಾನೂನು ೧೯೫೭ರಲ್ಲೇ ಜಾರಿಗೆ ಬರಬೇಕಾಗಿತ್ತು. ಇದು ಬರುವುದು ತಡವಾದುದರಿಂದ ಗೇಣಿದಾರರಿಗೆ ಗೇಣಿಯನ್ನು ನಿರ್ಣಯ ಮಾಡಿ ಕೊಡಲು ಸಾಧ್ಯವಾಗಲಿಲ್ಲ, ರೈತರು ಹಳೇ ಗೇಣಿ ಏನು ಇತ್ತೋ ಅದರಂತೆ ಕೊಡುತ್ತಾ ಬಂದಿದ್ದಾರೆ ಹೊಸದಾಗಿ ಗೇಣಿ ಕೊಡಲು ಇನ್ನೂ ನಿರ್ಣಯವಾಗಲಿಲ್ಲ. ಮೊದಲೇ ಈ ಕಾನೂನು ಜಾರಿಗೆ ಬಂದಿದ್ದರೆ ಇದರ ಎಲ್ಲ ಭೂಮಿಯೂ ಸರಕಾರಕ್ಕೆ ಬಂದು ಸೇರುತ್ತಿತ್ತು ಮತ್ತು ಇಂತಹ ವಿವಾದಗಳಿಗೆ ಆಸ್ಪದವಾಗುತ್ತಿರಲಿಲ್ಲ. ಇದು ತಡವಾದುದರಿಂದ ಪರಿಹಾರ ಕೊಡುವುದು ಸರಿಯಾಗಬೇಕೆಂದು ನಾನು ಅಮೆಂಡುಮೆಂಟು ತಂದಿರುವುದು ಹಿಂದೆ ಭೂಮಿಯ ಮೇಲೆ ಏನು ಗೇಣಿ ವಸೂಲು ಮಾಡಿದ್ದರೋ ಅದೇ ಪ್ರಿಮಿಯಂ ಎಂದು ಭಾವಿಸಿ ಅದರಂತೆ ಜಮಾ ಮಾಡಿಕೊಳ್ಳಬೇಕೆಂದು ಸಲಹೆ ಮಾಡಿದ್ದೇನೆ. ಇದನ್ನು ಸರಕಾರ ಒಪ್ಪಿಕೊಳ್ಳಬಹುದು.

ಶ್ರೀ ಟಿ. ಆರ್. ಶಾಮಣ್ಣ ;—ಮಾನ್ಯ ಅಧ್ಯಕ್ಷರೇ, ನನ್ನ ವಾದ ಬರೀ ಅರಣ್ಯರೋದನವಾಗುತ್ತಿದೆ ಎಂದು ನನಗೆ ಗೊತ್ತಾಗಿದೆ. ಆದರೆ ಇದರಲ್ಲಿ ತಂದಿರುವ ತಿದ್ದುಪಡಿ ತಂದಾಗ ನಿನ್ನೆ ದಿನ ಸಣ್ಣ ಹಿಡುವಳಿದಾರರ ಬಗ್ಗೆ ಹೇಳುವಾಗ ಮೈನರು ಮಕ್ಕಳಿಗೆ, ವಿಧವೆಯರಿಗೆ ಹಾಗೂ ರಕ್ಷಣೆ ಇಲ್ಲದ ಅಂಗವಿಕಲರಿಗೆ ಪರಿಹಾರವನ್ನು ಕೊಡುವಾಗ ನಾವು ಸ್ವಲ್ಪ ಹೆಚ್ಚು ಹಣವನ್ನು ಪರಿಹಾರವಾಗಿ ಕೊಡಬೇಕು ಎಂದು ಕೇಳಿದುದರ ಬಗ್ಗೆ ಸರಕಾರ ಅದನ್ನು ಕೊಡುತ್ತೆ ಎನ್ನುವ ಆಶ್ವಾಸನೆಯೂ ದೊರಕಿತ್ತು. ಇದರ ಪ್ರಕಾರ ಸಣ್ಣ ಹಿಡುವಳಿದಾರರಿಗೆ ಪರಿಹಾರ ಕೊಡುವಾಗ ಗೇಣಿಯ ೧ ರಷ್ಟು ಇಲ್ಲವೇ ೨೦ರಷ್ಟು ಎಂದರೆ ಮೊದಲು ೧೫೦ ರೂಪಾಯಿಗಳಷ್ಟು ಎಕರೆಗೆ ಬರುತ್ತಿದ್ದರೆ ಈಗ ೨೦೦ ರೂಪಾಯಿಗಳವರಗೆ ಬರುತ್ತದೆ, ಸುಮಾರು ಐದು ಎಕರೆ ಜಮೀನು ಇದ್ದರೆ ಇವರಿಗೆ ಬರತಕ್ಕ ಪರಿಹಾರ ಎಂದರೆ ಒಂದು ಎಕರೆಗೆ ೩೦೦ ಎಂದು ಇದ್ದರೆ ಸುಮಾರು ೧೫೦೦ ರೂಪಾಯಿಗಳಷ್ಟು ಬರುತ್ತದೆ. ಸರ್ಕಾರದವರು ಭೂಮಿ ತೆಗೆದುಕೊಳ್ಳುವ ಪಕ್ಷದಲ್ಲಿ ಮೊದಲು ಆ ಭೂಮಿಯನ್ನು ಸುಮಾರು ೫೦೦-೬೦೦ ರೂಪಾಯಿ ಬರುತ್ತದೆ. ಅದನ್ನು, ೧೫೦೦ ರೂಪಾಯಿಗಳಿಗೆ ತೆಗೆದುಕೊಂಡು ಒಂದು ಕಂತಿನಲ್ಲಿ ಕೊಡದೆ ೨೦ ಕಂತಿನಲ್ಲಿ ಕೊಟ್ಟರೆ ಅವನು ಯಾವ ರೀತಿ ಜೀವನ ಮಾಡಬೇಕು ಎನ್ನುವುದರ ಬಗ್ಗೆ ಪರಿಶೀಲನ ಮಾಡಬೇಕು. ಈಗ ದಿನ ನಿತ್ಯದ ಬಳಕೆಯ ವಸ್ತುಗಳ ಬೆಲೆ ವಿಪರೀತವಾಗಿ ಏರುತ್ತಿರುವಾಗ, ಜನಸಾಮಾನ್ಯರು ಜೀವನ ಮಾಡುವುದು ಕಷ್ಟವಾಗಿರುವಾಗ ಬಡವರು, ವಿಧವೆಯರು ಮತ್ತು ಸಣ್ಣ ಹಿಡುವಳಿದಾರರಿಗೆ ಇಷ್ಟು ಅನ್ಯಾಯ ಮಾಡಿರುವುದು ಬಹಳ ಮೋಸ, ಸಿನಿಮಾ, ಹೋಟೆಲ್‌ಗಳನ್ನು ನಡೆಸತಕ್ಕವರು ಎಷ್ಟು

ಬೇಕಾದರೂ ಸಂಪಾದನೆ ಮಾಡಿಕೊಂಡು ಹೋಗಲಿ, ಹೆಂಡ ಮಾರತಕ್ಕವರು ವೈನ್ ವಿಸ್ಕಿ ಮಾರತಕ್ಕವರು ದಿನಕ್ಕೆ ೧೦ ಸಾವಿರ ರೂಪಾಯಿ ಲಾಭವನ್ನು ಗಳಿಸಿದರೂ ಇಂಥವರನ್ನು ಬಿಟ್ಟು ಸ್ವಂತ ಜಮೀನು ಇಟ್ಟುಕೊಂಡಿರುವ ವಿಧವೆಯರಿಗೆ, ಸಣ್ಣ ಹಿಡುವಳಿದಾರರಿಗೆ ಅನ್ಯಾಯ ಮಾಡುವುದು ಸರಿಯೇ ? ಅವರಿಗೆ ಗಂಜಿಗೆ ಎರಡು ಹೊತ್ತಿಗೆ ಆಗುವಷ್ಟು ಅನ್ನಾದರೂ ಮಾಡಿಕೊಡಿ. ತಾವು ಕೊಟ್ಟಿರುವುದು ಸ್ವಲ್ಪ ಮಾತ್ರವೂ ಸರಿಯಾದದ್ದು ಅಲ್ಲ. ನಾನು ಕೇಳಿರುವುದು ಸಣ್ಣ ಹಿಡುವಳಿದಾರರಿಗೆ ೨೦ ಪಟ್ಟು ಬದಲಿಗೆ ೪೦ ಪಟ್ಟು ಕೊಡಿ ಎಂದು ೨ ಲಕ್ಷ ರೂಪಾಯಿ ಕೊಡತಕ್ಕ ಶ್ರೀಮಂತರ ಬಗ್ಗೆ ನಾನು ಯಾವ ಅನುಕಂಪ ತೋರಿಸಿಲ್ಲ. ಎರಡನೆಯದಾಗಿ ನಾನು ೧೫ ಪಟ್ಟು ಇರುವುದನ್ನು ೩೦ ಪಟ್ಟು ಮಾಡಿ ಮತ್ತು ೬ ಪಟ್ಟು ಇರುವುದನ್ನು ೧೨ ಪಟ್ಟು ಮಾಡಿ ಎಂದು ಹೇಳಿದನೇ ಹೊರತು ೭ ಲಕ್ಷ ಬರುವವರಿಗೆ ಯಾವ ಹೆಚ್ಚಿನ ಪರಿಹಾರ ಕೊಡಿ ಎಂದು ಕೇಳಲಿಲ್ಲ. ಪರಿಹಾರ ಕೊಡುವಾಗ, ಸಮಾಜವಾದ ಘೋಷಿಸತಕ್ಕವರು ಒಂದು ಜನಕ್ಕೆ ಊಟ ಹಾಕಿ ಮತ್ತೊಂದು ಜನಕ್ಕೆ ಊಟ ಇಲ್ಲದಂತೆ ಮಾಡಕೂಡದು ಎಂದು ಹೇಳುತ್ತೇನೆ. ಹಾಗೆ ಕೊಡತಕ್ಕ ಪರಿಹಾರ ಚೆನ್ನಾಗಿ ಬಿಟ್ಟರೆ ಗೇಣಿದಾರರಿಗೆ ಪೆಟ್ಟು ಬೀಳುತ್ತದೆ. ಕೊಡುವುದಕ್ಕೆ ತೊಂದರೆಯಾಗುತ್ತದೆ ಎಂದರೆ ಅದಕ್ಕೆ ಒಂದು ತಿದ್ದುಪಡಿಯನ್ನು ತಂದಿದ್ದೇನೆ. ಅಂಗವಿಕಲರಿಗೆ, ಸಣ್ಣ ಹಿಡುವಳಿದಾರರಿಗೆ, ಮೈನರ್ಸ್‌ಗಳಿಗೆ ಮತ್ತು ವಿಧವೆಯರಿಗೆ ಕೊಡತಕ್ಕ ಪರಿಹಾರದಲ್ಲಿ ಶೇಕಡ ೫೦ ಭಾಗ ಸರ್ಕಾರ ವಹಿಸಿಕೊಂಡು ಉಳಿದ ಶೇಕಡ ೫೦ ಭಾಗ ಗೇಣಿದಾರರು ಕೊಡಲಿ ಅಂತ ಹೇಳಿದ್ದೇನೆ. ಈಗ ನಮ್ಮ ಬೆಂಗಳೂರು ನಗರದಲ್ಲಿ ಅನೇಕರು ಫ್ಲಾಟ್ಸ್‌ಗಳನ್ನು ಕಟ್ಟಿಕೊಂಡಿರುವವರಿಗೆ ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಜಾಗ ಬಿಟ್ಟುಕೊಟ್ಟು ಮನೆಗಳನ್ನು ಕಟ್ಟಿಸಿಕೊಡುತ್ತಿದ್ದಾರೆ. ಜಮೀನು ಕಿತ್ತು ಕೊಳ್ಳುವವರಿಗೆ ನ್ಯಾಯ ಮಾಡದೆ ಹೋಗುವುದಕ್ಕೆ ಎಂತಹ ಸಮಾಜವಾದ ಹೇಳಬೇಕಾಗುತ್ತದೆ? ಕೇಂದ್ರ ಸರ್ಕಾರದವರು ೮೦ ಕೋಟಿ ರೂಪಾಯಿ ಕೊಡುತ್ತಾರೆ, ರಾಜ್ಯ ಸರ್ಕಾರದವರು ತಾವು ಹಣ ಹಾಕಿ ಬಡವರಿಗೆ, ವಿಧವೆಯರಿಗೆ ಮತ್ತು ಅಂಗವಿಕಲರಿಗೆ ತಾವು ೨೦ ಪಟ್ಟು ಹಾಕಿ ಒಟ್ಟು ೪೦ ಪಟ್ಟು ಪರಿಹಾರ ಕೊಡಬೇಕು ಎಂದು ಹೇಳುತ್ತೇನೆ ಇದು ನ್ಯಾಯವಾದದ್ದು ಆದುದರಿಂದ ಇದನ್ನು, ನಾನು ತಂದಿರತಕ್ಕ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕು ಅಂತ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಹಿಂದಿನ ಕ್ಲಾಜ್‌ಡಿಸ್‌ಕಸ್ ಮಾಡಿದಾಗ ಹೇಳಿದ ಹಾಗೆ ಒಂದಕ್ಕೊಂದು ವಿರುದ್ಧವಾದ ವಾದಗಳು ವಿರೋಧ ಪಕ್ಷದವರಿಂದ ಬಂದಿದೆ. ಇದರಲ್ಲಿ ಮಾನ್ಯ ಸಭೆಯು ಎಲ್ಲಾ ಸದಸ್ಯರೂ ಕೂಡ ವಿಧವೆಯರಿಗೆ, ಅಂಗವಿಕಲರಿಗೆ, ಮೈನರ್ಸ್‌ಗೆ ಮತ್ತು ಮದುವೆ ಆಗದೇ ಇರತಕ್ಕವರಿಗೆ, ಸೋಲ್ಜರ್ಸ್ ಮತ್ತು ಸೀಮೆನ್ಸ್‌ಗೆ ಹೆಚ್ಚಿನ ಪರಿಹಾರ ಕೊಡಬೇಕು ಎನ್ನುವುದನ್ನು ಸರ್ವಾನುಮತದಿಂದ ಒಪ್ಪಿಯಾಗಿದೆ.

ಶ್ರೀ ಟಿ. ಆರ್. ಶಾಮಣ್ಣ.—ಮದುವೆ ಮಾಡಿಕೊಳ್ಳದೇ ಇರತಕ್ಕ ಬ್ರಹ್ಮಚಾರಿಗಳನ್ನು ಸೇರಿಸಿ.

ಶ್ರೀ ಎಸ್. ಹುಚ್ಚಮಾಸ್ತಿಗೌಡ.—ಆ ದೃಷ್ಟಿಯನ್ನಿಟ್ಟುಕೊಂಡು ಅವರಿಗೆ ಪರಿಹಾರ ಹೆಚ್ಚು ಕೊಡುವುದಕ್ಕೆ ನಾನು ತಂದಿರತಕ್ಕ ತಿದ್ದುಪಡಿಯಿಂದ ಅವಕಾಶವಾಯಿತು. ಮೊದಲು ಸಣ್ಣ ಹಿಡುವಳಿದಾರರಿಗೆ ಮಾತ್ರ ಇತ್ತು. ಉಳಿದವರೆಲ್ಲರಿಗೂ ಅನ್ವಯಿಸುವ ಹಾಗೆ ಅವಕಾಶವಾಗಿದೆ. ಮಾನ್ಯ ಶಾಮಣ್ಣನವರು ಲೆಕ್ಕ ಹಾಕಿದರೆ ಗೊತ್ತಾಗುತ್ತದೆ. ಹಿಂದೆ ಗೇಣಿ ಎಷ್ಟು ಇತ್ತೋ ಆ ಗೇಣಿಯೂ ಕೂಡ ಇವತ್ತು ಜಾಸ್ತಿಯಾಗಿದೆ ಮತ್ತು ೧೫ ಪಟ್ಟು ಇದ್ದುದನ್ನು ೨೦ರಷ್ಟು ಮಾಡಿರುವುದರಿಂದ ಸ್ವಲ್ಪ ಹೆಚ್ಚಾಗಿ ಪರಿಹಾರ ಬರುತ್ತದೆ ಎನ್ನುವುದನ್ನು ಅವರು ದೃಷ್ಟಿಯಲ್ಲಿಟ್ಟುಕೊಳ್ಳಬೇಕು. ೨೦ ಪಟ್ಟು ಗೇಣಿದಾರರು ಕೊಡಲಿ, ಸರ್ಕಾರ ೨೦ ಪಟ್ಟು ಕೊಡಲಿ ಒಟ್ಟು ೪೦ ರಷ್ಟು ಕೊಟ್ಟಂತಾಗುತ್ತದೆಂದು ಹೇಳುತ್ತಾರೆ. ಈ ಕಾನೂನು ಜಾರಿಗೆ ಬಂದಮೇಲೆ ಗೇಣಿದಾರರಿಗೂ ಭೂಮಾಲೀಕರಿಗೂ ಇರುವ ಸಂಬಂಧ ತಪ್ಪಿ ಹೋಗುತ್ತದೆ. ಗೇಣಿದಾರರು ಪ್ರೀಮಿಯಮನ್ನು ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಭೂ ಮಾಲೀಕರಿಗೆ ಕೊಡಬೇಕಾದ ಪರಿಹಾರ ಮೊತ್ತಕ್ಕೆ ಸರ್ಕಾರವೇ ನೇರವಾಗಿ ಜವಾಬ್ದಾರರಾಗುತ್ತಾರೆ. ಆದುದರಿಂದ ಒಂದಕ್ಕೊಂದಕ್ಕೆ ಸಂಬಂಧವಿಲ್ಲ. ಅವನ ಹತ್ತಿರ ೨೦ ಪಟ್ಟು ತೆಗೆದುಕೊಂಡು ಸರ್ಕಾರ ೨೦ ಪಟ್ಟು ಕೊಡುವ ಸಲಹೆಯನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ.

ಶ್ರೀ ಟಿ. ಆರ್. ಶಾಮಣ್ಣ.—ಗೇಣಿದಾರರಿಂದ ೨೦ ಪಟ್ಟು ಪ್ರೀಮಿಯಂ ತೆಗೆದುಕೊಳ್ಳುವುದಿಲ್ಲವೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅದು ಸರ್ಕಾರಕ್ಕೆ ಬರುತ್ತದೆ. ಅವನಿಗೆ ೨೦ ವರ್ಷಗಳಲ್ಲಿ ಕೊಡಬೇಕಾದದ್ದನ್ನು ಒಂದೇ ಸಾರಿ ಒಟ್ಟು ಮೊತ್ತದಲ್ಲಿ ಕೊಡಬೇಕೆಂದು ಶಾಮಣ್ಣನವರು ತಿದ್ದುಪಡಿ ತಂದಿದ್ದಾರೆ, ಗೇಣಿದಾರರು ಕೊಡುವುದನ್ನು ಕಂತಿನ ಮೇಲೆ ತೆಗೆದುಕೊಂಡು ಅದಕ್ಕೆ ೨೦ ಪಟ್ಟು ಸೇರಿಸಿ ಒಂದೇ ಸಾರಿ ಕೊಡಿ, ಕಂದಾಯ ಮಾತ್ರ ಹೆಚ್ಚಿಗೆ ಹಾಕಬೇಡಿ ಎಂದು ಹೇಳಿದರೆ, ಸರ್ಕಾರ ಬಹಳ ದಿವಸ ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಆದುದರಿಂದ ಶಾಮಣ್ಣನವರ ತಿದ್ದುಪಡಿಯನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಕೃಷ್ಣನ್‌ರವರು ಒಂದು ಮಾತು ಹೇಳಿದರು. ಅಂಗವಿಕಲರಿಗೆ, ವಿಧವೆಯರಿಗೆ ಮೈನರ್ಸ್‌ಗೆ, ಸೈನಿಕರಿಗೆ ಬೇರೆ ವರಮಾನ ಜಾಸ್ತಿ ಇದ್ದರೆ ಈ ಪರಿಹಾರ ಯಾತಕ್ಕೆ ಕೊಡಬೇಕು, ಅದನ್ನು ಕಡಿಮೆ ಮಾಡಿ ಎಂದು ವಿಧವೆಯರ ದೃಷ್ಟಿಯಿಂದ ಅದನ್ನು ಹೆಚ್ಚು ಮಾಡಿದ್ದೇವೆ, ಮೈನರ್ ಮಕ್ಕಳು ಸ್ವಂತಃ ಜಮೀನು ಮಾಡುವುದಕ್ಕೆ ಆಗುವುದಿಲ್ಲ ಎನ್ನುವ ದೃಷ್ಟಿಯಿಂದ ಹೆಚ್ಚು ಮಾಡಿದ್ದೇವೆ. ಇನ್ನು ಸೈನ್ಯದಲ್ಲಿ ಕೆಲಸ ಮಾಡತಕ್ಕವರಿಗೂ ಕೂಡ ದೇಶ ರಕ್ಷಣೆಯ ಕೆಲಸ ಮಾಡುತ್ತಿದ್ದಾರೆ ಎನ್ನುವ ದೃಷ್ಟಿಯಿಂದ ಯಾವುದನ್ನೂ ಲೆಕ್ಕಕ್ಕೆ ಇಟ್ಟುಕೊಳ್ಳದೇ ಕೊಡಬೇಕೆಂದು ನನ್ನ ತಿದ್ದುಪಡಿ ಇದೆ.

ಶ್ರೀ ಬಿ. ಎನ್. ಪಾಟಿಲ್.—ಒಂದು ಸೈಂಟಿಫಿಕ್ ಅಪ್ರೋಚ್ ಇರಲಿ ಎಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾವುದೂ ಧರ್ಮಕ್ಕಾಗಿ ಕೊಡತಕ್ಕದ್ದು ಅಲ್ಲ. ಅವರ ಜಮೀನು ತೆಗೆದುಕೊಂಡಿರತಕ್ಕದ್ದಕ್ಕೆ ಪರಿಹಾರ ಕೊಡತಕ್ಕ ಹಣ. ಆದುದರಿಂದ ಯಾರಿಗೆ ಎಷ್ಟು ಕೊಡಬೇಕೋ ಅದನ್ನು ಕೊಡಬೇಕಾಗುತ್ತದೆ. ನಾನು ಸೇರಿಸಿರತಕ್ಕ ತಿದ್ದುಪಡಿಯಲ್ಲಿ ಸೆಕ್ಷನ್ ೨೦ ಮತ್ತು ೪೮ರ ಕೆಳಗೆ ಬರತಕ್ಕವರಿಗೆ ಮಾತ್ರ ಇತ್ತು. ಸೈನಿಕರಿಗೂ ಮತ್ತು ಸೀಮೆನ್‌ಗೂ ಅನ್ವಯಿಸಬೇಕೆಂದು ಹೇಳಿದ್ದೇನೆ. ಆದುದರಿಂದ ಈ ತಿದ್ದುಪಡಿ ಒಪ್ಪಿಗೆ ಕೊಡಬೇಕೆಂದು ನಾನು ಪ್ರಾರ್ಥಿಸುತ್ತೇನೆ.

MADAM SPEAKER.–I will now put the amendment to the amendment moved by Sri T. R. Shamanna to the vote of the House.

The question is,—That in clause 32, in sub-section (iii) in the last line omit the word 'twenty' and insert the word 'forty'.

"And after Sub-section b (iii) insert the new provision namely.—

"The extra cost of premium to be paid between twenty to forty times, be met out of the Government funds."

The motion was negatived

MADAM SPEAKER.–I will now put the Amendment–71–moved by the Minister, to the vote of the House.

The question is:

That in the proposed section 47,

(1) in sub-section (1)

(*a*) for the words and figures "under section 20", the words, figures and brackets "under sub-section (6) of section 15 or section 20" shall be substituted:

(*b*) for item (iii) of the proviso, the following item shall be substituted, namely.

"(iii) if the land vesting in the State Government is D class land referred to in Part A of Schedule I or if the landlord is.–

(*i*) a small holder

(*ii*) a minor

(*iii*) a widow

(iv) a woman who has never been married

(v) a person who is subject to physical or mental disability, or

(vi) such soldier or seaman whose lands vest in the State Government under section 44

an amount equal to twenty times the net annual income for such land shall be payable."

(2) in sub-section (2), the words, brackets and letter "clause (b) and the proviso to that clause (if applicable to that land) of" shall be omitted.

The motion was adopted

MADAM SPEAKER.—I will now put amendment to amendment moved by Sri B. V. Kakkilaya to the vote of the House.

The question is;

"That at page 50, after sub-section (4) of the proposed Section 47, the following sub-section shall be inserted."

"(5) Notwithstanding anything in the foregoing sub-sections of this section, the amount paid by or recovered from the tenant by way of rent after the 2nd day of October 1965 shall be deemed to be payment made towards the premium payable by the tenant for getting himself registered as the occupant."

The motion was negatived.

MADAM SPEAKER.—I will now put amendment moved by Sri T. R. Shamanna to the vote of the House.

The question is:

"That at page 49, in item (i) of sub-section (1) of the proposed section 47 for the words, 'fifteen times' the words 'thirty times' shall be substituted.

In item (ii) of sub-section (1) of the proposed section 47 for the words 'thirty times', the words 'twenty four times' shall be substituted.

In item (i) of the proviso to sub-section (1) of the proposed section 47, for the words 'six times' the words 'twelve times' shall be substituted."

The motion was negatived

MADAM SPEAKER.—The question is :

"That clause 32 as amended do stand part of the Bill".

The motion was adopted.

Clause 33 was added to the Bill.

Clause 33

MADAM SPEAKER.—There is an amendment by the Hon. Minister for Revenue.

SRI N. HUTCHAMASTI GOWDA.—Madam, I move;

"That in the proposed section 48A,

(i) in sub-section (1), after the words "Every such application shall", the words "save as provided in this Act", shall be inserted;

(ii) in sub-section (4), for the words "direct by order that the applicant shall be registered as an occupant the words "by order either by grant or reject the application". shall be substituted;

(iii) for sub-section (7), the following sub-section shall be substituted, namely:

"(7) The person to be registered as an occupant shall pay to the State Government as premium an amount equal to fifteen times the net annual income referred to in sub-section (2) of section 47 plus the amount, if any, payable under sub-section (3) of that section:

Provided that the premium payable by a permanent tenant shall be six times the difference between the rent and the land revenue of the land".

MADAM SPEAKER.— Amendment moved.

"That in the proposed section 48A—

(i) in sub-section (1), after the words "Every such application shall" the words "save as provided in this Act", shall be Inserted;

(ii) in sub-section (4), for the words "direct by order that the applicant shall be registered as an occupant the words "by order either grant or reject the application" shall be substituted;

(iii) for sub-section (7), the following sub-section shall be substituted, namely:—

"(7) The person to be registered as an occupant shall pay to the State Government as premium an amount equal to fifteen times the net annual income referred to in sub-section (2) of Section 47 plus the amount, if any, payable under sub-section (3) of that section:

Provided that the premium payable by a permanent tenant shall be six times the difference between the rent and the land revenue of the land".

SRI V. N. PATIL .—Madam, I move the folllowing amendment to the amendment moved by the Hon. Revenue Minister.

"That for the proposed sub-section (7) of section 48A the following shall be substituted''.

"(7). the person to be registered as an occupant to the State Government as premium an amount equal to six times of the land revenue, in case of permanent tenant fifty times the land revenue in case of protected tenant and seventy times the land revenue in case of other tenants".

MADAM SPEAKER .—Amendment moved.

"That in page 3 of the VI list of amendment for the proposed sub-section 7 of the section 48A the following shall be substituted :

"(7). The person to be registered as an occupant to the State Government as premium an amount equal to six times the land revenue in case of permanent tenant fifty times the land revenue, in case of protected tenant and seventy times the land revenue in case of other tenants''.

SRI V. N. PATIL .—I beg to move :

"That at page 52, in sub-section (7) of the proposed section 48A for the words "the amount payable for the land under section" the words "fifteen times the net annual income referred to in sub-section (2) of section 47 together with the amount due under sub-section (3) of section 47 shall be substituted.

MADAM SPEAKER .—Amendment moved.

"That at page 52, in sub-section (7) of the proposed section 48A for the words "the amount payable for the land under section 47" the words "fifteen times the net annual income referred to in the sub-section (2) of section 47 together with the amount due under sub-section (3) of section 47 shall be substituted".

SRI T. R. SHAMANNA .—I beg to move :

"That at page 50 in sub-section (1) of the proposed section 48, the following item shall be added :

"(iii) one of the members of the Tribunal shall be a person having legal knowledge and another shall be the Chairman of the Taluk Development Board or the local municipality".

That the page 52, for sub-section (6) of the proposed section 48A the following shall be substituted :

"(6) Subject to such rules as may be prescribed there shall be an appeal from toe orders for the Tribunal to a competent Court".

That the following sub-section shall be added after sub section 8..

'(9) Legal assistance shall be provided to the person who is in need of it in an enquiry before the Tribunal".

MADAM SPEAKER .—Amendment moved :

"That at page 50 in sub-section (1) of the proposed section 48, the following item shall be added :

"(iii) one of the members of the Tribunal shall be a person having legal knowledge and another shall be the Chairman of the Ta'k Development Board or the local municipality".

"That at page 52 for sub-section (6) of the proposed section 48A the following shall be substituted :

"(6) Subject to such rules as may be prescribed there shall be an appeal from the orders of the Tribunal to a competent Court".

That the following sub-section shall be added after sub-section(8)..

"(9) Legal assistance shall be provided to the person who is in need of it in an enquiry before the Tribunal".

ಶ್ರೀ ಎಸ್. ಹಂಚ್ಚವಾಸ್ಸಿಗೌಡ .—೪೮(ಎ) (೧)ರಲ್ಲಿ ೬ ತಿಂಗಳ ಟೈಂ ಕೊಡಬೇಕೆಂದು ಮಾಡಿದೆ. ಅವನು ಮೈನರ್ ಆಗಿದ್ದರೆ, ಆತನು ಮೆಜಾರಿಟಿಗೆ ಬಂದಮೇಲೆ ಅದರ ಉಪಯೋಗ ಈತನಿಗೆ ಸಿಗಬೇಕೆಂದು ಉದ್ದೇಶದಿಂದ ಈ ತಿದ್ದುಪಡಿ ತಂದಿರುವುದು. ಇದನ್ನು ಇಲ್ಲಿ ನಿರ್ದಿಷ್ಟಪಡಿಸಿದೆ ಜೊತೆಗೆ ಅಲ್ಲಿ ಸ್ಟ್ರಕ್ಚರ್ ಏನಾದರೂ ಕಟ್ಟಿದ್ದರೆ ಅದರ ಫಲವನ್ನು ಕೊಡಬೇಕೆಂದು ತಿದ್ದುಪಡಿಯಲ್ಲಿ ಸೇರಿಸಿದ್ದೇ.

SRI T R. SHAMANNA .—Madam, I beg to move :

That in clause 33, in sub-section (iii) (7), delete 'six' and insert 'twelve'.

MADAM SPEAKER amendment moved :

That in clause 33 in sub-section (iii) (7), delate 'six' and insert "twelve".

‡ ಶ್ರೀ ಕಾಗೋಡು ತಿಮ್ಮಪ್ಪ .—ಮಾನ್ಯ ಅಧ್ಯಕ್ಷರೆ, ಈ ಭೂಸುಧಾರಣೆ ಕಾನೂನು ೧೯೬೧ರಲ್ಲಿ ಬಂದರೂ ಕೂಡ ಈವರೆಗೆ ಅದು ಜಾರಿಗೆ ಬಾರದಿದ್ದುದರಿಂದ ಗೇಣೀದಾರರಿಗೆ ಮಾಲೀಕತ್ವ ಈ ವರೆಗೆ ಸಿಗಲಿಲ್ಲ. ಕಳೆದ ೧೦ ವರ್ಷಗಳಿಂದ ಇಷ್ಟು ಹೊತ್ತಿಗೆ ಅವನು ಪ್ರೀಮಿಯಂ ಪೂರೈಸಿ ಭೂಮಾಲೀಕನಾಗುತ್ತಿದ್ದ. ಸರ್ಕಾರ ಮಾಡಿದ ಈ ತಪ್ಪಿಗಾಗಿ ಅವನು ಗೇಣೀದಾರನಾಗಿಯೇ ಉಳಿದುಕೊಂಡು ಪ್ರೀಮಿಯಂ ಬದಲು ಗೇಣಿಯನ್ನೇ ಕೊಟ್ಟುಕೊಂಡು ಬಂದಿದ್ದಾರೆ. ಈಗಲಾದರೂ ಆತನಿಗೆ ಸ್ವಲ್ಪ ನೆರವು ಕೊಡಬೇಕೆಂದು ಹೇಳುತ್ತೇನೆ ಈಗಾಗಲೇ ಈ ಒಂದು ತತ್ವವನ್ನು ಇನಾಂ ಅಬಾಲಿಷನ್ ಆಕ್ಟಿನಲ್ಲಿ ಒಪ್ಪಿಕೊಂಡಿದ್ದೀರಿ. ಅಲ್ಲಿ ಪರ್ಮನೆಂಟ್ ಟೆನೆಂಟಿಗೆ ಕಂದಾಯದ ೩೦ರಷ್ಟು ಪ್ರೊಟೆಕ್ಟೆಡ್ ಟೆನೆಂಟಿಗೆ ಕಂದಾಯದ ೫೦ರಷ್ಟು— ಇತ್ಯಾದಿ ತತ್ವಗಳನ್ನು ಒಪ್ಪಿಕೊಂಡಿದ್ದೀರಿ. ಅದೇ ರೀತಿಯಲ್ಲಿ ಇದರ ಕೆಳಗಡೆ ಬರತಕ್ಕಂತಹ ಗೇಣಿ ರೈತರಿಗೆ ಸಹ ಅನ್ವಯಿಸುವ ಹಾಗೆ ಮಾಡಬೇಕು, ಪರ್ಮನೆಂಟ್ ಟೆನೆಂಟ್ ಕಂದಾಯದ ೬ರಷ್ಟು, ಪ್ರೊಟೆಕ್ಟೆಡ್ ಟೆನೆಂಟ್ ಕಂದಾಯದ ೫೦ರಷ್ಟು ಮತ್ತು ಉಳಿದಿರತಕ್ಕಂತಹ ರೈತರಿಗೆ ಕಂದಾಯದ ೭೦ರಷ್ಟು ಪ್ರೀಮಿಯಂ ಸರ್ಕಾರಕ್ಕೆ ಕೊಡುವ ರೀತಿಯಲ್ಲಿ ಮಾಡಿ ನ್ಯಾಯ ದೊರಕಿಸಬೇಕೆಂದು ಹೇಳುತ್ತೇನೆ ಇದಕ್ಕೆ ಕಾರಣ ಇಷ್ಟೆ. ನಾವು ಒಂದು ವರ್ಗದ ಗೇಣಿ ರೈತರಿಗೆ ಅನುಕೂಲ ಕಲ್ಪಿಸಿದ ಮೇಲೆ ಇನ್ನೊಂದು ವರ್ಗದ ರೈತರಿಗೂ ಅದೇ ಅನುಕೂಲವನ್ನು ಕಲ್ಪಿಸಬೇಕಾಗುತ್ತದೆ. ಒಂದು ಕಣ್ಣಿಗೆ ಬೆಣ್ಣೆ ಇನ್ನೊಂದು ಕಣ್ಣಿಗೆ ಸುಣ್ಣ ಹಾಕುವ ನೀತಿಯನ್ನು ಅನುಸರಿಸಬಾರದು ಸರ್ಕಾರದವರು ಇದನ್ನು ಪರಿಶೀಲಿಸಬೇಕು. ನೀವು ಹೇಳುವ ಹಾಗೆ ಪ್ರಿಮಿಯಂನ್ನು ೨೦ ವರ್ಷ ಕೊಡುವ ಹಾಗೆ ಮಾಡಿದರೆ ಪುನಃ ಅವನು ಸರ್ಕಾರಕ್ಕೆ ಗೇಣಿಯನ್ನು ಕೊಟ್ಟಂತಾಗುತ್ತದೆ. ಈಗಾಗಲೇ ಈ ಕಾನೂನು ಬಂದರೂ ಕೂಡ ಖಾತೇದಾರನಿಗೆ ಅವನು ಗೇಣಿಯನ್ನು ಕೊಟ್ಟುಕೊಂಡು ಬಂದಿದ್ದಾನೆ. ಪುನಃ ಅದನ್ನು ೨೦ ಕಂತಿನಲ್ಲಿ ಕೊಡಿ ಎಂದು ಹೇಳಿದರೆ ಸರಿಯಾಗುವುದಿಲ್ಲ. ಆದ್ದರಿಂದ ಇನಾಂ ಆಕ್ಟಿನಲ್ಲಿ ಏನು ಅವಕಾಶ ಮಾಡಿದ್ದಾರೆ, ಅದೇ ರೀತಿಯಲ್ಲಿ ಇಲ್ಲಿ ಸಹ ಗೇಣಿದಾರರಿಗೆ ಅನುಕೂಲವನ್ನು ಕಲ್ಪಿಸಬೇಕೆಂದು ಹೇಳುತ್ತೇನೆ.

ಅದು ಮಾಡದೇ ಹೋದರೆ ಎರಡು ಬಗೆದಂತೆ ಆಗುತ್ತದೆ. ಅವರಿಗೆ ಒಂದು ರೀತಿ, ಇವರಿಗೆ ಒಂದು ರೀತಿ ಮಾಡಿದಂತಾಗುತ್ತದೆ. ದಯುವಿಟ್ಟು ಭೂಸುಧಾರಣೆ ಕೆಳಗೆ ಬರತಕ್ಕ ಸವಲತ್ತನ್ನು ಗೇಣಿದಾರರಿಗೆ ಕೊಡಿ ಎಂದು ಸರ್ಕಾರವನ್ನು ನಾನು ಒತ್ತಾಯಪಡಿಸುತ್ತೇನೆ.

1 30 P. M

† ಶ್ರೀ ಟಿ. ಆರ್. ಶಾಮಣ್ಣ.—ಈ ಟ್ರೈಬ್ಯುನಲ್ಸ್ ಬಗ್ಗೆ ಸಾಕಾದಷ್ಟು ಚರ್ಚೆಯಾಗಿದೆ, ಅನೇಕ ತಿದ್ದುಪಡಿಗಳನ್ನು ತಂದಾಗ, ಅವರ ಪಾರ್ಟಿಯವರೇ ಅನೇಕ ಸಲಹೆಗಳನ್ನು ಕೊಟ್ಟರೂ ಕೂಡ. ಅದನ್ನು ಗಮನಕ್ಕೆ ತೆಗೆದುಕೊಳ್ಳದೆ ತಮ್ಮದೇ ಆದ ಒಂದು ರೀತಿಯಲ್ಲಿ ತಿದ್ದುಪಡಿ ತಂದು ಅದನ್ನು ಜಾರಿಗೆ ತರುವುದಕ್ಕೆ ಏರ್ಪಾಟುಮಾಡಿರುವುದರಿಂದ, ನಾನು ಕೆಲವು ತಿದ್ದುಪಡಿಗಳನ್ನು ಈ ಸಭೆಯ ಮುಂದೆ ಇಟ್ಟಿದ್ದೇನೆ. ಮೊದಲನೆಯದಾಗಿ, ಟ್ರೈಬ್ಯುನಲ್‌ನ್ನು ಮಾಡತಕ್ಕ ಉದ್ದೇಶವಾದರೂ ಇಷ್ಟೆ. ಇದಕ್ಕೆ ಸಂಬಂಧಪಟ್ಟಂಥ ತಕರಾರುಗಳು ಆದಷ್ಟು ಬೇಗ ಪರಿಹಾರವಾಗಿ, ಕೋರ್ಟಿಗೆ ಹೋಗಿ ವರ್ಷಾನುಗಟ್ಟಲೆ ತಡ ಆಗದೇ, ಬೇಗನೆ ತೀರ್ಮಾನ ಕೊಡಬೇಕು ಎಂದು ತೆಗೆದುಕೊಂಡು ಬಂದಿದ್ದೀರಿ. ಅದಕ್ಕೆ ತತ್ವಶಃ ವಿರೋಧವಿಲ್ಲ. ಯಾವುದಾದರೂ ಜಾಗ್ರತೆ ಮಾಡಿದರೆ ತೊಂದರೆಗಳು ಕಡಿಮೆಯಾಗುತ್ತದೆ. ನನ್ನ ಭಯ ಏನೆಂದರೆ, ಟ್ರೈಬ್ಯುನಲ್‌ನ್ನು ಏರ್ಪಾಟು ಮಾಡುವಾಗ ಅಸಿಸ್ಟೆಂಟ್ ಕಮಿಷನರ್ ಇದ್ದರೂ ಕೂಡ ಬೇರೆ ಸದಸ್ಯರನ್ನು ನೇಮಕ ಮಾಡತಕ್ಕ ಪೂರ್ಣವಾದ ಅಧಿಕಾರ ಸರ್ಕಾರಕ್ಕೆ ಇರುತ್ತದೆ. ಸರ್ಕಾರಕ್ಕೆ ಇಂಥ ಅಧಿಕಾರ ಇರುವಾಗ ತಮಗೆ ಅನುಕೂಲವಾದ ರೀತಿಯಲ್ಲಿ, ರಾಜಕೀಯವನ್ನು ಮತ್ತು ಪ್ರತಿಷ್ಠೆಯನ್ನು ಬೆಳಿಸಿಕೊಳ್ಳುವುದಕ್ಕೆ ಹೇಗೆ ಆಗಬೇಕೋ ಹಾಗೆ ಮಾಡಿ ಅಂಥವರನ್ನು ಚುನಾವಣೆ ಮಾಡುತ್ತಾರೆ ಮತ್ತು ಅದರಲ್ಲಿ ಅನೇಕರಿಗೆ ಸ್ಥಳದ ವಿಚಾರ ತಿಳಿದಿಲ್ಲದೇ ಇರಬಹುದು. ಆದುದರಿಂದ ಸರ್ಕಾರಕ್ಕೆ ಕೊಟ್ಟಿರುವ ಅಧಿಕಾರ ದುರುಪಯೋಗವಾಗುವ ಸಂಧರ್ಭ ಹೆಚ್ಚು ಇದೆ. ಅದರ ಜೊತೆಗೆ ಈ ಕಾಯಿದೆ ಜನಗಳಿಗೆ ಉಪಯೋಗವಾಗುವ ರೀತಿಯಲ್ಲಿ, ನ್ಯಾಯವಾದ ರೀತಿಯಲ್ಲಿ ಆಗಬೇಕು ಎನ್ನುವ ಉದ್ದೇಶದಿಂದ ನಾನು ತಂದಿರತಕ್ಕ ತಿದ್ದುಪಡಿ : "One of the Members of the Tribuhal shall be a person having legal knowledge".

ಏಕೆಂದರೆ, ನಮ್ಮ ಮುಂದೆ ಇಟ್ಟಿರತಕ್ಕ ೨೮ ಬದಲಾವಣೆಗಳನ್ನು ನೋಡಿ ನಮಗೆ ಗಾಬರಿಯಾಗುತ್ತದೆ. ತಾವು ದೊಡ್ಡ ತಪ್ಪು ಎಂದು ತಿಳಿದುಕೊಳುವುದಿಲ್ಲ. ೨೮ ಚಿಲ್ಲರೆ ಚಿಲ್ಲರೆ ಅಮೆಂಡ್‌ಮೆಂಟ್‌ಗಳನ್ನು ತರುವುದಕ್ಕೆ ಬದಲು, ಎಲ್ಲಾ ಕ್ರೋಢೀಕರಿಸಿ ಸಮಗ್ರವಾದ ಹೊಸ ಆಕ್ಟನ್ನು ತಂದಿದ ಪಕ್ಷದಲ್ಲಿ ಇಷ್ಟು ಪರಿಸ್ಥಿತಿ ಬಿಗಡಾಯಿಸುತ್ತಿರಲಿಲ್ಲ. ಹೇಳಿರುವುದೇ ಒಂದು ಬರೆದುಕೊಂಡಿರುವುದೇ ಒಂದು, ಆ ರೀತಿ ವ್ಯತ್ಯಾಸ ಆಗ ಬಹುದು. ನ್ಯಾಯ ವಿಚಾರನಲ್ಲಿ, ಧರ್ಮ ವಿಚಾರದಲ್ಲಿ ಅನ್ಯಾಯವಾಗದ ಹಾಗೆ ನೋಡಿಕೊಳ್ಳವುದಕ್ಕೆ ಟ್ರೈಬ್ಯುನಲ್ ಇರುವುದು. ಇದನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಒಬ್ಬ ನ್ಯಾಯ ವಿಚಾರ ತಿಳಿದು ಕೊಂಡಿರುವವರು ಲಾಯರ್ ಎಂದು ಹೇಳಲಿಲ್ಲ, ಅದರಲ್ಲಿ ಇರಬೇಕು. ಅನೇಕ ಸದಸ್ಯರು ಆಕ್ಟ್ ಓದಿ ಅರ್ಥಮಾಡಿಕೊಳ್ಳುವುದಕ್ಕೆ ಅಷ್ಟು ಸಮರ್ಥರೂ ಆಗಿಲ್ಲ ಎಂದು ಹೇಳಿದರೆ, ಸದಸ್ಯರು ತಪ್ಪು ತಿಳಿದು ಕೊಳ್ಳುವುದಿಲ್ಲ ಎಂದು ಭಾವಿಸುತ್ತೇನೆ.

ರಾಜಕೀಯ ಕಾರಣದಿಂದ ಅದೇ ಊರಿನವರು ಇಲ್ಲದೆ ಬೇರೆಯವರನ್ನು ತಮಗೆ ಬೇಕಾದವರನ್ನು ತಂದು ಹಾಕಬಹುದು. ಒಬ್ಬ ಸದಸ್ಯ ಜನಗಳಿಂದ ಚುನಾಯಿತನಾದವನು ಅಂದರೆ. ತಾಲ್ಲೂಕು ಬೋರ್ಡ್ ಛೇರ್ಮನ್ ಅಥವಾ ಮುನಿಸಿಪಾಲಿಟಿ ರೆಪ್ರೆಸೆಂಟೆಟಿವ್ ಇದ್ದರೆ, ಅವನು ಸ್ಥಳದ ವಾಸ್ತವಾಂಶಗಳನ್ನು ತಿಳಿದುಕೊಂಡಿರುತ್ತಾನೆ. ಆದುದರಿಂದ ನಾಲ್ಕು ಸದಸ್ಯರನ್ನು ಚುನಾವಣೆ ಮಾಡುವಾಗ ಈ ಒಂದು ನಿಯಮವನ್ನು ಇಟ್ಟುಕೊಂಡರೆ ಅನುಕೂಲ. ಏಕೆಂದರೆ ಒಬ್ಬ ಕಾಯಿದೆ ವಿಚಾರ ತಿಳಿದುಕೊಂಡಿರತಕ್ಕವನು ಮತ್ತೊಬ್ಬ ಲೋಕಲ್ ಕಂಡೀಷನ್ಸ್ ತಿಳಿದುಕೊಂಡಿರತಕ್ಕವನು ಇದ್ದರೆ ಅನುಕೂಲ ಎಂದು ಈ ಒಂದು ಅಮೆಂಡ್‌ಮೆಂಟನ್ನು ತಂದಿದ್ದೇನೆ.

ಎರಡನೆಯದಾಗಿ ತಾವು ಟ್ರೈಬ್ಯುನಲ್ ಮಾಡಿದ ತೀರ್ಮಾನದ ಮೇಲೆ ಸಾಧಾರಣವಾಗಿ ಕೋರ್ಟಿಗೆ ಹೋಗುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದೀರಿ. ಹೋಗದೇ ಇರುವುದರಿಂದ ಅನೇಕ ಸಾರಿ ಅನ್ಯಾಯಗಳು ನಡೆಯುತ್ತವೆ. ಟ್ರಸ್ಟ್‌ಬೋರ್ಡ್ ಸೈಟುಗಳನ್ನು ಹಂಚಿಕೊಂಡ ಹಾಗೆ ಯಾರಿಗೆ ಅಪ್ಪ, ಅಮ್ಮ ಇರುತ್ತಾರೋ, ಯಾರಿಗೆ ದುಡ್ಡು ಖರ್ಚುಮಾಡುವುದಕ್ಕೆ ಶಕ್ತಿ ಇದೆಯೋ, ಯಾರಿಗೆ ಪ್ರಭಾವ ಬೀರುವುದಕ್ಕೆ ಶಕ್ತಿ ಇದೆಯೋ, ಯಾರಿಗೆ ಲಾಭ ಪಡೆಯತಕ್ಕ ಶಕ್ತಿ ಇದೆಯೋ ಅಂಥವರು ಹೆಚ್ಚಿನ ಅನುಕೂಲ ಪಡೆಯಬಹುದು. ಯಾರು ನಿರ್ಗತಿಕರು, ಯಾರಿಗೆ ಜಮೀನು ಸಿಗಬೇಕು, ಅವರಿಗೆ ಸಿಕ್ಕದೇ ಇರುವ ಸಂಧರ್ಭಗಳು ಅನೇಕ ಇರುತ್ತವೆ. ಆದುದರಿಂದ ಟ್ರೈಬ್ಯುನಲ್ ಮಾಡಬಹುದಾದ ಅನ್ಯಾಯಗಳನ್ನು ತಡೆಗಟ್ಟುವ ಉದ್ದೇಶದಿಂದ ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕು, ಎನ್ನುವ ಎರಡನೇ ತಿದ್ದುಪಡಿಯನ್ನು ತಂದಿದ್ದೇನೆ.

(ಶ್ರೀ ಟಿ. ಆರ್. ಶಾಮಣ್ಣ)

ಮೂರನೆಯದು, ನಾನು ಆಗಲೇ ತಿಳಿಸಿದ ಹಾಗೆ ಲೀಗಲ್ ಅಸಿಸ್ಟೆನ್ಸ್ ತೆಗೆದುಕೊಳ್ಳ ಕೂಡದು ಎಂದು ಹೇಳಿದ್ದೀರಿ. ಲೀಗಲ್ ಅಸಿಸ್ಟೆನ್ಸ್ ತೆಗೆದುಕೊಳ್ಳದೇ ಹೋದ ಪಕ್ಷದಲ್ಲಿ ಅನ್ಯಾಯವಾಗುತ್ತದೆ. ಲಿಖಿತ ಮೂಲಕ ಬರೆದು ಕೊಡುವುದಕ್ಕೂ ಲಾಯರ್‌ಗೆ ಫೀಸ್ ಕೊಡಬೇಕು. ಜಮೀನುದಾರರ ಪರವಾಗಿ ಲಾಯರ್ ಇಲ್ಲದೇ ಇದ್ದರೆ, ಜಮೀನುದಾರ ವಾದಿಸಿಕೊಳ್ಳಬಹುದು. ಗೇಣಿದಾರರರಿಗೆ ವಾದಿಸಿಕೊಳ್ಳುವ ಶಕ್ತಿ ಸಾಲದು. ಅವರಿಗೆ ಕಾಯಿದೆ ಏನು ಎನ್ನುವುದು ಗೊತ್ತಾಗುವುದಿಲ್ಲ. ಯಾವ ರೀತಿ ಬದಲಾವಣೆಯಾಗಬೇಕು ಎಂದು ಅವನಿಗೆ ಗೊತ್ತಿಲ್ಲ. ನನ್ನ ತಿದ್ದುಪಡಿ ಒಪ್ಪಿದರೆ ಅದರಿಂದ ಅನೇಕ ಲಾಯರುಗಳಿಗೆ ಕೆಲಸ ಒದಗಿಸಿಕೊಟ್ಟಂತಾಗುತ್ತದೆ ಮತ್ತು ಸ್ವಲ್ಪ ನ್ಯಾಯ ದೊರಕಿಸಿಕೊಡುವುದಕ್ಕೆ ಕಾಯಿದೆ ಪ್ರಕಾರ ವಾದಿಸುವುದಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಲೀಗಲ್ ಅಸಿಸ್ಟೆನ್ಸ್ ಕೊಡಬೇಕು ಎನ್ನತಕ್ಕದ್ದನ್ನು ಒತ್ತಾಯವಾಗಿ ಹೇಳುವುದರ ಜೊತೆಗೆ ಕೋರ್ಟಿಗೆ ಅಪೀಲುಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಹೇಳುತ್ತೇನೆ. ಮರಣ ದಂಡನೆ ಕೊಡುವಾಗ ಕೂಡ ಸೆಷನ್ಸ್ ಜಡ್ಜಿನ ತೀರ್ಮಾನ ಹೈಕೋರ್ಟಿಗೆ ಹೋಗುತ್ತದೆ, ಆ ಮೇಲೆ ಸುಪ್ರೀಂ ಕೋರ್ಟಿಗೆ ಹೋಗುತ್ತದೆ. ಇಲ್ಲಿ ಸಾವಿರಾರು ರೂಪಾಯಿ ಕಳೆದುಕೊಳ್ಳುವ ಸಂದರ್ಭದಲ್ಲಿ ಅಪೀಲು ಇಲ್ಲ ಅಂದರೆ ತಪ್ಪಾಗುತ್ತದೆ. ಕೋರ್ಟಿನಲ್ಲಿ ೩ ತಿಂಗಳೊಳಗೆ ತೀರ್ಮಾನ ಮಾಡಬೇಕು ಎಂದು ಕಾಯಿದೆಯಲ್ಲಿ ಹಾಕಿ. ಆದರೆ ಕೋರ್ಟಿಗೆ ಅಪೀಲು ಇರುವುದನ್ನು ತೆಗೆದುಹಾಕುವುದು ಸರಿಯಾದುದಲ್ಲ. ಆ ಉದ್ದೇಶ ಇಟ್ಟುಕೊಂಡು ತಿದ್ದುಪಡಿ ತಂದಿದ್ದೇನೆ. ಅದನ್ನು ಒಪ್ಪಿಕೊಳ್ಳಬೇಕು ಎಂದು ಹೇಳಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

† ಪಿ. ಎನ್. ಪಾಟೀಲ್ :—ಮಾನ್ಯ ಮಿತ್ರರಾದ ಕಾಗೋಡು ತಿಮ್ಮಪ್ಪನವರು ತಿದ್ದುಪಡಿ ಬಗ್ಗೆ ಕೆಲವು ವಿವರಗಳನ್ನು ಕೊಟ್ಟಿದ್ದಾರೆ. ಆದರೆ ಒಂದು ವಿಷಯ. ೧೯೫೪ರಲ್ಲಿ ತರುತ್ತಾ ಇರುವ ಈಗಿನ ಅಮೆಂಡ್‌ಮೆಂಟಿಗೂ ಹೈದರಾಬಾದ್ ಮತ್ತು ಬಾಂಬೆ ಏರಿಯಾದಲ್ಲಿ ಇನಾಂ ಅಬಾಲಿಷನ್ ಆಕ್ಟ್ ಕೆಳಗೆ ಎಷ್ಟು ಪರಿಹಾರ ಕೊಡುತ್ತಿದ್ದಾರೋ ಅದಕ್ಕೂ ಬಹಳ ವ್ಯತ್ಯಾಸ ಇದೆ. ೧೯೫೪ರಲ್ಲಿ ಹೊಸ ಯುಗ ಬಂದಿದೆ ಎಂದು ಜನರಿಗೆ ತೋರಿಸುತ್ತಾ ಇರುವಾಗ, ಅದರಲ್ಲಿ ಅನ್‌ಸರ್ಟ್ಟೆನಿಟಿ ಇರಕೂಡದು. ಟೆನೆಂಟ್ ವರ್ಗದ ಮೇಲೆ ಹೆಚ್ಚಿಗೆ ಅನ್ಯಾಯ ಆಗಕೂಡದು. ಇನಾಂ ಅಬಾಲಿಷನ್ ಆಕ್ಟ್ ಕೆಳಗೆ ಏನು ಪರಿಹಾರ ಕೊಟ್ಟಿದೆ, ಅದೇ ಪರಿಹಾರ ಈಗಲೂ ಕೂಡ ಕೊಡಬೇಕು. ಸರ್ಕಾರಕ್ಕೆ ಬರತಕ್ಕಂಥ ಪ್ರೀಮಿಯಂ ಏನು ಇದೆ ಅದನ್ನು ಸರ್ಕಾರಕ್ಕೆ ಕೊಡಬೇಕಾಗುತ್ತದೆ. ಪರ್ಮನೆಂಟ್ ಟೆನೆಂಟ್ಸ್, ಪ್ರೊಟೆಕ್‌ಟೆಡ್ ಟೆನೆಂಟ್ಸ್ ಮತ್ತು ಕಾಮನ್ ಟೆನೆಂಟ್ಸ್ ಈ ಮೂರು ವರ್ಗಗಳು ಏನು ಇವೆ, ಅವುಗಳಿಗೆ ಕೊಡತಕ್ಕ ಸವಲತ್ತುಗಳು ಕೊಡಬೇಕು. ಲ್ಯಾಡ್ ರೆವಿನ್ಯೂ ಏನಿದೆ ಅದರ ಆರು ಪಟ್ಟಿಗಿಂತ ಹೆಚ್ಚಿಗೆ ಸರ್ಕಾರ ತೆಗೆದುಕೊಳ್ಳಕೂಡದು ಇದಕ್ಕೆ ಒಪ್ಪಿದರೆ ಸರ್ಕಾರಕ್ಕೆ ಹಾನಿಯಾಗುವುದಿಲ್ಲ. ಪ್ರೊಟೆಕ್‌ಟೆಡ್ ಟೆನೆಂಟ್ಸ್‌ಗೆ ಸಾಕಷ್ಟು ಸವಲತ್ತು ಕೊಟ್ಟಂತಾಗುತ್ತದೆ. ಒಂದೇ ಮನೆಯಲ್ಲಿ ಪಾಸ್‌ಮಾಡಿದಂಥ ಕಾಯಿದೆಯಲ್ಲಿ ಡಿಸ್ಕ್ರಿಮಿನೇಷನ್ ಏಕೆ ಮಾಡುತ್ತೀರಿ ? ಇವತ್ತು ಟೆನೆಂಟ್ ಯಾವ ಭೂಮಿ ಉಳುತ್ತಾನೆ, ಅವನು ಇನಾಮುದಾರರ ಟೆನೆಂಟ್ ಆಗಿರಲಿ ಅಥವಾ ಸರ್ಕಾರದ ಟೆನೆಂಟ್ ಆಗಿರಲಿ ಅಥವಾ ಖಾಸಗಿ ಲ್ಯಾಂಡ್ ಲಾರ್ಡ್ ಟೆನೆಂಟ್ ಆಗಿರಲಿ ಅದನ್ನು ನೋಡಬೇಕಾಗಿಲ್ಲ. Tenant is a tenant. ನಾವು ಟಿಲ್ಲರಿಗೆ ಓನರ್‌ಶಿಫ್ ರೈಟ್‌ಕೊಡುತ್ತಾ ಇದ್ದೇವೆ. ಉಳುವವನೇ ಹೊಲದ ಒಡೆಯ ಎಂದು ಹೇಳುವಾಗ, ನೀವು ಇನಾಂದಾರರ ಟೆನೆಂಟ ಆದರೆ ಲ್ಯಾಂಡ್ ರೆವಿನ್ಯೂ ಕಡಿಮೆ ತೆಗೆದುಕೊಳ್ಳುತ್ತೇವೆ, ಖಾಸಗಿ ಮಾಲೀಕರ ಹತ್ತಿರ ಟೆನೆಂಟ್ಸ್ ಇದ್ದರೆ, ಅದಕ್ಕಿಂತ ಹೆಚ್ಚಿಗೆ ತೆಗೆದುಕೊಳ್ಳುತ್ತೇವೆ ಎಂದರೆ, ಡಿಸ್ಕ್ರಿಮಿನೇಷನ್‌ಮಾಡಿದಂತಾಗುತ್ತದೆ. ಕೋರ್ಟಿನಲ್ಲಿ ಓಪನ್ ಚಾಲೆಂಜ್‌ಗೆ ಸ್ಕೋಪ್ ಕೊಟ್ಟಂತಾಗುತ್ತದೆ. ಲೀಗಲ್ ಆಸ್ಪೆಕ್ಟ್ ಹೇಳುತ್ತೇನೆ. ನೈತಿಕ ಆಸ್ಪೆಕ್ಟ್ ಹೇಳುತ್ತಾ ಇಲ್ಲ. ಇಬ್ಬರು ಟೆನೆಂಟ್ಸ್‌ಗೂ ಓನರ್‌ಶಿಫ್ ಕನ್‌ಫರ್ಮ್ ಮಾಡುವಾಗ, ಇನಾಂ ಲ್ಯಾಂಡ್ಸ್ ಕಲ್ಟಿವೇಟ್‌ಮಾಡುವವರಿಗೆ ಕಡಿಮೆ ಪ್ರೀಮಿಯಂ ತೆಗೆದುಕೊಂಡು ಖಾಸಗಿ ಲ್ಯಾಂಡ್ ಲಾರ್ಡ್ಸ್ ಟೆನೆಂಟ್ಸ್ ಯಾರು ಇದ್ದಾರೆ, ಅವರ ಹತ್ತಿರ ಅದರ ನಾಲ್ಕರಷ್ಟು ಪ್ರೀಮಿಯಂ ತೆಗೆದುಕೊಂಡು ಎರಡು ತರಹ ಮಾಡಿದರೆ ಡಿಸ್ಕ್ರಿಮಿನೇಷನ್ ಆಗುತ್ತದೆ.

ಇದೇ ತಿಂಗಳಲ್ಲಿ ಇದೇ ಸದನದಲ್ಲಿ ನಾವೇನು ಈಗಾಗಲೇ ಒಂದು ಇನಾಂ ಅಬಾಲಿಷನ್ ಮಸೂದೆಯನ್ನು ಪಾಸ್ ಮಾಡಿದ್ದೇವೆ ಅಲ್ಲಿ ನಾವು ಏನು ಒಂದು ಪರಿಹಾರವನ್ನು ಸೂಚಿಸಿದ್ದೇವೋ ಅದಕ್ಕೂ ಮತ್ತು ನಾವೀದಿವಸ ಇಲ್ಲಿ ಪಾಸ್ ಮಾಡುತ್ತಿರುವ ಈ ಮಸೂದೆಯಲ್ಲಿ ಹೇಳತಕ್ಕ ಪರಿಹಾರಕ್ಕೂ ಒಂದಕ್ಕೊಂದಕ್ಕೆ ವ್ಯತ್ಯಾಸ ಇರಬಾರದೆಂದು ಹೇಳುತ್ತೇನೆ. ಈ ತಿದ್ದುಪಡಿಯನ್ನು ಮಾನ್ಯ ಸಚಿವರು ಒಪ್ಪಿಕೊಳ್ಳಬೇಕು ಎಂದು ಹೇಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ ಇನಾಂ ಗ್ರಾಮಗಳಲ್ಲಿರತಕ್ಕವರಿಗೆ ಕಡಿಮೆ ಪ್ರೀಮಿಯಂ ತೆಗೆದುಕೊಳ್ಳುತ್ತಿರುವಂತೆ ಇಲ್ಲಿಯೂ ಕಡಿಮೆ ಪ್ರೀಮಿಯಂ ತೆಗೆದುಕೊಳ್ಳಬೇಕೆಂದು ಒಂದು ಸಲಹೆಯನ್ನು ಮಾಡುತ್ತಿದ್ದಾರೆ. ಆದರೆ ಅಲ್ಲಿ ಇನಾಂದಾರ ಭೂಮಿಯನ್ನು ಅನುಭವಿಸುತ್ತಿರಲಿಲ್ಲ. ಆದರೆ ಇವರು ಹೇಳುತ್ತಿರುವ ಕಡೆ ಭೂಮಾಲೀಕ ಪೂರಾ ಕಂದಾಯವನ್ನು ಸರ್ಕಾರಕ್ಕೆ ಕೊಡುತ್ತಿದ್ದ. ಆದರೆ ಆ ಇನಾಂಗ್ರಾಮಗಳಲ್ಲಿದ್ದ ಸಂದರ್ಭ ಮತ್ತು ಬೇರೆ ಗ್ರಾಮಗಳಲ್ಲಿದ್ದ ಸಂದರ್ಭ ಬೇರೆ ಬೇರೆ ಆದ್ದರಿಂದ ಇವರು ತಂದಿರುವ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಮಾನ್ಯ ಸದಸ್ಯರು ತಮ್ಮ ತಿದ್ದುಪಡಿಯನ್ನು ದಯಮಾಡಿ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಮಾನ್ಯ ಪಾಟೀಲರು ತಿದ್ದುಪಡಿ ತರುವುದೇನೋ ಸಹಜವಾದ್ದೇ. ಆದರೆ ಸೆಲೆಕ್ಟ್ ಸಮಿತಿಯಲ್ಲಿದ್ದ ಮಾನ್ಯ ಕಾಗೋಡು ತಿಮ್ಮಪ್ಪನವರೂ ಕೂಡ ತಿದ್ದುಪಡಿ ತಂದಿರುವುದು ಬಹಳ ಆಶ್ಚರ್ಯ. ಅವರು ಹೇಳುತ್ತಿರುವುದನ್ನೇ ನಾನೂ ನನ್ನ ತಿದ್ದುಪಡಿಯಲ್ಲಿ ಅಡಕ ಮಾಡಿರುತ್ತೇನೆ. ಅವರು ಹೇಳುತ್ತಿರುವುದಕ್ಕೂ ನಾನು ಹೇಳುತ್ತಿರುವುದಕ್ಕೂ ಯಾವ ವ್ಯತ್ಯಾಸವೂ ಇಲ್ಲ. ನಾನು ನನ್ನ ತಿದ್ದುಪಡಿಯಲ್ಲಿ ವಿಷಯವನ್ನು ವಿವರವಾಗಿ ತಿಳಿಸಿದ್ದೇನೆ. ಕ್ಲಾಜ್ ೪೮(ಎ) ೭ ರಲ್ಲಿ ಹೀಗಿದೆ. The person to be registered as an occupant shall pay to the State Government as premium an amount equal to the amount payable for the land under Section 47.

ಇದನ್ನೇ ನಾನು ವಿವರಿಸಿ ಹೇಳಿದ್ದೇನೆ. ಇಲ್ಲಿ ಗೇಣಿಯು ೧೫ ರಷ್ಟು ಪ್ರೀಮಿಯಂ ಇರಬೇಕೆಂದೂ ಮತ್ತು ಕ್ಲಾಜ್ ೪೭ (೩)ರಲ್ಲಿ ಹೇಳಿರುವಂತೆ ಭೂಮಿಯ ಮೇಲೆ ಆ ಭೂಮಾಲೀಕ ಏನಾದರೂ ಪರ್ಮನೆಂಟ್ ಸ್ಟ್ರಕ್ಚರನ್ನು ಮಾಡಿದ್ದರೆ ಆದರೆ ಬೆಲೆ ಸಹಾ ಕೊಡಬೇಕೆಂಬುದನ್ನು ಇದರಲ್ಲಿ ವಿವರಿಸಿದ್ದೇನೆ.

ಶ್ರೀ ವಿ. ಎನ್ ಪಾಟೀಲ್.—ಒಂದೊಂದು ಬಿಲ್ಲಿನಲ್ಲಿ ಒಂದೊಂದು ರೀತಿ ಕಾನೂನು ಮಾಡಬಾರದು ಎಂಬುದನ್ನು ನಾನು ಹೇಳಿದೆ. ಎರಡೂ ಸಂದರ್ಭಗಳಲ್ಲಿ ಕಾಂಪೆನ್‌ಸೇಷನ್ ಕೊಡತಕ್ಕ ಪ್ರಶ್ನೆ ಬಂದಿರುವುದರಿಂದಲೂ ಮತ್ತು ಎರಡೂ ಕಡೆಗಳಲ್ಲಿ ಗೇಣೀದಾರರೇ ಇರುವುದರಿಂದ ಈ ಪ್ರೀಮಿಯಂ ಕೂಡ ಎರಡು ಆಕ್ಟ್‌ಗಳಲ್ಲಿ ಒಂದೇ ಸಮನಾಗಿರಲೆಂಬುದು ನನ್ನ ವಾದ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ನಿಮ್ಮ ವಾದವನ್ನು ಒಪ್ಪಿದರೂ ನನ್ನ ತೀರ್ಮಾನ ತಮಗೆ ವಿರುದ್ಧವಾಗಿದೆ.

ಆದರೆ ಶ್ರೀ ಶಾಮಣ್ಣನವರು ಹೊಸದಾಗೀ ಒಂದು ಬಿಲ್ಲನ್ನು ತರಬಹುದಾಗಿತ್ತೆಂದು ಹೇಳಿದರು. ನನಗೂ ಹಾಗೆಯೇ ಅನ್ನಿಸುತ್ತಿದೆ. ಆದರೆ ಅದರಿಂದ ಇನ್ನೇನು ಹೊಸ ಸಮಸ್ಯೆಗಳು ಉದ್ಭವವಾಗುತ್ತವೆಯೋ ಎಂದು ಹೀಗೆ ಮಾಡಿದ್ದಾಯಿತು. ಒಟ್ಟಿನಲ್ಲಿ ನನ್ನ ಉದ್ದೇಶ ಜನರಿಗೆ ಅನುಕೂಲವಾಗಬೇಕೆಂಬುದು ಮುಖ್ಯ.

ಇನ್ನು ಟ್ರೈಬ್ಯುನಲ್ ರಚನೆಯಲ್ಲಿ ಹಳ್ಳಿಯ ಜನರಿಗೆ ಕಾನೂನು ಗೊತ್ತಿರುವುದಿಲ್ಲ ಮತ್ತು ಕಾನೂನು ಬಲ್ಲವರನ್ನೇ ಟ್ರೈಬ್ಯುನಲ್ಲಿಗೆ ಹಾಕಬೇಕು ಮತ್ತು ಅಪೀಲಿಗೆ ಅವಕಾಶ ಮಾಡಿಕೊಡಬೇಕೆಂದು ತಿದ್ದುಪಡಿಗಳನ್ನು ತಂದಿದ್ದಾರೆ. ಇಲ್ಲಿ ಇರತಕ್ಕ ಮುಖ್ಯ ಪ್ರಶ್ನೆ ಗೇಣಿದಾರ ಯಾರು ಎಂಬುದನ್ನು ನಿರ್ಧರ ಮಾಡುವುದು, ಅದರ ಜೊತೆಗೆ ಗೇಣೀದಾರ ಗೇಣೀದಾರರ ನಡುವೆ ವ್ಯಾಜ್ಯಗಳಿದ್ದರೆ ಅದನ್ನು ಬಗೆಹರಿಸುವುದು ಮತ್ತು ಗೇಣೀದಾರನಿಗೂ-ಭೂಮಾಲೀಕರ ನಡುವೆ ವಿವಾದಗಳಿದ್ದರೆ ಅದನ್ನು ಬಗೆಹರಿಸುವುದು, ಇಂಥ ಕಡೆಗಳಲ್ಲಿ ಕಾನೂನು ವಿಚಾರವೇ ಬರುವುದಿಲ್ಲ ಕಾನೂನು ಪ್ರಶ್ನೆ ಎಲ್ಲಿ ಉದ್ಭವವಾಗುತ್ತದೆ ಎಂಬುದನ್ನು ಪರಿಶೀಲನೆ ಮಾಡಿ ಅವರು ಹೇಳಿದಂತೆ ಅಪೀಲಿಗೆ ಬೇರೆ ಕಡೆ ಪ್ರಾವಿಜನ್ ಮಾಡಲಾಗಿದೆ. ಆದರೆ ಟ್ರೈಬ್ಯುನಲ್‌ನಲ್ಲಿ ತಪ್ಪು ತೀರ್ಮಾನ ಆದರೆ ಅದನ್ನು ಸರಿಪಡಿಸುವುದಕ್ಕೆ ಅಪೀಲಿಗೆ ಅವಕಾಶವಿರಲೆಂದು ಹೇಳಿದ್ದಾರೆ. ಆದರೆ ಅದನ್ನೆಲ್ಲಾ ಟ್ರೈಬ್ಯುನಲ್‌ನಲ್ಲಿ ತೀರ್ಮಾನ ಮಾಡುವುದಕ್ಕೆ ಅವಕಾಶ ಮಾಡಿದ್ದೇವೆ. ನಮ್ಮ ಶಾಸನ ಸಭೆಯಲ್ಲೇ ಸುಮಾರು ೭೦-೮೦ ಜನ ವಕೀಲರಿದ್ದಾರೆ. ಇವರು ಅಲ್ಲಿ ಬರತಕ್ಕ ವಿವಾದಗಳನ್ನು ಸಹಾನುಭೂತಿಯಿಂದ ಪರಿಶೀಲಿಸಿ ತೀರ್ಮಾನ ಕೊಡುತ್ತಾರೆ. ಹಾಗೇನಾದರೂ ಇವರು ಗೇಣೀದಾರನ ವಿರುದ್ಧ, ಅಂದರೆ ನ್ಯಾಯವಾಗಿಯೂ ಒಬ್ಬ ಗೇಣೀದಾರನಾಗಿದ್ದನವನ ವಿಚಾರದಲ್ಲಿ ಇವರು ನ್ಯಾಯವಾದ ರೀತಿಯಲ್ಲಿ ತೀರ್ಮಾನ ಕೊಡದಿದ್ದರೆ ನಾಳೆ ಇವರು ಮತ್ತೆ ರಾಜಕೀಯಕ್ಕೆ ಕಾಲಿಡುವುದು ಬಹಳ ಕಷ್ಟವಾಗುತ್ತದೆ. ಜನರ ವಿಶ್ವಾಸವನ್ನು ಅಷ್ಟು ಸುಲಭವಾಗಿ ಇವರು ಕಳೆದುಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ಇವರು ಸಾಧಾರಣವಾಗಿ ಯಾರಿಗೂ ಅನ್ಯಾಯವಾಗದಂತೆ ತೀರ್ಮಾನ ಮಾಡುತ್ತಾರೆಂಬ ಭರವಸೆ ತಮಗೆ ಕೊಡಬಲ್ಲೆ. ಆದುದರಿಂದ ಮಾನ್ಯ ಸದಸ್ಯರು ಕೊಟ್ಟಿರತಕ್ಕ ತಿದ್ದುಪಡಿಗಳ ಅಗತ್ಯವಿಲ್ಲ. ಅವುಗಳನ್ನು ಅವರು ದಯಮಾಡಿ ವಾಪಸ್ಸು ತೆಗೆದುಕೊಂಡು ನನ್ನ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಆ ಟ್ರೈಬ್ಯುನಲ್‌ನಲ್ಲಿ ಕೆಲಸ ಮಾಡತಕ್ಕವರಿಗೆ ಅಸಿಸ್ಟ್ ಮಾಡಲು ಒಳ್ಳೆ ಐ.ಎ.ಎಸ್. ಅಧಿಕಾರಿಗಳನ್ನೇ ಹಾಕಲಾಗುತ್ತದೆ. ಅದಕ್ಕೆ ಯಾರೂ ಅನುಮಾನ ಪಡಬೇಕಾದಿಲ್ಲ ಎಂದು ಹೇಳುತ್ತೇನೆ.

MADAM SPEAKER.—I will put the amendment of Sri V. N. Patil to the Vote of the House. The question is ;

"That for the proposed sub-section 7 of the section 48A the following shall be substituted.

"(7) the person to be registered as an occupant to the State Government as premium an amount equal to six times the land revenue in case permanent tenant, fifty times the land revenue in case of protected tenant and seventy times the land revenue in case of other tenants.

The amendment was negatived

MADAM SPEAKER.—No. 12 will put the amendment of Sri T. R. Shamanna The question is :

In clause 33 in sub-section (iii) (7) delete 'six' and insert 'twelve'.

The amendment was negatived

MADAM SPEAKER.—I will now put the amendment of the Revenue Minister The question is :

In the proposed section 48A.—

(i) in sub-section (1) after the words "Every such application shall", the words "save as provided in this Act", shall be inserted ;

(ii) in sub-section (4), for the words "direct by order that the applicant shall be registered as an occupant" the words "by order either grant or reject the application", shall be substituted ;

(iii) for sub-section (7), the following sub-section shall be substituted, namely.—

"(7). The person to be registered as an occupant shall pay to the State Government as premium an amount equal to fifteen times the net annual income referred to in sub-section (2) of section 47 plus the amount, if any, payable under sub-section (3) of that section :

Provided that the premium payable by a permanent tenant shall be six times the difference between the rent and the land revenue of the land."

The motion was adopted

MADAM SPEAKER.—I will now put the amendment of Sri T. R. Shamanna The question is :

That at page 50 in sub-section (1) of the proposed section 48, the following item shall be added :

"(iii) one of the members of the Tribunal shall be a person having legal knowledge and another shall be the Chairman of the Taluk Development Board or the local municipality.

That at page 52, for sub-section (6) of the proposed section 48A the following shall be substituted :

"(6) Subject to such rules as may be prescribed there shall be an appeal from the orders of the Tribunal to a competent court.

The following sub-section shall be added after sub-section (8).

"(9) Legal assistance shall be provided of the person who is the need of it is an enquiry before the Tribunal"

The amendment was negatived.

MADAM SPEAKER.—I will now put the amendment of Sri V. N. Patil. The question is :

That at page 52, in sub-section 7 of the proposed section 48A for the words "the amount payable for the land under section 47" the words "fifteen times that net annual income referred to in sub-section (2) of section 47 together with the amount due under sub-section (3) of section 47" shall be substituted.

The amendment was negatived.

MADAM SPEAKER —The question is :

"That clause 33, as amended, stand part of the Bill"

The motion was adopted.

Clause 33, as amended, was added to the Bill.

CLAUSE 34

MADAM SPEAKER.—There are no amendment to clam 3. The question is :

"That clause 34, do stand part of the Bill

The motion was adopted

Clause 34 was added to the Bill.

CLAUSE 35

MADAM SPEAKER.—There is an amendment.

SRI T. R. SHAMANA —I move :

"That after item (ii) the following item shall be added :

"(iii) After the proviso the following proviso shall be added :

Provided further that in the case of a small holder the amount payable to him shall be in lumpsum irrespective of the due to him"

MADAM SPEAKER.—Amendment moved :

"That after item (ii) the following item shall be added ;

' (iii) After the proviso the following proviso shall be added :

Provided further that in the case of a small holder the amount payable to him shall be in" lumpsum irrespective of the amount dueto him."

† ಶ್ರೀ ಟಿ. ಆರ್. ಶಾಮಣ್ಣ.— ಮಾನ್ಯ ಅಧ್ಯಕ್ಷಿಣಿಯವರೇ, ತಮಗೆ ತಿಳಿದಹಾಗೆ ಈಗ ಕೊಡುವ ಪರಿಹಾರ ಬಹಳ ಕಿಂಚಿತ್ತು. ಸುಪ್ರಿಂ ಕೋರ್ಟಿನಲ್ಲಿ ರೀಸನ್‌ಬಲ್ ಅಮೌಂಟ್ ಕೊಡಬೇಕೆಂಬ ತೀರ್ಮಾನವಾಗಿದ್ದರೂ ಬಹಳ ಕಡಿಮೆ ಪರಿಹಾರ ಕೊಡಲು ಈಗ ತೀರ್ಮಾನ ಮಾಡಿದ್ದಾರೆ. ಹತ್ತಾರು ಸಾವಿರ ರೂಪಾಯಿ ಕೊಡಬೇಕಾದವರಿಗೆ ಈಗ ಒಂದು-ಒಂದೂವರೆ ಸಾವಿರ ರೂಪಾಯಿ ಕೊಡಲಿದ್ದಾರೆ. ಕೊಡುವುದನ್ನು ಬಾಂಡ್ ರೂಪವಾಗಿ ಅಥವಾ ಕ್ಯಾಷ್ ರೂಪವಾಗಿ ಕೊಡಬಹುದು ಎಂದಿದೆ. ೨೦ ವರ್ಷದ ಕಂತುಗಳಲ್ಲಿ ಕೊಟ್ಟರೆ ಅದರಿಂದ ಜೀವನ ಮಾಡುವುದಕ್ಕಾಗುತ್ತದಿಲ್ಲ. ೨೦ ವರ್ಷವಾದ ಮೇಲೆ ಏನೂ ಉಳಿಯುವುದಿಲ್ಲ. ಆದುದರಿಂದ ಕೊಡುವುದನ್ನು ಲಂಪಸಂ ಆಗಿ ಕೊಟ್ಟರೆ ಸ್ವಲ್ಪ ಅನುಕೂಲವಾಗುವುದು. ಅದನ್ನು ಬ್ಯಾಂಕಿನಲ್ಲಿಟ್ಟು ಬರುವ ಬಡ್ಡಿಯನ್ನು ಜೀವನಕ್ಕೆ ಉಪಯೋಗ ಮಾಡಿಕೊಳ್ಳುವುದು ಅಥವಾ ವ್ಯಾಪಾರ ವಗೈರೆ ಮಾಡಬಹುದು. ಆದರಿಂದ ಜೀವನ ಮಾಡಬಹುದು. ೨೦ ಕಂತುಗಳಲ್ಲಿ ಕೊಟ್ಟರೆ ಪ್ರಯೋಜನವಾಗುವುದಿಲ್ಲ. ಇದಕ್ಕಾಗಿ ಬೇಕಾದರೆ ಡಿಬೆಂಚರ್ ಅಥವಾ ಸಾಲ ಎತ್ತಿ ಒಂದೇ ಸಲ ಕೊಡಬೇಕಾದ ಪರಿಹಾರದ ಮೊಬಲಗನ್ನು ಕೊಡುವುದು ಸೂಕ್ತ. ಮೊನ್ನೆ ಮಹಾರಾಜರುಗಳಿಗೆ ಸ್ವಲ್ಪ ಪರಿಹಾರ ಕೊಡಬೇಕೆಂದು ಮಾಡಿದರು. ನಾಳೆ ಬೇರೆ ಸರಕಾರ ಬಂದರೆ ಇದನ್ನೂ ಕೊಡಬೇಕಾಗಿಲ್ಲ ಎಂದು ಹೇಳಬಹುದು. ಹಾಗೆ ತೀರ್ಮಾನ ಮಾಡಿದರೆ ಬಡವರ ಗತಿಯೇನಾಗಬೇಕು ? ಇದನ್ನು ಯೋಚನೆ ಮಾಡಬೇಕು. ಈಗ ಕೊಡುವುದು ಬಹಳ ಕಡಿಮೆ. ಅದು ಕೈ ಹತ್ತುವುದಿಲ್ಲ, ಬಾಯಿ ಹತ್ತುವುದಿಲ್ಲ, ಇದರಿಂದ ಬಹಳ ಕಷ್ಟವಾಗುವುದು. ಕೊಡುವ ಪರಿಹಾರದಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಆದುದರಿಂದ ಕೊಡುವ ಪರಿಹಾರವನ್ನು ೨ ಲಕ್ಷ ಹೀಗೆ ಜಾಸ್ತಿ ಬರುವವರಿಗೆ ಕಂತು ಪ್ರಕಾರ ಕೊಡಬಹುದು, ಆದರೆ ಸಣ್ಣ ಹಿಡುವಳಿದಾರರಿಗೆ, ವಿಧವೆಯರಿಗೆ, ಬಡವರಿಗೆ ಕಂತುಗಳಲ್ಲಿ ಪಾವತಿ ಮಾಡಿದರೆ ಅನಾಕೂಲವಾಗುತ್ತದೆ. ರಾಷ್ಟ್ರೀಕೃತ ಬ್ಯಾಂಕುಗಳಿಂದ ಬೇಕಾದರೆ ತೆಗೆದುಕೊಂಡು ಒಂದೇ ಸಲ ಕೊಡುವುದು ಒಳ್ಳೆಯದು. ಹಾಗೆ ಮಾಡದೆ ಜನರನ್ನು ಬೀದಿ ಭಿಕಾರಿಗಳನ್ನಾಗಿ ಮಾಡುವುದು ಸೂಕ್ತವಲ್ಲ. ಆದುದರಿಂದ ಕೊಡುವ ಪರಿಹಾರವನ್ನು ಒಂದೇ ಸಲ ಕೊಡಬೇಕೆಂದು ಒತ್ತಾಯಮಾಡುತ್ತೇನೆ. ಅದಕ್ಕಾಗಿ ಈ ತಿದ್ದುಪಡಿ ತಂದಿದ್ದೇನೆ. ಲಂಪಸಂ ಆಗಿ ಕೊಟ್ಟರೆ ಕೈಗಾರಿಕೆ, ವ್ಯಾಪಾರ ಮುಂತಾದ್ದು ಮಾಡಬಹುದು. ಬಡ್ಡಿಗೆ ಹಾಕಿ ಜೀವನ ಮಾಡಬಹುದು. ಇದರಿಂದ ಅನುಕೂಲವಾಗುವುದು. ಆದರಿಂದ ಮರ್ಯಾದೆಯಿಂದ ಜೀವನ ಮಾಡಲು ಅನುಕೂಲವಾಗುವುದು. ಸಮಾಜವಾದಿ ಸಮಾಜ ಸರಕಾರ ಒಬ್ಬರನ್ನು ರಕ್ಷಣೆ ಮಾಡುವಾಗ ಮತ್ತೊಬ್ಬರನ್ನು ಬೀದಿ ಭಿಕಾರಿ ಮಾಡುವುದು ಸರಿಯಲ್ಲ ಭೂಮಿಯನ್ನು ವಶಪಡಿಸಿಕೊಳ್ಳುವಾಗ ಒಟ್ಟಿಗೆ ಮಾಲೀಕರಿಗೆ ಕೊಟ್ಟು ಅವರು ಅದರಿಂದ ಬೇರೆ ರೀತಿಯಲ್ಲಿ ಜೀವನ ಮಾಡಲು ಅವಕಾಶ ಮಾಡಿಕೊಡುವುದು ಸೂಕ್ತ, ಹಾಗೆ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎನ್. ಹುಚ್ಚ ಮಾಸ್ತಿಗೌಡ.—ಮಾನ್ಯ ಶಾಮಣ್ಣನವರು ಭಿಕಾರಿಗಳನ್ನಾಗಿ ಮಾಡುತ್ತಿದ್ದಾರೆ, ಹಾಗೆ ಮಾಡುವುದು ಸರಿಯಲ್ಲ, ಪರಿಹಾರ ಕೊಡುವಾಗ ಒಂದೇ ಸಾರಿ ಕೊಡಬೇಕು ಎಂದು ಹೇಳಿದರು. ನಾವು ಭಿಕಾರಿಗಳನ್ನಾಗಿ ಮಾಡುತ್ತಿಲ್ಲ. ಈಗಾಗಲೇ ಗೇಣಿದಾರ ಅನೇಕ ರೀತಿ ಹಿಂಸೆಗೆ ಒಳಗಾಗಿ ಅವನಿಗೇನೂ ಸಿಕ್ಕದ ಪರಿಸ್ಥಿತಿ ಇದೆ. ಅವನಿಗೆ ಹಕ್ಕು ಕೊಡುವಾಗ ಅವನಿಗೆ ಸ್ವಲ್ಪ ಮಟ್ಟಿಗಾದರೂ ಅನುಕೂಲವಾಗಿ ಅವನು ಉಳಿದುಕೊಳ್ಳುವಂತಾಗಬೇಕು ಎಂಬ ದೃಷ್ಟಿಯಿಂದ ಈ ಶಾಸನ ತಂದಿದ್ದೇವೆ. ಈಗ 2 ಸಾವಿರ ರೂಪಾಯಿಗಳವರೆಗೆ ಒಂದೇ ಮೊತ್ತದಲ್ಲಿ ಕೊಟ್ಟು ಉಳಿದಿರುವುದಕ್ಕೆ ಶೇಕಡ ನಾಲ್ಕು ವರೆಯಂತೆ ಬಡ್ಡಿ ಕೊಡಲು ಅವಕಾಶ ಮಾಡಲಾಗಿದೆ. ಇದಕ್ಕಿಂತ ಹೆಚ್ಚು ಅವಕಾಶ ಮಾಡಲು ಸರಕಾರಕ್ಕೆ ಒಂದೇ ಸಲ ಹಣ ಕೊಡುವ ಶಕ್ತಿಬೇಕು. ಕೋಟ್ಯಾಂತರ ರೂಪಾಯಿ ಹಣ ಬೇಕಾಗುವುದು. ಅಷ್ಟನ್ನು ಏಕ ಕಾಲದಲ್ಲಿ ಕೊಡುವುದು ಕಷ್ಟ, ಸಾಧ್ಯವಿಲ್ಲ ಎಂದು ಈಗಿರುವಂತೆ ವ್ಯವಸ್ಥೆ ಮಾಡಲಾಗಿದೆ. ಮಾನ್ಯ ಸದಸ್ಯರ ವಾದವನ್ನು ಒಪ್ಪಲು ಸಾಧ್ಯವಿಲ್ಲ ಎಂದು ಹೇಳಬೇಕಾಗಿದೆ.

MADAM SPEAKER.—The question is :

"That after item (ii) the following item shall be added :

"(iii) After the proviso the following proviso shall be added :

Provided further that in the case of a small holder the amount payable to him shall be in lumpsum irrespective of the amount due to him.

The amendment was negatived.

MADAM SPEAKER —The question is :

"That clause 35, do stand part of the Bill."

The motion was adopted.

Clause 35 was added to the Bill.

2-00 P. M.

CLAUSES 36 to 44

Madam Speaker:—Since there are no amendments to clauses 36 to 44 I will put them to vote. The question is :

" That clauses 36 to 44 both inclusive do stand part of the Bill"

The motion was adopted

Clauses 36 to 44 both inclusive, were added to the Bill.

CLAUSE 45

MADAM SPEAKER:—There are amendments given notice of by the Hon. Minister for Revenue Sri B.V. Kakkilaya, and Sri T.R. Shamanna

SRI N. HUTCHMASTAYGOWDA (Minister for Revenue) I beg to move:

" That in the proposed section 63.—

(i) in sub-section (2), the second proviso shall be omitted ;

(Madam Speaker)

(ii) sub-sections (7), (8) and (9) shall be renumbered as sub-sections (8), (9) and (10) respectively and before the renumbered sub-section (8) the following sub-section shall be inserted, namely:—

'(7) (a) No educational, religious or charitable institution or society or trust of a public nature, capable of holding dropert· formed for a charitable, religi us or educational purpose shall hold land except where the income of the land is appropriated solely for the institution er the society or the trust concerned. Where the land is so held by such institution, society or trust, the ceiling area shall be twenty units ;

(b) If any question arises whether–the income of the land is solely appropriated for the institution, society or trust, it shall be decided by the prescribed authority The decision of the prescribed authority shall be final. where the prescribed authority decides that the income is not so appropriated, the land held by the institution, society or trust shall be deemed to be surplus land and the provisions of sections 66 to 76 shall, so far as may be apply to the surrender to and vesting in the State Government of such land The provisions of this sub-section shall have effect notwithstanding anything in this Act. "

(iii) in sub-section (8) in clause (b) for the words " decision of the State Government " the words " decision of the prescribed authority " shall be substituted.

(iv) For sub-section (9), the follwing sub section shall be substituted namely:—

"(9) subject to the provisions of Section 79B in the case of any person holding land cultivated by plantation crops, the ceiling area in respect of other land held by him shall be determined taking into consideration, the agricultrural land referred to in item (ii) of the explanation to section 104 "

(v) for sub-section (10), the following sub section shall be substituted, namely:—

"(10) Not with standing anything in the preceding sub section if any person has—

(i) after the 18th November 1961 and be fore the 24th January 1971 transferred any land the extent of which if added to the other land retained by him could have been deemed to be surplus land before the date of commencement of the Amendment Act ; or

(ii) after the 24th January 1971 transferred any land, other wise than by partition or by donation to the Mysore Bhoodan Yagna Board stablished under the Mysore Bhoodan Yagna Act, 1963 (Mysore Act 34 of 1963) or by sale to the tenant of such land in conformity

with any law for the time being in force, than in calculating the ceiling area which that person is entitled to hold, the aea so transferred shall be taken into account and the land exceeding the cailing area so calculated shall be deemed to be in excess of the cailing area notwithstanding that land remaining with him may not in fact be in excsss of the ceiling area.

If by reason of such transfer the person's holding is less then the area so calculated to be in excess of the ceiling area, then all his lands shall be deemed to be surplus land and the provisions of sections 66 to 76 shall, as far as may be apply to the surrender to and vesting in the State Government of such excess land.

Explanation:—For purposes of this sub-Section the land shall be deemed to have been transferred if it has been transferred if it has been transferred by act of parties (whether by sale, gift, mortgage with possession, exchange, lease, or any other kind of disposition made inter vivos)."

MADAM SPEAKER:—Amendment moved.

" That in the proposed section 63.—

(i) In sub-section (4), the second proviso shall be omitted ;

(ii) Sub-sections (7), (8) and (9) shall be renumbered as sub sections (8), (9) and 10 respectively and before the renumbered sub-section (8), the following sub-section shall be inserted, namely:—

' (7) (a) No educational, religious or charitable institution or society or trust of a public nature, capable of holding property formed for a charitable, religious or educational purpose shall hold land except where the income of the land is appropriated solely for the institution or the society or the trust concerned. Where the land is so held by such institution, society or trust, the ceiling area shall be twenty units ;

(b) If any question arises whether the income of the land is solely appropriated for the institution, society or trust, it shall be decided by the prescribed authority. The decision of the prescribed authority shall be final where the preseribed authority decides that the income is not so appropriated, the land held by the institution, society or trust shall be deemed to be surplus land and the provisisns of sections 66 to 76 shall, so far as may be apply to the surrender to and vesting in the State Goverament of such land. The provisions of this sub-section shall have effect notwithstanding any thing in this Act."

(iii) In sub-section (8) in clause (b) for the words " decision of the State Government " the words " decision of the prescribed aurhority " shall be substituted.

(Madam Speaker)

(iv) For sub-section (9), the following sub-section shall be substituted namely:—

"(9) subject to the provisions of Section 79B in the case of any person holding land cultivated by plantation crops, the ceiling area in respect of other land held by him shall be determined taking into consideration, the agricultural land referred to item (ii) of the explanation to section 104."

(v) for sub-section (10) the following sub-section shall be substituted, namely:—

(10) Notwithstanding anything in the preceding sub-section if any person has—

(i) after the 18 th November 1961 and before the 24th January 1971 transferred any land the extent of which if added to the other land retained by him could have been deemed to be surplus land before the date of commencement of the Amendment Act ; or

(ii) after the 24th January 1971 transferred any land, otherwise than by partition or by donation to the Mysore Bhoodan Yagna Board etablished under the Mysore Bhoodan Yagna Act, 1963(Mysore Act 34 of 1963) or by sale to the tenant of such land in conformity with any law for the time being in force, then in calulating the ceiling area which that person is entitled to hold the rea so transferred shall be taken into account and the land exceeding the ceiling area so calculated shall be deemed to be in excess of the ceiling area notwithstanding thht the land remaining with him may not in fact be in excess of the ceiling area.

If by reason of such transfer the person's holding is less than the area so calculated to be in excess of the ceiling area, then all his lands shall be deemed to be surplus land and the provisions of sections 66 to 76 shall, as far as may be apply to the surrender to and vesting in the State Government of such excess land.

Explanation:—For purposes of this sub section the land shall be deemed to have been transferred it has been transferred by act of parties (whether by sale, gift, mortgage with possession, exchange, lease, or any other kind of disposition made inter vivos.)"

SRI B. V. KAKKILAYA.—Since I have given amendment to the amendment I do not move my original amendment. I now only move the following amendment to the amendment.

"That in the proposed amendment to section 63, the proposed item No. (ii) shall be omitted."

MADAM SPEAKER.—Amendment moved.

"That in the proposed amendment to section 63, the proposed item No. (ii) shall be omitted."

SRI T. R. SHAMANNA.—I move the following amendment to the amendment by the Hon. Minister for Reveneve.

"That in clause 45, in sub-clause (ii) (7), after twenty units add the following proviso, namely.—

"Provided that in case of institutions carrying on public utility functions the ceiling may be raised by framing rules by the concerned authority to have land to the extent necessary for the benefit and use of the association or institution as rebuired for carrying on its services particularly educational and other philanthropical works."

MADAM SPEAKER.—Amendment moved.

"That in clause 45, in sub-clause (ii) (7), after twenty units, add the following proviso, namely.—

"Provided that in case of institutions carrying on public uttlity functions the ceiling may be raised by framing rules by the concerned authority to have land to the extent necessary for the benefit and use of the association or institution as required for carrying on its services particularly educational and other philanthropical works."

SRI T. R. SHAMANNA.—I move the following amendment,

"That at page 58, in the proposed section 63 after sub-clause (7) the following sub clause shall be inserted.

"(7A) In the case of plantations the ceiling shall be 40 units."

"That at page 59 sub-section (8) of the proposed section 63 shall be omitted."

MADAM SPEAKER.—Amendment moved.

"That at page 58, in the proposed section 63 after sub clause (7) the following sub-clause shall be inserted.

'(7A) In the case of plantations the ceiling shall be 40 units."

"That at page 59 sub-section (8) of the proposed section 63 shall be omitted."

†ಶ್ರೀ ಎಸ್. ಹುಚ್ಚಮಾಸ್ತಿಗೌಡ.—ನನ್ನ ತಿದ್ದುಪಡಿಯ ಉದ್ದೇಶ, ಧಾರ್ಮಿಕ ಸಂಸ್ಥೆಗಳು, ವಿದ್ಯಾ ಸಂಸ್ಥೆಗಳು ಇಂಥವುಗಳು ಅನೇಕ ಇವೆ. ಇವುಗಳಲ್ಲಿ ಯಾವುವು ಸಾರ್ವಜನಿಕರ ಹಿತಕ್ಕಾಗಿ ಕೆಲಸಮಾಡುತ್ತಿವೆಯೋ, ಅವುಗಳ ಭೂಮಿಯಿಂದ ಬರತಕ್ಕ ವರಮಾನವನ್ನು ಪೂರ್ಣವಾಗಿ ಅದೇ ಕೆಲಸಕಾರ್ಯಗಳಿಗೆ ವಿನಿಯೋಗ ಮಾಡುತ್ತಿವೆಯೋ ಅಂಥ ಸಂಸ್ಥೆಗಳು ೨೦ ಯೂನಿಟ್‌ಗಳು ಎಂದರೆ, ಎರಡು ಸೀಲಿಂಗ್‌ನಷ್ಟು ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಇದೆ. ಇದು ಒಂದನೆಯ ತಿದ್ದುಪಡಿ. ಎರಡನೆಯದು, ಈ ಅವಕಾಶ ಕೊಟ್ಟಮೇಲೆ ಅವರು ಏನಾದರೂ ಈ ಉತ್ಪನ್ನವನ್ನು ಬೇರೆ ವಿಧವಾಗಿ ಉಪಯೋಗಿಸುತ್ತಿದ್ದಾರೆಯೋ ಇಲ್ಲವೋ ಎನ್ನುವುದನ್ನು ತಿಳಿದುಕೊಳ್ಳುವುದಕ್ಕೋಸ್ಕರ ಸರ್ಕಾರ ಯಾರನ್ನಾದರೂ ಅಧಿಕಾರಿಯನ್ನು ಗೊತ್ತು ಮಾಡಿ, ತಿಳಿದುಕೊಳ್ಳುವುದಕ್ಕೆ ಅವಕಾಶ ಇರಬೇಕು. ಅವರು ತಿಳಿದುಕೊಂಡು ಸರ್ಕಾರಕ್ಕೆ ಏನು ವರದಿಕೊಡುತ್ತಾರೋ ಅದು ಅಂತಿಮ ತೀರ್ಮಾನವಾಗಬೇಕು. ಆ ತೀರ್ಮಾನದ ಪ್ರಕಾರ ಏನಾದರೂ ಅವರು ವರಮಾನವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ, ಅಥವಾ ಸಂಸ್ಥೆಯ ಕೆಲಸಕ್ಕೆ ಉಪಯೋಗಿಸುತ್ತಿಲ್ಲ ಎನ್ನುವುದು ಗೊತ್ತಾದರೆ, ಅವರ ಭೂಮಿಯನ್ನು ಸರ್ಪ್ಲಸ್ ಲ್ಯಾಂಡ್ ಎಂದು ಗೊತ್ತುಮಾಡಿ ಅದನ್ನು ವಾಪಸ್ ತೆಗೆದುಕೊಳ್ಳಬೇಕು ಎಂದು ಹೇಳಿ ಈ ತಿದ್ದುಪಡಿಯಲ್ಲಿ ನಮೂದು ಆಗಿದೆ.

ಇನ್ನು ಸಕ್ಕರೆ ಕಾರ್ಖಾನೆಗೆ ಕೊಡತಕ್ಕ ಜಮೀನು ಕೂಡ ಯಾವ ಉದ್ದೇಶಕೋಸ್ಕರ ಕೊಟ್ಟಿತ್ತೋ ಆ ಉದ್ದೇಶಕ್ಕೆ ವಿನಿಯೋಗ ಆಗುತ್ತಿದೆಯೋ ಅಲ್ಲವೋ ಎನ್ನುವುದನ್ನು ತಿಳಿದುಕೊಳ್ಳುವುದಕೋಸ್ಕರ 'ಸ್ಟೇಟ್ ಗೌವರ್ನ್‌ಮೆಂಟ್' ಎಂದು ಇದ್ದುದನ್ನು 'ಪ್ರಿಸ್ಕೈಬ್ಡ್ ಅಥಾರಿಟಿ' ಎಂದು ಬದಲಾಯಿಸಲು ತಿದ್ದುಪಡಿ ತಂದಿದ್ದೇನೆ. ಇನ್ನು ಮೂರನೆಯದು ೧೯೭೦ನೇ ಇಸ್ವಿ ನವೆಂಬರ್ ೧೮ನೇ ತಾರೀಖಿನಿಂದ ೧೯೭೧ನೇ ಇಸ್ವಿ ಜೂನ್ ೨೪ನೇ ತಾರೀಖಿನವರೆಗೆ ಎಷ್ಟು ಸೀಲಿಂಗ್ ಏರಿಯಾ ಇತ್ತು ಆ ಭೂಮಿಗಿಂತ ಹೆಚ್ಚಿಗೆ ಇದ್ದಂಥ ಸಂದರ್ಭದಲ್ಲಿ ಮಾರಾಟ ಮಾಡುವುದಕ್ಕೆ ಪ್ರತಿಬಂಧಕವಿತ್ತು. ಸರೆಂಡರ್ ಮಾಡದೇ ಮಾರಾಟ ಮಾಡಿಕೊಂಡಿದ್ದರೆ ಮಾರಾಟ ಮಾಡಿರುವ ಭೂಮಿಯನ್ನು ಅವನಲ್ಲಿರತಕ್ಕ ಭೂಮಿಯನ್ನು ಎರಡೂ ಸೇರಿಸಿ ಒಟ್ಟು ಅವನಲ್ಲಿರತಕ್ಕ ಭೂಮಿ ಎಂದು ಪರಿಗಣನೆಗೆ ತೆಗೆದುಕೊಂಡು ಅವನ ಹತ್ತಿರ ಇಟ್ಟುಕೊಂಡಿರತಕ್ಕ ಭೂಮಿ ಅಷ್ಟನ್ನೂ ಸರ್ಕಾರದ ವಶಕ್ಕೆ ತೆಗೆದುಕೊಳ್ಳುವುದಕ್ಕೆ ಅಥವಾ ಮುಟ್ಟುಗೋಲು ಹಾಕಿಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದೆ. ಹಾಗೆಯೇ ೧೯೭೦ನೇ ಇಸ್ವಿ ಜನವರಿ ೨೪ನೇ ತಾರೀಖಿನಿಂದ ಆಗ ಗೊತ್ತು ಮಾಡತಕ್ಕ ಸೀಲಿಂಗ್ ಏರಿಯಾದ ಮೇಲೆ ಇದ್ದಂಥ ಭೂಮಿ ಮಾರಾಟ ಮಾಡಿದ್ದರೂ ಕೂಡ ಅದೇ ನಿರ್ಬಂಧವನ್ನು ಹಾಕಿದೆ. ಅಣ್ಣತಮ್ಮಂದಿರು ಅಥವಾ ಹಿಸ್ಸೆದಾರರು ಭಾಗ ಮಾಡಿಕೊಂಡಿದ್ದರೆ, ಭೂದಾನ ಯಜ್ಞ ಬೋರ್ಡಿಗೆ ಜಮೀನನ್ನು ಕೊಟ್ಟಿದ್ದರೆ ಅಥವಾ ಗೇಣಿದಾರರಿಗೆ ಮಾರಿದ್ದರೆ ಮಾತ್ರವೇ ವಿನಾಯಿತಿ ದೊರಕುತ್ತದೆ. ಒಂದು ಉದಾಹರಣೆ ಸಭೆಯ ಮುಂದೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ೧೦ ಎಕರೆ ಸೀಲಿಂಗ್ ಗೊತ್ತು ಮಾಡಿದ್ದೇವೆ. ೧೫ ಎಕರೆ ಭೂಮಿ ಇರುತ್ತದೆಂದು ಇಟ್ಟು ಕೊಳ್ಳೋಣ. ೧೦ ಎಕರೆ ಮೇಲಿರತಕ್ಕ ಭೂಮಿಯನ್ನು ಅವನು ಸರ್ಕಾರಕ್ಕೆ ಕೊಡಬೇಕು. ಅದಕ್ಕೆ ಬದಲಾಗಿ ೧೦ ಎಕರೆ ಭೂಮಿ ಮಾರಿಕೊಂಡು ಬಿಟ್ಟಿದ್ದರೆ ಅವನ ಹತ್ತಿರ ಉಳಿಯುವುದು ೫ ಎಕರೆ, ೫ ಎಕರೆ ಉಳಿದಿದ್ದರೂ ಕೂಡ ಎಷ್ಟು ಸರ್ಕಾರಕ್ಕೆ ಸರ್‌ಪ್ಲಸ್ ಲ್ಯಾಂಡ್ ಆಗಿ ಕೊಡಬೇಕಾಗಿತ್ತೋ ಸರೆಂಡರ್ ಮಾಡಬೇಕಾಗಿತ್ತೋ ಅದಕ್ಕೆ ಬದಲಾಗಿ ಅದನ್ನು ಮಾರಿ ಕೊಂಡಿರುವುದರಿಂದ ೫ ಎಕರೆ ಉಳಿದಿದ್ದರೂ ಕೂಡ ೫ ಎಕರೆ ಭೂಮಿ ಸರ್ಕಾರ ಮುಟ್ಟುಗೋಲು ಹಾಕಬೇಕಾಗುತ್ತದೆ. ಅವನಿಗೆ ಭೂಮಿ ಉಳಿಯದಿದ್ದರೂ ಮುಟ್ಟುಗೋಲ ಹಾಕಬೇಕಾಗಿ ಬರುತ್ತದೆ. ಇದು ಮೂಲ ಉದ್ದೇಶ. ಇದನ್ನೇ ನಾನು ಸಭೆಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಜಮೀನನ್ನು ಪರಭಾರ ಅಂದರೆ ಯಾರಾದರೂ ಇಬ್ಬರು, ಮೂರು ಜನ ಸೇರಿ ಯಾವುದೇ ರೂಪದಲ್ಲಿ ಪರಭಾರ ಮಾಡಿಕೊಂಡಿದ್ದರೂ ಕೂಡ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಒಂದೇ ವಿನಾಯಿತಿ ಏನು ಎಂದರೆ ಕೋರ್ಟಿನ ತೀರ್ಮಾನವಾಗಿ ಅವನಿಗೆ ಭೂಮಿ ಬಂದಿದ್ದರೆ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ. ಕೋರ್ಟ್ ಅವಾರ್ಡ್ಸ್‌ಗೆ ಪ್ರಯೋಜನವಾಗುವುದಕ್ಕೆ ವಿನಾಯಿತಿ ಇದೆ. ಇಷ್ಟು ತಿದ್ದುಪಡಿಯ ಉದ್ದೇಶ ಇದಕ್ಕೆ ಸಭೆ ಅಂಗೀಕಾರ ಕೊಡಬೇಕೆಂದು ಹೇಳುತ್ತೇನೆ

† ಶ್ರೀ ಬಿ. ವಿ. ಕಕ್ಕಿಲಾಯ.—ಸನ್ಮಾನ್ಯ ಅಧ್ಯಕ್ಷರೇ, ರೆವಿನ್ಯೂ ಸಚಿವರು ತಮ್ಮ ತಿದ್ದುಪಡಿಯಲ್ಲಿ ತಂದಿರತಕ್ಕ ಎರಡನೇ ಐಟಂ ತೆಗೆದುಹಾಕಬೇಂದು ತಿದ್ದುಪಡಿ ಕೊಟ್ಟಿದ್ದೇವೆ. ಇದರ ಮೇಲೆ ಸಾಕಷ್ಟು ಚರ್ಚೆ ಆಗಿರುವುದರಿಂದ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಒಂದೆರಡು ವಿಚಾರಗಳನ್ನು ತಮ್ಮ ಗಮನಕ್ಕೆ ತರಬೇಕೆಂದು ಇದ್ದೇನೆ. ವ್ಯವಸಾಯ ಮಾಡುತ್ತಾ ಇರುವವರಿಗೆ ತೊಂದರೆಯಾಗುವ ರೀತಿಯಲ್ಲಿ ಒಂದು ಕುಟುಂಬಕ್ಕೆ ಎಷ್ಟು ಬೇಕೋ ಅಷ್ಟು ಬಿಟ್ಟು ಹೆಚ್ಚಿನ ಜಮೀನನ್ನು ತೆಗೆದುಕೊಂಡು ಭೂಮಿ ಇಲ್ಲದವರಿಗೆ ಹಂಚಿಕೆಯಾಗಬೇಕು ಎಂಬುದು ಮುಖ್ಯ ಉದ್ದೇಶ. ಜೀವಂತ

ವ್ಯಕ್ತಿಗಳಿಗೆ ತೊಂದರೆ ಆಗುವುದನ್ನು ತಪ್ಪಿಸುವುದಕ್ಕೆ ಎಷ್ಟು ದೂರ ಹೋಗಬೇಕೋ ಅಷ್ಟು ಹೋಗುವುದು ನ್ಯಾಯ ಅದನ್ನು ಬಿಟ್ಟು ಸಂಸ್ಥೆಗಳಿಗೆ ಇಂಥ ವಿನಾಯಿತಿ ಕೊಟ್ಟು ಜೀವಂತ ವ್ಯಕ್ತಿಗಳಿಗೆ ಕೊಡುವ ಎರಡು ಪಟ್ಟು ಜಮೀನು ಅವುಗಳ ವಶದಲ್ಲಿ ಇಟ್ಟುಕೊಳ್ಳಬಹುದು ಎನ್ನುವ ಅಂಶಗಳನ್ನು ಸೇರಿಸಿರುವುದು ಈ ಶಾಸನದ ಮೂಲ ಉದ್ದೇಶಕ್ಕೆ ವಿರುದ್ಧವಾಗುತ್ತದೆ. ಒಂದನೆಯದಾಗಿ ನಾಲ್ಕು ಲಕ್ಷ ಎಕರೆ ಜಮೀನು ಬರುತ್ತದೆ ಎನ್ನುವ ಮಾತನ್ನು ಕಂದಾಯ ಸಚಿವರು ಹೇಳಿದರು. ಆದರೆ ಈ ರೀತಿ ಜೀವಂತ ವ್ಯಕ್ತಿಗಳಿಗೆ ತೊಂದರೆಯಾಗುವ ರೀತಿಯಲ್ಲಿ ನಿರ್ಜೀವ ಸಂಸ್ಥೆಗಳಿಗೆ ಜಮೀನು ಹಂಚುವುದಕ್ಕೆ ಪ್ರಯತ್ನಪಟ್ಟರೆ ಅದರಿಂದ ಹೆಚ್ಚಿನ ಜಮೀನು ಸರ್ಕಾರದ ವಶಕ್ಕೆ ಬರುವುದಿಲ್ಲ ಎಂದು ನಮಗೆ ಕಂಡುಬರುತ್ತದೆ. ಇನ್ನೊಂದು ಅಂಶ ಏನೆಂದರೆ ನಿನ್ನೆ ಇಲ್ಲಿ ಮಾತನಾಡುವಾಗ, ವಿರೋಧ ಪಕ್ಷದ ನಾಯಕರು ಸರ್ಕಾರದ ಗಮನಕ್ಕೆ ಒಂದು ವಿಷಯ ತೆಗೆದುಕೊಂಡು ಬಂದರು. ಇಂಥ ಸಂಸ್ಥೆಗಳಿಗೆ ತಾವು ಕೊಡುವುದು ಇದ್ದರೂ ಕೂಡ ಜೀವಂತ ವ್ಯಕ್ತಿಗಳಿಗೆ ಎಷ್ಟು ಕೊಡುತ್ತೀರಿ, ಅಷ್ಟು ಕೊಡಬಹುದು, ಅದಕ್ಕಿಂತ ಹೆಚ್ಚಿನ ಜಮೀನು ಕೊಡುವುದು ನ್ಯಾಯವಾದದ್ದು ಅಲ್ಲ ಎಂದು ಹೇಳಿದರು. ಈಗ ಎರಡರಷ್ಟು ಕೊಡಬೇಕೆಂದು ಹೇಳಿದ್ದೀರಿ. ಅದು ಎಷ್ಟು ಮಾತ್ರಕ್ಕೂ ಒಪ್ಪತಕ್ಕದ್ದು ಅಲ್ಲ. ಮೂರನೆಯ ಅಂಶ ಏನೆಂದರೆ ತಂದಿರುವ ತಿದ್ದುಪಡಿಯಲ್ಲಿ ಈ ಜಮೀನುಗಳಿಂದ ಬರುವಂಥ ಆದಾಯವನ್ನು ಪೂರ್ತಿಯಾಗಿ ಸಂಸ್ಥೆಗಳ ಉಪಯೋಗಕ್ಕೆ ವಿನಿಯೋಗಿಸತಕ್ಕದ್ದು, ಇಲ್ಲದಿದ್ದರೆ, ಅಂಥವರಿಗೆ ಜಮೀನು ಇರತಕ್ಕದ್ದಲ್ಲ ಎಂದು ಅದನ್ನು ತಾವೇ ತಿದ್ದುಪಡಿಮಾಡಿದರೆ ಇದ್ದುದರಲ್ಲಿ ಉತ್ತಮವಾಗಬಹುದು. ತಮ್ಮ ಉದ್ದೇಶ ಏನು ಇದೆ ಎಂದರೆ ಯಾವ ಉದ್ದೇಶಗಳಿಗೋಸ್ಕರ ಸಂಸ್ಥೆಗಳನ್ನು ರಚನೆ ಮಾಡಿದ್ದಾರೋ ಆ ಉದ್ದೇಶಗಳಿಗೋಸ್ಕರ ಆ ಉತ್ಪನ್ನ ವಿನಿಯೋಗ ಮಾಡಬೇಕು ಎಂಬುದು ನಾನು ಹೇಳುವುದು ಇಷ್ಟೇ ಅಲ್ಲಾ,

"appropriated solely for the institution or the society or the trust concerned"

ಎಂದೇ ಹೇಳುವ ಬದಲು,

"appropriated solely for the purpose for which the society or the institution is constituted."

ಎಂದು ಇದ್ದರೆ, ನಿಮ್ಮ ಉದ್ದೇಶ ಸ್ಪಷ್ಟವಾಗುತ್ತದೆ. ಸಂಸ್ಥೆಗಳು ಒಳ್ಳೆಯ ಉದ್ದೇಶಕ್ಕೆ ರಚನೆಯಾಗಿರಬಹುದು. ಬಂದ ಹಣವನ್ನು ಸಂಸ್ಥೆಗಳು ಆ ಉದ್ದೇಶಕ್ಕೆ ಉಪಯೋಗಿಸುತ್ತಾರೆ ಎಂದು ಯಾರೂ ಹೇಳುವ ಹಾಗಿಲ್ಲ. ಆದ್ದರಿಂದ ಆ ರೀತಿ ಬದಲಾವಣೆ ಮಾಡಬೇಕು. ಎಜುಕೇಷನ್ ರಿಲೀಜಿಯಸ್ ಮತ್ತು ಚಾರಿಟಬಲ್ ಇನ್‌ಸ್ಟಿಟ್ಯೂಷನ್ಸ್ ಒಟ್ಟಿಗೆ ಹಾಕಿದ್ದೀರಿ. ಎಜುಕೇಷನಲ್ ಮತ್ತು ಚಾರಿಟಬಲ್ ಆಸ್ಪತ್ರೆಗಳಿಗೆ ಸ್ವಲ್ಪ ವಿನಾಯಿತಿ ಕೊಡಬೇಕು ಎನ್ನುವ ಅರ್ಥದಿಂದ ಹಾಕಿದ್ದೀರಿ ಎಂದು ತಿಳಿದುಕೊಂಡಿದ್ದೇನೆ. ಸಾರ್ವಜನಿಕ ಅಭಿವೃದ್ಧಿ ಕೆಲಸಗಳನ್ನು ಮಾಡುವಂಥ ಸಂಸ್ಥೆಗಳ ಜೊತೆಯಲ್ಲಿ ರಿಲಿಜಿಯಸ್ ಇನ್‌ಸ್ಟಿಟ್ಯೂಷನ್ ಮತ್ತು ಮಠಾಧಿಪತಿಗಳನ್ನು ಸೇರಿಸಿದ್ದೀರಿ ಅವನ್ನು ಅಲ್ಲಿಂದ ತೆಗೆದುಹಾಕಿ ಎಂದು ನಾನು ಮತ್ತು ತಿಮ್ಮಪ್ಪನವರು ಹೇಳಿದ್ದೇವೆ. ಧರ್ಮದ ಹೆಸರಿನಲ್ಲಿ, ಸಾರ್ವಜನಿಕ ಉಪಯೋಗಕ್ಕೆ ಕೆಲಸಮಾಡುವ ಹೆಸರಿನಲ್ಲಿ ಧಾರ್ಮಿಕ ಸಂಸ್ಥೆಗಳು ಅಧರ್ಮವನ್ನು ನಡೆಸುವುದಕ್ಕೆ ಅವಕಾಶ ಕೊಡಬೇಡಿ, ಅದನ್ನು ತೆಗೆಯಬೇಕು. 20 ಯೂನಿಟ್‌ಗಳನ್ನು ಬದಲಾವಣೆ ಮಾಡಬೇಕು. ಇನ್ನು ಈ ಸಂಸ್ಥೆಗಳು ನಿಜವಾಗಿ ಸದುದ್ದೇಶಕ್ಕೆ ಉಪಯೋಗ ಮಾಡುತ್ತವೆಯೋ ಇಲ್ಲವೋ ಎಂಬುದನ್ನು ಕಂಡು ಹಿಡಿಯುವುದಕ್ಕೆ ಯಾವುದೋ ಒಂದು ಪ್ರಿಸ್ಕ್ರೈಬ್ಡ್ ಅಥಾರಿಟಿಯನ್ನು ನೇಮಕ ಮಾಡುತ್ತೇವೆಂದು ಹೇಳಿದ್ದೀರಿ. ಪ್ರಿಸ್ಕ್ರೈಬ್ಡ್ ಅಥಾರಿಟಿ ಎಂದರೆ ಯಾವರೀತಿ ಇರುತ್ತದೆ ? ಅದು ನ್ಯಾಯವಾದ ರೀತಿಯಲ್ಲಿ ತೀರ್ಮಾನ ಮಾಡುತ್ತದೆಯೋ ಇಲ್ಲವೋ ಎನ್ನುವುದು ನಮಗೆ ಭರವಸೆ ಬರುವುದಿಲ್ಲ. ಇದನ್ನು ನಿರ್ದಿಷ್ಟವಾಗಿ ಇಂಥ ಅಧಿಕಾರಿಗಳೇ ತೀರ್ಮಾನ ಮಾಡುತ್ತಾರೆ ಎನ್ನುವ ರೀತಿಯಲ್ಲಿ ಹಾಕಬೇಕು ಎನ್ನುವುದು ಕೂಡ ನನ್ನ ಇನ್ನೊಂದು ಸಲಹೆ. ನಾನು ಸೂಚನೆ ಮಾಡುವುದು ಇದನ್ನು ಪೂರ್ತಿಯಾಗಿ ಬದಲಾವಣೆ ಮಾಡಬೇಕು, ಅದು ಆಗದಿದ್ದರೆ ಇಷ್ಟಾದರೂ ಇಂಪ್ರೂವ್ ಮಾಡಬೇಕೆಂದು ಸೂಚನೆ ಮಾಡುತ್ತೇನೆ

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಧ್ಯಕ್ಷಿಣಿಯವರೇ, ಸಾಧಾರಣವಾಗಿ ಈ ಸದನವನ್ನು ಮೈಸೂರು ಲೆಜಿಸ್ಲೇಟಿವ್ ಅಸೆಂಬ್ಲಿ ಎನ್ನುವುದಕ್ಕೆ ಬದಲಾಗಿ ಕಾಂಗ್ರೆಸ್ ಸಭೆ ಎಂದು ಹೇಳಿಬಿಟ್ಟರೆ ಅನುಕೂಲ ಎಂದು ಕಾಣುತ್ತದೆ. ಏಕೆಂದರೆ ಈ ಬಿಲ್ ತರತಕ್ಕದ್ದು ಒಂದು, ನೀತಿ ಹೇಳತಕ್ಕದ್ದು ಒಂದು, ಮಾಡತಕ್ಕದ್ದು ಒಂದು. ನ್ಯಾಯವಾಗಿ ನಾವು ಯಾವುದಾದರೂ ಹೇಳಿದರೂ ಕೂಡ ಅದಕ್ಕೆ ಬೆಲೆ ಇಲ್ಲದೆ ಆಡಳಿತ ನಡೆಸುವ ಪಕ್ಷದವರಿಗೆ ಇಷ್ಟ ಪ್ರಕಾರ ನಡೆಯತಕ್ಕದ್ದು ಬಹಳ ಶೋಚನೀಯ ವಿಚಾರ.

(ಶ್ರೀ ಟಿ. ಆರ್. ಶಾಮಣ್ಣ)

ಮೊದಲನೆಯದಾಗಿ, ನಾವು ಅನೇಕ ಸಾರಿ ಒತ್ತಿ ಹೇಳಿದಾಗ ಧಾರ್ಮಿಕ ಸಂಸ್ಥೆಗಳಿಗೆ, ವಿದ್ಯಾಸಂಸ್ಥೆಗಳಿಗೆ ವಿನಾಯಿತಿ ಕೊಡಬೇಕು ಎಂದು ಕೇಳಿದಾಗ ಹಾಗೆಕೊಡುವುದಕ್ಕೆ ಆಗುವುದಿಲ್ಲ ಎಂದು ಹೇಳಿದರು. ಕಾರಣಾಂತರದಿಂದ ಯಾವರೀತಿ ಒತ್ತಡ ಬಂತೋ ಅದಕ್ಕೆ ಈಗ ಒಪ್ಪಿಕೊಂಡರು ಈಗ ಏನುಮಾಡಿದ್ದಾರೆ ಎಂದರೆ.—

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾವು ಮಾಡಿರುವುದು ತಪ್ಪು ಎಂದು ಒಪ್ಪಿಕೊಳ್ಳುತ್ತೀರಾ?

ಶ್ರೀ ಟಿ. ಆರ್. ಶಾಮಣ್ಣ.—ಸರಿಯಾದ ರೀತಿಯಲ್ಲಿ ಮಾಡಿಲ್ಲ ಎಂದು ಹೇಳುತ್ತೇನೆ. ಮಂತ್ರಿಗಳ ಮತ್ತೊಂದು ತಿದ್ದುಪಡಿಯನ್ನು ತಂದಿದ್ದಾರೆ, ಹೀಗೆ ಇದೆ.

> "Provided that in case of institutions carrying on public utility functions, the ceiling may be raised by framing rules by concerned authorities to have land to the extent necessary for the benefit or use of the Association or institution as required for carrying its services particularly the educational and other philanthropic works"

ಇಷ್ಟು ಮಾತ್ರ ಸ್ಪಷ್ಟವಾಗಿ ಹೇಳಬಲ್ಲೆ. ಈ ಸುಧಾರಣೆಯಿಂದ ಅನುಕೂಲಕ್ಕಿಂತ ಅನುಕೂಲವೇ ಹೆಚ್ಚು ಆಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಏಕೆಂದರೆ ೧೯೬೧ನೇ ಇಸವಿಯ ಸುಧಾರಣೆಯನ್ನು ಆದಷ್ಟು ಫೈಲ್ಯೂ ಮಾಡಿರುವುದರಿಂದ ಇನ್ನು ಉಳಿಯತಕ್ಕ ಜಮೀನು ಬಹಳ ಅಲ್ಪವಾಗುತ್ತದೆ, ಇದರಿಂದ ಸುಧಾರಣೆ ಆಗುವುದಿಲ್ಲ ಎನ್ನುವ ಅಂಶ ಗೊತ್ತಾಗುತ್ತೆ ಆದುದರಿಂದ ಜರಿಗೆ ಪೇಟ ಧರಿಸಿಕೊಂಡು ಸಿನಿಮಾಗಳಿಗೆ ಹೋಗತಕ್ಕ ಕುಡಿಯತಕ್ಕ, ಕಾವಿ ಬಟ್ಟೆ ಹಾಕಿಕೊಂಡು ಹೆಂಗಸರ ಹವ್ಯಾಸ ಇಟ್ಟುಕೊಂಡಿರತಕ್ಕ ಮಠಾಧಿಪತಿಗಳು ಏನು ಬೇಕಾದರೂ ಮಾಡಿಕೊಳ್ಳಬಹುದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸಂಸಾರಿ ಸನ್ಯಾಸಿಗಳು ಇರಬಹುದು.

ಶ್ರೀ ಟಿ. ಆರ್. ಶಾಮಣ್ಣ.—ಸಂಸಾರಿ ಸನ್ಯಾಸಿಗಳು ಪ್ರಯೋಜನ ಪಡೆಯುತ್ತಾ ಇದ್ದಾರೆ. ಅದು ಬೇಡ. ನನಗೆ ಗೊತ್ತಿರುವಹಾಗೆ ಕೆಲವು ಸನ್ಯಾಸಿಗಳು ಹಗಲು ಕಾವಿ ಬಟ್ಟೆ ಹಾಕಿಕೊಂಡು, ಸಾಯಂಕಾಲ ಓವರ್ ಕೋಟ್ ಹಾಕಿಕೊಂಡು ಸಿನಿಮಾದಲ್ಲಿ ಕೂತಿರುತ್ತಾರೆ. ಅವರನ್ನು ಜಗದ್ಗುರು ಎಂದು ನಮಸ್ಕಾರ ಮಾಡುತ್ತಾರೆ ಒಳ್ಳೆಯ ಕೆಲಸ ಮಾಡತಕ್ಕ ಸಂಸ್ಥೆಗಳು ಅನೇಕ ಇವೆ. ವಿದ್ಯಾಭ್ಯಾಸ ಮತ್ತು ಆಸ್ಪತ್ರೆಗಳನ್ನು ನಡೆಸತಕ್ಕದ್ದು, ಮತ್ತು ಸರ್ಕಾರ ಮಾಡತಕ್ಕ ಇತರ ಒಳ್ಳೆಯ ಕೆಲಸಗಳನ್ನು ಅನೇಕ ಸಂಸ್ಥೆಗಳು ನಡೆಸಿಕೊಂಡು ಬರುತ್ತಿವೆ. ನಮ್ಮ ಸ್ಪೀಕರ್‌ರವರು ತಮ್ಮ ಹೆಚ್ಚು ಭಾಗದ ಜಮೀನನ್ನು, ವಿದ್ಯಾಸಂಸ್ಥೆಗಳನ್ನು ನಡೆಸಿಕೊಂಡು ಬರುವುದಕ್ಕೆ ಬಿಟ್ಟಿದ್ದಾರೆ. ತಾವು ಮಾಡತಕ್ಕ ಕೆಲಸವನ್ನು ಒಳ್ಳೆಯ ಸಂಸ್ಥೆಗಳು ಮಾಡುವ ಪಕ್ಷದಲ್ಲಿ ಅಂತಹ ಸಂಸ್ಥೆಗಳ ಬಗ್ಗೆ ಮೊದಲು ಏನೂ ಕೊಡುವುದಿಲ್ಲ ಎಂದು ಹೇಳಿ ಆಮೇಲೆ ಒಂದು ಯೂನಿಟ್ ಎಂದು ಹೇಳಿ ತಿರುಗಿ ಅದನ್ನು ಡಬಲ್ ಮಾಡಿಬಿಟ್ಟಿದ್ದೀರಿ. ತಾವು ಇರತಕ್ಕ ಸಂಸ್ಥೆಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಿ, ಅದಕ್ಕೆ ಮುಂಚೆ ಯಾರದ್ದು ಎಂದು ನೋಡಿಕೊಳ್ಳಿ, ಮಾಡುತ್ತಾ ಇರತಕ್ಕ ಕೆಲಸ ನೋಡಿಕೊಳ್ಳಿ. ಅವುಗಳಿಗೆ ಒಂದು ಟ್ರಸ್ಟ್‌ಮಾಡಿ, ಅದರಲ್ಲಿ ಬೇಕಾದರೆ ತಮ್ಮ ಪ್ರತಿನಿಧಿಗಳನ್ನು ಹಾಕಿ, ಮತ್ತೆ ಅವು ಒಳ್ಳೆಯ ಕೆಲಸ ಮಾಡುತ್ತಾ ಇದ್ದ ಪಕ್ಷದಲ್ಲಿ ಅವುಗಳಿಗೆ ೨೦ ಏಕರೆ ನಿಗದಿ ಏಕೆ ಮಾಡುತ್ತೀರಿ? ಸರ್ಕಾರ ಮಾಡಬೇಕಾದ ಕೆಲಸವನ್ನು ಇಂತಹ ಒಳ್ಳೆಯ ಸಂಸ್ಥೆಗಳು ಮಾಡುತ್ತಾ ಇದ್ದರೆ ಅವುಗಳಿಗೆ ೨೫ ಎಕರೆ ಇದ್ದರೆ, ೫ ಎಕರೆ ಕಿತ್ತುಕೊಂಡು ಅವರಿಗೆ ಅನಾನುಕೂಲ ಮಾಡಬೇಡಿ ನಿನ್ನೆ ಒಂದು ತಿದ್ದುಪಡಿ ತಂದಿದೆ. ಟ್ರಸ್ಟ್‌ಮಾಡಿ ಇವನ್ನು ಮಂಜರಾಯಿ ಇನ್‌ಸ್ಟಿಟ್ಯೂಷನ್ ಆಗಿ ಇಟ್ಟುಕೊಳ್ಳಿ ಎಂದು ಯಾವುದಾದರೂ ಅಕ್ರಮ ನಡೆಯುತ್ತಾ ಇದ್ದರೆ, ಅನೀತಿ ನಡೆಯುತ್ತಾ ಇದ್ದರೆ, ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾ ಇದ್ದರೆ ಅಂಥವರಿಗೆ ಕನಿಕರ ಸ್ವಲ್ಪವೂ ತೋರಿಸಬೇಡಿ. ಸಾರ್ವಜನಿಕ ಹಿತದೃಷ್ಟಿಯಿಂದ ವಿದ್ಯಾಭ್ಯಾಸ ನಡೆಸುವುದಾಗಲೀ, ಆಸ್ಪತ್ರೆ ನಡೆಸುವುದಾಗಲೀ, ಜನಗಳ ಬಗ್ಗೆ ಒಳ್ಳೆಯ ಕೆಲಸಮಾಡತಕ್ಕ ಸಂಸ್ಥೆಗಳನ್ನು ಸರ್ಕಾರದ ಸಂಸ್ಥೆ ಎಂದು ತಿಳಿದುಕೊಂಡು ಸರ್ಕಾರಕ್ಕೆ ಬೇಕಾದಂಥ ಕಂಟ್ರೋಲ್ ಅದರ ಮೇಲೆಹಾಕಿ ಮ್ಯಾನೇಜ್‌ಮೆಂಟ್ ಅರ್ಧಭಾಗ ನಿಮ್ಮದು ಇಟ್ಟು ಎಷ್ಟುಬೇಕೊ ಅಷ್ಟು ಹಿಡಿತಇಟ್ಟುಕೊಂಡು ಸಂಸ್ಥೆಗಳು ಸಾರೋದ್ಧಾರವಾಗಿ ಚೆನ್ನಾಗಿ ನಡೆದುಕೊಂಡು ಬರುವಂತೆಮಾಡಿ. ಅಕ್ರಮವಾಗಿ ನಡೆಸತಕ್ಕ ಸಂಸ್ಥೆಗಳಿಗೆ ಮುಟ್ಟುಗೋಲು ಹಾಕಿ, ಚೆನ್ನಾಗಿ ಸಾರ್ವಜನಿಕ ಉಪಯೋಗಕ್ಕಾಗಿ ಕೆಲಸಮಾಡುವ ಸಂಸ್ಥೆಗೆ ಮಿತಿ ಹಾಕಬೇಡಿ ಎಂದು ತಿದ್ದುಪಡಿ ತಂದಿದ್ದೇನೆ. ಅದು ಕ್ರಮವಾಗಿದೆ, ನ್ಯಾಯವಾಗಿದೆ, ಒಪ್ಪಿಕೊಳ್ಳಿ.

ಎರಡನೆಯದಾಗಿ, ಪ್ಲಾಂಟೇಷನ್ಸ್ ಬಗ್ಗೆ ಮಿತಿಯನ್ನು ಎಷ್ಟು ಬೇಕಾದರೂ ಇಟ್ಟುಕೊಳ್ಳಬಹುದು ಎಂದು ಇದೆ. ಇನ್ನು ಮುಂದೆ ಅಕ್ವೈರ್ ಮಾಡಿಕೊಳ್ಳುವುದಕ್ಕೆ ಮಾತ್ರ ರಿಸ್ಟ್ರಿಕ್ಷನ್ ಹಾಕಿದ್ದೀರಿ ಪ್ಲಾಂಟ್ ಜೀವನ ಮಟ್ಟ ನೋಡಿ, ಅವರು ನಡೆಸುತ್ತಾ ಇರತಕ್ಕ ಕಾರ್ಯಕ್ರಮ ನೋಡಿ ಅವರು ಲೇಬರರ್‌ಗೆ ಕೊಡತಕ್ಕ ಫೆಸಿಲಿಟಿ ನೋಡಿ. ಈಗ ಇರತಕ್ಕ ಪ್ಲಾಂಟೇಷನ್‌ನಲ್ಲಿ ಟೆರೇಸ್ ಕಲ್ಟಿವೇಷನ್‌ಮಾಡಿದರೆ ಎಷ್ಟೋ ಜಮೀನನ್ನು ಕಲ್ಟಿವೇಟ್ ಮಾಡುವುದಕ್ಕೆ ಅವಕಾಶ ಇದೆ. ಫಾರಿನ್ ಎಕ್ಸ್‌ಚೇಂಜ್ ಕೊಡುತ್ತಾರೆ ಎಂದು ಹೇಳುತ್ತಾರೆ. ನ್ಯಾಷನಲೈಸ್‌ಮಾಡಿ ಎಂದರೆ ಕೇಂದ್ರ ಸರ್ಕಾರದವರು ಮಾಡುತ್ತಾರೆ ಎನ್ನುವ ಉದ್ದೇಶ ಇಟ್ಟುಕೊಂಡು ನಾವು ಮಾಡಲಿಲ್ಲ ಎಂದು ಕುರುಡು ವಾದ ಹೇಳುತ್ತೀರಿ. ಈಗಲೇ ಪ್ಲಾಂಟೇಷನ್ ತೆಗೆದುಕೊಂಡುಬಿಟ್ಟರೆ ಕೇಂದ್ರಕ್ಕೆ ಕೊಡುವುದಕ್ಕೆ ಸುಲಭವಾಗುತ್ತದೆ. ನಿರ್ಗತಿಕರ ಮತ್ತು ವಿಧವೆಯರ ಬಗ್ಗೆ ನಿಮಗೆ ಕನಿಕರ ಬರುವುದಿಲ್ಲ. ಪ್ಲಾಂಟೇಷನ್ ನವರಿಗೆ ಬೇಕಾದಷ್ಟು ಕೊಡುತ್ತೀರಿ. ಸರಿಯಾದಂಥ ರೀತಿಯಲ್ಲಿ ಪ್ಲಾಂಟೇಷನ್ ನಡೆಸಿಕೊಂಡು ಹೋಗುವುದಕ್ಕೆ ೪೦ ಯುನಿಟ್ ಇದ್ದರೆಸಾಕು ಎಂದು ತಿದ್ದುಪಡಿ ತೆಗೆದುಕೊಂಡು ಬಂದಿದ್ದೇನೆ. ಸಾವಿರ ಎಕರೆ ಬೇಡ, ೪೦ ಯುನಿಟ್ಸ್‌ನಲ್ಲಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಿದೆ. ಅನೇಕ ಪ್ಲಾಂಟರ್ಸ್ ಹೇಳುತ್ತಾರೆ. ದೊಡ್ಡ ತಿಮಿಂಗಿಲ ಸಣ್ಣ ತಿಮಿಂಗಿಲವನ್ನು ನುಂಗಿ ಹಾಕುತ್ತದೆ ಎಂದು, ಪ್ಲಾಂಟೇಷನ್ ಇಟ್ಟುಕೊಂಡಿರುವರಿಗೆ ಬೋರ್ಡ್ ಸಹಾಯಮಾಡುತ್ತದೆ. ಸಾವಿರಾರು ಎಕರೆ ಇರುವ ಪ್ಲಾಂಟರುಗಳನ್ನು ಲಕ್ಷಾಧೀಶರು, ಕೋಟ್ಯಾಧೀಶರನ್ನಾಗಿ ಮಾಡತಕ್ಕದ್ದು, ಬಡವರನ್ನು ಬಡವರನ್ನಾಗಿ ಮಾಡತಕ್ಕದ್ದು, ಈ ರೀತಿ ಮಾಡುವುದರಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ನಾನು ತಂದಿರತಕ್ಕ ತಿದ್ದುಪಡಿಗಳು ಎರಡು. ಒಂದು ಸಾರ್ವಜನಿಕ ದೃಷ್ಟಿಯಿಂದ ಕೆಲಸಮಾಡತಕ್ಕ ಸಂಸ್ಥೆಗಳಿಗೆ ಮಿತಿ ಹಾಕಬೇಡಿ, ಬೇಕಾದರೆ ಒಂದು ಕಮಿಷನ್ ಅಪಾಯಿಂಟ್‌ಮಾಡಿ ಸಂಸ್ಥೆಗಳನ್ನು ಪರಿಶೀಲನೆಮಾಡಿ ಬೇಕಾದರೆ ತೀರ್ಮಾನ ತೆಗೆದುಕೊಳ್ಳಿ. ನಾನು ಅದರ ಬಗ್ಗೆ ಅಡ್ಡಿ ಬರುವುದಿಲ್ಲ. ನ್ಯಾಯವಾಗಿ ಜನಗಳ ಹಿತದೃಷ್ಟಿಯಿಂದ ಕೆಲಸಮಾಡತಕ್ಕ ಸಂಸ್ಥೆಗಳಿಗೆ ಪೂರ್ಣವಾಗಿ ಮಿತಿಯನ್ನು ತೆಗೆದುಹಾಕಬೇಕು. ಅದು ಒಂದು. ಇನ್ನೊಂದು ಪ್ಲಾಂಟೇಷನ್‌ಗೆ ಮಿತಿಯನ್ನು ಹಾಕಬೇಕು ಹೀಗೆ ಎರಡೂ ಕೂಡ ನನಗೆ ಸಮಂಜಸವಾಗಿ ಕಾಣುತ್ತದೆ. ಅದನ್ನು ಒಪ್ಪಿಕೊಳ್ಳಬೇಕು ಎಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

2-30 P.M.

† ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಈ ವಿದ್ಯಾ ಸಂಸ್ಥೆಗಳಿಗೆ ಮತ್ತು ಧಾರ್ಮಿಕ ಸಂಸ್ಥೆಗಳಿಗೆ ಜಮೀನನ್ನು ಸ್ವಂತ ಸಾಗುವಳಿ ಮಾಡುವುದಕ್ಕೆ ಅವಕಾಶ ಕೊಡಬೇಕು ಎನ್ನತಕ್ಕಂಥ ಪ್ರಶ್ನೆ ಪ್ರಸ್ತಾಪ ಮಾಡಿದಾಗ ಮಾನ್ಯ ಕಂದಾಯ ಮಂತ್ರಿಗಳು ಆಗೆ ಹೇಳಿದರು, ಅಂಥ ಸಂಸ್ಥೆಗಳಿಗೆ ಒಂದು ಸೀಲಿಂಗ ಏರಿಯ ಇಟ್ಟುಕೊಡುವುದಕ್ಕೆ ಪ್ರಯತ್ನ ಮಾಡುತ್ತೇವೆ ಎಂದು.

ಅಧ್ಯಕ್ಷರು.— ಯಾವಾಗ ಹೇಳಿದರು.

ಶ್ರೀ ಕಾಗೋಡು ತಿಮ್ಮಪ್ಪ.—ಪ್ರಸ್ತಾಪ ಭಾಷಣ ಮಾಡುತ್ತಾ ಹೇಳಿದರು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪರ್ಸನಲಿ ಕಲ್ಟಿವೇಷನ್ ಎನ್ನುವುದನ್ನು ವ್ಯಾಖ್ಯಾನಮಾಡಿದಾಗ ಒಂದು ಸೀಲಿಂಗಿಗಿಂತ ಹೆಚ್ಚಿಗೆ ಜಮೀನು ತೆಗೆದುಕೊಳುವುದಕ್ಕೆ ಅವಕಾಶವಾಗುತ್ತದೆ, ಒಂದು ಸೀಲಿಂಗ್ ಅಷ್ಟೆ ಕೊಡುತ್ತೇವೆ ಎಂದು ಹೇಳಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ಸೀಲಿಂಗ್‌ವರೆಗೆ ಸಾಗುವಳಿಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಅವರ ಭಾಷಣದಿಂದ ಭಾವನೆ ಬರುತ್ತದೆ. ವ್ಯಕ್ತಿ ಎಂದು ಹೇಳಿದಾಗ ಸಂಸ್ಥೆ ಆಗಬಹುದು, ಅಥವಾ ಜೀವಂತ ವ್ಯಕ್ತಿ ಆಗಬಹುದು. ಈ ಎರಡೂ ಕೂಡ ವ್ಯಕ್ತಿ ಎನ್ನುವ ಅರ್ಥದಲ್ಲಿ ಬರುತ್ತದೆ. ಜೀವಂತ ವ್ಯಕ್ತಿಯಾದ ಸಂದರ್ಭದಲ್ಲಿ ಒಂದು ಕುಟುಂಬಕ್ಕೆ ೧೦ ಎಕರೆ. ಆದರೆ ಇಲ್ಲಿ ಜೀವಂತ ವ್ಯಕ್ತಿ ಆಗದೆ ಸಂಸ್ಥೆ ಆದಕಾರಣ ೨೦ ಎಕರೆ. ಎಂದರೆ ವ್ಯತ್ಯಾಸ ಮಾಡಿದಂತಾಗುದಿಲ್ಲವೇ? ಕುಟುಂಬ ಎಂದು ವಯಸ್ಕರು ಇದ್ದರೂ ಕೂಡ ಕುಟುಂಬ ಆಗುತ್ತದೆ. ೧೦ ಎಕರೆ ಮಿತಿ ಇದೆ. ಸಂಸ್ಥೆ ಎಷ್ಟಾದರೂ ಒಂದೆ. ವ್ಯಕ್ತಿಯ ಆಧಾರದ ಮೇಲೆ ಒಂದು ಕುಟುಂಬ ಎಂದು ಪರಿಗಣಿಸಿ ೧೦ ಎಕರೆ ಕೊಟ್ಟಿದ್ದೀರಿ. ಆದರೆ ಸಂಸ್ಥೆಗೆ ೨೦ ಎಕರೆ ಕೊಡುವುದಕ್ಕೆ ಅವಕಾಶವಿಲ್ಲ. ಡಿಸ್ಕ್ರಿಮಿನೇಷನ್‌ಮಾಡಿದ್ದೀರಿ ಇಲ್ಲಿ ಬಹಳ ಜನಕ್ಕೆ ತಾವು ಮೋಡಿ ಮಾಡಿದ್ದೀರಿ. ನಿಮ್ಮ ಪಕ್ಷದಲ್ಲೂ ಸಾಕಷ್ಟು ಬಿರುಗಾಳಿ ಎದ್ದಿತು. ಅನೇಕ ವಿದ್ಯಾಸಂಸ್ಥೆಗಳಿವೆ. ಅವು ಒಳ್ಳೆಯ ಕೆಲಸಮಾಡುತ್ತವೆ. ಅವುಗಳಿಗೆಲ್ಲ ಪ್ರೋತ್ಸಾಹ ಕೊಡಬೇಕು, ಅದಕ್ಕೋಸರ ಸ್ವಲ್ಪ ಜಮೀನು ಬಿಡಬೇಕಾದಂಥ ಅಗತ್ಯ ಇದೆ ಎನ್ನುವುದನ್ನು ಹೇಳಿದಿರಿ. ವಿದ್ಯಾಸಂಸ್ಥೆಯ ಹೆಸರನ್ನು ಮುಂದೆ ಮಾಡಿಕೊಂಡು ಧಾರ್ಮಿಕ ಸಂಸ್ಥೆಗಳನ್ನು ಅದರೊಳಗೆ ತೂರಿಸಿದರಿ ವಿದ್ಯಾಸಂಸ್ಥೆಗಳ

(ಶ್ರೀ ಕಾಗೋಡು ತಿಮ್ಮಪ್ಪ.)

ಹೆಸರಿನಲ್ಲಿ ಧಾರ್ಮಿಕ ಸಂಸ್ಥೆಗಳನ್ನು ಮುಂದುವರಿಸುವ ಪ್ರಯತ್ನ ಮಾಡಿದಿರಿ. ಇವತ್ತಿನ ಕನ್ನಡ ಪತ್ರಿಕೆಯಲ್ಲಿ ಸ್ಪಷ್ಟವಾಗಿ ಬಂದಿದೆ. ದ್ವಾರಕ ಮಠದ ಗುರುಗಳು, ಶ್ರೀಮತಿ ಇಂದಿರಾಗಾಂಧಿಯವರಿಗೆ ಧರ್ಮ ಸಂಸ್ಥೆಗಳಿಗೆ ವಿನಾಯಿತಿ ಕೊಡಬೇಕು ಎಂದು ಬರೆದಿದ್ದಾರೆ. ಈ ರೀತಿ ನಂದಾರವರು ಪತ್ರ ಬರೆದಿದ್ದಾರೆ ಎಂದು ಪತ್ರಿಕಾ ವರದಿಯಲ್ಲಿ ಹೇಳಿದ್ದಾರೆ. ನಿಮಗೆ ಆದೇಶ ಬಂದಿರಬೇಕು. ಆದುದರಿಂದ ವಿದ್ಯಾ ಸಂಸ್ಥೆಯ ಹೆಸರಿನಲ್ಲಿ ಧಾರ್ಮಿಕ ಸಂಸ್ಥೆಗಳು ಮತ್ತು ಭೂಮಿಯನ್ನು ಉಳಿಸಿಕೊಳ್ಳುವ ಪ್ರಯತ್ನವನ್ನು ಈಗಲೂ ಮಾಡಬೇಡಿ, ಮಾಡಿದರೆ ಅನಾಹುತ ಮಾಡುತ್ತೀರಿ ಶ್ರೀ ಕರಿಯಪ್ಪ ಎಂಬುವರು ವಿದ್ಯಾ ಸಂಸ್ಥೆ ನಡೆಸುತ್ತಿದ್ದಾರೆ. ಅವರಿಗೆ ಕೊಡಬಾರದು. ನಮ್ಮ ಅಧ್ಯಕ್ಷರು ನಡೆಸುವ ಒಂದು ವಿದ್ಯಾ ಸಂಸ್ಥೆ ಇದೆ. ಅವರಿಗೇ ಬಿಡೋಣ. ಭೂಮಿಯಿಂದ ಬರತಕ್ಕ ಪ್ರಯೋಜನ ಮತ್ತು ಪ್ರತಿಫಲ ವಿದ್ಯಾ ಸಂಸ್ಥೆಗಳಿಗೆ ಹೋಗುವುದಾದರೆ ಕೊನೆಯ ಪಕ್ಷ ನೀವು ಹೇಳುವುದಕ್ಕೆ ಒಪ್ಪಿಕೊಳ್ಳೋಣ. ಸರ್ಕಾರದವರು ಇಂಥ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ಹೊತ್ತು ನಡೆಸುವುದಿಲ್ಲ ಅಂದ ಮೇಲೆ ಇಂಥ ಜವಾಬ್ದಾರಿಯನ್ನು ಹೊತ್ತು ಆ ಭೂಮಿಯಿಂದ ಬರತಕ್ಕ ಉತ್ಪತ್ತಿ ವಿದ್ಯಾಭ್ಯಾಸ ನಡೆಸತಕ್ಕ ಶಾಲಾ ಕಾಲೇಜುಗಳಿಗೂ, ಹಾಸ್ಟೆಲುಗಳಿಗೂ ವಿನಿಯೋಗ ಆಗುವುದಾದರೆ ನಮಗೆ ಸಮಾಧಾನ ಆಗುತ್ತಿತ್ತು. ನಮ್ಮಲ್ಲಿ ಕೆಲವು ಮಠಗಳಿವೆ. ಅವು ಯಾವ ಕಾಲೇಜು, ಸ್ಕೂಲ್, ಹಾಸ್ಟೆಲ್ ನಡೆಸುತ್ತಾ ಇಲ್ಲ. ಆ ಮಠಾಧಿಪತಿಗಳು ಜಮೀನಿನಿಂದ ಬರತಕ್ಕ ಉತ್ಪತ್ತಿ, ತೆಗೆದುಕೊಂಡು ಕಾರಿನಲ್ಲಿ ಅಲ್ಲಿ ಇಲ್ಲಿ ಓಡಾಡಿಕೊಂಡು, ಪೂಜಾ ಮಾಡಿಕೊಂಡು ತಿರುಗುತ್ತಿರುತ್ತಾರೆ. ಅವರು ಮಾಡತಕ್ಕ ಅಥರ್ಮಗಳು, ಅವರು ಮಾಡತಕ್ಕ ನೀಚ ಪ್ರವೃತ್ತಿಗಳು ಎಲ್ಲಾ ನೋಡಿ ಸಹಿಸುವುದಾದರೆ ತಾವು ಅವುಗಳಿಗೆ ಜಮೀನು ಕೊಡಿ. ಜಗತ್ತಿನಲ್ಲಿ ಧರ್ಮದ ಹೆಸರಿನಲ್ಲಿ ನಡೆಯುತಕ್ಕ ಅನ್ಯಾಯವನ್ನು ಮಟ್ಟ ಹಾಕಬೇಕು. ಧರ್ಮದ ಹೆಸರಿನಲ್ಲಿ ಶೋಷಣೆಯಾಗಬಾರದು. ನೀತಿಬಾಹಿರವಾಗಿ ನಡೆಯಬಾರದು. ಧರ್ಮದ ಹೆಸರಿನಲ್ಲಿ ಆಸ್ತಿಯನ್ನು ಇಟ್ಟುಕೊಂಡು ಸಮಾಜಕ್ಕೆ ಅನ್ಯಾಯ ಮಾಡುತ್ತಿದ್ದಾರೆ. ಯಾರು ಅನೈತಿಕ ಮಾರ್ಗದಲ್ಲಿ ನಡೆಯುತ್ತಿದ್ದಾರೆ, ಅಂಥವರನ್ನು ತಡೆಗಟ್ಟುವ ಪ್ರಯತ್ನ ಈಗ ಮಾಡದೇ ಹೋದರೆ ಯಾವಾಗ ಮಾಡುತ್ತೀರಿ? ಮತ್ತೆ ಅವರಿಗೇ ಭೂಮಿಯನ್ನು ಒದಗಿಸಿಕೊಡುತ್ತೀರಿ ವಿದ್ಯಾಭ್ಯಾಸಕ್ಕೆ ಅಥವಾ ಸಾರ್ವಜನಿಕ ಪ್ರಯೋಜನಕ್ಕೆ ಬರತಕ್ಕ ಉತ್ಪತ್ತಿಯನ್ನು ಅವರು ವಿನಿಯೋಗಿಸುವುದಿಲ್ಲ. ಸ್ವಂತ ಆಸ್ತಿಯಾಗಿ ಮಾಡಿಕೊಂಡು, ಸ್ವಂತಕ್ಕೆ ಉಪಯೋಗಿಸುತ್ತಾರೆ ಇಂತಹ ಧಾರ್ಮಿಕ ಸಂಸ್ಥೆಗಳಿಗೆ ಸೊಸೈಟಿಗಳಿಗೆ ಭೂಮಿ ಕೊಡುತ್ತಾ ಹೋದರೆ, ಹಂಚುವುದಕ್ಕೆ ಭೂಮಿ ಎಲ್ಲಿ ಉಳಿಯುತ್ತದೆ? ೨೫ ಜನ ಕುಟುಂಬದವರು ಅವರವರೇ ಸೇರಿಕೊಳ್ಳುತ್ತಾರೆ, ಸೊಸೈಟಿ ಮಾಡಿಕೊಳ್ಳುತ್ತಾರೆ. ಅದಕ್ಕೆ ಅವರ ಜಮೀನನ್ನು ಟ್ರಾನ್ಸ್‌ಫರ್ ಮಾಡುತ್ತಾರೆ ಆಗ ಭೂಮಿ ಎಲ್ಲಿ ಉಳಿಯುತ್ತದೆ? ವಿದ್ಯಾ ಸಂಸ್ಥೆಗಳಿಗೆ ಭೂಮಿಯನ್ನು ಉಳಿಸಿಕೊಡತಕ್ಕ ಪ್ರಯತ್ನದಲ್ಲಿ ದಯವಿಟ್ಟು ಧಾರ್ಮಿಕ ಸಂಸ್ಥೆಗಳಿಗೆ ಕೊಡಬೇಡಿ. ಇದನ್ನು ಮಾಡುವುದರಿಂದ ಅಪಚಾರ ಜಾಸ್ತಿಯಾಗಿ, ಧಾರ್ಮಿಕ ಸಂಸ್ಥೆಗಳಿಂದ ಹಿಂದೆ ಆಗಿರುವ ಅನಾಹುತ ಮತ್ತಷ್ಟು ಜಾಸ್ತಿಯಾಗುತ್ತದೆ. ಧಾರ್ಮಿಕ ಗುರುಗಳು ಮತ್ತು ಮಠಾಧಿಪತಿಗಳಿಂದ ಮೂರು ಕಾಸಿನ ಪ್ರಯೋಜನ ಯಾರಿಗೂ ಆಗುವುದಿಲ್ಲ ಲಕ್ಷಾಂತರ ರೂಪಾಯಿ ವರಮಾನ ಬರುವ ಮಠಗಳಿವೆ. ಆ ಮಠಾಧಿಪತಿಗಳು ತಮ್ಮ ಸ್ವಂತಕ್ಕೋಸ್ಕರ, ಭೋಗ ವಿಲಾಸಕ್ಕೋಸ್ಕರ ಆಸ್ತಿಯನ್ನು ವಿನಿಯೋಗ ಮಾಡುತ್ತಿದ್ದಾರೆ. ಆದುದರಿಂದ ದಯವಿಟ್ಟು ಕಂದಾಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ, ಪ್ರಾರ್ಥನೆ ಮಾಡುತ್ತೇನೆ. ಧಾರ್ಮಿಕ ಸಂಸ್ಥೆಗಳಿಗೆ ಜಮೀನನ್ನು ಕೊಡುವುದಕ್ಕೆ ಹೋಗಬೇಡಿ ನಾಳೆ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಜಮೀನನ್ನು ಏನಾದರೂ ದುರುಪಯೋಗಪಡಿಸಿಕೊಂಡರೆ, ನಾವು ಆ ಜಮೀನನ್ನು ಸರ್ಪ್ಲಸ್ ಲ್ಯಾಂಡ್ ಎಂದು ತಿಳಿದುಕೊಂಡು ಸರ್ಕಾರ ವಹಿಸಿಕೊಳ್ಳಬೇಕೆಂದು ಹೇಳುತ್ತೇವೆ ಮಠದ ಸ್ವಾಮಿಗಳನ್ನು ಮುಟ್ಟುವುದಕ್ಕೆ ಹೋದರೆ ಕಷ್ಟ. ಆ ಸ್ವಾಮಿಗಳು ಆ ಪ್ರದೇಶದಲ್ಲಿ ಅವರದೇ ಆದಂಥ ವರ್ಚಸ್ಸನ್ನು ಬೆಳೆಸಿಕೊಂಡಿರುತ್ತಾರೆ. ಸ್ವಾಮಿಗಳು ಹಣ ದುರುಪಯೋಗಪಡಿಸಿಕೊಂಡಿರುತ್ತಾರೆ ಎಂದು ಮಠದ ಆಸ್ತಿಗೆ ಕೈ ಹಾಕುವುದಕ್ಕೆ ಹೋದರೆ, ನಮ್ಮ ನ್ಯಾಯ ಸ್ಥಾನವನ್ನು ಅಭದ್ರ ಮಾಡುತ್ತಾರೆ. ಧಾರ್ಮಿಕ ಸಂಸ್ಥೆಗಳಿಗೆ ಕೊಡುವ ಜಮೀನಿನ ಬಗ್ಗೆ ಪುನರಾಲೋಚನೆ ಮಾಡಿ ವಿದ್ಯಾ ಸಂಸ್ಥೆಗಳಿಗೆ ಜಮೀನು ಕೊಡುವುದರ ಜೊತೆಗೆ ಧಾರ್ಮಿಕ ಸಂಸ್ಥೆಗಳಿಗೆ ಕೊಡತಕ್ಕ ಕೆಲಸಕ್ಕೆ ಕೈ ಹಾಕಬೇಡಿ, ವಾಪಸ್ ತೆಗೆದು ಕೊಳ್ಳುವುದಕ್ಕೆ ಪ್ರಯತ್ನ ಮಾಡಿ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ನಾನು ಜಮೀನು ಇದ್ದವನು ಅಲ್ಲ, ನನಗೆ ಜಮೀನು ಇಲ್ಲ. ಧಾರ್ಮಿಕ ಸಂಸ್ಥೆಗಳ ಬಗ್ಗೆ ಒಳ್ಳೆಯ ನಂಬಿಕೆ ಇರುವವನಲ್ಲ.

ಅಧ್ಯಕ್ಷರು.—ಬೆಂಗಳೂರಿನಲ್ಲಿರುವ ಜನಕ್ಕೆ ಮನೆ ಬೇಕು.

† ಶ್ರೀ ಎಂ. ಎಸ್. ಕೃಷ್ಣನ್.—ಇರುವುದಕ್ಕೆ ವಾಸಸ್ಥಳ ಇದ್ದರೆ ಸಾಕು. ಅರ್ಬನ್ ಸೀಲಿಂಗ್ ಬಂದರೂ ನಾನು ಅದರಲ್ಲಿ ಬರುವುದಿಲ್ಲ. ಧರ್ಮದರ್ಶಿಗಳು ಮನೆಗಳನ್ನು ಇಟ್ಟುಕೊಂಡಿದ್ದಾರೆ; ಜಮೀನು ಇಟ್ಟು ಕೊಂಡಿದ್ದಾರೆ, ಬೇಕಾದಷ್ಟು ಸಂಸ್ಥೆಗಳನ್ನು ನಡೆಸುತ್ತಿದ್ದಾರೆ. ಮುಖ್ಯ ಪ್ರಶ್ನೆ ಏನೆಂದರೆ, ಇದೆಲ್ಲ ನೋಡಿದ ಮೇಲೆ, ಸರ್ಕಾರ ಯಾವ ದೃಷ್ಟಿಯಿಂದ ಇದನ್ನು ತಂದಿದೆ ಎಂದು ನನಗೆ ಅರ್ಥವಾಗುವುದಿಲ್ಲ. ಇಲ್ಲದೆ ಇದ್ದುದನ್ನು ಪ್ರಗತಿದಾಯಕವಾಗಿ ತೆಗೆದುಕೊಂಡು ಬಂದಿದ್ದಾರೆ ಎಂದು ಹೇಳಿ ಶಹಭಾಸ್‌ಗಿರಿ ಮಾನ್ಯ ಹುಚ್ಚಮಾಸ್ತಿಗೌಡರು ಪಡೆದರು. ನಾವು ಅವರಿಗೆ ಒಳ್ಳೆಯ ಕೆಲಸ ಮಾಡಿದರು ಎಂದು ಶಹಭಾಸ್‌ಗಿರಿ ಕೊಟ್ಟಿದ್ದೆವು. ಇದನ್ನು ನೋಡಿದ ಮೇಲೆ ಅದನ್ನು ವಾಪಸ್ ತೆಗೆದುಕೊಳ್ಳ ಬೇಕಾಗಿದೆ. ೭(ಎ) ಹೊಸದು ತಂದಿದ್ದಾರೆ. ಯಾರು ಯಾರು ದೇವರ ಹೆಸರಿನಲ್ಲಿ ನಮ್ಮ ದೇಶದಲ್ಲಿ ಅನ್ಯಾಯ ಮಾಡುತ್ತಿದ್ದಾರೆ, ಅಂಥವರಿಗೆ ಕುಮ್ಮಕ್ಕುಕೊಡುವ ರೀತಿಯಲ್ಲಿ ಹೊರಟಿದ್ದಾರೆ. ಅದು ಬಹಳ ಅನ್ಯಾಯ. ಧಾರ್ಮಿಕ ಸಂಸ್ಥೆಗಳನ್ನು ನಡೆಸುವುದಕ್ಕೆ ಅನುಕೂಲ ವಾಗುತ್ತದೆ ಎಂದು ಮಾಡುವ ಹಾಗಿದ್ದರೆ ಹಾಗೆ ಹೇಳಲಿ. ನಮ್ಮ ದೇಶದಲ್ಲಿ ಮಠಾಧಿಪತಿಗಳಿದ್ದಾರೆ. ಶೃಂಗೇರಿ ಜಗದ್ಗುರುಗಳು ಇರಬಹುದು, ಮೇಲುಕೋಟೆ ಸ್ವಾಮಿಗಳು ಇರಬಹುದು, ಯಾರೇ ಇರಬಹುದು. ನಾನು ಜಾತಿ ಮತ ಗೊಂದಲಕ್ಕೆ ಹೋಗುವವನಲ್ಲ. ಅವರಿಗೆ ಪ್ರೋತ್ಸಾಹಕೊಡುವುದಕ್ಕೆ ರಾಷ್ಟ್ರ ಇದೆ ಎಂದರೆ, ನಾವು ಘಟನಾವಳಿಗೆ ವಿರುದ್ಧವಾಗಿ ನಡೆಯುತ್ತೇವೆಂದು ಅರ್ಥವಾಗುತ್ತದೆ. ಸೆಕ್ಯುಲರಿಸಂ ಬಗ್ಗೆ ಮಾತನಾಡುವ ಜನ, ಇದಕ್ಕೆ ಹೆಚ್ಚು ಅವಕಾಶ ಕೊಡುವುದಕ್ಕೆ ಹೊರಟಿದ್ದಾರೆ. ಸೆಕ್ಯುಲರಿಸಂ ಎಲ್ಲಿ ಬಂತು? ಸೆಕ್ಯುಲರಿಸಂಗೆ ಅರ್ಥವಾದರೂ ಇದೆಯೇ? ಇಂತಹ ಸಂಸ್ಥೆಗಳಿಗೆ ಸಹಾಯ ಮಾಡುವುದು ಸರಿಯಾದುದಲ್ಲ, ಜನತೆ ಬೆಂಬಲ ಕೊಡಬಹುದು. ಸರ್ಕಾರದವರು ರಾಜ್ಯಾಂಗಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ, ಸೆಕ್ಯುಲರ್ ಸ್ಟೇಟ್, ಸಮಾಜವಾದ ಎಂದು ಹೇಳುತ್ತ ಸರ್ಕಾರವೇ ಸಹಾಯ ಮಾಡುವುದಕ್ಕೆ ಹೋಗಬಾರದು. ಸಾರ್ವಜನಿಕರು ಇಂಥ ಸಂಸ್ಥೆಗಳಿಗೆ ಸಹಾಯ ಮಾಡಿದ್ದರೂ ಒಂದು ಕೈಯಲ್ಲಿ ಕೊಟ್ಟುದ್ದನ್ನು ಇನ್ನೊಂದು ಕೈಯಲ್ಲಿ ತೆಗೆದುಕೊಂಡು ತಮ್ಮ ಸ್ವಾರ್ಥಕ್ಕೆ, ಸ್ವಂತಕ್ಕೆ ಉಪಯೋಗಿಸಿಕೊಳ್ಳುವವರಿದ್ದಾರೆ. ಮಠಾಧಿಪತಿಗಳು, ಜಗದ್ಗುರುಗಳು ಒತ್ತಾಯವನ್ನು ತಂದು ಹೇಗಾದರೂ ಮಾಡಿ ನಿಮ್ಮನ್ನು ಒಲಿಸಿಕೊಂಡಿದ್ದಾರೆ. ಅವರು ಪ್ರಭಾವಶಾಲಿಗಳಾಗಿ ರಾಜಕೀಯದಲ್ಲಿ ತಮ್ಮನ್ನು ಉಪಯೋಗಿಸಿಕೊಂಡಿದ್ದಾರೆ. ನಮ್ಮ ರಾಜ್ಯದಲ್ಲಿ ರಾಜಕೀಯ ಮಾಡುವವರು ಅವರೇ. ಶ್ರೀ ಹುಚ್ಚಮಾಸ್ತಿಗೌಡರಾಗಲೀ, ಶ್ರೀ ದೇವರಾಜ ಅರಸರಾಗಲೀ ಅಲ್ಲ. ಅವರ ಕೈಯಲ್ಲಿ ಇವರಿದ್ದಾರೆ, ಅವರ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ. ಅವರು ಹೇಳಿದ ಹಾಗೆ ಮಾಡಿದ್ದಾರೆ ಎನ್ನುವುದು ನನ್ನ ಸ್ಪಷ್ಟವಾದ ಅಭಿಪ್ರಾಯ.

ಇನ್‌ಸ್ಟಿಟ್ಯೂಷನ್ನಿಗೆ ಉಪಯೋಗವಾಗುತ್ತದೆಯೋ ಇಲ್ಲವೋ ಎನ್ನುವುದನ್ನು ನೋಡುವುದಕ್ಕೆ ಪ್ರಿಸ್ಕ್ರೈಬ್ಡ್ ಅಥಾರಿಟಿ ನೇಮಕ ಮಾಡುತ್ತೇವೆ, ಅವರ ತೀರ್ಮಾನವೇ ಅಂತಿಮವಾದದ್ದು ಎಂದು ಹೇಳಿದ್ದಾರೆ. ಯಾವ ಪ್ರಿಸ್ಕ್ರೈಬ್ಡ್ ಅಥಾರಿಟಿ! ಸುಮ್ಮನೆ ಕಣ್ಣು ಒರೆಸುವುದಕ್ಕೆ ಹೇಳಿರುವ ಮಾತು, ಮೋಸದ ಮಾತು. ಇದು ಸರಿಯಾದುದಲ್ಲ. ಈಗಲಾದರೂ ಸಹ ಯೋಚನೆಮಾಡಿ ಒತ್ತಾಯಕ್ಕೆ ಮಣಿಯದೆ ಇದನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ ಎನ್ನುವ ಹಾಗೆ ಮಾನ್ಯ ಕಂದಾಯ ಮಂತ್ರಿಗಳು ಧರ್ಮ ಸಂಸ್ಥಾಪನೆ ಮಾಡಲಿಕ್ಕೆ ಹೊರಟಿದ್ದಾರೆ. ಧರ್ಮ ಸಂಸ್ಥೆಯ ಅವತಾರ ಪುರುಷರಾಗಿ ಕಂಗೊಳಿಸುವುದಕ್ಕೆ ಹೊರಟಿದ್ದಾರೆ ಧರ್ಮ ಸಂಸ್ಥೆಗಳಿಗೆ ಅವರು ೨೦ ಯೂನಿಟ್ ಕೊಡಲು ನಿರ್ಧಾರ ಮಾಡಿದ್ದಾರೆ. ಇದರಿಂದ ಧರ್ಮದ ಹೆಸರಿನಲ್ಲಿ ಮತ್ತೆ ಸಾಕಷ್ಟು ಶೋಷಣೆ ನಡೆಯುವುದಕ್ಕೆ ಕಾರಣವಾಗುತ್ತದೆ. ಧರ್ಮ ಸಂಸ್ಥೆ ಎಂದರೆ ಏನು? ಯಾವುದು ಧರ್ಮ ಸಂಸ್ಥೆ, ಎನ್ನುವುದರ ಬಗ್ಗೆ ಮೊದಲು ವ್ಯಾಖ್ಯಾನ ಕೊಡಲಿ ಒಟ್ಟಿನಲ್ಲಿ ಧರ್ಮ ಸಂಸ್ಥೆಗಳ ಹೆಸರಿನಲ್ಲಿ ೨೦ ಯೂನಿಟ್ ಕೊಡುವುದಕ್ಕೆ ಹೊರಟಿರುವುದರಿಂದ ಮತ್ತೆ ಜನಗಳಿಗೆ ಅನ್ಯಾಯ ಮಾಡಿದಂತಾಗುತ್ತದ. ಅದಕ್ಕೋಸ್ಕರ ಇದನ್ನು ವಾಪಸ್ಸು ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಬಹಳ ಆವೇಶದಿಂದ ಮಾತನಾಡಿದ್ದಾರೆ, ಬಹಳ ಸ್ಫೂರ್ತಿ ಪಡೆದು ಕೂಡ ಮಾತನಾಡಿದ್ದಾರೆ. ಈ ಸಂಸ್ಥೆಗಳಿಗೆ ಸರ್ಕಾರ ಜಮೀನು ಕೊಟ್ಟಿಲ್ಲ. ಆ ಜಮೀನು ಅನೇಕ ಜನಗಳಿಂದ ಧಾರ್ಮಿಕ ಸಂಸ್ಥೆಗಳಿಗೆ, ವಿದ್ಯಾಸಂಸ್ಥೆಗಳಿಗೆ ಕೊಟ್ಟಿರತಕ್ಕದ್ದು. ಸರ್ಕಾರ ಮಾನ್ಯವಾಗಿ ಕೊಟ್ಟಿದ್ದಂಥ ಜಮೀನುಗಳನ್ನು ಈಗಾಗಲೇ ಯಾರು ಯಾರು ಗೇಣಿಗೆ ಮಾಡುತ್ತಿದ್ದರೋ, ಅದನ್ನೆಲ್ಲ ತೆಗೆದುಕೊಂಡಾಗಿದೆ ಈಗ ಅವರೇ ಸ್ವತಃ ವ್ಯವಸಾಯ ಮಾಡುತ್ತಿರುವ ಜಮೀನುಗಳಿಗೆ ಸಂಬಂಧಪಟ್ಟ ವಿಷಯ. ಸ್ವತಃ ಜಮೀನು ಮಾಡುತ್ತಿದ್ದರೆ ಅದನ್ನು ಉಳಿಸಿಕೊಳ್ಳುವುದಕ್ಕೆ

(ಶ್ರೀ ಎನ್. ಹುಚ್ಚಮಾಸ್ತಿಗೌಡ.)

ಸಾಧ್ಯ ಎನ್ನುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಈಗ ಈ ಅವಕಾಶ ಕೊಟ್ಟಿರತಕ್ಕದ್ದು ಯಾಕೆಂದರೆ 'ಟ್ರಸ್ಟ್ ಆಫ್ ಪಬ್ಲಿಕ್ ನೇಚರ್' ಎಂದು ಸ್ಪಷ್ಟವಾಗಿದೆ. ಆ ಉದ್ದೇಶಕ್ಕೋಸ್ಕರವೇ ಸ್ಥಾಪನೆಯಾಗಿರಬೇಕು, ಆ ಉದ್ದೇಶಕ್ಕೋಸ್ಕರವೇ ಪೂರಾ ಹಣ ಖರ್ಚಾಗಬೇಕು ಎಂದು ಸ್ಪಷ್ಟವಾಗಿದೆ. ಈ ಸಂಸ್ಥೆಗಳು ಸಾರ್ವಜನಿಕ ಉದ್ದೇಶಕ್ಕಾಗಿ ಇರಬೇಕು, ಅದಕ್ಕೇ ಹಣವನ್ನು ಖರ್ಚು ಮಾಡಬೇಕು ಎನ್ನುವುದು ನಮ್ಮ ತಿದ್ದುಪಡಿಯ ಉದ್ದೇಶವಾಗಿದೆ.

ವಿದ್ಯಾ ಸಂಸ್ಥೆಗಳನ್ನೂ ಧಾರ್ಮಿಕ ಸಂಸ್ಥೆಗಳನ್ನೂ ಪ್ರತ್ಯೇಕ ಮಾಡಿಲ್ಲ, ಎರಡನ್ನೂ ಸೇರಿಸಿಬಿಟ್ಟಿರಿ ಎಂದು ಹೇಳಿದರು. ಅವರು ನಡೆಸುತ್ತಿರುವ ಕಾರ್ಯ ಚಟುವಟಿಕೆಗಳನ್ನು ನೋಡಿದರೆ ಎರಡನ್ನೂ ಪ್ರತ್ಯೇಕ ಮಾಡುವುದು ಕೆಲವು ಕಡೆ ಬಹಳ ಕಷ್ಟವಿದೆ. ಉದಾಹರಣೆಗೆ ಸಿದ್ಧಗಂಗಾ ಮಠವಿದೆ. ಅದು ಧಾರ್ಮಿಕ ಸಂಸ್ಥೆಯೂ ಹೌದು, ವಿದ್ಯಾ ಸಂಸ್ಥೆಯೂ ಹೌದು. ಇದನ್ನು ಪ್ರತ್ಯೇಕ ಮಾಡುವುದು ಕಷ್ಟ ಎನ್ನುವುದನ್ನು ಮಾನ್ಯ ಸದಸ್ಯರು ಗಮನದಲ್ಲಿಡಬೇಕು. ಸಾರ್ವಜನಿಕ ಉದ್ದೇಶಕ್ಕೋಸ್ಕರ ಇರುವುದಾದರೆ ಅಂಥ ಸಂಸ್ಥೆಗಳಿಗೆ ಮಾತ್ರ ಅವಕಾಶ ಮಾಡಿಕೊಟ್ಟಿದ್ದೇವೆ. ಇದನ್ನು ಸ್ಪಷ್ಟವಾಗಿ ತಿದ್ದುಪಡಿಯಲ್ಲಿ ಸೂಚಿಸಲಾಗಿದೆ ಇದರಲ್ಲಿ ದುರುಪಯೋಗವುದನ್ನು ತಪ್ಪಿಸುವುದಕ್ಕೆ ಅವಕಾಶವಿದೆ. ಇದರಲ್ಲಿ ಪ್ರಿಸ್ಕ್ರೈಬ್ಡ್ ಅಥಾರಿಟಿ ಎನ್ನುವದನ್ನು ಹೇಳಲಾಗಿದೆ. ಅವರೇ ಇದರ ಬಗ್ಗೆ ಸರಿಯಾದ ನಿರ್ಧಾರ ಮಾಡುತ್ತಾರೆ. ಶ್ರೀಮಾನ್ ಶಾಮಣ್ಣನವರು ಇಂತಹ ಸಾರ್ವಜನಿಕ ಸಂಸ್ಥೆಗಳಿಗೆ ನಿಗದಿ ಮಾಡುವಾಗ ನಲವತ್ತು ಯೂನಿಟ್ಟುಗಳಷ್ಟು ಮಾಡಬೇಕೆಂದು ಸಲಹೆ ಮಾಡಿದರು, ಮತ್ತು ಕೆಲವರು ಮಾಡಕೂಡದು ಎಂದು ಹೇಳಿದರು. ಒಟ್ಟಿನಲ್ಲಿ ಈ ಸಂಸ್ಥೆಗಳಿಗೆ ಎಷ್ಟು ಅವಶ್ಯಕವಿದೆಯೋ ಅಷ್ಟು ಇಟ್ಟುಕೊಳ್ಳಲು ಅವಕಾಶ ಮಾಡಿಕೊಡಲಾಗಿದೆ ಎಂದು ಹೇಳಿದ್ದೇನೆ.

ಶ್ರೀ ಕೆ. ಎನ್. ವೀರಪ್ಪಗೌಡ.—ಖಾಸಗಿ ಟೆಂಪಲ್‌ಗಳವರು ಅವರ ಸ್ವಂತಕ್ಕಾಗಿ ಕೆಲವು ಭೂಮಿ ಇಟ್ಟುಕೊಳ್ಳುತ್ತೇವೆಂದು ಹೇಳುತ್ತಾರೆ. ಇಂತಹ ಸಂಸ್ಥೆಗಳ ಬಗ್ಗೆ ಇದರಲ್ಲಿ ಏನೂ ಇಲ್ಲ, ಇದನ್ನು ನಿರ್ದಿಷ್ಟವಾಗಿ ಹೇಳುವರೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನಾಗಲೇ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇನೆ. ಹಿಂದೆ ಒಂದು ಸಂದರ್ಭದಲ್ಲಿ ಮುಖ್ಯ ಮಂತ್ರಿಗಳ ಸಮ್ಮೇಳನ ಆದಾಗ ಮದ್ರಾಸು ಮುಖ್ಯ ಮಂತ್ರಿಗಳು ಅವರ ಮನೆಯಲ್ಲಿ ಒಂದು ಗಣಪತಿ ವಿಗ್ರಹ ಮಾಡಿಕೊಂಡು ಇದಕ್ಕಾಗಿ ಒಂದ್ನೂರು ಎಕರೆ ಭೂಮಿ ಇಟ್ಟುಕೊಳ್ಳಲಾಗಿದೆ ಎಂದು ಹೇಳಿದರು. ಇಂತಹದಕ್ಕೆ ಇದು ಅನ್ವಯವಾಗುವುದಿಲ್ಲ. ಇದರಲ್ಲಿ ಪಬ್ಲಿಕ್ ನೇಚರ್ ಎಂದು ನಿರ್ದಿಷ್ಟವಾಗಿ ವಿವರಣೆ ಕೊಡಲಾಗಿದೆ ಮತ್ತು ಸ್ಪಷ್ಟವಾಗಿದೆ. ಇನ್ನೊಂದು ಕಡೆ ಪ್ಲಾಂಟೇಷನ್‌ಗಳ ಬಗ್ಗೆ ಈಗಿರತಕ್ಕದ್ದನ್ನು ಪರಭಾರೆ ಮಾಡಲು ಇಲ್ಲವೇ ಬೇರೆಯವರಿಗೆ ಖರೀದಿ ಮಾಡಲು ಇದರ ಬಗ್ಗೆ ಮಿತಿಹಾಕುವಾಗ ಬೇರೆಯವರಿಗೆ ಮಾರಾಟ ಮಾಡುವಾಗ, ಯಾವ ರೀತಿ ಇರಬೇಕೆಂದು ಇದರಲ್ಲಿ ತಿಳಿಸಲಾಗಿದೆ, ಇದನ್ನು ಸಭೆ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

MADAM SPEAKER .—I will put amendment to amendment of Sri B. V. Kakkilaya to the vote of the House. The question is.

"That in the proposed amendment to Section 63, the proposed item No. (ii) shall be deleted".

The Amendment was negatived

MADAM SPEAKER .—I will now put the amendment to amendment of Sri T. R. Shamanna to the vote of the House. The question is.

"That in Clause 45, in sub-clause (ii) (7), after 20 units, add the following proviso, namely :

"Provided that in case of institutions carrying on public utility functions the celling may be raised by framing rules by the concerned authority to have land to the extent necessary for the benefit and use of the association or institution as required for carryiug on its serviees particularly educational and other philanthropical works".

The amendment was negatived

Madam Speaker .—I will now put the amendment of the Hon'ble Minister for Revenue to vote the question is that in the proposed section 63.—

(i) in sub-section (2), the second provisio shall be omitted.

(ii) sub-subctions (7), (8) and (9) shall be renumbered as sub-sections (8), (9) and (10) respectively and before the renumbered sub-section (8), the following sub-section shall be inserted, namely .—

'(7) (a) No educational, religious or charitable institution or society or trust of a public nature, capable of holding purperty formed for a charitable, religious or educationa l puropose shall hold land except where the income of the land is appropriated solely for the institution or the society or the trust concernced. Where the land is so held by such institution, society or trust, the ceiling area shall be twenty units :

(b) If any question arises whether—the income of the land is solely appropriated for the institution, society or trust. it shall be decided by the prescribed authority. The descision of the prescribed authority shall be final. Where the prescribed authority decides that the income is not so appropriated, the land held by the institution, society or trust shall be deomed to be surplus land and the provisions of sections 66 to 76 shall, so far as may be, apply to the surrender to and vesting in the State Government of such land. The provisions of this sub-section shall have effect notwith standfng anything in this Act."

(iii) in sub-section (8) in clause (b) for the words "decision of the State Governmene" the words "decision of the prescribed authority" shall be substituted.

(iv) For sub-section (9), the followiug sub-section shall be substituted namely .—

"(9) subject to the provisions of Section 79B in the case of any person holding land cultivated by plantation crops, the ceiling area in respect of other land held by him shall be determined taking into consideration, the agricultural land referred to in item (ii) of the explanation to section 104."

(v) for sub-section (10), the following sub-section shall be substituttd, namely .—

"(10) Notwithstanding anything in the preceding sub-section if any person has—

(i) after the 18th November 1961 and before the 24th January 1971 transferred any land the extent of which if added to the other land retained by him could have been deemed to be surplus land before the date of commencement of the Amendment Act, or

(MADAM SPEAKER.)

(ii) after the 24th January 1971 transferred any land, otherwise than by partition or by donation to the Mysore Bhoodan Yagna Board etablished under the Mysore Bhoodau Yagna Act, 1963 (Mysore Act 34 of 1963) or by sale to the tenant of such land in conformity with any law for the time being in force then in calculating the ceiling area which that person is entitled to hold, the area so transferred shall be taken into account and the land exceeding the ceiling area so calculated shall be deemed to be in excess of the ceiling are not with standing that the land remaining with him may not in fact be in excess of the ceiling area.

If by reason of such transfer the person's holding is less than the area so calculated to be in excess of the ceiling area, then all his lands shall be deemed to be surplus land and the provisions of sections 66 to 76 shall, as far as may be apply to the surrender to and vesting in the State Government of such excess land.

Explanation.—For purposes of this sub-section the land shall be deemed to have been transferred if it has been transferred by act of parties (whether by sale, gift, mortgage with possession, exchange, lease, or any other kind of disposition made inter vivos.)"

CLAUSE 48

77. For sub-clause (1), the following sub-clause shall be substituted, namely.—

"(1) For sub-section (1), the following sub-sections shall be substituted, namely.—

(1) (*a*) Every person who on the date of

The House divided

MADAM SPEAKER.—The result of the division is: Ayes: 67 Noes: 11

The Ayes have it.

The motion was adopted

(ಕೆಲವು ಸದಸ್ಯರು ಸಭಾತ್ಯಾಗ ಮಾಡಿದರು)

MADAM SPEAKER.—I will put the clause No. 45 as amended. The question is.

That clause 45, as amended, do stand part of the Bill.

The motion was adopoted.

Clause 45 as amended as added to the Bill

CLAUSE 46

Sri N. Huthchamasthi gowda.—I move.

"That for clause 46, the following clause shall be substituted, namely:—

"46. *Amendment of section 64:*—In section 64 of the principal Act,—

(i) for the words commencing from "and land is acquired" and endig with "sub-section (1) of section 63", the words "any land is acquired or comes into possession of any person or family after the date of commencement of the Amendment Act and in consequence thereof the total extent of land held by such person or family exceeds the ceiling area permitted under section 63" shall be substituted.

(ii) for the proviso, the following Explantion shall be substituted, namely:—

"*Explanation:*—In this section "bequest" includes

(i) gift made in contemplation of death ; and

(ii) gift to take effect after the happening of any event.

Madam Speaker.—Amendment moved.

"That for clause 46 the following clause shall be substituted namely.

"46 *Amendment of section 64:*—In section 64 the principal Act.—

(i) for the words commencing for "and land is acquried" and ending with "sub section (1) of section 63" the words "any land is acquired or comes in to possession of any person or fanily after the date of Commencement of the Amendment Act and in Consequance there of the total extenet of land needed by such person or family exceed the ceiling area permitted under section 63", shall be substituted.

(ii) For the proviso the following explanation shall be substituted, namely.—

"*Explanation* :—In this section "bequest" includes,

(i) Gift made in contemplation of death, and

(ii) Gift to tak effect after the happening of any event."

Sri N. Huthchamasthi gowda.—my amendment is self explanatory.

SRI M. S. KRISHNAN.—I have suggestion to make Madam. We have been sitting since 10, o'clock. Some of us we had no time to go home and take food. I request that a brief adjournaof the House would enable all of of us to take some coffee.

MADAM SPEAKER.—We will adjourn at 3.30pm

MADAM SPEAKER.—The question is.

That for clause 46, the following clause shall be substituted, namely.—

"46. *Amendment of section 64* :—In section 64 of the Principal Act.—

(i) for the words commencing from "and land is acquired" and ending with "sub-section (1) of section 63" the words "and land is acquired or somes into possession of any person or family after thedate of if commencement of the Amendment Act and inconsequence thereof the total extent of land held by such person or family exceeds the ceiling area permitted nnder section 63" shall be substituted.

(ii) for the proviso, the following Expalantion shall be substituted, namely;—

"*Exaplanvtion.*— In this section "bequest" includes

(i) gift made is intemdlation of death; and

(ii) gift to take effect after the happening of the event"

The motion was adopted

MADM SPEAKER.—Clause 46 as amended. The question is.

"That clause, 46 as amended, do stand part of the Bill."

The motion was adopted

Clause, 46. as emended was added to the Bill.

MADAM SPEAKER.—Clause 47. Since there are no amendments, I will put the clause. The question is.

"That clause 47, do stand part of the Bill.

The motion was adopted

Clause 47 was added to the Bill.

CLAUSE 48.

Madam Speaker.—There is an amendment by the Minister

Sri N. Hutchmasti gowda —I move that for sub-clause (1), the following sub-clause shall be substituted, namely.

"(1) For sub-section (1), the following sub-section shall be substituted, namely.

(1)'(*a*) Every person who on the date of commencement of the Amend ment Act holds ten acres of A claes or B clsss lands referred to in Part A of Schedule I or twenty acres of C class lands or forty acres of of D class refrred to in the said schedule, shall within ninety days after the said date;

(*b*) every person who acquires land in excess of the extent specified in clause (a) in any manner referred to in section 64; and

(*c*) every person whose land is deemed to be in excess of the celing area under section 65A, shall within the prescribed period furnish a declaration the Tahsildar within whose jurisdiction the hold ing of such person or the greater part thereof is situated containing the following particulars, namely.—

(i) particulars of all the lands;

(ii) particulars of the members of the family, and

(iii) such other particulars as may be prescribed.

After sub-clause (1) the following shall be inserted :

(1A) where a person holds different classes of land mentioned in sub-section (1), the total extent of land held by such person shall, for the purposes of this section be determined by converting all classes of land into any one class in accordance with the following formula namely.—

One acre of A clars cr B class land=to acres of C class land 4 acres of D class and.

Madam Speaker.—Amendment moved :

"That for sub-clause (1), the following sub-clause shall be substituted, namely.—

"(1) For sub-section (1), the following sub-section shall be subsitituted, namely.—

(1)'(*a*) Every person who on the date of commencement of the Amendment Act holds ten acres of A class of B Class lands referred to in Part A of Schadule I or twenty acres of C class lands or forty acres of D class referred to in the said schedule, shall within ninety days atfer the said date.

(MADAM SPEAKER)

(*b*) every person who acquires land in excess of the extent specified in clause (a) in any manner referred to in section 64, and

(*c*) every person whose land is deemed to be in excess of the ceiling area under section 55A, shall within the prescribed period furnish a declaration to the Tahsildar within whose jurisdiction the holding of such person or the greater part thereof is situated containing the following particulars, namely.—

(i) particulars of all the lands.

(ii) particulars of the members of the family and

(iii) such other particulars as my be preseribed.

That after sub-clause (1) the following shall be Inserted :

"(1A) where a person holds different classes of land mentioned in sub-section (1), the total extent of land held by such person shall, for the purposes of this section determined by converting all classes of land into any one class in accordance with following formula namely.—

One acre of *A* class or *B* class land 1 two acres of *C* class land 4 acres of *D* class land."

There is an amendment by Sri T. R Shamanna. He may move it.

SRI T. R. SHAMANNA.—I beg to move :

"That in Clause 48 after the para (1)(a) add the following proviso, namely —

"That in case of valid reasons on application by the aggrieved party he may apply to the concerned Assistant Commissoner for extension of time to file the declaration and the Commissioner may grant time up to 15 days for filing the necessary declaration.

MADAM SPEAKER.—Amendment Moved :

"That is Class 48 after the para (1) (a) add following provisod namely.—

"That in Cas of valid reasons application by the aggrived party he may apply to the concerned Assistant Commissioner for extension of of this to fit the diclaretion and the Commissioner may grant time upto 15 day for filing the necessory declaration.

†ಶ್ರೀ ಎನ್. ಹುಚ್ಚಮಾಸ್ತಿಗೌಡ :—ಈ ತಿದ್ದುಪಡಿಯ ಉದ್ದೇಶ ಏನೆಂದರೆ, ಸೀಲಿಂಗ್ ಲಿಮಿಟ್‌ಗಿಂತ ಹೆಚ್ಚಿಗೆ ಜಮೀನು ಇರುವವರು, ಅದನ್ನು ಡಿಕ್ಲೇರ್ ಮಾಡಿಕೊಂಡು ಸರ್ಕಾರಕ್ಕೆ ಸರೆಂಡರ್ ಕೊಡಬೇಕಾಗುತ್ತದೆ. ಆದರೆ ಮಾರ್ಜಿನ್‌ನಲ್ಲಿರುವವರು ಅನುಮಾನ ಬಂದು ಕಾಲಕ್ಕೆ ಸರಿಯಾಗಿ ಅವರು ಡಿಕ್ಲೇರ್ ಮಾಡಿಕೊಳ್ಳುವುದಕ್ಕೆ ಅವಕಾಶ ಇಲ್ಲದಿರಬಹುದು ಎನ್ನುವ ದೃಷ್ಟಿಯಿಂದ, ಅದನ್ನು ತಪ್ಪಿಸಿ ೧೦ ಎಕರೆ 'ಎ' ಕ್ಲಾಸ್ ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ. ೧೦ ಎಕರೆ ಇದೆ ಮತ್ತು ೧೩ ಎಕರೆ ಇದೆ. ಇಂತಹ ಸಂದರ್ಭದಲ್ಲಿ ೧೦ ಎಕರೆಗಿಂತ ಕೆಳಪಟ್ಟು ಒಂದು ಹಂತವನ್ನು ಗೊತ್ತು ಮಾಡಿ, ಆ ಹಂತಕ್ಕೆ ಮೇಲ್ಪಟ್ಟು ಜಮೀನನು ಇಟ್ಟುಕೊಂಡಿರುವವರು ಡಿಕ್ಲೇರ್ ಮಾಡಿಕೊಳ್ಳಬೇಕು. ಕಡಿಮೆ ಜಮೀನು

ಇರುವವರೆಗೆ ತೊಂದರೆಯಾಗುವುದಿಲ್ಲ. ಈ ತಿದ್ದುಪಡಿಯ ಪ್ರಕಾರ ಎಲ್ಲರೂ ಡಿಕ್ಲೇರ್ ಮಾಡಿಕೊಳ್ಳುವ ಅಗತ್ಯವಿಲ್ಲ. ಎ. ಮತ್ತು ಬಿ. ತರಗತಿಯ ೧೦ ಎಕರೆ ಜಮೀನು ಇಟ್ಟುಕೊಂಡಿರುವವರು, 'ಸಿ' ದರ್ಜೆಯ ೨೦ ಎಕರೆ ಜಮೀನು ಇಟ್ಟುಕೊಂಡಿರುವವರು, 'ಡಿ' ತರಗತಿಯ ೪೦ ಕರೆ ಜಮೀನು ಇಟ್ಟುಕೊಂಡಿರುವವರು ಡಿಕ್ಲೇರ್ ಮಾಡಿಕೊಳ್ಳಬೇಕು ಎಂದು ಈ ತಿದ್ದುಪಡಿಯಲ್ಲಿರತಕ್ಕದ್ದು. ಮತ್ತು ಅದಕ್ಕಿಂತ ಹೆಚ್ಚಿಗೆ ಸಂಪಾದನೆ ಮಾಡಿಕೊಳ್ಳತಕ್ಕದ್ದನ್ನು ಅವರು ಡಿಕ್ಲೇರ್ ಮಾಡಿಕೊಳ್ಳಬೇಕು.

ಇನ್ನು ಸೆಕ್ಷನ್ ೬೫ (ಎ) ಪ್ರಕಾರ ಬೇರೆ ವಿಧದಲ್ಲಿ ಅಂದರೆ, ಈ ಕಾನೂನು ಜಾರಿಗೆ ಬಂದ ಮೇಲೆ ಕೆಲವು ಭೂಮಿಗೆ ನೀರಿನ ಅನುಕೂಲ ಸಿಗಬಹುದು. ಅಂಥ ಸಂದರ್ಭಗಳಲ್ಲಿ ಸಹ ಮೂರು ಮತ್ತು ನಾಲ್ಕನೆಯ ತರಗತಿಯ ಭೂಮಿಯು ಒಂದು-ಎರಡನೆಯ ತರಗತಿಯ ಭೂಮಿಯಾಗಿ ಬದಲಾವಣೆಯಾಗಬಹುದು. ಅಂಥ ಸಂದರ್ಭದಲ್ಲಿ ಅವರೆಲ್ಲರೂ ಡಿಕ್ಲೇರ್ ಮಾಡಿಕೊಳ್ಳ ಬೇಕೆಂಬ ಉದ್ದೇಶ ಇವರಲ್ಲಿ ಇದೆ. ಇನ್ನು ಮೂರು ನಾಲ್ಕನೆಯ ವರ್ಗದ ಜಮೀನನ್ನು ಒಂದನೆ ವರ್ಗಕ್ಕೆ ಪರಿವರ್ತನೆ ಮಾಡಿದಾಗ ಅದು ಒಂದು ಸೀಲಿಂಗಿಗಿಂತೆ ಜಾಸ್ತಿಯಾಗಬಾರದು. ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳುತ್ತೇನೆ.

SRI T. R. SHAMANNA.—Madam, I beg to move.

"That" in clause 48, add a new proviso 1 (b), namely :—

(b) "While calculating the maximum ceiling of a person, consideration has to be given to the land held by him in other States also."

MADAM SPEAKER.—Amendment moved.

"That" in clause 48, add a new proviso 1 (b , Namely :—

(b) "While calculating the maximum ceiling of a person, consideration has to be given to the land held by him in other States also."

ಶ್ರೀ ಟಿ. ಆರ್. ಶಾಮಣ್ಣ.—ನಾನು ೪೮ನೇ ವಿಧಿಯಲ್ಲಿ ಎರಡು ತಿದ್ದುಪಡಿಗಳನ್ನು ಸೂಚಿಸಿದ್ದೇನೆ. ಇದರ ಉದ್ದೇಶವೇನೆಂದರೆ, ಈಗ ಇರತಕ್ಕಂತಹ ಜಮೀನು ಎಷ್ಟು ಇದೆ ಎಂದು ಹೇಳುವುದಕ್ಕೆ ಮೂರು ತಿಂಗಳ ಕಾಲಾವಕಾಶ ಬೇಕು. ಅನೇಕ ಸಂದರ್ಭಗಳಲ್ಲಿ ಅವನು ಕಾಯಿಲೆ ಬಿದ್ದಿರುವಾಗಲೋ ಅಥವಾ ಊರಲ್ಲಿ ಇಲ್ಲದಿರುವಾಗಲೋ ಈ ರೀತಿ ಮೂರು ತಿಂಗಳು ಮಾಡಿವರೆ ಸರಿಹೋಗುತ್ತದೆ ವಿಶೇಷವಾದ ಸಂದರ್ಭಗಳಲ್ಲಿ ಮತ್ತೊಂದು ಅವಕಾಶ ಕೊಡಬೇಕಾಗುತ್ತದೆ. ಮತ್ತು ಪುನಃ ಅಸಿಸ್ಟೆಂಟ್ ಕಮಿಷನರಿಗೆ ಅಪೀಲ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಕೈಮೀರಿದ ಸಂದರ್ಭಗಳಲ್ಲಿ ಇಂಥ ಒಂದು ಅವಕಾಶ ಇರಬೇಕೆಂದು ನಾನು ಈ ತಿದ್ದುಪಡಿಯನ್ನು ತಂದಿದ್ದೇನೆ.

ಈ ಕಾಯಿದೆಯಲ್ಲಿ ಒಂದು ವಿಚಾರವನ್ನು ನಾವು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ ಮೈಸೂರು ರಾಜ್ಯದಲ್ಲಿ ಅನೇಕ ಜಮೀನುಗಳನ್ನು ಹೊಂದಿರತಕ್ಕವರು ನೆರೆ ರಾಜ್ಯಗಳಾದ ತಮಿಳುನಾಡು ಆಂಧ್ರ ಮುಂತಾದ ಕಡೆಗಳಲ್ಲಿ ಸಹ ಜಮೀನನ್ನು ಹೊಂದಿಕೊಂಡಿರುತ್ತಾರೆ. ಅಂಥವರು ಇಲ್ಲಿ ಒಂದು ಸೀಲಿಂಗನ್ನು ಇಟ್ಟುಕೊಂಡು ಅಲ್ಲಿ ಸಹ ಜಮೀನು ಇಟ್ಟುಕೊಂಡಿರುತ್ತಾರೆ ಒಂದು ಪ್ರಾಂತ್ಯದಲ್ಲಿ ಒಂದು ಯುನಿಟ್ ಇಟ್ಟುಕೊಂಡು ಇನ್ನೊಂದು ಯುನಿಟ್ ಬೇರೆ ರಾಜ್ಯದಲ್ಲಿ ಇಟ್ಟುಕೊಂಡರೆ ಅದು ಡಿಸ್ಕ್ರಿಮಿನೇಶನ ಮಾಡಿದ ಹಾಗೆ ಆಗುತ್ತದೆ. ತಮಗೆ ಇದರ ಬಗ್ಗೆ ಅಧಿಕಾರ ಇಲ್ಲದಿದ್ದರೆ ಕೇಂದ್ರ ಸರ್ಕಾರಕ್ಕೆ ಆದರೂ ಬರೆದು ಇದನ್ನು ಸರಿಪಡಿಸುವುದಕ್ಕೆ ಏನಾದರೂ ಪ್ರಯತ್ನ ಮಾಡಬೇಕು. ಉದಾಹರಣೆಗೆ ನನ್ನ ಮಿತ್ರರೊಬ್ಬರಿಗೆ ಮೈಸೂರಿನಲ್ಲಿಯೂ ಜಮೀನು ಇದೆ, ನೆರೆ ರಾಜ್ಯವಾದ ಆಂಧ್ರದಲ್ಲಿಯೂ ೫೦ ಎಕರೆ ಇದೆ. ಅದರ ಬಗ್ಗೆ ಸರ್ಕಾರದವರು ಯೋಚನೆ ಮಾಡಬೇಕು. ಏಕೆಂದರೆ ಇನ್‌ಕಂ ಟ್ಯಾಕ್ಸ್ ಲಾದಲ್ಲಿ ಇನ್ನೊಂದು ರಾಜ್ಯದಲ್ಲಿ ಇನ್‌ಕಂ ಬಂದರೂ ಅದನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಾರೆ. ಹಾಗೆ ಇವರಲ್ಲಿ ಸಹ ಒಂದು ಪ್ರೊವಿಜನನ್ನು ಅಳವಡಿಸುವುದಕ್ಕೆ ಸಾಧ್ಯವೇ ಎಂಬುದನ್ನು ವಿಚಾರ ಮಾಡಬೇಕಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಬೇರೆ ರಾಜ್ಯಗಳಲ್ಲಿ ಜಮೀನು ಇದ್ದರೆ ಅದರ ಬಗ್ಗೆ ನಾವು ಹತೋಟಿಯನ್ನಿಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಒಂದು ಪಕ್ಷ ಡಿಕ್ಲೇರ್ ಮಾಡಿಕೊಂಡರೂ ಬೇರೆ ರಾಜ್ಯದಲ್ಲಿ ಇದ್ದುದನ್ನು ಸರೆಂಡರ್ ಮಾಡಿಕೊಳ್ಳಬಹುದು. ಆದ್ದರಿಂದ ಹಾಗೆಯೇ ಅದನ್ನು ಕೈಬಿಟ್ಟಿದ್ದೇನೆ.

ಶ್ರೀ ಪಿ. ಎನ್. ಪಾಟೀಲ್.—ಒಂದು ಕಡೆ ೭೫ ಎಕರೆ ಇನ್ನೊಂದು ಕಡೆ ೧೦೦ ಜಾಸ್ತಿ ಇದ್ದರೆ ಎರಡನ್ನೂ ಸರೆಂಡರ್ ಮಾಡುತ್ತಾರೆಯೋ ಮತ್ತು ಹಾಗೆ ಮಾಡದಿದ್ದರೆ ಏನಾದರೂ ಒಂದು ಪೀನಲ್ ಕ್ಲಾಸ್ ಇಟ್ಟುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ಮಿಸ್‌ಯೂಸ್ ಆಫ್ ಡ್ಯೂ ಪ್ರೊಸೆಸ್ ಆಫ್ ಲಾ ಆಗಂತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಒಂದು ಪಕ್ಷ ನಾವು ಡಿಕ್ಲೇರ್ ಮಾಡಿಸಿ ಸರೆಂಡರ್ ಮಾಡುತ್ತೇವೆ ಎಂದು ಹೇಳಿದರೂ ಅದನ್ನು ಯಾವ ರೀತಿ ಮಾಡಬೇಕೆಂಬುದನ್ನು ಪಕ್ಕದ ರಾಜ್ಯದವರೊಡನೆ ವ್ಯವಹರಿಸಿ ಮತ್ತು ಕೇಂದ್ರ ಸರ್ಕಾರದೊಡನೆ ಸಹ ವ್ಯವಹರಿಸಿ ಮಾಡಬಹುದೇ ಎಂಬುದನ್ನು ಯೋಚನೆ ಮಾಡಬಹುದು. ಹಿಂದೆ ಆಗಿರುವ ಅನುಭವ ನೋಡಿಕೊಂಡು ಮುಂದಿನ ಕ್ರಮ ಕೈಗೊಳ್ಳಬೇಕಾಗುತ್ತದೆ.

MADAM SPEAKER.—The question is :

"That in clause 48 after para 1 (a) add the following proviso, namely.—

"That in case of valid reasons on application by the aggrieved posts he may apply to the concerned Assistant Commissioner for extension of time to file the declaration and the commissioner may grant time upto 15 days for filing the necessary declaration."

The motion was negatived.

MADAM SPEAKER.—The question is :

"That in clause 48, add a new proviso (1) (b), namely.—

while calculating the maximum ceiling of a person, consideration has to be given to the land held by him in other States also."

The amendment was negtived.

MADAM SPEAKER.—I will now part the amendment by the Hon. Minister. The question is :

MADAM SPEAKER.—The question is :

"That for sub-clause (1), the following sub-clause shall be substituted, namely.—

"(1) For sub-section (1), the following sub-sections shall be substituted, namely.—

(1) '(*a*) Every person who on the date of commencement of the Amendment Act holds ten acres of A class or B class lands referred to in Part A of Schedule I or twenty acres of C class lands or forty acres of D class referred to in the said schedule, shall within ninety days after the said date ;

(*b*) every person who acquires land in excess of the extent specified in clause (a) in any manner referred to in section 64; and

(*c*) every person whose land is deemed to be in excess of the ceiling area under section 65A, shall within the prescribed period furnish a declaration to the Tahsildar within whose jurisdiction the holding of such person or the greater part thereof is situated containing the following particulars, namely.—

(*i*) particulars of all the lands ;

(*ii*) particulars of the members of the family; and

(*iii*) such other particulars as may be prescribed.

After sub-clause (1) the following shall be inserted:

(1A) where a person holds different classes of land mentioned in sub-section (1), the total extent of land held by such persons shall for the purposes of this section be determined by converting all classes of land into any one class in accordance with the following formula, namely one acre A class or B class land, : two acres of C class land= 4 acres of D class land"

The motion was adopted.

MADAM SPEAKER.—The question is:

"That clause 48, as amended, stand part of the Bill.

The motion was adopted

Clause 48 as amended was added to the Bill.

Clause 49

MADAM SPEAKER.—Clause 49, there are no amendments. The question is:

"That clause 49 as stand part of the Bill."

The motion was adopted.

Clause 49 was added to the Bill.

Clause 50

MADAM SPEAKER.—There is an amendment.

SRI N. HUCHMASTHI GOWDA.—I move:

"That the proposed sub-section (1C) shall be omitted."

MADAM SPEAKER.—Amendment moved:

"That the proposed sub-section (1C) shall be omitted."

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಹಿಂದೆ ೬೩ (೮)ನೇ ಕ್ಲಾಜನ್ನು ಬದಲಾಯಿಸಿರುವುದರಿಂದ ಇದು ಕಾನಸಿಕ್ವೆನಷಿಯಲ್ ಅಮೆಂಡಮೆಂಟು. ಇದಕ್ಕೆ ಒಪ್ಪಿಗೆ ಕೊಡಬೇಕು.

MADAM SPEAKER.—The question is.

"That the proposed sub-section (1C) shall be omitted."

The motion was adopted.

MADAM SPEAKER.—The question is.

"That clause 50 as amended do stand part of the Bill."

The motion was adopted.

Clause 50, as amended, was added to the Bill.

MADAM SPEAKER.—Clauses 51 & 52 There are no amendments. The question is.

"That clauses 51 and 52 are stand part of the Bill."

The motion was adopted.

Clauses 51 and 52 were added to the Bill.

CLAUSE 52-A.

SRI N. HUCHMASTHI GOWDA.—I move.

"That after clause 52, the following clause shall be inserted, namely.—

"52-A-Amendment of Section 71.

In section 71 of the principal Act, in sub-section (1), after the words "by a tenant," the words "of a soldier or seaman" shall be inserted."

MADAM SPEAKER.—Amendment moved.

"That after clause 52, the following clause shall be inserted, namely.—

"52-A-Amendment of Section 71.

In section 71 of the principal Act, in sub-section (1), after the words "by a tenant," the words "of a soldier or seaman" be inserted."

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ಉದ್ದೇಶ ಮಿಲಿಟರಿಯವರ ಗೇಣಿದಾರರ ವಿಚಾರದಲ್ಲಿ ಈ ಕಾನೂನು ಅನ್ವಯಿಸಬೇಕು ಎಂಬುದು.

MADAM SPEAKER.—The question is.

"That after clause 52, the following clause shall be inserted, namely.—

"52-A-Amendment to sub-section 71 —

In section 71 of the principal Act, in sub-section (1), after the words "by a tenant," the words "of a soldier or seaman" be inserted."

The amendment was adopted.

Clause 52A, was added to the Bill.

MADAM SPEAKER.—Clause 53 there is an amendment by the Hon. Minister.

Sri N. Huchmasthi Gowda.—I move.

"That in the proposed section 72.

"(1) to sub-section (1), the following proviso shall be added, namely.—

"Provided that where the land taken over by the State Government is D class referred to in Part A of Schedule I, an amount equal to twenty times the net annual income thereof shall by payable.

"(2) in sub-section (2), the words, brackets and letter 'clause (b) of the proviso to that clause (if applicable to that land) of" shall be omitted.

Madam Speaker.—Amendment moved.

"That in the proposed section 72—

"(1) to sub-section (1), the following proviso shall be added, namely.—

"Provided that where the land taken over by the State Government is D class referred to in Part A of Schedule I, an amount equal to twenty times the net annual income thereof shall be payable.

"(2) in sub-section (2), the words, brackets and letter 'clause (b) of the proviso to that clause (if applicable to that land) of" shall be omitted."

The Hon. Member Sri T. R. Shamanna as move his amendment to amendment.

Sri T. R. Shamanna.—I move

"That in clause 53 in proviso to sub-section (1) delete 'twenty' and insert 'thirty.'

Madam Speaker.—Amendment moved.

"The in clause 53, in sub-section (1) delite 'twenty' and insert 'thirty.'

Madam Speaker.—The question is.

"That in clause 53 in proviso to sub-section 1 delete 'twenty' and insert 'thirty.'

The amendment was negatived.

MADAM SPEAKER.—The question is.

That in the proposed section 72—

"(1) to sub-section (1), the following proviso shall be added, namely.—

Provided that where the land taken over by the State Government is D class referred to in Part A os Schedule I, an amount equal to twenty times the net annual income thereof shall be payable

"(2) in sub-section (2), the words, brackits and letter "clause (b) of the proviso to that clause (if applicable to that land) of" shall be omitted.

The motion was adopted.

MADAM SPEAKER —The question is.

That clause 53, amendmed, destand part of the Bill.

The motion was adopted.

Clause 53, as amendmed, was added to the Bill.

Clauses 54 and 55.

MADAM SPEAKER.—The question is.

"That clauses 54 and 55 dostand part of the Bill."

The motion was adopted.

Clauses 54 and were added to the Bill.

Clauses 56

MADAM SPEAKER.—There an amendment they may be moved.

SRI N. HUCHMASTHI GOWDA.—I move.

"That in the proposed section 77.—

(i) for the Explanation to sub-section (1), the following Explanation shall be substituted.—

"*Explanation.*—"Displaced tenant" means a person who has been deprived of agricultural land of which he was a tenant, on account of.—

(i) acquisition of such land under the Land Acquisition Act, or

(ii) resumption of such land by a soldier or a seaman for personal cultivation,"

(iii) after sub-section (3), the following sub-section shall be inserted, namely.—

"(4) Notwithstanding anything contained in sub-section (1), the State Government may if it considers that any land vesting in it is required for any public purpose reserve such land for such purpose.'

MADAM SPEAKER.—Amendment moved.—

That in the proposed section 77.—

(i) for the Explanation to sub-section (1), the following Explanation shall be substituted.—

"*Explanation*.—"Displaced tenant" means a person who has been deprived of agricultural land of which he was a tenant, on account of.—

(i) acquisition of such land under the Land Acquisition Act, or

(ii) resumption of such land by a soldier or a seaman for personal cultivation,"

(iii) after sub-section (3), the following sub-section shall be inserted, namely.—

"(4) Notwithstanding anything contained in sub-section (1), the State Government may if it considers that any land vesting in it is required for any public purpose reserve such land for such purpose.'

SRI T. R. SHAMANNA.—I move.

"That at page 56 in the proposed section 77 for the words "not less than one unit each" the word "not less than two units" shall be substituted.

MADAM SPEAKER.—Amendment moved.

"That at page 56 in the proposed section 77 for the words 'not less than one uniteach' the words 'not less than two uniteach' shall be substituted.

SRI T. R. SHAMANNA.—I move. (Amendment to the amendment)

"That after sub-clause (iii) and after sub-para 4, add a new sub-clause viz, land to be reserved for Gomala (land for common grazing of cattle) and Gundthop."

MADAM SPEAKER.—Amendment to the amendment moved.

That after sub-clause (iii) and after sub-para 4, add a new sub-clause, viz., land to be reserved for Gomala (land for common grazing of cattle) and Gundthop."

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಮಾನ್ಯ ಅಧ್ಯಕ್ಷರೇ. ಸರ್ಕಾರದವರ ವಶಕ್ಕೆ ಬಂದ ಭೂಮಿಯನ್ನು ಯಾವ ರೀತಿ ವಿಲೇವಾರಿ ಮಾಡಬೇಕೆಂಬುದನ್ನು ನನ್ನ ತಿದ್ದುಪಡಿಯಲ್ಲಿ ಹೇಳಿದ್ದೇನೆ. ಮೊದಲು ಡಿಸ್‌ಪ್ಲೇಸ್ಡ್ ಟೆನೆಂಟ್ ಎಂದಿತ್ತು. ಈಗ ಅದಕ್ಕೆ ಯಾರು ತಮಗೆ ಭೂಮಿ ತಮ್ಮ ಸಾಗುವಳಿಗೆ ಬೇಕೆಂದು ಕೇಳುತ್ತಾರೆಯೋ ಅಂಥವರಿಗೆ ಅನ್ನತಕ್ಕ ವರ್ಗದಲ್ಲಿ ಸೈನ್ಯದಲ್ಲಿರತಕ್ಕವರಿಗೆ ಮತ್ತು ಸೀಮನ್ನುಗಳಿಗೆ ಎಂದು ಸೇರಿಸಿದೆ. ಇನ್ನು ಇದರ ಜೊತೆಗೆ ಸರ್ಕಾರದ ವಶದಲ್ಲಿರತಕ್ಕ ಭೂಮಿಯಲ್ಲಿ ಸಾರ್ವಜನಿಕರ ಉಪಯೋಗಕ್ಕೆ ಬೇಕೆಂದು ಕಂಡುಬರತಕ್ಕ ಸಂದರ್ಭದಲ್ಲಿ ಆ ಸಂದರ್ಭಕ್ಕೆ ಎಷ್ಟು ಅಗತ್ಯವೋ ಅಷ್ಟು ಭೂಮಿಯನ್ನು ಸರ್ಕಾರ ಇಟ್ಟುಕೊಳ್ಳುವುದಕ್ಕೆ ಒಂದು ಅಧಿಕಾರವನ್ನು ಇಟ್ಟುಕೊಂಡಿದೆ ಎಂಬುದನ್ನೂ ಇವರಲ್ಲಿ ಅಡಕ ಮಾಡಿದೆ. ಈ ಎರಡು ತಿದ್ದುಪಡಿಗಳನ್ನು ತಂದಿದೆ. ಇದನ್ನು ಮಾನ್ಯ ಸಭೆಯವರು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ನೆನ್ನೆಯಿಂದಲೂ ನಾನು ಈ ಮಸೂದೆಯ ವಿಚಾರದಲ್ಲಿ ಸರ್ಕಾರದೊಂದಿಗೆ ಸಹಕಾರ ಮಾಡಿಕೊಂಡು ವಿರೋಧಪಕ್ಷದ ನಾಯಕರು ಹೋಗುತ್ತಿದ್ದಾರೆಂಬ ಅಪಾದನೆಯನ್ನು ನನ್ನ ಬಗ್ಗೆ ಕೆಲವು ನನ್ನ ಮಿತ್ರರು ಮಾಡುತ್ತಿರುವುದರಿಂದ ಈ ವಿಚಾರದಲ್ಲಿ ಒಂದು ಹೇಳಿಕೆ ಕೊಡತಕ್ಕ ಅಗತ್ಯ ಉಂಟಾಗಿದೆ. ಸರ್ಕಾರದವರು ನಮ್ಮ ರಾಜ್ಯದಲ್ಲಿ ಯಾರಿಗೆ ಭೂಮಿ ಇಲ್ಲವೋ ಅಂಥವರಿಗೆ ಉಳುವುದಕ್ಕೆ ಭೂಮಿ ಕೊಡುತ್ತೇವೆಂದು ಹೇಳುತ್ತಿದ್ದಾರೆ. ಸಧ್ಯ ಆ ಬಡಪಾಯಿಗಳಿಗೆ ಅಷ್ಟಾದರೂ ಆದರೆ ಸಾಕೆಂಬ ಸದುದ್ದೇಶದಿಂದ ನಾನು ನನ್ನ ತಿದ್ದುಪಡಿಯನ್ನು ಮೂವ್ ಮಾಡದೆ ಕೈಬಿಟ್ಟಿದ್ದೇನೆ. ಇದೇ ನನ್ನ ಮೂಲ ಉದ್ದೇಶ.

ಶ್ರೀ ಟಿ. ಆರ್. ಶಾಮಣ್ಣ.—ಅಧ್ಯಕ್ಷರೆ ಇಲ್ಲಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದು ಅಷ್ಟು ಮುಖ್ಯವಲ್ಲ. ಇಲ್ಲಿ ಬಂದಿರತಕ್ಕ ಜಾಲೂಕತೆಯಲ್ಲಿ ಅದನ್ನು ಹಂಚುವುದರಲ್ಲಿ ನಾವು ಎಲ್ಲಿಯಾದರೂ ದೇವಸ್ಥಾನಗಳಿಗೆ ಹೋದಾಗ ಅಲ್ಲಿ ಭಿಕ್ಷಕರು ಹತ್ತು ಜನ ಬಂದು ಮುತ್ತಿಕೊಂಡಾಗ ನಾವು ಒಂದು ಹತ್ತು ಪೈಸೆ ನಾಣ್ಯವನ್ನು ಕೈಲಿ ಹಾಕಿ ನೀವೆಲ್ಲರೂ ಅದನ್ನು ಹಂಚಿಕೊಳ್ಳಿ ಎಂದು ಹೇಳುವಂತೆ ಈ ದಿವಸ ಸರ್ಕಾರದವರು ಅದೇರೀತಿ ಇಲ್ಲಿ ಹೇಳಿದ್ದಾರೆ, ಆವರೆ ಸರ್ಕಾರದವರು ಇಲ್ಲಿ ಜನರಿಗೆ ಹಂಚುವುದಕ್ಕೆ ಎಷ್ಟು ಭೂಮಿ ಸಿಕ್ಕುತ್ತದೆ ಎಂಬುದನ್ನು ಕಂಡುಹಿಡಿಯದೆ ಈ ಮಸೂದೆಯನ್ನು ತಂದುದೆಲ್ಲ ದೊಡ್ಡ ತಪ್ಪು. ಅದನ್ನು ಮಾಡದೆ ಇಂಥ ನಿರ್ಧಾರಕ್ಕೆ ಇವರು ಕೈಹಾಕಬಾರದಾಗಿತ್ತು. ಇಲ್ಲಿ ಯಾರಿಗೂ ಒಂದು ಯೂನಿಟ್ಟಿಗಿಂತ ಕಡಮೆ ಭೂಮಿ ಕೊಡಬಾರದೆಂದು ಹೇಳಿದೆ. ಎಲ್ಲರನ್ನೂ ತೃಪ್ತಿಪಡಿಸೋಣ ಇದ್ದುದರಲ್ಲೇ ಎಂದು ಕೆಲವು ಸಂದರ್ಭಗಳಲ್ಲಿ ಟ್ರಸ್ಟ್ ಬೋರ್ಡಿನಲ್ಲಿ ಒಂದು ೬೦ ಇಂಟು ೪೦ ಅಡಿಗಳ ಸೈಟನ್ನು ಇಬ್ಬರಿಗೆ ೩೦ ಇಂಟು ೨೦ ಎಂದು ಎರಡು ಭಾಗ ಮಾಡಿ ಹಂಚಿದ್ದಾರೆ, ಹಾಗೆ ಇಲ್ಲಿಯೂ ಆಗಬಾರದೆಂಬುದು ನನ್ನ ತಿದ್ದುಪಡಿಯ ಉದ್ದೇಶ. ಒಂದು ಎಕರೆ ಕೊಟ್ಟರೇನು ಪ್ರಯೋಜನ ? ಅವನು ಎತ್ತಿಗೆ ೫೦೦ ರೂಪಾಯಿ, ಗೊಬ್ಬರ ೧೫೦ ರೂಪಾಯಿ ಬಿತ್ತನೆ ಬೀಜ ಇತರೇ ವೆಚ್ಚಗಳಿಗೆ ನೂರು ರೂಪಾಯಿ ಮತ್ತು ಪ್ರೀಮಿಯಂ ಕಟ್ಟುವುದಕ್ಕೆ ಹಣ ಇಷ್ಟೆಲ್ಲಾ ಆ ಒಂದು ಎಕರೆಯಲ್ಲಿ ದುಡಿದು ತಾನು ತನ್ನ ಸಂಸಾರವನ್ನೂ ನಡೆಸುವುದಕ್ಕೆ ಸಾಧ್ಯವೇ ಎಂಬುದು ನನ್ನ ಪ್ರಶ್ನೆ ಆದಕ್ಕಾಗಿ ಕನಿಷ್ಟಪಕ್ಷ ಒಬ್ಬರಿಗೆ ೨ ಎಕರೆಗಳನ್ನಾದರೂ ಕೊಡಬೇಕೆಂದು ತಿದ್ದುಪಡಿ ತಂದಿದ್ದೇನೆ. ಇದನ್ನು ಒಪ್ಪದಿದ್ದರೆ ಆ ಒಂದು ಎಕರೆ ಯಾರಿಗೆ ಕೊಡುತ್ತಾರೋ ಅವನು ಅದನ್ನು ಯಾರಿಗೋ ಮಾರಾಟ ಮಾಡಿ ತಾನು ಮಾಮೂಲಿನಂತೆ ಕೂಲಿಗಾರನಾಗೇ ಉಳಿಯುತ್ತಾನೆ ಆದ್ದರಿಂದ ನನ್ನ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಇನು ನನ್ನ ಎರಡನೇ ತಿದ್ದುಪಡಿ ಇರುವುದೇನೆಂದರೆ—ಮಾಮೂಲಾಗಿ ಒಂದೆಲ್ಲಾ ಪ್ರತಿಯೊಂದು ಗ್ರಾಮದಲ್ಲೂ ವ್ಯವಸಾಯಕ್ಕೆ ಜನರು ಎಷ್ಟು ಪ್ರಾಮುಖ್ಯತೆಯನ್ನು ಕೊಡುತಿದ್ದರೋ ಅಷ್ಟೇ ಪ್ರಾಮುಖ್ಯತೆಯನ್ನು ಪ್ರತಿಗ್ರಾಮಕ್ಕೂ ಅಗತ್ಯವಾಗಿ ಒಂದು ಗುಂಡತೋಪು ಮತ್ತು ಒಂದು ಗೋಮಾಳ ಇರಬೇಕೆಂಬುದನ್ನು ಕಡ್ಡಾಯವಾಗಿ ಪಾಲಿಸಿಕೊಂಡು ಬರುತ್ತಿದ್ದರೂ ಆದರೆ ಈಗ ಎಲ್ಲ ಕಡೆಯಲ್ಲೂ ಅರಣ್ಯ ಅನ್ನುವುದು ಹಾಳಾಗುತ್ತಿದೆ, ಗೋಮಾಳಗಳಂತು ಹೆಸರಿಲ್ಲದಂತಾಗಿವೆ. ಆದುದರಿಂದ ಈ ನಾನು ಹೇಳತಕ್ಕ ಉದ್ದೇಶಗಳಿಗೂ ಭೂಮಿಯನ್ನು ಬಿಡಬೇಕೆಂದು ಹೇಳಿ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾವು ಇಲ್ಲಿ ಒಂದು ಎಕರೆಗಿಂದ ಕಡಮೆ ಭೂಮಿ ಇರಬಾರದೆಂದು ಹೇಳಿರುವುದು ಒಂದನೇ ದರ್ಜೆ ಭೂಮಿಯನ್ನು ಅದು ಎರಡನೆ ದರ್ಜೆ ಭೂಮಿಯೆಂದರೆ ಅದು ಒಂದೂವರೆ ಎಕರೆ ಆಗಬಹುದು ಇಲ್ಲವೇ ಎರಡು ಎಕರೆಗಳಾಗಬಹುದು ೩ನೇ ದರ್ಜೆ ಭೂಮಿಯೊಂದರೆ ೫ ಅಥವಾ ಐದೂವರೆ ಎಕರೆಗಳಾಗಬಹುದು. ಇಲ್ಲಿಯವರೆಗೂ ಇದೇ ಆಧಾರದ ಪ್ರಕಾರ ಕೊಡುತ್ತಾ ಬಂದಿದೆ. ಏನೂ ಗತಿಯಿಲ್ಲದ ಒಬ್ಬ ವ್ಯವಸಾಯದ ಕೂಲಿಗಾರನ ಸಂಸಾರಕ್ಕೆ ಇಷ್ಟು ಜಮೀನನ್ನು ಕೊಟ್ಟರೆ ಅವನು ತನ್ನ ಜೀವನ ಮಾಡಿಕೊಳ್ಳಲಾರದೆ ಇನ್ನೂ ಜಮೀನು ಹೆಚ್ಚಾಗಿದ್ದರೆ ಹೆಚ್ಚಿಗೆ ಕೊಡುವುದಕ್ಕೇನು ಅಡ್ಡಿ ಇಲ್ಲ

ಇನ್ನು ಮಾನ್ಯ ಸದಸ್ಯರು ಗೋಮಾಳಕ್ಕೆ ಜಮೀನು ಬಿಡಬೇಕೆಂದು ಹೇಳಿದ್ದಾರೆ, ಆದರೆ ಇಲ್ಲಿ ಬಂದಿರುವುದೆಲ್ಲಾ ವ್ಯವಸಾಯದ ಜಮೀನು ಇದಕ್ಕೂ ಗೋಮಾಳದ ಭೂಮಿಗೂ ಸಂಬಂಧವಿಲ್ಲ. ಆದುದರಿಂದ ನಾನು ತಂದಿರುವ ತಿದ್ದುಪಡಿಯನ್ನೇ ಮಾನ್ಯ ಸದಸ್ಯರು ಒಪ್ಪಿಕೊಂಡು ತಮ್ಮ ತಿದ್ದುಪಡಿಯನ್ನು ವಾಪಸ್ ಪಡೆಯಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಒಬ್ಬ ಸದಸ್ಯರು ಸರ್ಕಾರದ ಅಂಕಿಅಂಶದ ಪ್ರಕಾರ ಎಷ್ಟು ಜಮೀನು ಹಂಚಲಿಕ್ಕೆ ಸಿಗುತ್ತದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮೊನ್ನೆ ಕೂಡ ಅಂಕಿಅಂಶ ಸಂಗ್ರಹಿಸಿದರು ಅದರ ಪ್ರಕಾರ ಎಂಟೂವರೆ ಲಕ್ಷ ಎಕರೆಇದೆ ಅದರಲ್ಲಿ ಮೆಜಾರಿಟಿಗೆ ಬಂದವರಿಗೆ ಒಂದೊಂದು ಸೀಲಿಂಗನಷ್ಟು ಬಿಡುವುದಕ್ಕೆ ಅವಕಾಶವಿರುವುದರಿಂದ ಅರ್ಧ ಜಮೀನು ಅದಕ್ಕೆ ಹೋದರೂ ಇನ್ನೂ ೪ ಲಕ್ಷ ಎಕರೆ ಉಳಿಯುವುದು ಎಂದು ಸರ್ಕಾರದ ಅಂಕಿಅಂಶದ ಪ್ರಕಾರ ಗೊತ್ತಾಗಿದೆ.

ಶ್ರೀ ಎಚ್.ಡಿ. ದೇವೇಗೌಡ.—ಜತ್ತಿ ಸಮಿತಿ ವರದಿ ಪ್ರಕಾರ ಅದರ ಆಧಾರದ ಮೇಲೆ ಸರ್ಪ್ಲಸ್ ಜಮೀನೆಷ್ಟಿದೆ ಎಂದು ಹೇಳುವರು. ಬದರಿನಾರಾಯಣರವರು ಹಿಂದೆ ಭಾಷಣ ಮಾಡುತ್ತಾ ತಮಗೆ ೨ ಸಾವಿರ ಎಕರೆ ಜಮೀನಿದೆಯೆಂದು ಹೇಳಿದ್ದರು ಈಗ ೨೨ ಎಕರೆ ಇದೆ ಎಂದು ಹೇಳುತ್ತಿದ್ದಾರೆ.

ಶ್ರೀ ಎಂ.ಎಸ್. ಕೃಷ್ಣನ್.—ಮಠಗಳಿಗೆ ಕೊಡುವಾಗ ೨ ಲಕ್ಷ ಎಕರೆ ಹೋಗುವುದು.

ಶ್ರೀ ಎನ್ ಹುಚ್ಚಮಾಸ್ತಿಗೌಡ,—೧೯೭೦ರಲ್ಲಿ ಸಂಗ್ರಹಿಸಿರುವ ಅಂಕಿಅಂಶದ ಪ್ರಕಾರ ನಾನು ಹೇಳುವುದು

Madam Speaker.—I will put the amendments to the amendment moved by Sri T.R. Shamanna to the vote of the House. The question is

"That after sub-class (iii) and after sub-para (iv) add a new sub-class, *viz* land to be reserved for GOMALA (Land for common grazing of cattle) and GUNDTHOP.

The Motion was negatived

Madam Speaer.—I will put the amendment of the Hon'ble Minister to the vote of the House

The question is,—

"That in the proposed section 77.—

(i) for the Explanation to sub-section (1) the following Explanation shall be substituted.

Explanation,—Displaced tenant means a person who has been deprived of agricultural land of which he was a tenant, on account of—

(i) acquisition of such land under the Land Acquisition Act, or

(ii) resumption of such land by a soldier or a seaman for personal cultivation

(iii) after sub-section (3), the following sub-section shall be inserted, namely.—

"(4) Notiwithstanding anything contained in sub-section (1), the State Government may if it considers that any land vesting in it is required for any public purpose reserve such land for such purpose.

The Motion was adopted

MADAM SPEAKER.—The questions is—

" That at page 56 in proposed section 77 for the words not less than one unit each, the word Not less than two units each shall be substituted

The Motion was nagatived

MADAM SPEAKER.—The question is.—

" That clause 56 as amended to stand part of the Bill

The motion was adopted

Clause 56, as amended, was added to the Bill.

CLAUSE 57

SRI N. HUTCHAMASTHY GOWDA.—I beg to move :—

"That for the proposed sub-section (2), of section 78 the following sub-section shall be substituted, namely :—

"(2) The purchase price shall be an amount equal to fifteen times the net annual income referred to in sub-section (2) of section 72 plus the amount if any, payable under sub-section (4) of that section."

MADAM SPEAKER.—Amendment moved :—

"That for the proposed sub-section (2), of section 78 the following sub-section shall be substituted, namely :—

"(2) The purchase price shall be an amount equal to fifteen times the net annual income referred to in sub-section (2) of section 72 plus the amount, if any, payable under sub-section (4) of that section."

‡SRI C. M. ARUMUGHAM.—Madam Speaker, I would like to make one submission, because Sri Deve Gowda, at present, is not functioning as the Leader of the Opposition. The Bill was referred to the Joint Select Committee and the report of the Committee is there. Now that they are bringing in amendments which are more than the actual Bill itself, the essence of the Joint Committee is lost. Therefore, these amendments must be referred to some other Joint Select Committee headed by the Leader of the opposition Sri Deve Gowda.

MADAM SPEAKER.—.........and followed by Sri C. M. Arumugham!

SRI C.M. ARUMUGHAM.—If the number of amendments now brought forward are move than the actual clauses of the Bill, what is it we are doing?

MADAM SPEAKER.—It is just an amending Bill!

SRI C. M. ARUMUGHAM.—The members of the Joint Select Committee from that side I know will agree with me that their opinion is lost.

SRI KAGODU THIMMAPPA.—They have become impotent!

SRI C. M. ARUMUGHAM.—Those members should either protest strongly or tender their resignation.

We are also not given enough time to study their amendments.

MADAM SPEAKER.—Enough time has been given. Let us do some business. We have got to finish this Bill today. I request the Hon members to co-operate with the chair.

SRI C. M. ARUMUGHAM.—We are prepared to co-operate with the Chair, but not with the Government. Madam Speaker, our leader, all the time who was a tiger has become a cat sitting on a wall, and we do not know which side he will jump

(Laughter)

SRI T. R. SHAMANNA.—I have amendment to amendment. I beg to move :—

"That for the proposed sub-section (2) of section 78, the following sub-section shall be substituted, namely :—

> "(2) The purchase price shall be an amount equal to fifteen times the net annual income referred to in sub-section (2) of section 72 plus the amount, if any, payable under sub-section (4) of that section; *or the enhanced amount payable under this Act in special cases.*"

MADAM SPEAKER.—Amendment moved :—

"That for the proposed sub-section (2) of section 78, the following sub-section shall be substituted, namely :—

> "(2) The purchase price shall be an amount equal to fifteen times the net annual income referred to in sub-section (2) of section 72 plus the amount, if any, payable under sub-section (4) of that section; *or thi enhanced amount payable under this Act* in *special cases*"

‡ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸರಕಾರದ ವಶಕ್ಕೆ ಬಂದಿರುವ ಭೂಮಿಯನ್ನು ಸೆಕ್ಷನ್ ೭೭ರ ಪ್ರಕಾರ ಹಂಚಿಕೆ ಮಾಡುವಾಗ ಎಷ್ಟು ಬೆಲೆ ಗೊತ್ತುಮಾಡಬೇಕು ಎಂಬುದು ಈ ಸಂದರ್ಭದಲ್ಲಿ ಇರುವುದು. ಕೊನೆಯಲ್ಲಿ ೧೫ರಷ್ಟು ಕೊಡಬೇಕೆಂದಿದೆ. ಅದರ ಜೊತೆಗೆ ಬೇರೆ ೭೨(೪)ರಲ್ಲಿ ಇರುವ ಹಾಗೆ ಎಲ್ಲ ಖಾಯಂ ಕಟ್ಟಡ, ಬಾವಿ ಮುಂತಾದ್ದಿವೆ ಅಲ್ಲ ಅದರ ಬೆಲೆ ಸಹ ಹಾಕಬೇಕು ಎಂದಿದೆ. ಇದೇ ಈ ತಿದ್ದುಪಡಿಯ ಉದ್ದೇಶ. ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

‡ಶ್ರೀ ಟಿ. ಆರ್. ಶಾಮಣ್ಣ.—ನನ್ನ ತಿದ್ದುಪಡಿ ಉದ್ದೇಶವಾದರೂ ಇಷ್ಟೆ, ಎಲ್ಲಾ ರೀತಿಯ ಜಮೀನಿಗೂ ಕೂಡ ಒಂದೇ ರೀತಿಯ ಸೂತ್ರ ಹಾಕಿ ಇರಿಸುವುದು ಎಂದರೆ ಹೇಗೆ? ಭೂಕಂದಾಯಕ್ಕೂ ಜಮೀನು ಬೆಲೆಗೂ ಯಾವ ಸಂಬಂಧವೂ ಇಲ್ಲ. ಇದರ ಜೊತೆಗೆ ತಂದಿರುವ ಮಸೂದೆಯಲ್ಲಿ ಒಂದು ಮುಖ್ಯವಾದ ಅಂಶ ಮರೆತಿರುವುದು ವಿಷಾದಕರ. ಅನೇಕ ಜಮೀನುಗಳನ್ನು ಮಾರ್ಟಗೇಜ ಮಾಡಿರುವರು ಅಥವ ಭೋಗ್ಯಕ್ಕೆ ಹಾಕಿರುವರು. ಆ ಸಾಲ ತೀರಿಸಲು ಕೊಡುವ ಪರಿಹಾರ ಸಾಕಾಗುವುದಿಲ್ಲ. ಪರಿಹಾರ ಕ್ಕಿಂತ ಸಾಲ ಹೆಚ್ಚಾಗಿರುವುದು. ಹಾಗಿರುವಾಗ ಸಾಲ ತೀರಿಸುವಷ್ಟಾದರೂ ಜಮೀನಿಗೆ ಪರಿಹಾರ ಕೊಡಬೇಕು. ಆದುದರಿಂದ ಪರಿಹಾರ ಹೆಚ್ಚಿಸಲು ಅವಕಾಶವಿರಬೇಕು ಎಂದು ಹೇಳಿದ್ದೇನೆ,

ಏಕೆಂದರೆ, ೧೦ ಸಾವಿರ ರೂಪಾಯಿಗಳಿಗೆ ಜಮೀನನ್ನು ಆಧಾರ ಅಥವಾ ಭೋಗ್ಯ ಮಾಡಿಕೊಂಡು ೩-೪ ಸಾವಿರ ರೂಪಾಯಿಗಳನ್ನು ಇವರಿಗೆ ಕೊಟ್ಟಿರುತ್ತಾನೆ. ಅವನಿಗೆ ಇರತಕ್ಕ ಸಾಲ ೩-೪ ಸಾವಿರ ರೂಪಾಯಿ, ನೀವು ಕಾಂಪನ್ಸೇಷನ್ ಕೊಡತಕ್ಕದ್ದು [illegible]೫೦೦ ರೂಪಾಯಿ. ಅವನಿಂದ ಜಮೀನನ್ನು ನೀವು ತೆಗೆದುಕೊಂಡರೂ ಕೂಡ ಅವನು ತನ್ನ ಸಾಲವನ್ನು ತೀರಿಸುವುದಕ್ಕಾಗುವುದಿಲ್ಲ. ಕೆಲವು ಜಮೀನುಗಳು ಫಲವತ್ತಾಗಿರುತ್ತವೆ. ಅಂಥ ಸಂದರ್ಭದಲ್ಲಿ ಬೆಲೆಯನ್ನು ಸ್ವಲ್ಪ ಹೆಚ್ಚುಕಡಿಮೆ ಕೂಡ ಬೇಕಾಗುತ್ತದೆ. ನ್ಯಾಯವಾದ ರೀತಿಯಲ್ಲಿ ಕಲವು ಸಾರಿ ವೇರಿ ಮಾಡಬೇಕಾಗುತ್ತದೆ ಇದನ್ನು ಮಾಡುವುದಕ್ಕೋಸ್ಕರ ಈ ತಿದ್ದುಪಡಿಯನ್ನು ತೆಗೆದುಕೊಂಡು ಬಂದಿದ್ದೇನೆ.

‡ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಾನು ಕೊಟ್ಟಂಥ ತಿದ್ದುಪಡಿಯಲ್ಲಿ ಎ ಬಿ ಸಿ ತರಗತಿ ಜಮೀನು ಗಳಿಗೂ ಮತ್ತು ಡಿ ತರಗತಿ ಜಮೀನಿಗೂ ವ್ಯತ್ಯಾಸವಾಗಬೇಕಾಗುತ್ತದೆ. ಏನೆಂದರೆ, ...The purchase price shall be an amount equal to 15 times for A, B, C class of lands and 20 times for D class of lands. ಈ ರೀತಿ ನನ್ನ ತಿದ್ದುಪಡಿಯಲ್ಲಿ ವ್ಯತ್ಯಾಸ ಮಾಡಬೇಕಾಗುತ್ತದೆ. ನನ್ನ ತಿದ್ದುಪಡಿ ಆಗ ಈ ರೀತಿ ಆಗುತ್ತದೆ :

"That for the proposed sub-section 2 of section 78, the following sub-section shall be substituted namely :—

"(2) The purchase price shall in the case of,—

(i) A class, B class and C class land reformed to in part A of schedule I be an amount equal to fifteen times and

(ii) D class land refered to in Part A of the said schedule be an amount equal to twenty times,

"the net annual income to in sub-section (2) of section 72 plus the amount if any payable under sub-section(4) to that section."

MADAM SPEAKER.—I will put the amendment of Sri T. R. Shamanna of the vote of the house.

The question is:

"That for the proposed section (2) of section 78, the following sub-section shall be substituted:

"(2) The purchase price shall be an amount equal to fiteen times the net annual income referred to in sub-section (2) of section 72 plus the amount if any in payable under sub-section (4) of that section; *or the enhanced amount payable under these Act*, in special cases.

The motion was negetived.

MADAM SPEAKER.—Amendment moved :—

"That for the proposed sub-section (2), of section 78 the following sub-section shall be substituted, namely :—

"(2) The purchase price shall, in the case of,—

(i) A Class, B Class and C class lands referred to in Part A of Schedule I be an amount equal to fifteen times, and

(ii) D Class land referred to in Part A of the said Schedule be an amount equal to twenty times

the net annual income referred to in sub section (2) of section 72 plus the amount, if any, payable under sub-section (4) of that section."

The motion was adopted.

MADAM SPEAKER.—The question is :

"That clause 57, as amended, do stand part of the Bill."

The motion was adopted

Clause 57, as amended was added to the Bill.

CLAUSE 58

MADAM SPEAKER.—There are amendments they may be moved.

SRI N. HUTCHMASTRY GOWDA.—I beg to move.

"That in the proposed section 79B, in sub-section (1), in clause (b), in item (i), the following shall be added at the end, namely:—

"Other than an institution or trust referred to in sub-section (7) of section 63;"

MADAM SPEAKER.—Amendment moved :

"That in the proposed section 79B, in sub-section (1), in clause (b), in item (i), the following shall be added at the end, namely :—

"Other than an institution or trust referred to in sub-section (7) of section 63;"

SRI N. B. SIRDESAI.—Sir, I beg to move :

"That at page 70 after the proposed section 79B (iii) the following proviso shall be added :—

'Provided that the already established registered agricultural firms holding lands in the capacity of owner, tenants, mortgagees in possession or partners in cultivation may be allowed to get themselves registered as Co-operative Farming Societies as contemplated under Section 89 of the Bill and all the members of such Joint Firms shall be deemd to be the members of the Co-operative Farming Society."

MADAM SPEAKER.—Amendment moved :

"That at page 70 after the proposed section 79B (iii) the following proviso shall be added :—

'Provided that the already established registered Agricultural firms holding lands in the capacity of owner, tenants, mortgages in possession or partners in cultivation may be allowed to get themselves registered as Co-operative Farming Societies as contemplated under Section 89 of the Bill and all the members of such Joint Firms shall be deemed to be the members of the Co-operative Farming Society."

SRI T. R. SHAMANNA.—I beg to move :

"That at page 70, in the proposed section 79B (1) item (i) of clause (b) shall be deleted."

MADAM SPEAKER.—Amendment moved :

"That at page 70, in the proposed section 79B, item (i) of clause (b) shall be deleted."

ಶ್ರೀ ಎನ್. ಹುಚ್ಚಮಾಸ್ತಿಗೌಡ.--ರಿಲಿಜಿಯಸ್ ಇನ್‌ಸ್ಟಿಟ್ಯೂಷನ್ಸ್‌ಗಳು ಕೆಲವು ಸಾರ್ವಜನಿಕರ ಉಪಯೋಗಕ್ಕಾಗಿ ರಚನೆಯಾಗಿರತಕ್ಕವುಗಳು ಇವೆ. ಅವುಗಳಿಗೆ ಬೇರೆ ಅವಕಾಶ ಮಾಡಿಕೊಟ್ಟಿರುವುದರಿಂದ ಅವುಗಳನ್ನು ಬಿಟ್ಟು ಬೇರೆ ಸಂಸ್ಥೆಗಳು ಜಮೀನನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಇಲ್ಲ ಎಂದು ಈ ತಿದ್ದುಪಡಿಯನ್ನು ತಂದಿದ್ದೇವೆ ದಯವಿಟ್ಟು ಸಭೆ ಇದಕ್ಕೆ ಒಪ್ಪಿಗೆ ಕೊಡಬೇಕು.

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಚಿವರು ತಂದ ತಿದ್ದುಪಡಿಯ ತತ್ವವನ್ನು ನಾನು ಒಪ್ಪಿಕೊಂಡಿರುವುದರಿಂದ ನನ್ನ ತಿದ್ದುಪಡಿಯನ್ನು ವಾಪಸ್ ತೆಗೆದುಕೊಳ್ಳುತ್ತೇನೆ.

SRI T. R. SHAMANNA.—In view of the assurance given by the Hon. Minister, I withdraw my amendment.

The amendment was, by leave, withdrawn.

†SRI N. B. SIRDESAI.—My object in moving this amendment is that in Khanapur Taluk and in many parts of Mysore State such agricultural farms or associations have been established and registered under the Partnership Act and such farms or associations were not barred under the old Mysore Land Reforms Act 1961: But now the provisions of the new Land Reforms (Amendment) Bill, 1973, as reported by the Joint Select Committee, barrs the non-natural persons from holding the agricultural lands and they are required to file a declaration; there upon their lands vests in the State Government. As a consequence of this, many efficiently working associations shall have to be wound up. This will thus affect the production of foodgrains and such farms will be put to a heavy loss. I think the long cherished desire of late Prime Minister Pandit Nehru of having Joint cultivation in India will be frustrated if this is not barred. These associations and farms are doing social service; they have invested a lot of money for the development of land they will be

put to heavy loss if my amendment is not adopted I therefore submit that such firms and associations may be allowed to retain their land and they may be deemed to be as co-operative societies till they get themselves registered as such within one year from the commencement of this Act. I believe, that such minor changes will not affect neither the prescribed ceiling of land nor the tenor of the amendment legislation. In view of these, I submit that my proviso may be accepted and adopted by the House.

ಶ್ರೀ ಎನ್ ಹುಚ್ಚಮಾಸ್ತಿಗೌಡ.—ಅನೇಕ ಸಹಕಾರ ಸಂಸ್ಥೆಗಳು ಭೂಶಾಸನಕ್ಕೆ ಅವಕಾಶ ಇಲ್ಲದ ಹಾಗೆ ಮಾಡುವ ಉದ್ದೇಶದಿಂದ ರಚನೆಗಾಗಿ ಇದನ್ನು ದುರುಪಯೋಗಪಡಿಸಿಕೊಳ್ಳುತಕ್ಕಂಥ ನಿದರ್ಶನಗಳು ಇರುವುದರಿಂದ ಇದಕ್ಕೆ ಅವಕಾಶ ಇರಬಾರದು. ಮಾನ್ಯ ಸ್ನೇಹಿತರು ಹೇಳಿದ ಹಾಗೆ ಕಾನೂನಿನ ಕೆಳಗೆ ರಚಿತವಾದಂಥ ಸೊಸೈಟಿಗಳ ವಿನಹ ಉಳಿದ ಸೊಸೈಟಿಗಳು ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶವಿಲ್ಲ ಎಂದು ಇದೆ.

MADAM SPEAKER.—The question is :

"That in the proposed section 79B, in sub-section (1), in clause (b), in item (i), the following shall be added at the end, namely :—

'Other than an institution or trust referred to in sub-section (7) of section 63;"

The motion was adopted.

MADAM SPEAKER.—Now I will put the amendment of Sirdesai to the vote of the House.—The question is :

"That at page 70 after the proposed section 79B (iii) the following proviso shall be added :—

'Provided that the already established registered agricultural firms holding lands in the capacity of owner tenants, mortgagees in possession or partners in cultivation may be allowed to get themselves registered as Co-operative Farming Societies as contemplated under Section 89 of the Bill and all the members of such Joint Firms shall be deemed to be the members of the Co-operative Farming Society."

The motion was Negatived

MADAM SPEAKER.—The question is :

"That clause 58, as amended, do stand part of the Bill."

The motion was Adopted.

Clause 58 as amended was added to the Bill.

MADAM SPEAKER.—The Houses stands adjourned to meet after half an hour.

The House assembled at four of the clock and reassembled at thirty five minutes fast four of the clock.

MADAM SPEAKER.—in the chair.

CLAUSE 59.

SRI N. HUTCHMASTHI GOWDA : I beg to move :

"That for sub-clause (I), the following sub-clause shall be substituted, namely ;—

(i) in clause (b)—

(*a*) for item (iii), the following items shall be substituted namely ;—

"(iii) who is not an agricultural labourer ; or (v) who is disentitled under section 79A or section "79B to acquire or hold any land" ;

(*b*) in the proviso, for the words "to enable persons" the words "to enable a person other than a person disentitled to hold land under section 79A or 79B" shall be substituted"

MADAM SPEAKER : Amendment moved :

That for sub-clause (1), the following sub-clauses shall be substituted, namely :—

"(i) in clause (h)—

(*a*) For item (iii), the following items shall be substituted namely :—

(iii) who is not an agricultural labourer ; or (iv) who is disentitled under section 79A or Section 79B to acquire or hold any land" ;

(*b*) in the proviso, for the words "to enable persons" the words, figures and letters "to enable a person other than a person disentitled to hold land under section 79A or section79 B" shall be substituted

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾರಿಗೆ ಅಗ್ರಿಕಲ್ಚರಲ್ ಲ್ಯಾಂಡ್ ಟ್ರಾನ್ಸ್‌ಫರ್ ಮಾಡಬಾರದು ಎನ್ನುವುದಕ್ಕೆ ೭೯ (ಬಿ) ಕೂಡ ಸೇರಿಸಬೇಕು ಎನ್ನುವುದು ಅಷ್ಟೆ ಅದರಲ್ಲಿ ಇನ್‌ಸ್ಟಿಟ್ಯೂಷನ್ಸ್ ಸೇರ ಕೂಡದು ಎಂದು ಇದೆ. ಆದುದರಿಂದ ಅವರಿಗೆ ಪ್ರತಿಬಂಧಕವಿರುವುದರಿಂದ ಇಲ್ಲಿ ಇದನ್ನು ಸೇರಿಸಬೇಕು ಎನುವುದು ಇದರ ಉದ್ದೇಶ. ದಯಮಾಡಿ ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕು.

MADAM SPEAKER : The question is :

"That for sub-clause (1), the following sub-clauses shall be substituted, namely ;—

'(i) in clause (h)

(*a*) for item (iii), the following items shall be substituted namely :—

(iii) who is not an agricultural labourer ; or (iv) who is disentitled under section 79A or section 79B to acquire or hold any land"

(b) in the proviso, for the words "to enable persons" the words figures and letters: "to enable a person other than a person disentitled to hold land under section 79A or section 79B" shall be substituted.

The motion was adopted.

MADAM SPEAKER : The question is :

"That clause 59, as amended do stand part of the Bill"

The motion was adopted.

Clause 59 as amended was added to the Bill.

CLAUSE 60

SRI HUTCHMASTHI GOWDA : MADAM SPEAKER, I beg to move :—

(i) The proposed section 81 shall be renumbered as sub-section (1) of that section and in the renumbered sub-section (1)—

(a) In clause (b), after item (vii), the following item shall be inserted, namely ;—

"(viii) the Coffee Board constituted under the Coffee Board Act, 1948 (Central Act 7 of 1948),"

(b) in clause (d), for the words "the sale or mortgage of any land in favour of a sugar factory", the words "the sale in favour of a sugar factory for purposes of research or seed farm" shall be substituted ;

(ii) after sub-section (1), the following sub-sections shall be inserted, namely :—

"(2) The institutions referred to in clause (b) of sub-section (1) acquiring land or interest therein shall dispose of the same by sale, within the prescribed period ;

Provided that pending such sale the land may be leased for a period not exceeding one year at a time and the lease shall stand determined when the land is sold or on the expiry of one year, which ever is earlier and notwithstanding anything to the contrary in this Act or in any other law for the time being in force the leasee shall not be entitled to any right other than as such leasee in the land ;

(3) Any sale by the institution under this Section shall be subject to the other provisions of this Act."

MADAM SPEAKER : Amendment moved :—

(i) The proposed section 81 shall be renumbered as sub-section (1)of that section and in the renumbered sub-section (1).

(*a*) in clause (b), after item (vii), the fallowing item shall be inserted, namely ;—

" (viii) the Coffee Board constituted under the Coffee Board Act, 1948 (Central Act 7 of 1948) ; "

(*b*) in clause (d), for the words "the sale or mortgage of any laud in favour of a sugar factory", the words "the sale in favour of a sugar factory for purpose of research or seed farm" shall be substituted :

(ii) after sub-section (1), the following sub-sections shall be inserted, namely ;-

" (2) The institutions referred to in clause (b) of sub-section (1) acquiring land or interest therein shall dispose of the same by sale, within the prescribed period :

Provided that pending such sale the land may be leased for a period not exceeding one year at a time and the lease shall stand determined when the land is sold or on the expiry of one year, whichever is earlier and notwithstanding anything to the contrary in this Act or in any other law for the time being in force the leasee shall not be entitled to any right other than as such leasee in the land.

(3) Any sale by the institution under this Section shall be subject to the other provisions of this Act"

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ಉದ್ದೇಶವೇನೆಂದರೆ ಸಾಲ ಕೊಟ್ಟಿರತಕ್ಕ ಕೆಲವು ಸಂಸ್ಥೆಗಳು ಕೊ ಆಪರೇಟಿವ್ ಸೊಸೈಟಿಗಳು, ಷೆಡ್ಯೂಲ್ಡ ಬ್ಯಾಂಕ್ಸ್ ಅಥವಾ ಅಗ್ರೊ ಇಂಡಸ್ಟ್ರೀಸ್ ಕಾರ್ಪೊರೇಷನ್‌ನವರು, ಸಾಲ ಮರುಪಾವತಿ ಆಗದೆ ಇದ್ದಾಗ ಆ ಜಮೀನುಗಳನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿರಬೇಕು ಎನ್ನತಕ್ಕದ್ದು ಇದೆ. ಕಾಫಿ ಬೋರ್ಡಿನವರು ಕೂಡ ಸಾಲಗಳನ್ನು ಕೊಡುತ್ತಾರೆ. ಅದಕ್ಕೋಸ್ಕರ ಕಾಫಿ ಬೋರ್ಡನ್ನೂ ಇದಕ್ಕೆ ಸೇರಿಸಬೇಕು ಎನ್ನುವುದು ಮೊದಲನೇ ತಿದ್ದುಪಡಿ.

ಎರಡನೆಯದು ಸಕ್ಕರೆ ಕಾರ್ಖಾನೆಗಳಿಗೆ ಮಾರಾಟ ಮಾಡುವ ಸಂದರ್ಭದಲ್ಲಿ ರೀಸರ್ಚ್ ಮತ್ತು ಸ್ವಡಿ ಫಾರಂ ಮಾಡುವ ಉದ್ದೇಶದಿಂದ ಎಂದು ಸೇರಿಸಿದೆ.

ಮೂರನೆಯದಾಗಿ ಈ ಸಂಸ್ಥೆಗಳ ಸ್ವಾಧೀನಕ್ಕೆ ಬಂದಂಥ ಜಮೀನನ್ನು ಯಾವರೀತಿ ಲೀಸ್ ಮಾಡುವುದಕ್ಕಾಗಲೀ ಮಾರಾಟ ಮಾಡುವುದಕ್ಕಾಗಲೀ ಅವಕಾಶವಿರಬೇಕು ಎಂದು ಮುಂದೆ ಇರತಕ್ಕ ತಿದ್ದುಪಡಿಯಲ್ಲಿದೆ. ಒಂದು ವರ್ಷದವರೆಗೆ ಅವರು ಲೀಸ್ ಮಾಡುವುದಕ್ಕೆ ಅವಕಾಶವಿರಬೇಕು ಮತ್ತು ಲೀಸ್ ಪೀರಿಯಡ್ ಒಳಗೆ ಗೇಣಿದಾರನಿಗೆ ಯಾವ ವಿಧವಾದ ಹಕ್ಕೂ ಬರುವುದಿಲ್ಲ ಎನ್ನುವುದು ಇದರಲ್ಲಿ ಇರುವುದು. ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

Madam Speaker : I will put the amendment to vote.

The question is :—

(1) The proposed section 81 shall be renumbered as sub-section (1) of that section and in the renumbered sub-section (1)—

(*a*) in clause (b), after item (vii), the following item shall be inserted, namelly :—

" (viii) the Coffee Board constituted under the Coffee Board Act, 1948 (Central Act 7 of 1948);"

(*b*) in clause (d), for the words "the sale or mortgage of any land in favour of a sugar factory" the words 'the sale in favour of a sugar factory for purposes of research or seed farm" shall be substituted ;

(ii) after sub-section (1), the following sub-sections shall be inserted, namely :—

" (2) The institutions referred to in clause (b) of sub-section (1) acquiring land or interest therein shall dispose of the same by sale, within the prescribed period ;

Provided that pending such sale the land may be leased for a period not exceeding one year at a time and the lease shall stand determined when the land is sold or on the expiry of one year, whichever is earlier and notwithstanding anything to the contrary in this Act or in any other law for the time being in force the leasee shall not be entitled to any right other than as such leasee in the land ;

(3) Any sale by the institution under this Section shall be subject to the other provisions of this Act."

The motion was adopted.

Madam Speaker ; I will now put the amended clause.

The question is :

That clause 60. as amended do stand part of the Bill.

The motion was adopted.

Clause 60 as amended was added to the Bill.

Madam Speaker.—The question is—

"That clause 61 do stand part of the Bill,"

The motion was adopted.

Clause 61, as amended, was added to the Bill.

NEW CLAUSE 61A

SRI N. HUTCHMASTHY GOWDA.—Madam, I beg to move "That after clause 61 the following clause shall be inserted, namely.—

"61A. *Amendment of Section 82.*—In section 82 of the principal Act,—

(i) the words 'Court or other' shall be omitted.

(ii) After the words 'of this Act' the words 'as they stood before and as they stand after the date of commencement of this Amendment Act' shall be inserted."

MADAM SPEAKER.—Amendment moved—

"that after clause 61, the following clause shall be inserted, namely.—

"61A. *Amendment of section 82.*—In Section 82 of the principal Act,—

(i) the words 'Court or other' shall be omitted.

(ii) After the words 'of this Act' the words 'as they stood before and as they stand after the date of commencement of this Amendment Act' shall be inserted."

ಶ್ರೀ ಎನ್. ಹುಚ್ಚಮಾಸ್ತಿ ಗೌಡ.—ಇದರ ಉದ್ದೇಶ ಈ ಕಾನೂನು ಜಾರಿಗೆ ತರುವುದಕ್ಕೆ ಹಿಂದೆ ಇದ್ದ ವ್ಯವಹಾರಗಳನ್ನು ಮತ್ತು ಇದು ಜಾರಿಗೆ ಬಂದ ಮೇಲೆ ಬರುವ ವ್ಯವಹಾರಗಳನ್ನು ಸರಿಯಾಗಿ ತಿಳಿದು ಕೊಂಡು ಮಾಡಲು ಇಲ್ಲಿರುವ ರೆವೆನ್ಯೂ ಅಧಿಕಾರಿಗಳಿಗೆ ಹಾಗೂ ಸಬ್‌ರಿಜಿಸ್ಟ್ರಾರುಗಳಿಗೆ ಅನುಕೂಲವಾಗಿರಲಿ ಎಂದು ಇದನ್ನು ಇಲ್ಲಿ ತರಲಾಗಿದೆ. ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕೆಂದು ಕೇಳುತ್ತೇನೆ.

MADAM SPEAKER.—The question is.—

"That after clause 61, the following clause shall be inserted, namely.—

"61A. *Amendment of Section 82.*—In Section 82 of the principal Act,—

(i) the words 'Court or other' shall be omitted.

(ii) After the words 'of this Act' the words 'as they stood before and as they stand after the date of commencement of this Amendment Act' shall be inserted."

The amendment was adopted.

Clause 61A was added to the Bill.

CLAUSE 62

SRI N. HUTCHMASTHY GOWDA.—Madam, I beg to move—

"That for clause 62 the following clause shall be substituted, namely.—

"62. *Amendment of Section 83.*—In Section 83 of the principal Act,—

(i) the words 'of this Act', the words 'as they stood before or as they stand after the date of commencement of the Amendment Act' shall be inserted ;

(ii) the following shall be added at the end, namely:—
The land in respect of which such transaction has taken place shall, as penalty, be forfeited to and vest in the State Government. No amout is payable therefore."

MADAM SPEAKER.—Amendment moved—

"That for clause 62, the following clause shall be substituted, namely.—

"62. *Amendment of Section 83.*—In Section 83 of the principal Act,—

(i) the words 'of this Act', the words 'as they stood before or as they stand after the date of commencement of the Amendment Act" shall be inserted ;

(ii) the following shall be added at the end, namely.—
The land in respect of which such transaction has taken place shall, as penalty, be forefeited to and vest in the State Government. No amount is payable therefore."

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ಉದ್ದೇಶ ಕಾನೂನು ಜಾರಿಗೆ ಬರುವುದಕ್ಕೆ ಪೂರ್ವಬಾವಿಯಾಗಿ ಆಗಿರತಕ್ಕ ವ್ಯವಹಾರಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಇದರಲ್ಲಿ ಏನಾದರೂ ಅಕ್ರಮವಾಗಿದೆ ಎಂದು ಕಂಡು ಬಂದರೆ ಮತ್ತು ಕ್ರಯವಾಗಿದೆ ಎಂದು ಕಂಡು ಬಂದರೆ ಅಂತಹ ಭೂಮಿಯನ್ನು ಸರಕಾರದ ವಶಕ್ಕೆ ತೆಗೆದುಕೊಳ್ಳಬೇಕು ಮತ್ತು ಆ ಭೂಮಿಗೆ ಯಾವ ರೀತಿ ಬೆಲೆ ಕೊಡಬೇಕು ಅದನ್ನು ನೋಡಿ ಕೊಡಲು ಅವಕಾಶ ಮಾಡಿಕೊಡಲಾಗಿದೆ. ಆದುದರಿಂದ ಸಭೆ ಇದಕ್ಕೆ ಒಪ್ಪಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

MADAM SPEAKER.—The question is—.

That for clause 62 the following clause shall be substituted, namely.—

"62. *Amendment of Section 83.*—In Section 83 of the principal Act,—

(i) the words 'of this Act', the words 'as they stood before or as they stand after the date commencement of the Amendment Act' shall be inserted ;

(ii) the following shall be added at the end, namely.—
The land in respect of which such transaction has taken place shall, as penalty, be forfeited to and vest in the State Government. No amount is payable therefore."

The amendment was adopted.

MADAM SPEAKER.—The question is—

"That clause 62, as amended, do stand part of the Bill."

The motion was adopted.

Clause 62, as amended, was added to the Bill.

CLAUSE 63

MADAM SPEAKER.—There are no amendment to clause 63. So, I shall put it to the House. The question is—

"That clause 63 do stand part of the Bill."

The motion was adopted.

Clause 63 was added to the Bill.

CLAUSE 64

SRI N. HUTCHMASTI GOWDA.—I beg to move.

That in the proposed section 104,—

(i) sub-section (2) and (3) shall be omitted ;

(ii) for the Explanation, the following Explanation shall be substituted, namely.—

"*Explanation.*—In this section 'plantation' means land used by a person principally for the cultivation of plantation crop and includes.

(i) any land used by such person for any purpose ancillary to the cultivation of such crop or for preparation of the same for the market; and

(ii) agricultural land interspersed within the boundaries of the area cultivated with such crop by such person not exceeding such extent as may be determined by the prescribed authority as necessary for the protection and efficient management of such cultivation."

MADAM SPEAKER.—Amendment moved.

"That in the proposed section 104,—

(i) sub-section (2) and (3) shall be omitted ;

(ii) for the Explanation, the following Explanation shall be substituted, namely.—

"*Explanation.*—In this section 'plantation' means land nsed by a person principally for the cultivation of plantation crop and includes—

(i) any land used by such person for any purpose ancillary to the cultivation of such crop or for preparation of the same for the market ; and

(ii) agricultural land interspersed within the boundaries of the area cultivated with such crop by such person not exceeding such extent as may be determined by the prescribed authority as necessary for the protection and efficient management of such cultivation."

Sri N. Hutchmasthygowda:—Madam, I beg to move—

"That in sub-section (1), the words and figures "the provisions of Section 110" shall be omitted.

Madam Speaker:—Amendment moved—

"That in sub-section (1), the words and figures, "the provisions of Section 110" shall be omitted.

Madam Speaker:—The hon. Member C. Byregowda may move his amendment to the amendment.

Sri C. Byregowda:—Madam, I beg to move—

that in the proposed item (i) shall be omitted.

2. In item (ii), "Explanation" (i) and (ii) shall be substituted by the following namely.—

"Explanation:—In this section 'plantation' means land used by a person principally for the cultivation of plantation crop and includes—(i) any land used by such person for any purpose ancilliary to the cultivation of such crop or for preparation of the same for the market, provided that such land lies within the boundary of the existing plantation and (ii) agricultural land surrounded on all sides by land cultivated with plantation crop by such person not exceeding such extent as may be determined by the prescribed authority as necessary for the protection and efficient management of such cultivation".

Madam Speaker:—Amendment moved:—

"That in the proposed, amendment, item (i) shall be omitted.

2. In item (ii), "Explanation" (i) and (ii) shall be substituted by the following, namely—

"Explanation:—In this Section 'plantation' means land used by a person principally for the cultivation of plantation crop and includes—(i) any land used by such person for any purpose ancilliary to the cultivation of such crop or for preparation of the same for the market, provided that such land lies within the boundary of the existing plantation and (ii) agricultural land surrounded on all sides by land cultivated with plantation crop by such person not exceeding such extent as may be determined by the prescribed authority as necessary for the protection and efficient management of such cultivation".

The hon. Member Sri Shamanna may move his amendment to the amendment.

SRI T. SHAMANNA:—Madam, I beg to move—

That a new proviso, may be added namely.—

"Provided that new plantation farmed after the present Act comes into force will be deemed to be non-plantational land''.

MADAM SPEAKER:—Amendment to amendment moved—

That a new proviso may in added namely.—

''Provided that new plantation farmed after the present Act comes into force will be deemed to be non-plantational land''.

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಮಾನ್ಯ ಅಧ್ಯಕ್ಷರೇ, ಇದನ್ನು ತರುವುದರ ಉದ್ದೇಶ ಹಿಂದಿನ ಕ್ಲಾಸುಗಳಿಗನುಗುಣವಾಗಿ ತರುವಾಗ (೨) ಮತ್ತು (೩)ನೇ ಕ್ಲಾಸುಗಳನ್ನು ಬಿಡಬೇಕಾಗುತ್ತದೆ, ಮುಂದೆ ಅಕ್ವೈರು ಮಾಡಲು ಯಾವ ಅಡ್ಡಿಯೂ ಇಲ್ಲ ಎಂದು ಇದರಲ್ಲಿ ಒಂದು ಎಕ್ಸಪ್ಲನೇಷನ್ ಕೂಡ ವಿವರವಾಗಿ ಸೇರಿಸಲಾಗಿದೆ, ಇದರಿಂದ ಎಲ್ಲರಿಗೂ ಸಹಾಯವಾಗಲಿ ಎಂದು ಸೇರಿಸಲಾಗಿದೆ. ಇತರ ಸಂಸ್ಥೆಗಳಂತೆ ಇದರಲ್ಲಿ ಕಾಫೀ ಬೋರ್ಡಿನವರು ಜಮೀನಿನ ಮೇಲೆ ಸಾಲ ಕೊಟ್ಟಿರುತ್ತಾರೆ. ಅವರಿಗೂ ಕೂಡ ಸಮರ್ಪಕವಾಗಿ ಕೆಲಸ ಮಾಡಲು ಸಹಾಯವಾಗುವಂತೆ ಇದರಲ್ಲಿ ಸೇರಿಸಬೇಕೆಂದು ಇಲ್ಲಿ ಸೂಚಿಸಲಾಗಿದೆ.

ಶ್ರೀ ಕಾಗೋಡು ತಿಮ್ಮಪ್ಪ:—ಅಂದರೆ ಕಾಫಿ ಪ್ಲಾಂಟರ್‌ಗಳು ಎಷ್ಟು ಬೇಕಾದರೂ ಜಮೀನು ಇಟ್ಟುಕೊಳ್ಳಬಹುದು ಅಲ್ಲವೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ:—ಒಂದು ಸಣ್ಣ ಮನೆ ಕಟ್ಟಿಕೊಳ್ಳುವುದಕ್ಕೆ ಮತ್ತು ಕಣಜಕ್ಕೆ ಜಾಗ ಇಟ್ಟುಕೊಳ್ಳುವುದಕ್ಕೆ ಅವಕಾಶವಿದೆ. ಆದರೆ ಇದು ಕಾಫಿ ಪ್ಲಾನ್ಟೇಷನ್ ಎಷ್ಟಿದೆ ಎಂಬುದರ ಮೇಲೆ ಹೋಗುತ್ತದೆ. ಆದರೆ ಇದು ಹೆಚ್ಚು ಇರುವುದಿಲ್ಲ. ಪ್ಲಾನ್ಟೇಷನ್ ಬೆಳೆಗಳು ಬೆಟ್ಟದ ತಪ್ಪಲಲ್ಲಿ ಆಗುತ್ತವೆ. ಎರಡು ಬೆಟ್ಟದ ಮಧ್ಯದಲ್ಲಿರುವ ಕಣಿವೆ ಇರುತ್ತದೆ, ಆ ಕಣಿವೆ ಪ್ರದೇಶ ಪ್ಲಾನ್ಟೇಷನ್ ಬೆಳೆಯಲು ಅನುಕೂಲಕ್ಕೋಸ್ಕರ ಬಹಳ ಅವಶ್ಯಕವಾಗಿ ಇರಬೇಕಾಗುತ್ತದೆ. ಆ ಪ್ರದೇಶದಲ್ಲಿ ನೀರಿನ ಬುಗ್ಗೆ ಇರುತ್ತದೆ. ಆ ನೀರನ್ನು ಎತ್ತಿ ಅವರು ವ್ಯವಸಾಯ ಮಾಡುತ್ತಾರೆ. ಕೆಲವರು ಇಂತಹ ಪ್ರದೇಶವನ್ನು ಉಪಯೋಗ ಮಾಡುವುದಿಲ್ಲ. ಖಾಲಿ ಬಿದ್ದಿರುತ್ತದೆ. ಆದರೆ ಕೆಲವರು ಅಂತಹ ಪ್ರದೇಶದಲ್ಲಿ ಬೆಳೆ ಬೆಳೆಯುತ್ತಾರೆ. ಇಂತಹ ಭೂಮಿಯು ಅವಶ್ಯಕವಾಗಿ ಅವರಿಗೇ ಇರಬೇಕು ಎಂಬ ಉದ್ದೇಶದಿಂದ, ಪ್ಲಾನ್ಟೇಷನ್ ಎನ್ನುವುದರಲ್ಲಿ ಇದನ್ನು ಸೇರಿಸಲಾಗಿದೆ ಆದರೆ ಇದನ್ನು ಎಷ್ಟಾದರೂ ಇಟ್ಟುಕೊಳ್ಳಬಹುದು ಎಂದು ಅರ್ಥವಲ್ಲ. ಮುಂದೆ ಇದಕ್ಕೆ ಯಾವುದಾದರೂ ಒಂದು ಅಥಾರಿಟಿಯನ್ನು ಗೊತ್ತು ಮಾಡಿ, ಈ ಪ್ಲಾನ್ಟೇಷನ್ ಬೆಳೆಗೋಸ್ಕರ ಎಷ್ಟು ಎಕರೆ ಇರಬೇಕು ಎಂಬುದನ್ನು ನಿರ್ಧಾರ ಮಾಡಿಕೊಡಬೇಕೆಂಬುದೇ ಇದರ ಉದ್ದೇಶ. ಈ ಪ್ಲಾನ್ಟೇಷನ್ ಬೆಳೆ ೧೧೦ರ ವಿಧಿಗೆ ಅನ್ವಯವಾಗಬಾರದು ಎಂದು ಇದ್ದರೂ ಸಹ ಯಾವಾಗ ಬೇಕಾದರು ಈ ಎಗಜೆಂಪ್ಷನನ್ನು ಕಿತ್ತು ಹಾಕುವುದಕ್ಕೆ ಸರ್ಕಾರಕ್ಕೆ ಅಧಿಕಾರವಿದೆ. ಆದರೆ ಯಾವಾಗಲೂ ಅವರ ತಲೆಯ ಮೇಲೆ ಕತ್ತಿ ಹಾರಾಡುವಂತೆ ಮಾಡುವುದು ಸರಿಯಲ್ಲ ಎಂದು ಈಗ ಇದ್ದಂಥ ಕಟ್ಟನ್ನು ತೆಗೆದುಹಾಕಲಾಗಿದೆ. ಮತ್ತು ಪ್ಲಾನ್ಟೇಷನ್ ಬೆಳೆಗಳಿಗೆ ಹೆಚ್ಚು ಕಟ್ಟುನಿಟ್ಟನ್ನು ಸೂಚಿಸುವುದು ಸೂಕ್ತವಲ್ಲ ಎಂದು ಈಗ ಇರುವಂತಹ ಆಕ್ಟಿಗೆ ಹೆಚ್ಚು ಅನುಕೂಲ ಮಾಡಿ ಕೊಡಬೇಕು ಎಂಬ ದೃಷ್ಟಿಯಿಂದ ಉದ್ದೇಶಪೂರ್ವಕವಾಗಿಯೇ ಈ ತಿದ್ದುಪಡಿಗಳನ್ನು ತರಲಾಗಿದೆ. ಇವುಗಳನ್ನು ಮಾನ್ಯ ಸಭೆ ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಸಿ. ಬೈರೇಗೌಡ:—ಮಾನ್ಯ ಅಧ್ಯಕ್ಷರೇ, ೬೪ನೇ ಕ್ಲಾಸ್‌ಗೆ ತಂದಿರತಕ್ಕಂಥ ತಿದ್ದುಪಡಿಯಲ್ಲಿ sub-section 2 and 3 shall be omitted ಎಂದು ಹೇಳಲಾಗಿದೆ. ಆದೇ ಜಾಯಿಂಟ್ ಸೆಲೆಕ್ಟ್ ಕಮಿಟಿಯ ರಿಪೋರ್ಟಿನಲ್ಲಿ

''Not with standing anything contained in sub-section 2 and 3 no person shall after the amending Act acquire......''

ಎಂದು ಇದೆ ೨೦ ಯೂನಿಟ್ ಮಾತ್ರ ಇನ್ನು ಮುಂದೆ ಅಕ್ವೈರ್ ಮಾಡಿಕೊಳ್ಳಬಹುದೆಂದು ಇರುವುದನ್ನು ಮಾನ್ಯ ಮಂತ್ರಿಗಳು ಕೈ ಬಿಡುವುದಕ್ಕೆ ಹೊರಟಿದ್ದಾರೆ. ಬೇರೆ ಕಡೆಗಳಲ್ಲಿ ಮಿತಿ ಮಾಡುವುದಕ್ಕೆ ಹೊರಡಿರುವಾಗ ಕಾಫಿ ಪ್ಲಾನ್ಟೇಷನ್‌ಗಳಿಗೆ ಮಾತ್ರ ರಿಯಾಯಿತಿ ಕೊಡುವುದಕ್ಕೆ ಕಾರಣವೇನು?

ಭೂಮಿಗೋಸ್ಕರ ಅನೇಕ ವರ್ಷಗಳಿಂದ ಹೋರಾಟ ಮಾಡುತ್ತಿರುವ ಜನರು ಇದ್ದಾರೆ. ಈ ಭೂಮಿಯನ್ನೇ ನಂಬಿ ಜೀವನ ಮಾಡುವವರು ಇದ್ದಾರೆ ಯಾರು ಭೂಮಿಯನ್ನೇ ನಂಬಿಕೊಂಡಿದ್ದಾರೋ ಅವರಿಗೆ ಭೂಮಿಯನ್ನು ಕೊಡಬೇಕೆಂದು ಈ ಮಸೂದೆಯನ್ನು ಇಲ್ಲಿ ತಂದು ಚರ್ಚೆ ಮಾಡುತ್ತಿದ್ದೇವೆ. ಆದರೆ ಇವೊತ್ತಿನ ದಿವಸ ಮಾನ್ಯ ಮಂತ್ರಿಗಳು ತಂದಿರತಕ್ಕಂಥ ತಿದ್ದುಪಡಿಯನ್ನು ನೋಡಿದರೆ. ಈ ಮೊದಲಿನ ಮೂಲ ತತ್ವಕ್ಕೆ ತಿಲಾಂಜಲಿ ಕೊಟ್ಟು ಪ್ಲಾನ್ಟೇಷನ್ ಹೆಸರಿನಲ್ಲಿ ಎಷ್ಟು ಬೇಕಾದರೂ ಜಮೀನು ಇಟ್ಟುಕೊಳ್ಳಬಹುದು, ಸೆಕ್ಷನ್ ೧೧೦ ಅನ್ವಯವಾಗುವುದಿಲ್ಲವೆಂದು ಹೇಳಿದ್ದಾರೆ.

ಇನ್ನು ಮುಂದೆ ಕೂಡ ಮಿತಿಗೆ ಒಳಪಡುವುದಿಲ್ಲವೆಂಬ ಭಾವನೆಯಿಂದ ಈ ಒಂದು ತಿದ್ದುಪಡಿ ತಂದಿದ್ದಾರೆ. ನಾನೇನು ಪ್ಲಾನ್ಟೇಷನ್ ಜಮೀನುಗಳನ್ನು ಹರಿದು ಎಲ್ಲರಿಗೂ ಹಂಚಿ ಎಂದು ಹೇಳುತ್ತಿಲ್ಲ. ಪ್ಲಾನ್ಟೇಷನ್ ಬೆಳೆ ಬೆಳೆಸಬೇಕಾದರೆ ಹೆಚ್ಚು ಪ್ರಮಾಣದಲ್ಲಿ ಜಮೀನು ಇರಬೇಕಾಗುತ್ತದೆ. ಇಲ್ಲದಿದ್ದರೆ ತೊಂದರೆಯಾಗುತ್ತದೆ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಈ ಪ್ಲಾನ್ಟೇಷನ್ ಬೆಳೆಗಳನ್ನು ಬಿಟ್ಟು, ಇತರ ಪ್ರದೇಶಗಳಲ್ಲಿ ಮಿತಿ ಹಾಕಿದರೆ ಅದರಲ್ಲಿ ಯಾವ ಸಾಮಾಜಿಕ ನ್ಯಾಯ ಅಡಗಿದೆ ಎಂದು ಕೇಳುತ್ತೇನೆ. ತಮ್ಮ ಮೂಲಭೂತವಾದ ತತ್ವ ಏನಿದೆ, ಅದರ ಅರ್ಥವಾದರೂ ಏನು ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇದಕ್ಕೆ ಕಾರಣ ಕೂಡ ಇದೆ. ಪ್ಲಾನ್ಟೇಷನ್ ಮಾಲೀಕರು ಮಠಾಧಿಪತಿಗಳು ಯಾವ ರೀತಿ ಸರ್ಕಾರದ ಮೇಲೆ ಪ್ರಭಾವ ತಂದರೋ ಅದೇ ರೀತಿಯಲ್ಲಿ ಇವರೂ ಸಹ ಸರ್ಕಾರದ ಮೇಲೆ ಒತ್ತಾಯ ಮತ್ತು ಪ್ರಭಾವ ತಂದಿದ್ದರಿಂದ, ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಕೊಟ್ಟಂತಹ ವರದಿಗೆ ತದ್ವಿರುದ್ಧವಾದಂಥ ನೀತಿಯನ್ನು ಅನುಸರಿಸುವುದಕ್ಕೆ ಹೊರಟಿದ್ದಾರೆ.

ಈ ಸರ್ಕಾರಕ್ಕೆ ಒಂದು ನಾಲಗೆ ಇದೆಯೋ ಅಥವಾ ಎರಡು ನಾಲಿಗೆಗಳು ಇದೆಯೋ ಎಂದು ಕೇಳುವುದಕ್ಕೆ ಬಯಸುತ್ತೇನೆ. ನಿಮಿಷ ನಿಮಿಷಕ್ಕೂ, ಘಳಿಗೆ ಘಳಿಗೆಗೂ ಬಣ್ಣವನ್ನು ಬದಲಾವಣೆ ಮಾಡುತ್ತಿದ್ದಾರೆ. ಮೂಲಭೂತವಾದ ತತ್ವಕ್ಕೆ ತದ್ವಿರುದ್ಧವಾದಂಥ ತಿದ್ದುಪಡಿಯನ್ನು ತಂದಿದ್ದಾರೆ. ಈ ರೀತಿ ತಿದ್ದುಪಡಿ ತರುವ ಉದ್ದೇಶ ಇದ್ದಿದ್ದರೆ ಜಾಯಿಂಟ್ ಸೆಲೆಕ್ಟ್ ಕಮಿಟಿಯನ್ನಾದರೂ ಏತಕ್ಕೆ ರಚನೆ ಮಾಡಬೇಕಾಗಿತ್ತು, ಮತ್ತು ಅದಕ್ಕಾಗಿ ಲಕ್ಷಾಂತರ ರೂಪಾಯಿಗಳನ್ನು ಏತಕ್ಕೆ ಖರ್ಚು ಮಾಡಬೇಕಾಗಿತ್ತು ಎಂದು ಕೇಳುತ್ತೇನೆ. ಈ ತಿದ್ದುಪಡಿಯನ್ನು ನೋಡಿದರೆ ಸರ್ಕಾರದವರು ಆ ಕಮಿಟಿಯವರ ವರದಿಯನ್ನು ಒಪ್ಪಿಕೊಳ್ಳುವುದಕ್ಕೆ ತಯಾರಾಗಿಲ್ಲ ಎಂಬುದು ಗೊತ್ತಾಗುತ್ತದೆ. ಪ್ಲಾನ್ಟೇಷನ್‌ಗೆ ಮಿತಿ ಇಲ್ಲದಿರುವುದರ ಜೊತೆಗೆ ಬೇರೆ ಭೂಮಿಯನ್ನು ಸಹ ಇಟ್ಟುಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ. ಪ್ಲಾನ್ಟೇಷನ್ ಮಧ್ಯದಲ್ಲಿರುವ ಭೂಮಿಗೆ ಬೇರೆಯವರು ಪ್ರವೇಶ ಮಾಡುವುದಕ್ಕಾಗುವುದಿಲ್ಲವಾದ್ದರಿಂದ ಅಂತಹ ಭೂಮಿಯನ್ನು ಪ್ಲಾನ್ಟೇಷನ್ ಒಡೆಯರು ಇಟ್ಟುಕೊಳ್ಳಬೇಕಾಗುತ್ತದೆ ಅದನ್ನು ನಾನು ಬೇಡ ಎಂದು ಹೇಳುವುದಿಲ್ಲ. ಇಂತಹ ಭೂಮಿಯನ್ನು ಇಟ್ಟುಕೊಳ್ಳುವುದಕ್ಕೆ ಅವಕಾಶ ಕೊಡಿ. ಆದರೆ ಪ್ಲಾನ್ಟೇಷನ್ ೫೦೦ ಎಕರೆ ಇದ್ದರೆ ಅದರ ಜೊತೆಗೆ ಬೇರೆ ಕಡೆಗಳಲ್ಲಿ ಫ್ಯಾಮಿಲಿ ಡೆಫನಿಷನ್ ಪ್ರಕಾರ ೧೦ ಎಕರೆ ಜಮೀನನ್ನು ಬೇರೆ ಇಟ್ಟುಕೊಳ್ಳಬಹುದು ಮತ್ತು ಮೇಜರ್ ಸನ್ಸ್ ಹತ್ತು ಜನ ಇದ್ದಾರೆ ೧೧೦ ಎಕರೆ 'ಎ' ತರಗತಿಯ ಜಮೀನು ಇಟ್ಟುಕೊಳ್ಳಬಹುದು ಎಂದು ಹೇಳುವುದಾದರೆ, ಜಮೀನಿಗೆ ಮಿತಿ ಹಾಕುವುದು ಎಲ್ಲಿಂದ ಬಂತು?

ಈ ಒಂದು ತತ್ವವನ್ನು ತಾವು ಅನುಸರಿಸುವುದಾದರೆ ಯಾರಿಗೂ ಭೂಮಿಯೇ ಸಿಗುವುದಿಲ್ಲ. ಮತ್ತು ಈ ತರಹದ ಒಂದು ಆಕ್ಟಿನಿಂದ ನಮ್ಮ ರಾಜ್ಯದ ಮುಕ್ಕಾಲು ಭಾಗಕ್ಕೆ ಪ್ರಯೋಜನವಾಗುವುದಿಲ್ಲ ಎಂದು ಹೇಳಬಹುದು. ಶೇಕಡ ೯೦ರಷ್ಟು ಜನರಿಗೆ ಹಂಚಲು ಭೂಮಿಯೇ ಸಿಗುವುದಿಲ್ಲ ಈ ಪರಿಸ್ಥಿತಿಯಿರುವುದರಿಂದ, ನನ್ನ ಒಂದು ತಿದ್ದುಪಡಿಯನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ ಮತ್ತು ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕೆಂದು ಹೇಳುತ್ತೇನೆ. ಇನ್ನೊಂದು ಏನೆಂದರೆ ಎರಡು ಮೂರು ಮೈಲು ದೂರದಲ್ಲಿ ಗದ್ದೆ ಇದ್ದರೆ ಒಂದು ಕಡೆ ಪ್ಲಾಂಟೇಶನ್ ಬೇಕು, ಇನ್ನೊಂದು ಕಡೆ ಗದ್ದೆ ಬೇಕೆಂದರೆ ಅರ್ಥವಿಲ್ಲದ ಮಾತು. ಅವರಿಗೆ ಏಕೆ ಇಂಥ ಅವಕಾಶ ಕೊಡುತ್ತೀರಿ? ಆದ್ದರಿಂದ ನನ್ನ ಅಮೆಂಡ್‌ಮೆಂಟನ್ನು ಒಪ್ಪಿಕೊಳ್ಳಬೇಕೆಂದು ಹೇಳುತ್ತೇನೆ.

3-00 P.M.

ಶ್ರೀ ಟಿ. ಆರ್. ಶಾಮಣ್ಣ : ಈಗ ಪ್ಲಾಂಟೇಶನಿನವರು ಎಷ್ಟು ಇಟ್ಟು ಕೊಂಡಿರುತ್ತಾರೆ ಅದನ್ನು ಇಟ್ಟುಕೊಳ್ಳಬಹುದೆಂದು ಹೇಳಿದ್ದೀರಿ. ಅದಕ್ಕೆ ಸರಿಯಾದಂತಹ ಕಾರಣಗಳನ್ನು ಕೊಟ್ಟು ಹೇಳಿಲ್ಲ. ನಾನು ತಂದಿರತಕ್ಕಂತಹ ತಿದ್ದುಪಡಿಯಲ್ಲಿ ಈಗ ಸಾವಿರಾರು ಎಕರೆ ಪ್ಲಾಂಟೇಶನ್ ಏನು ಮಾಡಿಕೊಂಡಿದ್ದಾರೆ, ಅವರು ಅದರಲ್ಲಿ ಬೇರೆ ಬೆಳೆಗಳನ್ನು ಸಹ ಬೆಳೆಯುವುದಕ್ಕೆ ಅವಕಾಶ ಇದೆ. ಆದ್ದರಿಂದ ಅವರು ಬೇರೆ ಬೆಳೆಗಳಿಗೆ ಅದನ್ನು ಉಪಯೋಗಿಸಿಕೊಳ್ಳಬಾರದು ಎಂದು ಈ ತಿದ್ದುಪಡಿಯನ್ನು ತಂದಿದ್ದೇನೆ ಆದ್ದರಿಂದ ಈ ಪ್ರೊವಿಸೊವನ್ನು ಹಾಕುವುದು ಒಳ್ಳೆಯದೆಂದು ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಸರ್ಕಾರದವರು ತೋಟಗಳಿಗೆ ವಿನಾಯಿತಿ ಕೊಡಬೇಕೆಂದು ಈ ಕೆಲಸ ಮಾಡಿದ್ದಾರೆ. ಮುಖ್ಯವಾಗಿ ಕಾಫಿ ಬೆಳೆಗೆ ಲಗತ್ತಾಗಿರತಕ್ಕಂತಹ ಪ್ರದೇಶವನ್ನು ಅವರಿಗೆ ಬಿಡಬೇಕೆಂದು ಮಾಡಿದ್ದಾರೆ. ನಾಳೆ ಕಾಫಿ ತೋಟಕ್ಕೆ ಒಂದು ಕಣ ಮಾಡುವುದಕ್ಕೆ ೨೦ ಎಕರೆ ಬೇಕು, ಸಸಿ ಹಾಕುವುದಕ್ಕೆ ಒಂದು ೨೦ ಎಕರೆ ಬೇಕು ಎಂದು ಕೇಳಬಹುದು. ಇದಕ್ಕೆ ತಾವು ಅವಕಾಶ ಮಾಡಿ ಕೊಡುತ್ತೀರಿ. ಆದ್ದರಿಂದ ಈ ರೀತಿ ಅವಕಾಶ ಮಾಡಿಕೊಟ್ಟರೆ ದೊಡ್ಡ ಪ್ರಮಾಣದಲ್ಲಿ ಜಮೀನು ಉಳಿಸಿಕೊಳ್ಳುವುದಕ್ಕೆ ಅವರು ಪ್ರಯತ್ನ ಮಾಡಬಹುದು. ಆದ್ದರಿಂದ ಎಷ್ಟೇ ದೊಡ್ಡ ಕಾಫಿ ಬೆಳೆಗಾರನಾದರೂ ೧೦ ಎಕರೆಯಷ್ಟು ಜಮೀನು ಇಟ್ಟು ಕೊಂಡರೆ ಸಾಕುಎಂದು ಮಾಡಬೇಕು. ಇಲ್ಲದಿದ್ದರೆ ಇದಕ್ಕಿಂತಲೂ ಹೆಚ್ಚು ಜಮೀನು ಇಟ್ಟುಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಒಂದು ಸೀಮಿತವಾದ ಪ್ರಮಾಣದಲ್ಲಿ ಕೊಡಬೇಕಲ್ಲದೆ, ಈ ರೀತಿ ಹೆಚ್ಚಿಗೆ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಬಾರದು. ಆದ್ದರಿಂದ ಅದನ್ನು ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಅದೇ ಈ ತಿದ್ದುಪಡಿಯ ಉದ್ದೇಶ. ಇನ್ನೊಂದು ಏನೆಂದರೆ, ಕಾಫಿ ತೋಟದ ಮಧ್ಯದಲ್ಲಿ ಬರತಕ್ಕಂತಹ ವ್ಯವಸಾಯ ಜಮೀನನ್ನು ಅವರಿಗೆ ಬಿಡುವುದು ಸ್ವಾಭಾವಿಕ. ಅಂಥ ಜಮೀನು ತೆಗೆದುಕೊಂಡು ಬೇರೆಯವರಿಗೆ ಹಂಚುವುದಕ್ಕಾಗುವುದಿಲ್ಲ. ಆದರೆ ಯಾವುದೋ ಒಂದು ಅಂಚಿನಲ್ಲಿ ಒಂದು ೨೫ ಎಕರೆ ಜಮೀನು ಇರುತ್ತದೆ. ಅದನ್ನು ಇಂಟರ್‌ಸಪರ್ಸ್‌ಡ್ ಲ್ಯಾಂಡ್ ಎಂದು ಹೇಳಿ ಕಾಫಿ ತೋಟದ ಪಕ್ಕದಲ್ಲಿ ಇಟ್ಟರೆ ಸರಿಯಾಗುತ್ತದೆಯೇ ? ಅದಕ್ಕೆ ಪ್ರತ್ಯೇಕವಾದ ಸರ್ವೆ ನಂಬರು ಇರುತ್ತದೆ ಮತ್ತು ವಿಭಾಗ ಮಾಡುವುದಕ್ಕೆ ಬರುತ್ತದೆ. ಅದನ್ನು ಅವರಿಗೆ ಬಿಡುವುದರಿಂದ ಅದರ ದುರ್ಲಾಭವನ್ನು ಪಡೆಯುತ್ತಾರೆ. ಹಿಂದೆ ಕಾಫಿ ತೋಟಕ್ಕೆ ಪ್ರತ್ಯೇಕವಾದ ಲಾ ಮಾಡುತ್ತೇವೆಂದು ಹೇಳಿ ಈಗ ವ್ಯವಸಾಯದ ಜಮೀನನ್ನು ಸಹ ಇಟ್ಟು ಕೊಳ್ಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಹಾಗೆಯೇ ಸೆಕ್ಷನ್ ೧೧೦ನ್ನು ತೆಗೆದು ಹಾಕಿದ್ದೀರಿ. ಇದರಿಂದ ಮಧ್ಯದಲ್ಲಿರುವ ಜಮೀನನ್ನು ಉಳಿಸಿಕೊಳ್ಳುವುದಕ್ಕೆ ಅವಕಾಶ ಇದೆ. ಆದ್ದರಿಂದ ಇಂಟರ್‌ಸ್ಪರ್ಸ್‌ಡ್ ಲ್ಯಾಂಡನ್ನು ಸ್ಪಷ್ಟವಾಗಿ ಡಿಫೈನ್ ಮಾಡಬೇಕು. ಏಕೆಂದರೆ ಇದರಲ್ಲಿ ದುರುಪಯೋಗವಾಗದ ರೀತಿಯಲ್ಲಿ ನಾವು ತಿದ್ದು ಪಡಿಯನ್ನು ತರಬೇಕು.

† ಶ್ರೀ ಬಿ. ವಿ. ಕಕ್ಕಿಲ್ಲಾಯ : ಇಲ್ಲಿ ಲ್ಯಾಂಡ್ ಯೂಸ್ಡ್ ಫಾರ್ ಏನ್ಸಿಲಿಯರಿ ಪರ್ಪಸ್ ಎಂದು ಹೇಳಿದ್ದಾರೆ. ಅದನ್ನು ಕಾಫಿ ಬೀಜ ಒಣಗಿಸುವುದಕ್ಕೆ, ಸಸಿಗಳನ್ನು ಬೆಳೆಸುವುದಕ್ಕೆ ಎಂದು ನಾವು ತಿಳಿದುಕೊಳ್ಳುತ್ತೇವೆ. ಆದರೆ ವಾಸ್ತವಿಕವಾಗಿ ನಡೆಯುವುದು ಏನೆಂದರೆ, ಕಾಫಿ ಬೆಳೆಗೆ ಸಂಬಂಧಪಟ್ಟ ಇತರ ಕೆಲಸಗಳಿಗೆ ಬೇಕಾದಂತಹ ಜಮೀನು ತೋಟದ ಒಳಗೆ ಇರುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಚಿಕ್ಕಮಗಳೂರಿನ ತೋಟಗಾರರಿಗೆ ಬೇರೆ ಕಡೆ ಜಮೀನು ಇರುತ್ತದೆ. ಅಲ್ಲಿ ಎಲ್ಲಾ ಸಮಯದಲ್ಲಿ ಕಾಫಿ ಬೀಜವನ್ನು ಒಣಗಿಸುವುದಿಲ್ಲ. ಆದ್ದರಿಂದ ತೋಟದ ಹೊರಗಡೆ ಈ ಹೆಸರು ಹೇಳಿ ಜಮೀನು ಇಟ್ಟುಕೊಳ್ಳುವುದಕ್ಕೆ ಅನುಕೂಲವಾಗುವ ರೀತಿಯಲ್ಲಿ ಈ ನಿಮ್ಮ ತಿದ್ದುಪಡಿ ಇದೆ. ಅದನ್ನು ಬದಲಾವಣೆ ಮಾಡಿ ಪ್ಲಾಂಟೇಶನ್‌ನಲ್ಲಿ ಆದರ ಕೊನೆಯೊಳಗೆ ಯಾವುದನ್ನು ಇಟ್ಟುಕೊಂಡಿದ್ದಾರೆ ಅದನ್ನು ಸಹ ಸೇರಿಸಿಕೊಂಡರೆ ಒಳ್ಳೆಯದು. ಇದನ್ನು ತಾವು ಯೋಚನೆ ಮಾಡಬೇಕು. ಎರಡನೆಯದು ಏನೆಂದರೆ ಕಾಫಿ ಬೆಳೆಗಾರರಿಗೆ ಬೇರೆ ಜಮೀನನ್ನು ಇಟ್ಟು ಕೊಳ್ಳುದಕ್ಕೆ ಅವಕಾಶ ಕೊಟ್ಟರೆ ಅದನ್ನು ಅವರು ಸ್ವಲ್ಪ ಸ್ವಲ್ಪವಾಗಿ ಪ್ಲಾಂಟೇಶನ್ ಆಗಿ ಕನ್‌ವರ್ಟ್ ಮಾಡಿಕೊಳ್ಳಬಹುದು. ೫೦ ಎಕರೆಯನ್ನು ಕಾಫಿ ತೋಟವಾಗಿ ಪರಿವರ್ತನೆ ಮಾಡಿ ಪುನಃ ೫೦ ಎಕರೆ ಜಮೀನನ್ನು ಇಟ್ಟುಕೊಳ್ಳಬಹುದು. ಈ ಪರಿಸ್ಥಿತಿ ಬಂದದ್ದರಿಂದಲೇ ಇದನ್ನು ಪರಿಶೀಲನೆ ಮಾಡಿ ಸೆಲೆಕ್ಟ್ ಕಮಿಟಿಯಲ್ಲಿ ವ್ಯವಸಾಯ ಜಮೀನನ್ನು ಅವರು ಇಟ್ಟುಕೊಳ್ಳುವುದಕ್ಕೆ ಅವಕಾಶವಿರಬಾರದೆಂಬ ಅಭಿಪ್ರಾಯಕ್ಕೆ ಬಂದುದು. ಇದರ ಬಗ್ಗೆ ತಮ್ಮ ಅಭಿಪ್ರಾಯವೇನು ? ಇನ್ನೊಂದು ವಿಷಯ ಸೀಲಿಂಗ್ ಲಿಮಿಟಿಗೆ ಸಂಬಂಧಪಟ್ಟುದು. ಮುಂದೆ ಯಾವುದಾದರೂ ಒಂದು ಕಮಿಟಿಯವರು ಅಥವಾ ಪ್ರಿಸ್ಕ್ರೈಬ್ಡ್ ಅಥಾರಿಟಿ ಪರಿಶೀಲನೆ ಮಾಡಿ ಎಷ್ಟು ಜಮೀನು ಇಟ್ಟುಕೊಳ್ಳಬೇಕೆಂಬುದನ್ನು ತೀರ್ಮಾನ ಮಾಡಬೇಕೆಂದು ಹೇಳಿದ್ದಾರೆ. ಇದನ್ನು ಬೇರೆ ಯಾರಿಗೂ ಬಿಡುವುದಕ್ಕೆ ಬದಲು ಈ ಶಾಸನದಲ್ಲಿ ಈಗಾಗಲೇ ನಿಗದಿ ಮಾಡಿರುವುದನ್ನು ಇಟ್ಟು ಕೊಳ್ಳುವುದು ಒಳ್ಳೆಯದು, ಪ್ರತ್ಯೇಕವಾಗಿ ಬಿಡುವ ಅವಶ್ಯಕತೆ ಇಲ್ಲ.

ಕೊನೆಯದಾಗಿ ಕಾಫಿ ತೋಟದ ಬಗ್ಗೆ ನಿರ್ದಿಷ್ಟವಾದ ಅಭಿಪ್ರಾಯವನ್ನು ಪಡೆಯಬೇಕು. ವೆಸ್ಟರನ್ ಘಾಟ್ಸ್ ಡೆವಲಪ್‌ಮೆಂಟ್ ಬೋರ್ಡಿನವರು ಇಡೀ ಪ್ರದೇಶವನ್ನು ಬೆಳವಣಿಗೆಗೆ ತರಬೇಕೆಂದು ಕೇಂದ್ರ ಸರ್ಕಾರಕ್ಕೆ ಒಂದು ಶಿಫಾರಸು ಮಾಡಿದ್ದಾರೆ. ಆ ಕಾಫಿ ತೋಟಗಳನ್ನು ಹತೋಟಿಗೆ ತೆಗೆದುಕೊಳ್ಳದೇ ಹೋದರೆ, ನಿಜವಾಗಿಯೂ ಆ ಪ್ರದೇಶವನ್ನು ಬೆಳವಣಿಗೆ ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಕೆಲವು ಹಿತಾಸಕ್ತಿಗಳೂ ಸಹ ವಿರೋಧವಾಗಿ ಬರುತ್ತಾರೆ. ಆದ್ದರಿಂದ ಅವನ್ನು ಹತೋಟಿಗೆ ತೆಗೆದುಕೊಳ್ಳಬೇಕೆಂದು ನಾನು ಸೂಚನೆ ಕೊಡುತ್ತೇನೆ. ಅದಕ್ಕೋಸ್ಕರ ಈ ತಿದ್ದುಪಡಿಯನ್ನು ಮಂಡಿಸಿದ್ದೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರುವ ಬಗ್ಗೆ ಶಂಕೆ ಬರಲಿಕ್ಕೆ ಕಾರಣವಿಲ್ಲವೆಂದು ನನ್ನ ಅಭಿಪ್ರಾಯ. ಏಕೆಂದರೆ ಆನ್ಸಿಲರಿ ಲ್ಯಾಂಡ್ ಅಥವಾ ಇಂಟರ್‌ಸ್ಪರ್ಸ್ಡ್ ಲ್ಯಾಂಡ್ ವಿಂಬಂದಾಗಿ ಇವೆರಡನ್ನೂ ಪ್ರಿಸ್ಕ್ರೈಬ್ಡ್ ಅತಾರಿಟಿ ಡಿಟರ್‌ಮಿನ್ ಮಾಡುವುದಕ್ಕೆ ಅವಕಾಶ ಇರಬೇಕೆಂದು ಹೇಳಿದ್ದೇವೆ. ಇಂಟರ್‌ಸ್ಪರ್ಸ್ಡ್ ಲ್ಯಾಂಡ್ ಎನ್ನುವುದನ್ನು ಮಾನ್ಯ ಸದಸ್ಯರು ಖುದ್ದಾಗಿ ನೋಡಿರಬಹುದು. ನಾನೂ ಸಹ ಒಂದೆರಡು ಕಡೆಗಳಲ್ಲಿ ನೋಡಿದ್ದೇನೆ. ಅದು ಕಾಫಿ ತೋಟ ಆವರಿಸಿಕೊಂಡು ಮಧ್ಯೆ ಇರುವ ಪ್ರದೇಶ. ಅಲ್ಲಿ ಒಂದು ಭಾಗದಿಂದ ಇನ್ನೊಂದು ಭಾಗಕ್ಕೆ ಹೋಗಿ ಬರುವುದಕ್ಕಾಗಲೀ ಅಥವಾ ಅಲ್ಲಿಂದ ನೀರನ್ನು ತೆಗೆದುಕೊಳ್ಳುವುದಕ್ಕೆ ಆಗಲೀ, ಅಥವಾ ಇತರ ಅನುಕೂಲಕ್ಕೋಸ್ಕರ ಎಷ್ಟು ಅವಶ್ಯಕ ಬೇಕೋ ಅಷ್ಟು ಭೂಮಿಯನ್ನು ಬಿಡಬೇಕಾಗುತ್ತದೆ. ಆದರೆ ಆನ್ಸಿಲರಿಯಾಗಿರತಕ್ಕ ಭೂಮಿ ಮಧ್ಯೆ ಇರತಕ್ಕದ್ದು. ಅದು ಹೊರಗಡೆ ಇರುವುದಕ್ಕೆ ಸಾಧ್ಯವಿಲ್ಲ. ಅದು ಜೌಗು ಪ್ರದೇಶವಾಗಿರುತ್ತದೆ. ಅದನ್ನು ಮಿತಿಗೊಳಿಸುವುದಕ್ಕೂ ಸಹ ಸಾಧ್ಯ. ಕ್ಲಾಜ್ ೬೪ ರಲ್ಲಿ ಕೊಟ್ಟಿರುವ ಎಕ್ಸ್‌ಪ್ಲನೇಷನ್ ಈ ರೀತಿ ಇದೆ :

"Any land used by such person for any purpose ancillary to the cultivation of such crop or for preparation of the same for the market; and

agricultural land interspersed within the boundaries of the area cultivated with such crop by such person not exceeding such extent as may be determined by the prescribed authority" as necessary for the protection and efficient management of such cultivation.

ಅದಕ್ಕಾಗಿ ಎರಡನ್ನೂ ಪ್ರಿಸ್ಕ್ರೈಬ್ಡ್ ಅತಾರಿಟಿ ನಿರ್ಧರಿಸುವ ರೀತಿಯಲ್ಲಿ ಅಥವಾ ಧಾಟಿಯಲ್ಲಿ ಇರಬೇಕೆಂಬುದನ್ನು ನಾನು ಒಪ್ಪುತ್ತೇನೆ. ಎಕ್ಸ್‌ಪ್ಲನೇಷನ್ ೧-೨ನ್ನು ಬೇರೆ ಬೇರೆಯಾಗಿ ಇಟ್ಟು "ನಾಟ್ ಎಕ್ಸೀಡಿಂಗ್ ಎನ್ನುವುದರಿಂದ ಮುಂದೆ ಇರುವುದನ್ನು" ಪ್ರತ್ಯೇಕವಾಗಿಟ್ಟು ತಿದ್ದುಪಡಿ ಮಾಡಿದರೆ ಸರಿ ಹೋಗುತ್ತದೆ. ಮಾನ್ಯ ಶ್ರೀ ಕಕ್ಕಿಲಾಯ ಅವರು "ಪ್ರಿಸ್ಕ್ರೈಬ್ಡ್ ಅತಾರಿಟಿ" ಯವರು ಅದನ್ನು ಯಾವ ರೀತಿ ಗೊತ್ತು ಮಾಡುತ್ತಾರೆಂದು ಕೇಳಿದರು. ಮತ್ತು ಈ ಸದನದ ಸದಸ್ಯರನ್ನೊಳಗೊಂಡ ಒಂದು ಕಮಿಟಿ ಇದಕ್ಕಾಗಿ ರಚನೆ ಮಾಡುತ್ತೀರಾ ಎಂದು ಕೇಳಿದರು. ಯಾರ ದಾಕ್ಷಿಣ್ಯಕ್ಕೂ ಒಳಗಾಗದೆ ಇರತಕ್ಕ ಒಂದು ಅತಾರಿಟಿಯನ್ನು ಗೊತ್ತು ಮಾಡಿ, ಆ ಭೂಮಿ ಎಷ್ಟು ಇರಬೇಕೆಂಬ ಬಗ್ಗೆ ನಿರ್ಣಯ ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಕೊಡುತ್ತೇನೆ. ಆದರಿಂದ ಅವರಿಗೆ ಜಮೀನು ಬಿಟ್ಟುಕೊಡುವಾಗ ಮಿತಿ ಮೀರಿ ಹೋಗದೇ ಇರುವ ಹಾಗೆ ಎಷ್ಟು ದೂರ ಹೋಗುವುದಕ್ಕೆ ಅವಶ್ಯಕವೋ ಅಷ್ಟು ದೂರ ಹೋಗಲು ಸಹಾಯಕವಾಗಿರುತ್ತದೆ. ಇಷ್ಟು ದೃಷ್ಟಿಯಲ್ಲಿಟ್ಟುಕೊಂಡು ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಡುತ್ತೇನೆ. ಈ ಪ್ಲಾಂಟೇಷನ್ನನ್ನು ಭೂಶಾಸನದ ಪರಿಮಿತಿಯೊಳಗೆ ತಾರದೆ ಅದನ್ನೇ ಪ್ರತ್ಯೇಕವಾಗಿ ವ್ಯವಹಾರ ಮಾಡಬೇಕೆಂಬ ದೃಷ್ಟಿಯಿಂದ ಅದರ ಬಗ್ಗೆ ವಿನಾಯಿತಿ ಹೇಗೆ ಕೊಡಬೇಕೆಂಬುದನ್ನು ವಿಚಾರ ಮಾಡಿ ಹೇಳಬೇಕಾಗುತ್ತದೆ.

† ಶ್ರೀ ಬಿ. ಪಿ. ಕಕ್ಕಿಲಾಯ : ವಿನಾಯಿತಿ ಯಾವಾಗ ಕೊಡುತ್ತೀರಿ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ : ಇಡೀ ರಾಷ್ಟ್ರದ ಮುಖ್ಯ ಮಂತ್ರಿಗಳು ಸೇರಿ ಈಗ ಒಂದು ತೀರ್ಮಾನವನ್ನು ಇದರ ಬಗ್ಗೆ ತೆಗೆದುಕೊಂಡಿದ್ದಾರೆ. ಮತ್ತೆ ಮುಖ್ಯ ಮಂತ್ರಿಗಳು ಎಲ್ಲರೂ ಸೇರಿ ಇಂತಹ ಪ್ರಮುಖವಾದ ವಿಷಯದ ಬಗ್ಗೆ ರಾಷ್ಟ್ರದ ಹಿತದೃಷ್ಟಿಯಿಂದ ಮಾಡತಕ್ಕ ಕೆಲವು ಮುಖ್ಯ ತೀರ್ಮಾನಗಳನ್ನು ಕೈಗೊಳ್ಳುವ ಜವಾಬ್ದಾರಿ ಅವರ ಮೇಲಿದೆ. ಅವರು ಇಷ್ಟೇ ದಿವಸಗಳೊಳಗೆ ಆ ರೀತಿ ಮಾಡುತ್ತಾರೆ. ಈ ರೀತಿಯಾಗಿ ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ. ರಾಷ್ಟ್ರದ ಮಟ್ಟದಲ್ಲಿ ತೀರ್ಮಾನವಾಗತಕ್ಕ ಬಹು ಮುಖ್ಯವಾದ ಪ್ರಶ್ನೆ ಇದು ಎಂಬುದು ಮಾನ್ಯ ಸದಸ್ಯರಿಗೂ ಗೊತ್ತಿದೆ, ಇದರಿಂದ ಬರತಕ್ಕ ವಿದೇಶೀ ವಿನಿಮಯವಾಗಲಿ ಅಥವಾ ಅದರಲ್ಲಿರತಕ್ಕ ತೊಂದರೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಒಂದು ತೀರ್ಮಾನಕ್ಕೆ ಬರಬೇಕಾಗುತ್ತದೆ, ಮಾನ್ಯ ಶ್ರೀ ಬೈರೇಗೌಡರು ಮಾತನಾಡುತ್ತಾ ಈ ಪ್ಲಾಂಟೇಷನ್ ಭಾಗ ಮಾಡುವುದಕ್ಕಾಗುವುದಿಲ್ಲವೇ ಎಂದು ಕೇಳಿದರು. ಆ ರೀತಿ ಮಾಡುವುದರಿಂದ ಈ ವ್ಯವಸಾಯಕ್ಕೆ ಅನಾನುಕೂಲವಾಗುತ್ತದೆಂದು ಕಂಡುಬಂದಿದೆ. ನೀವು ಅದನ್ನು ಮಾರಾಟ ಮಾಡುವಾಗ, ಮುಂದೆ ಮಾಡತಕ್ಕಂಥ ಕಾಫಿ ಪ್ಲಾಂಟೇಷನ್‌ನ್ನು ಮಿತಿಗೊಳಿಸಿದರೆ, ಮುಂದೆ ಅದನ್ನು ಪರಭಾರೆ ಮಾಡುವುದು ಬಹಳ ಕಷ್ಟವಾಗುತ್ತದೆ. ಪರಭಾರೆಯಾಗುವುದಕ್ಕೆ ಅವಕಾಶವಿರಬೇಕೆಂಬ ದೃಷ್ಟಿಯಿಂದ ಈ ಪ್ಲಾಂಟೇಷನ್ನಿಗೆ ಒಂದು ಮಿತಿಯನ್ನು ಇನ್ನೂ ಹಾಕದೆ ಇರುವುದಕ್ಕೆ ಅದೂ ಒಂದು ಕಾರಣ. ಅದು

(ಶ್ರೀ ಎನ್. ಹುಚ್ಚಮಾಸ್ತೇಗೌಡ,)

ಎಲ್ಲರ ಮೇಲೂ ಒಂದೊಂದು ರೀತಿ ಪ್ರಭಾವ ಬೀರುತ್ತದೆ. ನಾನು ಅದನ್ನು ಇಲ್ಲವೆಂದು ಹೇಳುವುದಿಲ್ಲ. ಇವತ್ತಿನ ದಿವಸ ಸಮಾಜ ಪರಿಸ್ಥಿತಿ ಯಾವ ಒಂದು ವಾತಾವರಣದಲ್ಲಿದೆಯೆಂಬುದನ್ನು ನೋಡಿದ್ದೇವೆ. ಈಗ ಸರ್ಕಾರ ನಡೆಸತಕ್ಕವರಿಗೆ ಸಮಾಜವನ್ನು ಜೊತೆಯಲ್ಲಿ ತೆಗೆದುಕೊಂಡು ಹೋಗತಕ್ಕ ಚೈತನ್ಯ ಬೇಕು. ಆದರೆ ಸಮಾಜ ಬಿಟ್ಟು ನಾವು ಮುಂದೆ ಹೋಗುತ್ತೇವೆಂದು ಹೇಳಿದರೆ ಅದು ಸರಿಯಾದ ನೀತಿಯಲ್ಲ.

ಶ್ರೀ ಕೋಣಂದೂರು ಲಿಂಗಪ್ಪ : ದೊಡ್ಡ ದೊಡ್ಡ ಪ್ಲಾಂಟೇಷನ್‌ಗಳನ್ನು ಹೊಂದಿರತಕ್ಕ ೫೦ ಎಕರೆಗಳಷ್ಟು ಪಲ್ಮಾಟೇಷನ್ ಇಟ್ಟುಕೊಂಡಿರುವವರೂ ಸಮಾಜದೊಳಗೆ ಇದ್ದಾರಲ್ಲವೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ : ಮಾನ್ಯ ಶ್ರೀ ಕೋಣಂದೂರು ಲಿಂಗಪ್ಪನವರು ಅವರ ಕಣ್ಣನ್ನು ಸ್ವಲ್ಪ ವಿಸ್ತಾರವಾಗಿ ತೆರೆದು ಇಡೀ ರಾಷ್ಟ್ರದ ದೃಷ್ಟಿಯಿಂದ ನೋಡಿದರೆ ಅವರಿಗೆ ನಿಜವಾಗಿಯೂ ಇದಕ್ಕೆ ಒಪ್ಪಿಗೆ ಕೊಡಬೇಕೆಂದೆನಿಸುತ್ತದೆ.

MADAM SPEAKER.—I will put the amendment of Sri C.Byregowda The question is:

"That in page 5, item (i) shall be omitted.

2. In item (ii), "Explantion" (i) and (ii) shall be substituted by the following namely :

> "Explanation : In this section 'plantation' means land used by a person principally for the cultivation of plantation crop and includes (i) any land used by such person for any purpose ancilliary to the cultivation of such crop or for preparation of the same for the market, provided that such land lies within the boundary of the existing plantation and (ii) agricultural land surrounded on all sides by land cultivated with plantation crop by such person not exceeding such extent as may be determined by the prescribed authority as necessary for the protection and efficient management of such cultivation".

The motion was negatived.

MADAM SPEAKER.—Now I will put the amendment to the amendment moved by Sri T. R. Shamanna.

The question is :

"That a new proviso must be added :

"Provided that new plantation formed after the present act comes into force will be deemed to be non-plantational land",

The motion was negatived.

Madam Speaker.—Now I will put the amendment moved by the Hon. Minister for Revenue.

The question is :

"That in the proposed section 04:—

(i) Sub-sections (2) and (3) shall be omitted;

(ii) for the Explanation, the following Explanation shall be substituted, namely:—

Explanation.—In this section 'plantation' means land used by a person principally for the cultivation of plantation crop and includes —

(i) any land used by such person for any purpose ancillary to the cultivation of such crop or for preparation of the same for the market, and

(ii) agricultural land interspersed within the boundaries of the area cultivated with such crop by such person,

not exceeding such extent as may be determined by the prescribed authority as necessary for the protection and efficient management of such cultivation "

The motion was adopted.

Madam Speaker.—The question is :

"That in sub-section (1), the words and figures "the provisions of section 110"shall be omitted".

The motion was adopted.

Madam Speaker.—The question is :

"That clause 64, as amended, do stand part of the Bill."

The motion was adopted.

Clause 64, as amended was added to the Bill.

Clause 65

Madam Speaker.—I Shall take up clause 65. There is an amendment given notice o by Sri Shamanna which may be moved.

ಶ್ರೀ ಟಿ. ಆರ್. ಶಾಮಣ್ಣ : ನನ್ನ ತಿದ್ದುಪಡಿ ಈ ರೀತಿಯಾಗಿದೆ;—

"That at page 74, for clause 65 the following shall be substituted .

"105 Leases by or to local authorities.—Subject to the provisions of sections 110 the provisions of section 14 to 20 and 44 to 61 shall not apply to lands leased by or to local authorities "

MADAM SPEAKER.—Amendment moved ;

> "That at page 74, for clause 65 the following shall be substituted.
>
> 105. Leases by or to local authorities.—Subject to the provisions of section 110, the provisions of sections 14, to 20 and 44 to 61 shall not apply to lands leased by or to local authorities."

ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಧ್ಯಕ್ಷಿಣಿಯರೇ —ಸರ್ಕಾರದವರು ಈವರೆಗೆ ತಂದಿದ್ದ ಎಲ್ಲಾ ಕಲಂಗಳಿಗಿಂತಲೂ ಬಹಳ ಅನೀತಿಯುತವಾದಂಥ ಒಂದು ಕಲಂ ಇದು ಈ ನಾಡಿನಲ್ಲಿರತಕ್ಕ ಸ್ಥಳೀಯ ಸಂಸ್ಥೆಗಳ ಅಧಿಕಾರವನ್ನು ಸರ್ಕಾರದವರು ಮೊಟಕು ಮಾಡುವುದಕ್ಕೆ ಹೊರಟಿದ್ದಾರೆ. ಇಲ್ಲಿ ಸೆಕ್ಷನ್ ೧೦೫ರಲ್ಲಿ ಹೇಳಿರುವುದು ಹೀಗಿದೆ: —"Leases by or to local authorities.—Subject to the provisions of sections 110, the provisions of sections 14 to 20 and 44 to 61 shall not apply to lands leased by or to local authorities "But this has been omitted in the Bill.

ಆದರೆ ನನಗೆ ಇದರ ಬಗ್ಗೆ ಇರತಕ್ಕ ಸಂಶಯ ಏನೆಂದರೆ ಈ ದಿವಸ ನನಗೆ ಗೊತ್ತಿರುವಂತೆ ನಮ್ಮ ಬೆಂಗಳೂರು ಕಾರ್ಪೊರೇಷನ್ನಿಗೆ ಕೋರಮಂಗಲ, ಕೆಂಪಾಂಬುಧಿಕೆರೆ ಇತ್ಯಾದಿ ಅನೇಕ ಕಡೆಗಳಲ್ಲಿ ಸುಮಾರು ೧೫೦೦ ಎಕರೆಗಳಷ್ಟು ಸ್ವಂತ ಭೂಮಿ ಇದೆ ಹೀಗೇ ಇನ್ನೂ ಅನೇಕ ಮುನಿಸಿಪ್ಯಾಲಿಟಿಗಳಿಗೂ ಜಮೀನು ಇರಬಹುದು ಬೆಂಗಳೂರು ಕಾರ್ಪೊರೇಷನ್ನಿನವರು ತಮ್ಮ ಭೂಮಿಯಲ್ಲಿ ನರ್ಸರಿ, ಕೆಲವು ಕಡೆ ತೋಟ ಹೀಗೆಲ್ಲಾ ಬೆಳೆಸುತ್ತಿದ್ದಾರೆ. ಇನ್ನು ಮುಂದೆ ಇಂಥ ಜಮೀನುಗಳೆಲ್ಲಾ ಲೋಕಲ್ ಬಾಡೀಸ್‌ಗೆ ಸೇರ ಬಾರದೆಂದು ಹೇಳಿದರೆ ಅವುಗಳ ಗತಿ ಏನಾಗಬೇಕು ? ಆ ಸುಭಾಷ್ ನಗರದಲ್ಲಿದ್ದ ಜಮೀನು ಕರ್ಪೊರೇಷನ್ನಿನದು ಅದನ್ನು ಸರ್ಕಾರದವರು ಲಪಟಾಯಿಸಿದರು. ಇನ್ನು ಮುಂದೆ ಎಲ್ಲಾ ಈ ಸಂಸ್ಥೆಗಳ ಆಸ್ತಿಯನ್ನು ಲಪಟಾಯಿಸುವುದಕ್ಕೆ ಹೊರಟಿದ್ದಾರೆ. ಇದು ಬಹಳ ಅನ್ಯಾಯ ಧರ್ಮಾಂಬುಧಿ ಕೆರೆಯಲ್ಲಿ ಇರತಕ್ಕ ಆ ಸ್ಟೇಡಿಯಂ ಭೂಮಿಯೂ ಕಾರ್ಪೊರೇಷನ್ನಿನದೆ ಆದರೆ ಈಗ ಸರ್ಕಾರದವರು ತಂದಿರತಕ್ಕ ತಿದ್ದುಪಡಿ ಈ ಲೋಕಲ್ ಬಾಡೀಸ್ ಭೂಮಿಗಳಿಗೆ ಅನ್ವಯಿಸುವುದಿಲ್ಲ ಎಂಬ ಒಂದು ಆಶ್ವಾಸನೆ ಕೊಡದಿದ್ದಲ್ಲಿ ನಾವು ತೀವ್ರವಾಗಿ ಪ್ರತಿಭಟನೆ ಮಾಡಬೇಕಾಗುತ್ತದೆ. ಸರ್ಕಾರ ಇದಕ್ಕೆ ವಿವರಣೆ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ಕೆ. ಎಂ. ನಾಗಣ್ಣ.—ಮಾನ್ಯ ಶ್ಯಾಮಣ್ಣನವರು ಹೇಳಿದಂತೆ ನನಗೂ ಆ ಒಂದು ಹೆದರಿಕೆ ಬಂದಿದೆ. ಅದಕ್ಕೆ ಸರ್ಕಾರದವರು ಇದರ ಪರಿಣಾಮ ಎಲ್ಲಿವರೆಗೆ ಹೋಗುತ್ತದೆಂಬುದನ್ನು ವಿವರಿಸಿದರೆ ಮುಂದೆ ನಾವೇನು ಮಾಡುತ್ತೇವೆಂಬುದನ್ನು ಹೇಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್ ನನಗೂ ಕೂಡ ಇದರ ವಿಚಾರದಲ್ಲಿ ಸ್ವಲ್ಪ ಕ್ಲ್ಯಾರಿಫಿಕೇಷನ್ ಬೇಕಾಗಿದೆ.

ಶ್ರೀ ಸಿ ಬೈರೇಗೌಡ.—ಈಗ ಅನೇಕ ಕಡೆಗಳಲ್ಲಿ ತಾಲ್ಲೂಕ್ ಅಭಿವೃದ್ಧಿ ಬೋರ್ಡಿನವರು ಯುಕ್ಲಿಪ್ಟಸ್ ಮರಗಳನ್ನು ಬೆಳೆಸಿದ್ದಾರೆ. ಅನೇಕ ಲೋಕಲ್ ಬಾಡೀಸ್‌ಗಳನ್ನು ಫಾರಂ ಫಾರೆಸ್ಟ್‌ಗಳನ್ನು ಮಾಡಿದ್ದಾರೆ ಅವುಗಳಿಗೆ ಸರ್ಕಾರದವರು ತಂದಿರುವ ಈ ತಿದ್ದುಪಡಿ ಅನ್ವಯವಾಗುತ್ತದೆಯೋ ಅಥವಾ ಇಲ್ಲವೇ ಎಂಬುದನ್ನು ಕ್ಲಾರಿಫೈ ಮಾಡಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಲ್ಲಿ ಮಾನ್ಯ ಸದಸ್ಯರುಗಳು ದಯಮಾಡಿ ನಾವು ರೀಕ್ಯಾಸ್ಟ್ ಮಾಡಿರತಕ್ಕ ಸೆಕ್ಷನ್ ೧೦೭ನ್ನು ನೋಡಿ ಅದರಲ್ಲಿ ಹೀಗೆ ಹೇಳಿದೆ.—

> "107, Act not to apply to certain lands.—Subject to the provisions of section 110, nothing in this Act, except section 8 shall apply to lands.—
>
> (i) belonging to Government
>
> (ii) ***hold on lease from Government for a period not exceeding twenty years .

(iii) belonging to or held on lease by or from a local authority, an Agricultural Produce Marketing Committee constituted under the Mysore Agricultural Produce Marketing Regulation Act, 1966 (Mysore Act, 27 of 1966), a University established by law in India, the Mysore Bhoodhan Yagna Board established under the Mysore Bhoodhan Yagna Act, 1963 (Mysore Act 34 of 1963).

ಇದು ಲೋಕಲ್ ಅಥಾರಿಟೀಸ್‌ಗೆ ಅನ್ವಯವಾಗುವುದಿಲ್ಲ — ಅವುಗಳಿಗೆಲ್ಲಾ ವಿನಾಯಿತಿ ಕೊಡಲಾಗಿದೆ. ಆದುದರಿಂದ ಅವರ ತಿದ್ದುಪಡಿಯನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ.

SRI T. R. SHAMANNA.—In view of the assurance given by the Minister for Revenue, I will withdrawn my amendment.

MADAM SPEAKER.—I think the House agrees to the hon. member to withdraw his amendment.

The amendment was by leave withdrawn.

MADAM SPEAKER.—The question is :

"That clause 65 do stand part of the Bill."

The motion was adopted :

Clause 65 was added to the Bill.

CLAUSE 66

MADAM SPEAKER.—The question is :

"That clause 66 do stand part of the Bill."

The motion was adopted.

Clause 66 was added to the Bill.

CLAUSE 67

MADAM SPEAKER.—There are amendments to clause 67 may be moved.

SRI N. HUTCHMASTHY GOWDA.—I beg to move :

"That the proposed section 107 shall be renumbered as sub-section (1) thereof and after sub-section (1) as so renumbered, the following sub-sections shall be inserted, namely :—

"(2) Notwithstanding anything in sub-section (1) no personal shall, after the date of commencement of the Amendment Act acquire in any manner for the cultivation of linoleum, land of an extent which together with the land cultivated by linoleum, if any, already held by him exceeds ten units :

"(3) In respect of very acquisition contrary, to sub-section (2), the provisions of section 66 shall *mutatis Mutandis* apply."

MADAM SPEAKER.—Amendment moved.

> "That the proposed Section 107 shall be re-numbered as sub-section (1) there of and after sub-section (1) as so re-numbered the following sub-section shall be inserted, namely,—
>
> "(2) Notwithstanding anything in sub-section (1) no personal shall, after the date of Commencement of the Amendment Act acqure in any manner for the cultivation of linoleum, land of an extent which together with the land cultivated by linoleum if any, already held by his exceeds ten units (3) in respect of every acquisition contrary to sub-section (2), the proviso of section 66 shall *muta is Musandis*, apply"

MADAM SPEAKER.—Clause 67. There is an amendment to the amendment.

5-30 P.M.

SRI T. R. SHAMANNA.—I move.

> "That in Sub-para '2' in the last line, delete 'Ten' and insert twenty'.

MADAM SPEAKER.—Amendment moved.

> "That in sub-para '2' in the last line, delete, 'Ten' and insert "twenty."

† ಶ್ರೀ ಎನ್ ಹುಚ್ಚಮಾಸ್ತಿಗೌಡ.—ಈಗ ಲನೋಲಿಯಂ ವ್ಯವಸಾಯಕ್ಕೆ ಅವಕಾಶ ಮಾಡಿದ್ದೇವೆ, ಅದಕ್ಕೆ ಮಿತಿ ಹಾಕಿದ್ದೇವೆ. ಮುಂದೆ ಬೆಳೆ ಮಾಡುವವರು ಯಾರಿದ್ದಾರೆ ಅವರಿಗೆ ಒಂದು ಸೀಲಿಂಗ್ ಲಿಮಿಟ್ ಮಿತಿ ಹಾಕಬಹುದು. ಇದು ಮುಖ್ಯವಾದುದು. ಇದನ್ನು ಮಾಡಿರುವವರಿಗೆ ಸೆಕ್ಷನ್ ೬೬ರರ ಪ್ರಕಾರ ಇರುವ ಅವಕಾಶ ಅನ್ವಯವಾಗುವುದು. ಇದಕ್ಕೆ ಒಪ್ಪಿಗೆ ಕೊಡಬೇಕು.

‡ ಶ್ರೀ ಟಿ. ಆರ್ ಶಾಮಣ್ಣ.—ಮಂತ್ರಿಗಳಿಗೆ ಈ ವಿಚಾರ ಗೊತ್ತಿಲ್ಲ. ಕಾನಕಾನಹಳ್ಳಿಯ ಹತ್ತಿರ ದೇವಿಕಾರಾಣಿಯವರಿಗೆ ಸೇರಿದ ಸಾವಿರ ಎಕರೆ ಲನೋಲಿಯಂ ಬೆಳೆಯಿದೆ. ಅಲ್ಲಿ ಸ್ಟೂಡಿಯೋ ಇದ್ದುದರಿಂದ ನಾನು ಅಲ್ಲಿಗೆ ಒಂದು ವರ್ಷ ಕಾಲ ಹೋಗಿಬರುತ್ತಿದೆ. ಒಂದು ಸಾವಿರ ಎಕರೆ ಜಮೀನು ಅಲ್ಲಿತ್ತು, ಹನುಮಂತಯ್ಯನವರ ಕಾಲದಲ್ಲಿ ಮತ್ತೆ ೪೫೦ ಎಕರೆ ಕೊಟ್ಟರು. ಹೆಚ್ಚು ಗುಡ್ಡ ಪ್ರದೇಶ ಮತ್ತು ಮೈದಾನ ಸಹ ಅಲ್ಲಿದೆ. ಇದರ ಸಂಬಂಧವಾದ ಎಣ್ಣೆ ಒಂದು ಪೌಂಡಿಗೆ ೫೦೦ ರೂಪಾಯಿಗಳವರೆಗೆ ಬೆಲೆಯಾಗುವುದು. ಇದು ಫರಫ್ಯೂಮರಿ ಎಸೆನ್ಸ್‌ಗೆ ಬರುವುದು. ಅವರಿಗೆ ಒಂದು ಸಾವಿರ ಎಕರೆ ಇದ್ದು ಕೊಳ್ಳಲಿ. ಮುಂದೆ ಬರುವವರಿಗೆ ಮಿತಿ ಮಾಡಿ ಎಂದು ಹೇಳುತ್ತಿದ್ದಾರೆ. ೧೦ ಎಕರೆ ಸಾಲುವುದಿಲ್ಲ ೨೦ ಎಕರೆಯಾದರೂ ಕೊಡಬೇಕು. ಎರಡು ಸೀಲಿಂಗ್ ಆದರೂ ಇರಬೇಕು. ಕಾರಣ ಇದರ ಬೆಳೆ ಬರಲು ೧೫ ವರ್ಷವಾಗುವುದು, ಇದಕ್ಕೆ ಮೆಷೀನರಿ ಮುಂತಾದ ಎಕ್ವಿಪಮೆಂಟ್ ಬೇಕು. ಕಾಫಿ ಪ್ಲಾಂಟೇಷನ್‌ಗೆ ಬೇಕಾದಷ್ಟು ಅವಕಾಶ ಕೊಡುವಾಗ ಇದಕ್ಕೂ ಕೊಡಬೇಕು. ಹಾಗೆ ಮಾಡಿದರೆ ಇದು ಲಾಭದಾಯಕವಾಗುವುದು. ಆದುದರಿಂದ ಹೆಚ್ಚು ಅವಕಾಶ ಕೊಡಬೇಕೆಂಬ ಉದ್ದೇಶದಿಂದ ನಾನು ತಿದ್ದುಪಡಿ ತಂದಿರುವುದು. ಒಂದು ಸೀಲಿಂಗ್ ಇದ್ದರೆ ಮಾಡಲು ಸಾಧ್ಯವಾಗುವುದಿಲ್ಲ, ಪ್ರಯೋಜನವಾಗುವುದಿಲ್ಲ. ಏಕನಾಮಿಕಲ್ಲಾಗಿ ಇಂಡಸ್ಟ್ರಿಯಲ್ ಪರ್ಪಸ್ ವರ್ಕೌಟ್ ಮಾಡಲು ಹೆಚ್ಚು ಅನುಕೂಲವಾದ ಜಾಗ ಬೇಕು. ಮುಂದೆ ಎಕ್ಸ್‌ಪರಿಮೆಂಟ್ ಮಾಡಿ ಬೇರೆ ಕಡೆ ಮಾಡುವುದಾದರೆ ಎಕ್ಸ್‌ಟೆಂಡ್ ಮಾಡಿ. ಇದರಲ್ಲಿ ನನಗೆ ಆಸಕ್ತಿ ಇಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಶಾಮಣ್ಣನವರು ಇದರ ವಿಷಯ ನನಗೆ ಗೊತ್ತಿಲ್ಲವೆಂದು ಹೇಳಿದರು. ನಾನು ಈ ಬೆಳೆ ಮಾಡಿಲ್ಲ. ಆದರೆ ಸೀಲಿಂಗ್ ಮಿತಿ ಹಾಕದಿರುವುದಕ್ಕೆ ಸಾಕಾದಷ್ಟು ವಿಷಯ ತಿಳಿದು ಮಾಡಿರುವುದು. ಇದರೆ ಬೆಳೆ ಬರಬೇಕಾದರೆ ೨೦ ವರ್ಷವಾಗುವುದು. ಇಷ್ಟೇ ಅಲ್ಲ, ಅನೇಕರು ಇದರ ಪ್ರಯತ್ನ ಮಾಡುವುದಿಲ್ಲ. ಸಾಧ್ಯವಾಗುವುದಿಲ್ಲವೆಂದು ಅನೇಕರು ಬಿಚ್ಚಿಟ್ಟಿದ್ದಾರೆ. ಯಾರೂ ಮಾಡದೆ ಈ ಕಸುಬನ್ನು ಕೈಬಿಟ್ಟರು. ನನಗೆ ತಿಳಿದ ಹಾಗೆ ಇತೀ ವಿಷ್ಯದಲ್ಲಿ ಎರಡನೆ ಫಾರಂ ಇಲ್ಲ ಬೇರೆ ಯವರು ಮುಂದೆ ಬಂದರೆ ಆವಶ್ಯಕ ಕಂಡರೆ ಮುಂದೆ ಬದಲಾಯಿಸಬಹುದು ಈಗ ಸದ್ಯಕ್ಕೆ ಒಂದು ಮಿತಿ ಹಾಕೋಣ ಎಂಬ ದೃಷ್ಟಿಯಿಂದ ಇದನ್ನು ತಂದಿರುವುದು. ಈ ಸಭೆ ಇದಕ್ಕೆ ಒಪ್ಪಿಗೆ ಕೊಡಬೇಕು.

MADAM SPEAKER.—I will put the amendment to the amendment to the vote of the House.

The question is :

"That in sub-para 2 in the last line, delete 'Ten' and insert 'Twenty'.

The motion was negatived.

MADAM SPEAKER.—I will put the amendment of the Revenue Minister to the vote of the House.

The question is :

"That the proposed section 107 shall be renumbered as sub-section (1) thereof and after sub-section (1) as so renumbered, the following sub-sections shall be inserted, namely :—

'(2) Notwithstanding anything in sub-section (1) no person shall, after the date of commencement of the Amendment Act acquire in any manner for the cultivation of linoleum, land of an extent which together with the land cultivated by linoleum, if any, already held by him exceeds ten Units ;

"(3) In respect of every acquisition contraray, to sub-section (2), the provisions of section 66 shall *mtatis Muiandis* apply."

The motion was adopted

MADAM SPEAKER.—Now I will put the clause as amended to the vote of the House.

The question is :

"That Clause 67 as amended do stand part of the Bill."

The motion was adopted

Clause 67 as amended was added to the Bill.

Clause 68 and 69.

MADAM SPEAKER.—There are no amendments to clauses 68 and 69. I will put them to the vote of the House.

The question is :

"That Clauses 68 and 69 do stand part of the Bill."

The motion was adopted

Clauses 68 and 69 were added to the Bill.

CLAUSE 70

MADAM SPEAKER.—There is an amendment to clause 70 by the Minister.

SRI N. HUTCHMASTHY GOWDA.—I move :

"That for the words and figures 'Section 101 and 107' the words and figures 'Section 107 and 108' shall be substituted."

MADAM SPEAKER.—Amendment Moved :

"That for the words and figures 'Section 104 and 107' the words and figures 'Section 107 and 108' shall be substituted."

‡ ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ಉದ್ದೇಶ ಪ್ಲಾಂಟೇಷನ್ಸ್ ಇದರ ಹಿಡಿತದಿಂದ ತಪ್ಪಿಸುವುದು. ೧೦೭ರ ಜೊತೆಗೆ ೧೦೮ ಸಹ ಒಳಪಡಿಸಬೇಕು ಎಂಬ ಉದ್ದೇಶದಿಂದ ತಂದಿರುವುದು. ಯಾವಾಗ ಬೇಕಾದರೂ ಇವುಗಳಿಗಿರುವ ವಿನಾಯಿತಿ ತೆಗೆದು ಹಾಕಬೇಕು ಎಂಬ ನಿಯಮವಿರುವುದು. ಇದಕ್ಕೆ ೧೦೪ರ ಹಿಡಿತ ತಪ್ಪಿಸಿ ೧೦೭ ಮತ್ತು ೧೦೮ರ ಕೆಳಗೆ ಹಿಡಿತದಲ್ಲಿಟ್ಟುಕೊಳ್ಳಬೇಕು ಎಂಬ ಉದ್ದೇಶ ವಿದೆ, ಇದಕ್ಕೆ ಒಪ್ಪಿಗೆ ಕೊಡಬೇಕು.

MADAM SPEAKER .—I will now put the amendment 81 moved by the Hon. Minister, to the vote of the House.

The question is.

"That for the words and figures 'Section 104 and 107' the words and figures 'Sections 107 and 108' shall be substituted."

The motion was adopted

MADAM SPEAKER .—I will now put Clause 70 as amended to the vote of the House.

The question is ;

"That Clause 70, as amended, do stand part of the Bill."

The motion was adopted

Clause 80 as amended was added to the Bill.

CLAUSE 71

SRI N. HUTCHMASTY GOWDA .—I move.

"That in the proposed section 112, sub-section '(C)' shall be omitted",

MADAM SPEAKER .—Amendment moved.

"That in the proposed section 112, sub-section (C)' shall be omitted".

SRI T. R. SHAMANNA .—I move an amendment that.

"At page 80 after item (d) the followiog item shall be added.

"(e) to hear appeals from the orders of the Tribunal".

MADAM SPEAKER .—Amendment moved.

"That at page 80 after item (d) the following item shall be added.

"(e) to hear appeals from the orders of the Tribunal."

ಶ್ರೀ ಎನ್, ಹುಚ್ಚಮಾಸ್ತಿಗೌಡ .—ಈಗಾಗಲೇ ಇಲ್ಲಿಯವರೆಗೆ ಸಭೆ ಒಪ್ಪಿಕೊಂಡಿರುವ ಪ್ರಕಾರ ಕೋರ್ಟಿಗೆ, ಎಲ್ಲೆಲ್ಲಿ ಅಧಿಕಾರವನ್ನು ಕೊಟ್ಟಿದ್ದೇವೆ ಅದನ್ನು ತೆಗೆದುಹಾಕಿರುವುದರಿಂದ, ಇದರ ಅವಶ್ಯಕತೆ ಇಲ್ಲ ಇದನ್ನು ಡಿಲಿಟ್ ಮಾಡಬೇಕು. ಇದು ನನ್ನ ತಿದ್ದುಪಡಿಯ ಉದ್ದೇಶ.

ಶ್ರೀ ಟಿ. ಆರ್. ಶಾಮಣ್ಣ .—ನಾನು ಆಗಲೇ ತಿಳಿಸಿದ್ದೇನೆ, ಕೊಲೆ ಮಾಡಿದವನಿಗೆ ಅಪೀಲು ಮಾಡುವುದಕ್ಕೆ, ರಾಷ್ಟ್ರಾಧ್ಯಕ್ಷರವರೆಗೂ ಅಪೀಲು ಮಾಡುವುದಕ್ಕೆ ಅವಕಾಶವಿದೆ. ನನ್ನ ಉದ್ದೇಶವಾದರೂ ಇಷ್ಟೇ, ಟ್ರಿಬ್ಯುನಲ್ ಅಥಾರಿಟಿ ಫೈನಲ್ ಮಾಡಿದರೆ ಅನೇಕರು ರಿಟ್ ಹೋಗಬೇಕಾದ ಸಂಧರ್ಭ ಬರುತ್ತದೆ. ರಿಟ್ ಹೋಗಬೇಕಾದರೆ, ಖರ್ಚು ಜಾಸ್ತಿಯಾಗುತ್ತದೆ. ಆದ್ದರಿಂದ ಕೋರ್ಟಿಗೆ ಹೋಗಿ, ಕೋರ್ಟಿನಲ್ಲಿ ಕಾಲವಿಳಂಬ ಆಗದ ಹಾಗೆ ಮೂರು ತಿಂಗಳ ಒಳಗೆ ಇದನ್ನು ಫೈನಲ್ ಮಾಡಬೇಕು. ಕೋರ್ಟಿಗೆ ಮತ್ತೆ ಅಪೀಲು ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕು. ಇದನ್ನು ತಾವು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ .—ಸೆಕ್ಷನ್ ೧೧೨ರಲ್ಲಿ ತಹಸೀಲ್ದಾರ ಅವರ ಕರ್ತವ್ಯದ ಬಗ್ಗೆ ವಿವರಣೆ ಕೊಟ್ಟಿದ್ದಾರೆ. (ಸಿ)ನಲ್ಲಿ ಹೀಗಿದೆ.

"(c) To declare the vesting in the State Government of the lands referred to in sub-section (9) of section 15 or section 20". Section 20 says "Where a person who has taken possession of any land by evicting a tenant in order to cultivate in personally or use it for non-agricultural purposes, fails within one year from the date he took possession or ceases within three years from such date to do so, the Tahsildar shall, on application by the tenant or otherwise, if satisfied that such person has so fiailed or ceacsd, declare by notification, that with effect from such date as may be specified therein the land shall stand transferred to and vest in the State Government free from all encumbrances.

(2) When the land has so vested, the tenant shall be entitled to be registered as occupant thereof and the provisions of section 45 shall mutatis mutandis be applicable in this behalf."

(ಶ್ರೀ ಕಾಗೋಡು ತಿಮ್ಮಪ್ಪ)

ಸೈನ್ಯಾಧಿಕಾರಿಗೆ, ಮತ್ತು ನಾವಿಕನಿಗೆ ಸೇರಿರತಕ್ಕ ಜಮೀನು ಸೆಕ್ಷನ್ ೧೫೮ರ ಪ್ರಕಾರ ಆತನ ಸ್ವಾಧೀನ ಪಡಿಸಿಕೊಂಡ ಮೇಲೆ ಅವನು ಸಕಾಲದಲ್ಲಿ ಅದನ್ನು ಸಾಗುವಳಿ ಮಾಡದೆ ಬೀಳು ಬಿಟ್ಟಂಥ ಸಂದರ್ಭದಲ್ಲಿ, ಸರ್ಕಾರದವರು ತಾವಾಗಿಯೇ ವಿಚಾರಣೆ ನಡೆಸಿ, ವಿನಾಕಾರಣ ಬೀಳು ಬಿಟ್ಟಿರುವುದು ಕಂಡುಬಂದಾಗ ಅದನ್ನು ಸರ್ಕಾರದ ಸುಪರ್ದಿಗೆ ನೋಟಿಫಿಕೇಷನ್ ಮುಖಾಂತರ ಪಡೆಯುವುದಕ್ಕೆ ಅವಕಾಶವಿದೆ. ಈಗ ಈ ಕ್ಲಾಸನ್ನು ತೆಗೆದುಹಾಕಿರುವುದರಿಂದ ಅಲ್ಲಿ ಸಿಕ್ಕತಕ್ಕ ಭೂಮಿಯನ್ನು ಯಾವರೀತಿ ವೆಸ್ಟ್ ಮಾಡಿಕೊಳ್ಳುತ್ತೀರಿ ? ಸೆಕ್ಷನ್ ೨೦ರ ಪ್ರಕಾರ ಈ ಕೆಲಸವನ್ನು ತಹಸೀಲ್ದಾರ್ ಅವರು ಮಾಡ ಬೇಕಾಗುತ್ತದೆ. ಮಾಡಬೇಕಾದರೆ ಅವರಿಗೆ ಕೊಟ್ಟಂಥ ಕರ್ತವ್ಯವನ್ನು ನಾವು ವಾಪಸ್ ತೆಗೆದುಕೊಂಡರೆ ನೋಟಿಫಿಕೇಷನ್ ಮುಖಾಂತರ ಜಮೀನನ್ನು ಸರ್ಕಾರಕ್ಕೆ ವೇಸ್ಟ್ ಮಾಡಿಕೊಳ್ಳುವುದಕ್ಕೆ ಅವಕಾಶ ಇರುವುದಿಲ್ಲ. ಆದ್ದರಿಂದ ಇದನ್ನು ತೆಗೆದುಹಾಕುವುದು ಅನಾವಶ್ಯಕ. ಜಾಯಿಂಟ್ ಸೆಲೆಕ್ಟ್ ಕಮಿಟಿ ಯವರು ತೀರ್ಮಾನ ಕೊಟ್ಟಿರುವುದನ್ನು ಉಳಿಸಿಕೊಂಡು ಬರಬೇಕಾಗುತ್ತದೆ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—(c) ಕ್ಲಾಸ್ duties of courtಗೆ ಸಂಬಂಧಪಟ್ಟದ್ದು ತಹಸೀಲ್ದಾರರಿಗೆ ಸಂಬಂಧಪಟ್ಟ ಡ್ಯೂಟೀಸ್ ತೆಗೆದು ಹಾಕಿಲ್ಲ. ಕೋರ್ಟಿಗೆ ಸಂಬಂಧಪಟ್ಟ ಡ್ಯೂಟೀಸ್ ಸರಿಯಾಗಿದೆ.

MADAM SPEAKER .—I will now put amendment moved by the Hon. Minister to the vote of the House.

The question is.

"That in the proposed section 112, sub-section '(C)' shall be omitted."

The motion was adopted

MADAM SPEAKER .—I will now put amendment of Sri T R. Shamanna to the vote of the House.

The question is.

"That at page 80 after the item (d) the following item shall be added.

"(e) to hear appeals from the orders of the Tribunal."

The motion was negatived

MADAM SPEAKER.—I will now put the Clause to the vote of the House.

The question is.

"That Clause 71, as amended, do stand part of the Bill".

The motion was adopted

Clause 71 as amended was added to the Bill.

CLAUSE 71A

Sri N. Hutchmasthy Gowda.—I beg to move the following amendment.

"71A. *Substitution of new Section for Section 116.*—For Section 116 of t .e principal Act, the following section shall be substituted, namely.—

"*116. Execution of orders.*—(1) Any sum the payment of which has been directed by an order of the Tahsildar or other authority shall be recoverable from the persons ordered to pay as an arrear of land revenue

(2) An order of the Tahsildar or other authority awarding possession or restoring the possession or use of any land shall be executed in the same manner as an order passed by a revenue officer under the Mysore Land Revenue Act, 1964".

Madam Speaker.—I will put it to vote of the House. the question is

"71A.—Substitution of new Section for Section 116 —For Section 116 of the principal Act, the following section shall be substituted, namely:—

"116. *Execution of orders* —(1) Any sum the payment of which has been directed by an order of the Tahsildar or other authority shall be recoverable from the persons ordered to pay as an arrear of land revenue.

(2) An order of the Tahsildar or other authority awarding possession or restoring the possession or use of any land shall be executed in the same manner as an order passed by a Revenue Officer under the Mysore Land Revenue Act, 1964.

The motion was adopted

Claues 71A was added to the Bill.

CLAUSES 72 TO 78

Madam Speaker.—There are no amendments The question is :

"That Clauses 72 to 78, both inclusive do stand part of the Bill.

The motion was adopted

Clauses 72, to 78, both inclusive were added to the Bill.

NEW CLAUSE 78-A

SRI N. HUTCHMASTHY GOWDA.—I move :

"After clause 78, the following clause shall be inserted, namely:—

"78A. *Amendment of Section 129.*—In Section 129 of the principal Act,—

(i) in sub-section (2), for the word "Court", the word "Tahsildar" shall be substituted ;

(ii) in sub-section (2) for the word "Court" in the two places it occurs, the word "Tahsildar" shall be substituted and for the words "as it deems fit", the words "as he deems fit" shall be substituted."

MADAM SPEAKER.—I will put it to the vote of the House The question is :

'That After clause 78, the following clause shall be inserted namely:

"78A *Amendment of Section 129.*—In section 129 of the principal Act.—

(i) in sub-section (2), for the word ' Court", the word "Tahsildar" shall be substituted ;

(ii) in sub-section (3), for the word "Court" in the two places it occurs, the word "Tahsildar" shall be substituted and for the words "as it deer s fit", the words "as he deems fit" shall be substituted.

The motion was adopted

New Clause 78A was added to the Bill.

CLAUSES 79 AND 80

MADAM SPEAKER.—The question is :

"That Clauses 79 and 80 do stand part of the Bill."

The motion was adopted

Clauses 79 and 80 were added to the Bill.

CLAUSE 81

SRI N. HUTCHMASTHY GOWDA.—I beg to move :

That For clause 81, the following clause shall be substituted, namely.—

"*Amendment of Section 133.*—In Section 133 of the principal Act.—

(i) sub-section ( ) shall be omitted ;

(ii) in sub-section (2),

(*a*) in clause (a), the brackets and the words "that is other than the Court as defined in this Act" shall be omitted ;

(*b*) for the words "by the Court and 'to the Court' the words by, the Tribunal' and 'to the Tribunal' shall respectively be substituted ;

(*c*) in clause (b), for the words "the Court", the words "the Tribunal" shall be substituted."

Madam Speaker.—The question is :

"That For clause 81, the following clause shall be substituted, namely.—

"81. *Amendment of section 133* —In section 133 of the principal Act,—

(i) sub-section (1) shall be omitted;

(ii) in sub-section (2),

(*a*) in clause (a), the brackets and the words "that is other than the Court as defined in this Act" shall be omitted ;

(*b*) for the words 'by the Court' and 'to the Court' the words "by the Tribunal" and "to the Tribunal" shall respectively be substituted :

(*c*) in clause (b), for the words "the Court", the words "the Tribunal" shall be substituted."

The motion was adopted

Madam Speaker:—The question is :

"That Clause 81 as amended do stand part of the Bill."

The motion was adopted

Clause 81, as amended, was added to the Bill.

CLAUSE 82

Madam Speaker.—The question is :

"The Clause 82 do stand part of the Bill."

The motion was adopted

Clause 82 was added to the Bill.

CLAUSE 83

Madam Speaker.—There are amendments to this Clause by the Hon'ble Minister for Revenue.

BY SRI N. HUTCHMASTHY GOWDA.—Madam, I move:

"That for Schedule I the following Schedule shall be substituted:

"SCHEDULE I"

PART A

(See Section 2(A) (35 A))

Classification of Lands

A Class—

Lands having facilities for assured irrigation from such Government canals and Government Tanks as are notified by Government to be capable of supplying water for growing two crops of paddy in a year.

B Class—

(i) Lands having facilites for assured irrigation from such Government Canals and Government Tanks as are notified by Government to be capable of supp'ying water for growing only one crop of paddy in a year.

(ii) Lands irrigated by such Lift irrigation projects constructed and maintained by Government as are notified by Government to be capable of supplying water for growing two crops of paddy in a year.

C Class—

(i) Lands irrigated from any Government sources of irrigation, including lift irrigation projects constructed and maintained by Government other than those coming under A Class and B Class.

(ii) Lands on which paddy crop can be raised or areca crop is grown with the help of rain water.

(iii) Lands irrigated by lifting water from a river or Government canal or Government tank where the pumping installation or other device for lifting water is provided and maintained by the landowner.

Note:—(1) Lands having facilities for irrigation from a Government source where the system of water supply is suitable for growing only light irrigated crop namely, crops other than paddy and sugarcane shall come under this class.

(2) Lands growing irrigated garden crop will come under Classes 'A', 'B' or 'C' as the case may be depending upon the source of irrigation and the system of water supply.

D Class—

(1) Lands classified as dry but not having any irrigation facilities from a Government source.

Note:—Lands growing paddy or garden crops not coming under A Class, B Class or C Class shall come under this class.

(2) For Part B, the following Part shall be substituted, namely.—

"PART B

Formula for determining equivalent extent of different classes :

One acre of A class land having soil classification value above 8 annas=1.3 acres of A Class land having soil classification value below 8 annas=1.5 acres of B Class land having soil classification value above 8 annas=2.0 acres of B Class land having soil classification value below 8 annas=2.5 acres of C Class land having soil classification value above 8 annas=3.0 acres of C Class land having soil classification value below 8 annas=5.4 acres of D Class land."

MADAM SPEAKER.—Amendment moved :

"That for Schedule I the following Schedule shall be substituted :

"SCHEDULE I"

PART A

(See Section 2(A) (35 A))

Classification of Lands

A Class—

Lands having facilities for assured irrigation from such Government canals and Government Tanks as are notified by Government to be capable of supplying water for growing two crops of paddy in a year.

B Class—

(i) Lands having facilities for assured irrigation from such Government Canals and Government Tanks as are notified by Government to be capable of supplying water for growing only one crop of paddy in a year.

(ii) Lands irrigated by such Lift irrigation projects constructed and maintained by Government as are notified by Government to be capable of supplying water for growing two crops of paddy in a year.

C Class—

(i) Lands irrigated from any Government sources of irrigation, including lift irrigation projects constructed and maintained by Government other than those coming under A Class and B Class.

(ii) Lands on which paddy crop can be raised or areca crop is grown with the help of rain water.

(iii) Lands irrigated by lifting water from a river or Government canal or Government tank where the pumping installation or other device for lifting water is provided and maintained by the landowner.

(MADAM SPEAKER.)

Note :—(1) Lands having facilities for irrigation from a Government source where the system of water supply is suitable for growing only light irrigated crop namely, crops other than paddy and sugarcane shall come under this class.

(2) Lands growing irrigated garden crop will come under Classes 'A', 'B' or 'C' as the case may be depending upon the source of irrigation and the system of water supply.

D Class—

(1) Lands classified as dry but not having any irrigation facilities from a Government source.

Note :—Lands growing paddy or garden crops not coming under A Class, B Class or C Class shall come under this class

(2) For Part B the following Part shall be substituted, namely.—

"PART B

Formula for determining equivalent extent of different classes :

One acre of A class land having soil classification value above 8 annas=1.3 acres of A Class land having soil classification value below 8 annas=1.5 acres of B Class land having soil classification value above 8 annas=2.0 acres of B Class land having soil classification value below 8 annas=2.5 acres of C Class land having soil classification value above 8 annas=3.0 acres of C Class land having soil classification value below 8 annas=5.4 acres of D Class land."

6-00 P. M.

SRI T. R. SHAMANNA.—I move the following amendment:

"That at page 84 under D class the following words be added at the end,—

'Fruit gardens and coconus gardens shall also be treated as class D lands".

Under E class the following words shall be added at the end of the note:

"Fruit gardens and coconut gardens shall not come under this class."

MADAM SPEAKRE. Amendment moved.

'That at page 84 under D class the following words be added at the end—

Fruit gardens and coconut gardens shall also be treated as class D lands."

Under E class the following words shall be added at the end of the note.

Fruit gardens and coconut gardens shall not come under this class."

† ಶ್ರೀ ಎಸ್. ಹುಚ್ಚಮಾಸ್ತಿಗೌಡ.—ನನ್ನ ತಿದ್ದುಪಡಿ ಪ್ರಕಾರ ಸರ್ಕಾರದವರು ಕಟ್ಟಿಸಿರತಕ್ಕ ಕ್ಯಾನಲ್‌ಗಳಿಂದಾಗಲಿ ಅಥವಾ ಕೆರೆಗಳಿಂದಾಗಲಿ ನಿರ್ಧಿಷ್ಟವಾಗಿ ಖಾಯಂ ನೀರಿನ ವ್ಯವಸ್ಥೆ ೨ ಭತ್ತದ ಬೆಳೆ ಬೆಳೆಯುವುದಕ್ಕೆ ಇರತಕ್ಕಂಥಾದ್ದು ಒಂದನೇ ತರಗತಿಗೆ ಸೇರುತ್ತದೆ. ಇವುಗಳನ್ನು ಸರ್ಕಾರದವರು ಇಂತಿಂಥ ಪ್ರದೇಶದಲ್ಲಿ "ಎ" ತರಗತಿಗೆ ಸೇರುತ್ತವೆಂದು ನೋಟಿಫೈ ಮಾಡಬೇಕು. (ಬಿ) ತರಗತಿಗೆ ಸೇರುವ ಭೂಮಿ ಯಾವುದೆಂದರೆ, ಒಂದು, ಸರ್ಕಾರದವರು ಕಟ್ಟಿಸಿರತಕ್ಕ ಕ್ಯಾನಲ್‌ಗಳಿಂದಾಗಲಿ ಅಥವಾ ಕೆರೆಗಳಿಂದಾಗಲಿ ಅಥವಾ ಕೆರೆಗಳಿಂದಾಗಲಿ ಒಂದು ಭತ್ತದ ಬೆಳೆ ಬೆಳೆಯುವುದಕ್ಕೆ ನಿರ್ದಿಷ್ಟವಾದ ನೀರಿನ ವ್ಯವಸ್ಥೆ ಇರತಕ್ಕಂಥಾದ್ದು ಎರಡನೇ ತರಗತಿಗೆ ಬರುತ್ತದೆ. ಆದರೆ ಎರಡನೇ ತರಗತಿಯಲ್ಲಿ ಇನ್ನೊಂದು ವರ್ಗವು ಸೇರುತ್ತದೆ. ಅದು ಯಾವುದೆಂದರೆ, ಸರ್ಕಾರದವರು ಲಿಫ್ಟ್ ಇರಿಗೇಷನ್ ತಯಾರು ಮಾಡಿ ಅವುಗಳಿಂದ, ನೀರನ್ನು ಒದಗಿಸಿ, ೨ ಭತ್ತದ ಬೆಳೆ ಬೆಳೆಯುವುದಕ್ಕೆ ಅವಕಾಶ ಇರತಕ್ಕಂಥಾದ್ದು ಅದೂ ಕೂಡ "ಬಿ" ತರಗತಿಗೆ ಬರುತ್ತದೆ. ಈ 'ಬಿ" ತರಗತಿ ಕೂಡ ಸರ್ಕಾರ ನೋಟಿಫೈ ಮಾಡಬೇಕು. "ಸಿ" ತರಗತಿಯು ಒಂದನೆಯದು ಮತ್ತು ಎರಡನೆಯದು ಮಳೆ ನೀರಿನಿಂದ ಭತ್ತ ಆಗಲೀ, ಅಡಿಕೆ ತೋಟವಾಗಲಿ ಬರತಕ್ಕ ಪ್ರದೇಶ. ಯಾವುದೇ ವ್ಯಕ್ತಿ ತನ್ನ ಸ್ವಂತ ಖರ್ಚಿನಿಂದ ಏತದ ಸೌಲಭ್ಯ ತಾನೆ ಹಾಕಿಕೊಂಡು ಸರ್ಕಾರದ ಕ್ಯಾನಲ್‌ನಿಂದ ಆಗಲಿ, ಕೆರೆಯಿಂದ ಆಗಲಿ ನೀರನ್ನು ಉಪಯೋಗಿಸಿಕೊಳ್ಳತಕ್ಕದ್ದು ಕೂಡ ೩ನೇ ತರಗತಿಯಲ್ಲಿ ಬರುತ್ತದೆ. ಈ ರೀತಿ ನೀರಾವರಿ ಇರತಕ್ಕ ಪ್ರದೇಶಕ್ಕೆ ಅನ್ವಹಿಸುವುದು. ಇದರಲ್ಲಿ ನಿರಾವರಿ ಪ್ರದೇಶದಲ್ಲಿ ಅಡಿಕೆ ತೋಟ ಮಾಡತಕ್ಕುದು, ಯಾವುದೇ ವರ್ಗದ ಭೂಮಿಯಲ್ಲಿದ್ದರೆ ಆ ವರ್ಗದ ವಿಸ್ತೀರ್ಣಕ್ಕೆ ಅನು ಗುಣವಾಗಿ ಇದು ಸೇರುತ್ತದೆ. ಇದಲ್ಲದೆ ನೀರಾವರಿ ಇಲ್ಲದೆ ಇರತಕ್ಕ ಖುಷ್ಕಿ ಭೂಮಿಯನ್ನು ಒಂದೇ ವರ್ಗ ೫೪ ಎಕರೆ ಇರುವುದನ್ನು ಒಂದು ವರ್ಗವಾಗಿ ವಿಂಗಡಿಸಿದೆ. ಮೊದಲು ೫೦ ೫೪ ಎಂದು ಇತ್ತು ಅದನ್ನು ಬಿಟ್ಟು ಒಂದೇ ವರ್ಗವಾಗಿ ವಿಂಗಡಿಸಿದೆ. ಎ. ಬಿ. ಸಿ. ಈ ಮೂರರಲ್ಲೂ ಬಾರದೇ ಇರತಕ್ಕಂಥಾದ್ದು ಸ್ವಂತ ಖರ್ಚಿನಿಂದ ತೆಗೆದು ಇರತಕ್ಕ ಬಾವಿಗಳಿಂದ ನೀರನ್ನು ಉಪಯೋಗಿಸತಕ್ಕುದು, ಯಾವುದೇ ಬೆಳೆದರೂ ಅದು 'ಡಿ' ವರ್ಗಕ್ಕೆ ಸೇರುತ್ತದೆ ಅದು ಯಾವ ರೀತಿ ಪರಿವರ್ತನೆಯಾಗುತ್ತದೆ ಎಂದರೆ, ಒಂದು ಎಕರೆ ತರಿ ಭೂಮಿಯಲ್ಲಿ ಆಣೇವಾರಿಯನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದಾರೆ. ಎರಡು ಬೆಳೆ ಬೆಳೆಯತಕ್ಕ ಒಂದು ಎಕರೆ ಭೂಮಿ ೮ ಆಣೆ ಮೇಲ್ಪಟ್ಟಿರುವ ಭೂಮಿ ಆದರೆ ಹೆಚ್ಚು ಫಲವತ್ತಾದ ಭೂಮಿ. ಆದರೆ ೧೦ ಎಕರೆ, ಅದರಲ್ಲಿ ೮ ಆಣೆಗಿಂತ ಕಡಿಮೆ ವರ್ಗದ್ದು ಆದರೆ ೧-೩ ಎಕರೆ. ಇದಕ್ಕೆ ಸಮನಾಗಿ ಎರಡನೇ ವರ್ಗದಲ್ಲಿ ಉತ್ತಮವಾದಂಥ ಭೂಮಿ ೧-೫ ಎಕರೆ ಬರುತ್ತದೆ ೮ ಆಣೆಗಿಂತ ಕಡಿಮೆ ದರ್ಜೆಯಲ್ಲಿ ರತಕ್ಕ ಭೂಮಿ ೨ ಎಕರೆ ಬರುತ್ತದೆ. ಅದಕ್ಕೆ ಸರಿಸಮಾನವಾಗಿ ೩ನೇ ವರ್ಗದಲ್ಲಿ ೮ ಆಣೆಗಿಂತ ಹೆಚ್ಚು ಫಲವತ್ತಾದ ಭೂಮಿ ೨-೫ ಎಕರೆ ಬರುತ್ತದೆ. ೮ ಆಣೆಗಿಂತ ಫಲವತ್ತಿನಲ್ಲಿ ಕಡಿಮೆ ಇರುವ ಭೂಮಿ ೩ ಎಕರೆ ಬರುತ್ತದೆ. ಇದಕ್ಕೆ ಸರಿಸಮನಾಗಿ (ಡಿ) ಕ್ಲಾಸಿನಲ್ಲಿ ೫-೪ ಎಕರೆ ಭೂಮಿ ಬರುತ್ತದೆ. ಇದು ನನ್ನ ತಿದ್ದು ಪಡಿಯಲ್ಲಿರತಕ್ಕ ಅಂಶ. ಇದಕ್ಕೆ ಸಭೆ ಒಪ್ಪಿಗೆ ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

† ಶ್ರೀ ಟಿ. ಆರ್. ಶಾಮಣ್ಣ.- ಮಾನ್ಯ ಸಭಾಧ್ಯಕ್ಷಿಣಿಯವರೆ, ಈಗ ನಮ್ಮ ಮುಂದೆ ಇಟ್ಟಿರತಕ ಮಸೂದೆ ಬಹಳ ಕ್ಲಿಷ್ಟತರವಾಗಿ, ಅನೇಕರಿಗೆ ಅರ್ಥವಾಗದೆ ಇರತಕ್ಕ ಸಮಸ್ಯೆ. ನನ್ನ ಸಲಹೆಯಾದರೂ ಇಷ್ಟೆ. ಇದಕ್ಕೆ ಸರಳವಾಗಿ ವಿವರಣೆ ಮಾಡತಕ್ಕ ಒಂದು ಸಣ್ಣ ಕೈಪಿಡಿಯನ್ನು ಮಾಡಿ ಹಂಚತಕ್ಕುದ್ದು ಉತ್ತಮವಾದುದು ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ, ಇದನ್ನು ಕಾರ್ಯಗತ ಮಾಡಬೇಕಾದರೆ, ರೆವಿನ್ಯೂ ಇಲಾಖೆಯವರು ಅರ್ಥಮಾಡಿಕೊಳ್ಳುವುದಕ್ಕೆ ಅನೇಕ ಸಂದರ್ಭದಲ್ಲಿ ಕಷ್ಟವಾಗುತ್ತದೆ. ಯಾವ ಮಸೂದೆಯಲ್ಲಿ ಹೊಸ ವಿಚಾರಗಳು ಇವೆಯೋ ಅದಕ್ಕೆ ಸರಿಯಾದಂಥ ವಿವರಣೆಮಾಡಿ, ಕೈಪಿಡಿಯನ್ನು ಕೊಡತಕ್ಕುದ್ದು ಉತ್ತಮವಾದುದು. ಹಾಗೆ ಮಾಡದೇ ಹೋದ ವರ್ಷದಲ್ಲಿ ಅನೇಕಸಾರಿ ಸರಿಯಾಗಿ ಅರ್ಥಮಾಡಿಕೊಂಡು ನ್ಯಾಯ ಮಾಡುವುದಕ್ಕೆ ಕಷ್ಟವಾಗುತ್ತದೆಂದು ತಿಳಿದುಕೊಂಡಿದ್ದೇನೆ. ನಾನು ತಂದಿರತಕ್ಕ ತಿದ್ದುಪಡಿಯಾದರೂ ಇಷ್ಟೆ. ಈಗ ಆಹಾರ ಬೆಳೆಯತಕ್ಕಂಥಾದ್ದು ದಿನೇ ದಿನೇ ಬಹಳ ಕ್ಷೀಣ ಸ್ಥಿತಿಗೆ ಬರುತ್ತದೆ. ತೆಂಗಿನ ತೋಟಗಳನ್ನು ಕೊನೆ ದರ್ಜೆಗೆ ಸೇರಿಸುತ್ತಾ ಬಂದಾಗ ಅನೇಕರು ಅನೇಕ ತೆಂಗಿನ ಸಸಿಗಳನ್ನು ನೆಟ್ಟು ವ್ಯವಸಾಯಕ್ಕೆ ಬರತಕ್ಕ ಜಮೀನುಗಳನ್ನು ತೋಟಗಳನ್ನಾಗಿ ಮಾಡುತ್ತಿದ್ದಾರೆ. ಹೆಚ್ಚಿನ ಅನುಕೂಲವನ್ನು ಕಾಫಿ ಪ್ಲಾಂಟರುಗಳು ತೆಂಗಿನ ತೋಟ ಇರತಕ್ಕವರಿಗೆ ಮತ್ತು ಯಾರಿಗೆ ಪ್ರಭಾವ ಬೀರುವುದಕ್ಕೆ ಶಕ್ತಿ ಇದೆಯೋ ಅಂಥವರ ಪ್ರಭಾವಕ್ಕೆ ಅನುಗುಣವಾಗಿ ಜಮೀನನ್ನು ಬದಲಾವಣೆ ಮಾಡಿಕೊಂಡು ಬಂದಿರುವುದು ನೋಡಿದ್ದೇನೆ. ಆ ರೀತಿ ಹಣ್ಣಿನ ತೋಟ ಮತ್ತು ತೆಂಗಿನಕಾಯಿ ತೋಟಗಳನ್ನಾಗಿ

(ಶ್ರೀ ಟಿ. ಆರ್. ಶಾಮಣ್ಣ.)

ಮಾರ್ಪಾಡು ಮಾಡುವ ಸಂದರ್ಭವಿರುವುದರಿಂದ ಉತ್ಪತ್ತಿ ನೋಡಿಕೊಂಡು ವಿಂಗಡಣೆ ಮಾಡಬೇಕು ೪ ಆಣೆ, ೮ ಆಣೆ ಅಂದರೆ ರೈತರಿಗೆ ಎಷ್ಟು ಅರ್ಥವಾಗುತ್ತದೋ ಗೊತ್ತಿಲ್ಲ. ಆದುದರಿಂದ ಇದರ ಬಗ್ಗೆ ಸರಳವಾದ ರೀತಿಯ ಲ್ಲಿ ಕೈಪಿಡಿ ಮಾಡಬೇಕು. ಹಾಗೆ ಮಾಡಿದರೆ ಸ್ವಲ್ಪ ಅನುಕೂಲವಾಗುತ್ತದೆ ಜನರಿಗೂ ಅರ್ಥವಾಗುತ್ತದೆ. ರೆವಿನ್ಯೂ ಇಲಾಖೆಯವರು ಕೂಡ ಇದನ್ನು ಕಾರ್ಯಗತ ಮಾಡುವುದಕ್ಕೆ ಅನುಕೂಲ ವಾಗುತ್ತದೆ ಎಂದು ತಿಳಿದಿದ್ದೇನೆ. ಕಳೆದ ೧೫-೨೦ ದಿವಸಗಳಿಂದ ಇದು ಚರ್ಚೆಯಾಗುತ್ತಾ ಬಂದು, ಈಗ ಬದಲಾವಣೆಗಳು ವಿಪರೀತವಾಗಿ ಅದರ ಪರಿಣಾಮ ಏನು ಎಂದು ಯೋಚನೆ ಮಾಡುವುದಕ್ಕೆ ಅವಕಾಶ ವಾಗದಂಥ ತಿದ್ದುಪಡಿ ತಂದಿದ್ದೀರಿ. ತಿದ್ದುಪಡಿಗಳ ಸಂಖ್ಯೆ ನೋಡಿದರೆ ಅಲ್ಲಿರತಕ್ಕ ಪುಟಗಳನ್ನು ತೆಗೆದು ಕೊಂಡರೆ, ಈ ಬಿಲ್ಲಿಗೆ ಎರಡರಷ್ಟಾಗುತ್ತದೆ. ಬಿಲ್ಲು ಮಾಡುವಾಗ ೧೯೬೦ನೇ ಆಕ್ಟ್ ನಾನು ಮೊದಲೇ ಹೇಳಿದ ಹಾಗೆ ಕಿತ್ತುಹಾಕಿ ಸಮಗ್ರವಾದ ಹೊಸ ಆಕ್ಟ್ ತಂದಿದ್ದರೆ ಅದು ಕಷ್ಟವಾಗುತ್ತಾ ಇರಲಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಿದ್ದುಪಡಿಗೆ ಸಂಬಂಧಪಟ್ಟಂತೆ ಹೇಳಿ.

ಶ್ರೀ ಟಿ. ಆರ್. ಶಾಮಣ್ಣ.—ನಾನು ತಿದ್ದುಪಡಿಗಳನ್ನು ೨-೩ ಸಾರಿ ಓದಿದೆ. ಅದಕೋಸ್ಕರ ಹೇಳತಕ್ಕಂಥಾದ . ವಿವರಗಳನ್ನು ಸ್ಪಷ್ಟೀಕರಿಸಬೇಕಾದರೆ, ಏನು ಮಾಡಬೇಕು ಎಂದು ಸಲಹೆ ಮಾಡು ತ್ತಿದ್ದೇನೆ. ಇದರಿಂದ ಧಾನ್ಯಗಳನ್ನು ಬೆಳೆಯುವ ಜಮೀನುಗಳನ್ನು, ತೆಂಗಿನ ತೋಟವಾಗಿ ಮಾಡುವುದಕ್ಕೆ ಅವಕಾಶವಾಗುತ್ತದೆ. ಇದನ್ನು ವಿಚಾರ ಮಾಡಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ನಾನು ಹೇಳಿರುವ ಹಾಗೆ (ಇ) ಕ್ಲಾಸ್ ತೆಗೆದುಕೊಂಡು ಹೋಗಿ (ಡಿ) ಕ್ಲಾಸಿಗೆ ಹಾಕಿದರೆ ತೋಟಗಳ ಹಾವಳಿ ಕಡಿಮೆಯಾಗಿ ಬೆಳೆ ಬೆಳೆಯುವುದಕ್ಕೆ ಅನುಕೂಲವಾಗುತ್ತದೆ ಎನ್ನುವ ಉದ್ದೇಶದಿಂದ ತಂದಿದ್ದೇನೆ. ತಾವು ಇದನ್ನು ಯೋಚನೆ ಮಾಡಿ ಇದನ್ನು ಒಪ್ಪಿಕೊಳ್ಳಬೇಕು ಎಂದು ಕೇಳಿಕೊಳ್ಳುತ್ತೇನೆ.

† ಶ್ರೀ ಬಿ. ವಿ. ಕಕ್ಕಿಲಾಯ.—ಸನ್ಮಾನ್ಯ ಅಧ್ಯಕ್ಷರೇ, ಭೂಮಿಯ ಒಂದೊಂದು ವರ್ಗವನ್ನು ಪರಿದೂಗಿಸಿಕೊಂಡು ಹೋಗುವುದಕ್ಕೆ (ಬಿ) ವಿಭಾಗದಲ್ಲಿ ತಾವು ಏನು ಸಲಹೆ ಮಾಡಿದ್ದೀರಿ; ಇದಕ್ಕೂ ಬಹಳಮಟ್ಟಿಗೆ ಜಾಯಿಂಟ್ ಸೆಲೆಕ್ಟ್ ಕಮಿಟಿಯ ತೀರ್ಮಾನಕ್ಕೂ, ವ್ಯತ್ಯಾಸವಾಗಿದೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬೇಕಾಗಿದೆ. ಎಲ್ಲ ದೃಷ್ಟಿಕೋನದಿಂದ ನೋಡಿದರೂ ಕೂಡ ಜಾಸ್ತಿ ಹಿಡುವಳಿಯನ್ನು ಪರಿಮಿತಿಯೊಳಗೆ ವಿಸ್ತರಿಸಿಕೊಂಡು ಹೋಗಲಿಕ್ಕೆ ಸಾಧ್ಯವಾಗುತ್ತದೆ, ಅದಕ್ಕೆ ಎಲ್ಲಾ ರೀತಿಯ ಪ್ರಯತ್ನ ಗಳು ಕೂಡ ಒಂದೊಂದು ಭಾಗದಲ್ಲಿ ನಡೆದು, ಇದು ಕೊನೆಯದಾಗಿ ಮಾಡಿಕೊಟ್ಟಿರುವ ಅನುಕೂಲತೆ ಎಂದು ಹೇಳಬೇಕಾಗಿದೆ.

ಈಗ ತಾವು ಇದರಲ್ಲಿ ಬದಲಾವಣೆ ಮಾಡಿರುವುದು ಏನೆಂದರೆ ಎರಡು ಭತ್ತದ ಬೆಳೆ ಬೆಳೆಯುವುದಕ್ಕೆ ನೀರಿನ ಅನುಕೂಲತೆ ಇರತಕ್ಕಂಥ ಜಮೀನು ಇಂಥಾದ್ದನ್ನು ಅಥವಾ ಒಂದು ಕಬ್ಬಿನ ಬೆಳೆ ಬೆಳೆಯುದಕ್ಕೆ ನೀರಿನ ಅನುಕೂಲತೆ ಇರತಕ್ಕಂಥ ಜಮೀನು 'ಎ' ವರ್ಗ ಅಂತ ಮಾಡಿದ್ದೀರಿ. ಹಿಂದೆ ಈ ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಕೊಟ್ಟಿದ್ದನ್ನು ತೆಗೆದು ಹಾಕಿ ಮತ್ತೆ ಅದನ್ನು ಸೇರಿಸಿದ್ದೀರಿ. ಇದು ನೀವು ಕೊಟ್ಟಿರುವ ತಿದ್ದುಪಡಿಯಿಂದ ಗೊತ್ತಾಗುತ್ತದೆ. ಎರಡು ಭತ್ತದ ಬೆಳೆ ಬೆಳೆಯುತಕ್ಕಂಥಾ ಜಮೀನಿನಲ್ಲಿ ೧೦-೧೨ ತಿಂಗಳು ನೀರು ಸಿಕ್ಕುವುದಾದರೆ ಕಬ್ಬು ಬೆಳೆಯುವುದಕ್ಕೆ ಸಾಧ್ಯವಾಗುತ್ತದೆ. ಇದನ್ನು ಒಂದು ವರ್ಗಕ್ಕೆ ಸೇರಿಸಿದ್ದೀರಿ ಈ ರೀತಿ ಇದನ್ನು ಒಂದು ವರ್ಗಕ್ಕೆ ಸೇರಿಸಿರುವುದನ್ನು ನೋಡಿದರೆ ಇಂಥ ಜಮೀನನ್ನು ಹೆಚ್ಚು ಇಟ್ಟುಕೊಳ್ಳುವುದಕ್ಕೆ ಈ ಒಂದು ಮಾರ್ಪಾಟನ್ನು ಮಾಡಿದ್ದೀರಿ ಎಂದು ನನಗೆ ಅನಿಸುತ್ತದೆ. ಇದು ಮೊದಲು ಇದ್ದ ಹಾಗೆ ಇದ್ದಿದ್ದರೆ ಚೆನ್ನಾಗಿತ್ತು ಎಂದು ನನಗೆ ಅನಿಸುತ್ತದೆ.

ಇನ್ನು ಅಪ್ರೂವ್ಡ್ ಇರ್ರಿಗೇಷನ್ ವಿಚಾರದಲ್ಲಿ ಸ್ವಲ್ಪ ವಿವರಣೆ ಕೊಡಬೇಕು ಎಂದು ಕೇಳುತ್ತೇನೆ. ಮುಖ್ಯವಾಗಿ ಇದರಲ್ಲಿ ನನ್ನ ಆಕ್ಷೇಪ ಏನೆಂದರೆ ಪಾರ್ಟ್ 'ಬಿ' ಭಾಗದಲ್ಲಿ ಏನು ಹೇಳಿದ್ದೀರಿ ಅದು 'ಡಿ' ಭಾಗಕ್ಕೆ ಬರುತ್ತದೆ. ಏತಕ್ಕೆಂದರೆ ನಮ್ಮ ಭಾಗದಲ್ಲಿ ಬಹಳಷ್ಟು ಭಾಗ 'ಡಿ' ಬರುವುದಿಲ್ಲ. ಖುಷ್ಕಿ ಭಾಗಕ್ಕೆ ಬರುವಂಥ ಜಮೀನು ಇರುತ್ತದೆ. ಈಗ 'ಡಿ' ಭಾಗ ತೆಗೆದುಕೊಂಡರೆ ಅದರಲ್ಲಿ ಒಂದು ನೋಟ್‌ನ್ನು ಸೇರಿಸಿದ್ದೀರಿ. ಅದು ಈ ರೀತಿ ಇದೆ:—

"Lands grow ng paddy or graden crops not coming under A Class B Class or C Class shall come under this class
ಎಂದು ಹೇಳಿದ್ದೀರಿ.

ನಾನು ಒಬ್ಬ ವ್ಯವಸಾಯಗಾರನಾಗಿರುವುದರಿಂದ ನನಗೆ ಬಹಳ ಶೋಚನೀಯವಾಗಿದೆ. ಏತಕ್ಕೆಂದರೆ ಯಾವುದೇ ತರಹದ ನೀರಾವರಿ ಸೌಕರ್ಯ ಇಲ್ಲದೆ ಇರುವುದು 'ಎ' ಕ್ಲಾಸ್‌ಗೂ ಬರುವುದಿಲ್ಲ, 'ಬಿ' ಕ್ಲಾಸ್‌ಗೂ ಬರುವುದಿಲ್ಲ, 'ಸಿ' ಕ್ಲಾಸ್‌ಗೂ ಬರುವುದಿಲ್ಲ. ನೀರಿನ ಅನುಕೂಲತೆ ಇಲ್ಲದೆ ಭತ್ತ ಹೇಗೆ ಬೆಳೆಯುವುದಕ್ಕಾಗುತ್ತದೆಯೋ ನನಗೆ ಅರ್ಥವಾಗುವುದಿಲ್ಲ. ಖಾಸಗಿಯವರು ಸ್ವಂತ ಬಾವಿ ಮಾಡಿಕೊಂಡಿದ್ದರೂ ಕೂಡ ಅಥವಾ ಕೊಳವೆ ಬಾವಿ ಹಾಕಿಕೊಂಡಿದ್ದರೂ ಕೂಡ ಅಲ್ಲಿ ಭತ್ತ ಬೆಳೆಯುವುದಕ್ಕೆ ಸಾಕಷ್ಟು ನೀರು ಬರದೇ ಇದ್ದರೆ ಭತ್ತ ಹೇಗೆ ಬೆಳೆಯುವುದಕ್ಕಾಗುತ್ತದೆ? ಈಗ ಮ್ಯಾಕ್ಸಿಮಮ್ ೫೪ ಎಕರೆ ಎಂದು ಮಾಡಿದ್ದೀರಿ. ನನ್ನ ಆಕ್ಷೇಪ ಏನೆಂದರೆ ಇಂಥಾವುಗಳಲ್ಲಿ ನಿಜವಾಗಿ ಭತ್ತ ಬೆಳೆಯುವುದಕ್ಕೆ ಸಾಕಷ್ಟು ನೀರಾವರಿ ಇದ್ದರೂ ಕೂಡ ಅದು 'ಎ' ಕ್ಲಾಸ್ ಜಮೀನು ಆದರೂ ಕೂಡ ಅದನ್ನು ಬೇರೆ ಒಂದು ವರ್ಗಕ್ಕೆ ಸೇರಿಸಿರುವುದನ್ನು ನೋಡಿದರೆ ಈ ಬಗ್ಗೆ ಹೆಚ್ಚಿಗೆ ಜಮೀನು ಇಟ್ಟುಕೊಳ್ಳಬೇಕು ಎನ್ನುವ ದೃಷ್ಟಿಯಿಂದ ಈರೀತಿ ಮಾಡಿದ್ದೀರಿ ಎಂದು ನನಗೆ ಅನಿಸುತ್ತದೆ. ಆದುದರಿಂದ ಇದಕ್ಕೆ ನನಗೆ ವಿವರಣೆ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಪಾರ್ಟ್ ಬಿ' ವಿಚಾರದಲ್ಲಿ ಹೇಳುವುದಾದರೆ ಅದರಲ್ಲೂ ಬದಲಾವಣೆಮಾಡಿದ್ದೀರಿ. ಈ ಬಗ್ಗೆ ಸೆಲೆಕ್ಟ್ ಕಮಿಟಿಯಲ್ಲಿ ಬಹಳಷ್ಟು ಯೋಚನೆಮಾಡಿ ಈಕ್ವೇಷನ್ ತಯಾರು ಮಾಡಿದೆವು. ಈಗ ಇದರಲ್ಲಿ ಏನು ಬದಲಾವಣೆ ಮಾಡಿದ್ದೀರಾ ಎಂದರೆ ಈಗ ಇದರಲ್ಲಿ ಅಣಿವಾರಿ ಲೆಕ್ಕ ತೆಗೆದುಕೊಂಡು ಏನು ಮಾಡಿದ್ದೀರಾ ಎಂದರೆ ೮ ಅಣೆ ಮೌಲ್ಯ ಮೀರಿದ ಫಲವತ್ತಾದ ಜಮೀನು ಇರುವ ಒಂದು ಎಕರೆ 'ಎ' ವರ್ಗದ ಜಮೀನು ೮ ಆಣೆಗಿಂತ ಕಡಿಮೆ ಫಲವತ್ತಿನ ೧.೩ ಎಕರೆ ಜಮೀನಿಗೆ ಸಮ ಎಂದು ಮಾಡಿದ್ದೀರಿ. ಈಗ ೧೦ ಎಕರೆ ಸೀಲಿಂಗ್ ಲಿಮಿಟ್ ಅಂತ ಏನು ಮಾಡಿದ್ದೀರೋ ಅದರ ಲೆಕ್ಕ ತೆಗೆದು ಕೊಂಡಿದ್ದರೆ ೧.೨ ಎಕರೆ ಆಗುತ್ತಿತ್ತು. ಈಗ ಈರೀತಿ ಮಾಡಿರುವುದರಿಂದ ೧.೩ ಎಕರೆ ಬಂದಿದೆ. ಹೀಗೆಮಾಡಿ ಇದರಲ್ಲೂ ಕೂಡ ಒಂದು ಎಕರೆ ಜಾಸ್ತಿ ಸೇರಿಸಿ ಕೊಟ್ಟಿದ್ದೀರಿ. ಹಾಗೆಯೇ ಅದರ ಕೆಳಗೆ ಬರತಕ್ಕಂಥ ಜಮೀನು ತೆಗೆದುಕೊಂಡರೆ ೧೮ ಎಕರೆ ಇದ್ದುದು ೨೦ ಎಕರೆ ಆಗುತ್ತದೆ ೨೮ ಎಕರೆ ಇದ್ದುದ್ದು ೩೦ ಎಕರೆಯಾಗುತ್ತದೆ. ಉದಾಹರಣೆಗೆ ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಭಾಗ ತೆಗೆದುಕೊಂಡರೆ ಭತ್ತ ಬೆಳೆಯತಕ್ಕಂಥ ಜಮೀನಾಗಲಿ, ಅಡಿಕೆ ಬೆಳೆಯತಕ್ಕಂಥಾ ಜಮೀನಾಗಲಿ ತೆಗೆದುಕೊಂಡರೆ ೩೦ ಎಕರೆ ಜಮೀನಿನ ಮೇಲೆ ಯಾರಿಗೂ ಇಲ್ಲ. ಅವರಿಗೆ ನೀವೇ ಹೆಚ್ಚಿಗೆ ಜಮೀನು ಕೊಡಬೇಕಾಗುತ್ತದೆ. ಈ ದೃಷ್ಟಿಯಿಂದ ನಮ್ಮ ಭಾಗದಲ್ಲಿ ನಿಮಗೆ ಯಾವ ಜಮೀನೂ ಕೂಡ ಒಂದು ಗುಂಟೆಯೂ ಜಾಸ್ತಿ ಸಿಕ್ಕುವುದಿಲ್ಲ. ಇನ್ನು ಈ ದೇವಸ್ಥಾನದ ಬಗ್ಗೆ ಹೇಳುವುದಾದರೆ ಅವರು ಅವರಿಗೆ ಎಷ್ಟು ಬೇಕೋ ಅಷ್ಟು ಬಿಟ್ಟುಕೊಂಡಿದ್ದಾರೆ. ಆದುದರಿಂದ ಖಾಸಗೀ ಜಮೀನಿನಲ್ಲೂ ಕೂಡ ಒಂದು ಗುಂಟೆ ಜಾಸ್ತಿ ಸಿಕ್ಕುವುದಿಲ್ಲ. ನೀವು ಸುಮ್ಮನೆ ಈ ತಿದ್ದುಪಡಿ ಪಾಸುಮಾಡಿ ಕೊಂಡು ನಾವೇನೋ ಒಂದು ಪರಿಮಿತಿ ಶಾಸನ ಮಾಡಿಕೊಂಡಿದ್ದೇವೆ ಎಂದು ಹೇಳಬೇಕೇ ಹೊರತು ಇದರಿಂದ ಯಾವ ರೀತಿಯಾಗಿಯೂ ಉಪಯೋಗವಿಲ್ಲ. ಆದುದರಿಂದ ಮೊದಲು ಯಾವರೀತಿಮಾಡಿದ್ದಿರೋ ಅದನ್ನೇ ಇಟ್ಟುಕೊಳ್ಳಬೇಕೆಂದು ನಾನು ಹೇಳ ಬಯಸುತ್ತೇನೆ.

† ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಅಧ್ಯಕ್ಷಿಣಿಯವರೇ, ಸರ್ಕಾರದವರು ಈಗ ಪುನರಪಿ ಏನು ತಿದ್ದುಪಡಿ ತಂದಿದ್ದಾರೋ ಇದರಲ್ಲಿ ಗೇಣಿ ಅಭಿವೃದ್ಧಿಯಾಗುವ ಬದಲು ನಾಶವಾಗುವ ಅಂಶ ಇದೆ. ಅದು ಬಿಟ್ಟರೆ ಮತ್ತಾವುದೂ ಕೂಡ ಸುಧಾರಣೆ ಇಲ್ಲ. ಆದುದರಿಂದ ಈ ವಿಷಯದಲ್ಲಿ ನಾನು ಹೇಳುವುದಾದರೆ ಇವೆಲ್ಲಾ ನಾಮಕಾವಸ್ತೆ ವಿನಾ ಮತ್ತೇನೂ ಪ್ರಯೋಜನವಿಲ್ಲ. ಅಲ್ಲದೆ ಈ ಮಸೂದೆ ನೋಡಿದರೆ ಜನಗೆ ಮಂಕುಬೂದಿ ಎರಚಿದ್ದಾರೆ ಎಂದು ಹೇಳುತ್ತೇನೆ ಇದರ ಪ್ರಕಾರ ನಮ್ಮ ಮಲೆನಾಡಿನಲ್ಲಿ ಒಂದು ಇಂಚುಭೂಮಿಯು ಕೂಡ ನಿಮ್ಮ ಕೈಗೆಸಿಕ್ಕುವುದಿಲ್ಲ. ಈಗಾಗಲೇ ಸಾಕಷ್ಟು ಅವರನ್ನು ತುಳಿದಿದ್ದೀರಿ. ಇದರ ಜೊತೆಗೆ ಈ ಪರಿಮಿತಿಯನ್ನೂ ತಂದರೆ ಅವರ ಹಿಡುವಳಿಯಲ್ಲೂ ಕೂಡ ನಿಮಗೆ ಏನೂ ಸಿಕ್ಕುವುದಿಲ್ಲ. ನೀವು ಹಾಕಿದ ಪರಿಮಿತಿಯೊಳಗೆ ಅವರಿಗೆ ಜಮೀನು ಇಲ್ಲದೇ ಹೋದರೆ ನೀವೇ ಅವರಿಗೆ ಕೊಡಬೇಕಾದ ಪರಿಸ್ಥಿತಿ ಬರುತ್ತದೆ. ಏತಕ್ಕೆಂದರೆ ನೀವು ಹಾಕಿಕೊಂಡಿರತಕ್ಕಂಥ ಪರಿಮಿತಿಗಿಂತ ಅವರ ಹತ್ತಿರ ಒಂದು ಇಂಚೂ ಕೂಡ ಜಮೀನು ಇಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಸರ್ಕಾರದವರು ಅವರಿಗೆ ಮಂಕುಬೂದಿ ಎರಚಿದ್ದಾರೆ ಎಂದು ಹೇಳಬೇಕಾಗುತ್ತದೆ. ಈ ಸುಧಾರಣೆಯಿಂದ ರೈತರಿಗೆ ಯಾವ ತರಹವಾದ ಪರಿಣಾಮ ಕಾರಿಯಾಗಿಯೂ ಆಗಿಲ್ಲ ಎಂದು ಹೇಳುತ್ತೇನೆ. ಇದರಿಂದ ಸಾವಿರಾರು ಎಕರೆ ಇರುವವರಿಗೆ ಸ್ವಲ್ಪ ಪರಿಣಾಮವಾಗಿದೆಯೇ ಹೊರತು ಮತ್ತಾರಿಗೂ ಆಗುವುದಿಲ್ಲ. ಏತಕ್ಕೆಂದರೆ ಅವರು ಆ ಪರಿಮಿತಿಯೊಳಗೇ ಇಟ್ಟುಕೊಂಡಿರುತ್ತಾರೆ. ಆದುದರಿಂದ ನೀವು ತಂದಿರತಕ್ಕಂಥ ಮಿತಿಯನ್ನು ಆಕಾಶಕ್ಕೇರಿಸಿದರೂ ತಂದರೆ ಇದು ಹೊಂದಿಕೊಳ್ಳಬಹುದೇನೋ. ಇದು ಭೂಪರಿಮಿತಿಗೆ ಅನ್ವಯ ಆಗುವುದಿಲ್ಲ. ಇದು ನಿಷ್ಪ್ರಯೋಜನೆವಾದ ಸುಧಾರಣೆ ಎಂದು ಹೇಳುತ್ತೇನೆ. ಇದರಲ್ಲಿ ಒಂದು ಅಂಶ ಮಾತ್ರ ಹೇಳಬೇಕಾಗುತ್ತದೆ. ಇದು ಸಾರ್ವಜನಿಕರಿಗೂ ಗೊತ್ತಿದೆ ನೀವು ಈ ರೀತಿ ದಾನ ಡಂಗೂರಗಳನ್ನು ಮಾಡಿಕೊಂಡು ಸಾರ್ವಜನಿಕರಿಂದ

(ಶ್ರೀ ಕೋಣಂದೂರು ಲಿಂಗಪ್ಪ)

ಹೆಸರುಗಳನ್ನು ತೆಗೆದುಕೊಳ್ಳಬೇಕು ಎಂದರೆ ನಿಮ್ಮ ನಿಜವಾದ ಪರಿಸ್ಥಿತಿ ಏನು ಎಂದು ಅವರು ತಿಳಿದು ಕೊಂಡಿದ್ದಾರೆ. ಆದುದರಿಂದ ನಾನು ಹೇಳುವುದು ಏನೆಂದರೆ ಮೊದಲು ಈ ಬಗ್ಗೆ ಏನು ಒಂದು ಲಿಮಿಟ್ ಇತ್ತೋ ಅದನ್ನೇ ಇಟ್ಟುಕೊಂಡಿದ್ದರೆ ಏನಾದರೂ ಸ್ವಲ್ಪ ಪ್ರಯೋಜನ ಆಗುತ್ತಿತ್ತೋ ಏನೋ ಎಂದು ನನಗೆ ಅನಿಸುತ್ತದೆ. ಆದುದರಿಂದ ಈಗ ತಂದಿರುವ ತಿದ್ದುಪಡಿ ನೋಡಿದರೆ ನನಗೆ ಸ್ವಲ್ಪ ಅನುಮಾನ ವಾಗಿದೆ ಇಷ್ಟು ಮಾತ್ರ ಹೇಳುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ (ಬಿ) ಕ್ಲಾಸ್‌ನಲ್ಲಿ ಎರಡನೇ ವರ್ಗದ ಜಮೀನಿಗೆ ಈರೀತಿ ಯಾಗಿ ವಿವರಣೆಯನ್ನು ಕೊಟ್ಟಿದ್ದಾರೆ.

Lands irrigated by such left irrigation projects constructed and maintained by Government as are notified by Government to be capable of supplying water for growing two crops of paddy in a year. ಇದಕ್ಕೂ (ಎ) ಕ್ಲಾಸ್ ಜಮೀನಿಗೂ ಯಾವ ವ್ಯತ್ಯಾಸವನ್ನು ಕಂಡಿದ್ದಾರೆನ್ನುವುದು ಗೊತ್ತಾಗುವುದಿಲ್ಲ. ಮೊದಲನೇ ವರ್ಗದ ಜಮೀನು ಸಂಬಂಧದಲ್ಲಿ ಕೂಡ

"as are notified by Government to be capable of supplying water for growing two crops of paddy in a year"

ಎಂದು ಹೇಳಿದ್ದಾರೆ (ಎ) ಕ್ಲಾಸ್ ಜಮೀನು ಮತ್ತು (ಬಿ) ಕ್ಲಾಸ್ ಜಮೀನು ಎರಡರಲ್ಲಿಯೂ ವರ್ಷದಲ್ಲಿ ಎರಡು ಭತ್ತದ ಫಸಲು ಕೊಡತಕ್ಕ ನೀರಾವರಿ ಜಮೀನು ಎಂದು ಹೇಳಿದ್ದಾರೆ ಆದರೆ (ಬಿ) ಕ್ಲಾಸ್‌ನಲ್ಲಿ ಎರಡು ವರ್ಗಮಾಡಿ ಸರ್ಕಾರದ ಮೂಲಗಳಿಂದ ನೀರನ್ನು ಕೊಟ್ಟರೂ ಲಿಫ್ಟ್ ಇರಿಗೇಷನ್ ಮೂಲಕ ಎರಡು ಬೆಳೆ ಬರತಕ್ಕ ಜಮೀನನ್ನು ಅದರಲ್ಲಿ ಎರಡನೇ ವರ್ಗಕ್ಕೆ ಸೇರಿಸಿದ್ದಾರೆ. ಲಿಫ್ಟ್ ಇರಿಗೇಷನ್ ಮುಖಾಂತರವಾಗಬಹುದು, ಕೆರೆಯಿಂದ ಆಗಬಹುದು, ಅಷ್ಯೂರ್ಡ್ ಫೆಸಿಲಿಟೀಸ್ ಏನಿರುತ್ತದೆ, ಒಂದು ಫಸಲನ್ನು ಕೊಡತಕ್ಕ ಜಮೀನನ್ನು (ಬಿ) ಕ್ಲಾಸ್ ಎಂದು ಮಾಡಿ, ಎರಡು ಫಸಲು ಕೊಡುತಕ್ಕ ಜಮೀನನ್ನು (ಎ) ವರ್ಗದಲ್ಲಿ ಸೇರಿಸಬೇಕಾಗಿತ್ತು. ಆದುದರಿಂದ ಎರಡು ಫಸಲು ಕೊಡತಕ್ಕ ಜಮೀನನ್ನು (ಬಿ) ವರ್ಗದಲ್ಲಿ ಸೇರಿಸಿರುವುದು ಅನಾವಶ್ಯಕ ಮತ್ತು ಇದರಿಂದ ನುಣುಚಿ ಕೊಳ್ಳುವುದಕ್ಕೆ ಪ್ರಯತ್ನ ಮಾಡಿದ್ದಾರೆ.

ಇದರಲ್ಲಿ ಕಬ್ಬಿನ ಬೆಳೆಯನ್ನು ಬೇರೆಯಾಗಿ ತೆಗೆದಿದ್ದಾರೆ ಯಾವ ಉದ್ದೇಶದಿಂದ ಕಬ್ಬಿನ ಬೆಳೆಯನ್ನು ತೆಗೆದಿದ್ದಾರೆ ಅದೇ ಉದ್ದೇಶದಿಂದಲೇ ಎಲ್ಲ ಫಸಲುಗಳ ಹೆಸರನ್ನೂ ಕೂಡ ತೆಗೆಯ ಬೇಕಾದ ಪ್ರಸಂಗ ಬರುತ್ತದೆ. ಎರಡು ಫಸಲು ಬೆಳೆಯಲಿಕ್ಕೆ ಸಾಕಾದಷ್ಟು ನೀರನ್ನು ಕೊಡತಕ್ಕ ಅಷ್ಯೂರ್ಡ್ ವಾಟರ್ ಫೆಸಿಲಿಟೀಸ್ ಎಲ್ಲಿಯವರೆಗೆ ಒದಗಿಸುತ್ತಾರೆಯೋ, ಅಲ್ಲಿಯವರೆಗೆ ಯಾವ ಬೆಳೆಯನ್ನಾದರೂ ಬೆಳೆಯಲಿ, ಕಬ್ಬು, ಬತ್ತ ಏನು ಬೇಕಾದರೂ ಬೆಳೆಯಬಹುದು, ಕಬ್ಬಿನ ಒಂದು ಫಸಲು ಅಥವಾ ಬತ್ತದ ಎರಡು ಫಸಲು ಎಂದು ವರ್ಗೀಕರಣ ಮಾಡಬೇಕು. ಆದರೆ ಕಬ್ಬಿನ ಬೆಳೆಯನ್ನು ಯಾವ ಹಿನ್ನೆಲೆಯಲ್ಲಿ ತೆಗೆದಿದ್ದಾರೆ ಅದೇ ರೀತಿ ಬತ್ತದ ಫಸಲು ಎನ್ನುವುದನ್ನು ತೆಗೆಯದೆ ಅದನ್ನು ಇಟ್ಟುಕೊಳ್ಳುತ್ತೇವೆಂದರೆ ಯಾವ ಅರ್ಥವೂ ಇಲ್ಲ. ಎರಡು ಫಸಲು ಬೆಳೆಯುತಕ್ಕ ಭೂಮಿಗೆ ಸಾಕಷ್ಟು ನೀರು ಕೊಡುವುದನ್ನು ಒಂದು ವರ್ಗ, ಒಂದು ಫಸಲಿಗೆ ನೀರು ದೊರೆಯುವುದನ್ನು ಎರಡನೇ ವರ್ಗ ಹೀಗೆ ಮಾಡಬೇಕಾಗಿತ್ತು. ಸರ್ಕಾರಿ ಮೂಲಗಳಿಂದ ಅಲ್ಲದೆ ಅವರೇ ನೀರಾವರಿ ಸೌಕರ್ಯ ಮಾಡಿಕೊಂಡಿರುವ ಜಮೀನುಗಳ ವಿಚಾರ ಬೇರೆ. ಆದರೆ ಈಗ ಸೂಚಿಸಿರುವಂತ ವರ್ಗೀಕರಣ ಮಾಡುವುದು ಕ್ರಮವಾಗುವುದಿಲ್ಲ ಇದನ್ನು ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ

ಜಮೀನುಗಳನ್ನು ಸಮಾನತೆ ಮಾಡುವುದಕ್ಕೋಸ್ಕರ ಮಾಡಿರುವ ಕ್ರಮದಲ್ಲಿ ಶಾಸ್ತ್ರೀಯವಾದ ವಿಧಾನವನ್ನು ಅನುಸರಿಸಿಲ್ಲ. (ಎ) ವರ್ಗದ ಜಮೀನು ಒಂದು ಎಕರೆ ಮತ್ತು (ಬಿ) ವರ್ಗದಲ್ಲಿ ಎಂಟಾಣೆ ಗಿಂತ ಹೆಚ್ಚು ಫಸಲು ಬರುವ ಜಮೀನು ೧.೩ ಎಕರೆ ಸಮಾನವಾಗುತ್ತದೆ ಎಂದು ಹೇಳಿದ್ದಾರೆ. ಯಾವ ಆಧಾರದ ಮೇಲೆ ಇದನ್ನು ಹೇಳಿದ್ದಾರೆನ್ನುವುದು ಅರ್ಥವಾಗುವುದಿಲ್ಲ. ಹೀಗೆ ಎಲ್ಲಿಯೂ ಕೂಡ ಶಾಸ್ತ್ರೀಯವಾಗಿ, ವೈಜ್ಞಾನಿಕವಾಗಿ ವಿಶ್ಲೇಷಣೆ ಮಾಡದೆ ಒಂದಕ್ಕೊಂದಕ್ಕೆ ಸಮಾನತೆಯನ್ನು ಕಲ್ಪಿಸಿ ಕೊಂಡಿರುವುದು ಸರಿಯಲ್ಲ. ಹೆಚ್ಚು ಭೂಮಿಯನ್ನು ಪಡೆಯುವುದಕ್ಕೆ ಮತ್ತೆ ಅವಕಾಶವನ್ನು ಕಲ್ಪಿಸಿದ್ದಾರೆ

ಒಟ್ಟಿನ ಮೇಲೆ ಮಹಾಭಾರತದ ಯುದ್ಧ ಎಲ್ಲ ಆದ ಮೇಲೆ ಧರ್ಮರಾಯನು ಸ್ವರ್ಗಕ್ಕೆ ಹೋದಾಗ ಎಲ್ಲರೂ ಸತ್ತು ಹೋಗಿ ಒಂದು ನಾಯಿ ಮಾತ್ರ ಧರ್ಮರಾಯನ ಜೊತೆಯಲ್ಲಿ ಹೋಗುತ್ತದೆ. ಜೀವಂತ ಮನುಷ್ಯರೆಲ್ಲ ಹೋಗಿ ಒಂದು ನಾಯಿ ಮಾತ್ರ ಧರ್ಮರಾಯನ ಜೊತೆಗೆ ಹೋಯಿತು ಎನ್ನುವ ಹಾಗೆ, ಜೀವಂತ ಶಕ್ತಿ ಎಲ್ಲ ಸುಧಾರಣೆಯಲ್ಲಿ ತಿದ್ದುಪಡಿ ಮುಖಾಂತರವಾಗಿ ನಾಶವಾಗಿ ಉಳಿದಿರತಕ್ಕದ್ದು ಕೇವಲ ಅಸ್ಥಿಪಂಜರ. ಇದು ಆಗಿರತಕ್ಕ ದೊಡ್ಡ ಸುಧಾರಣೆ. ಸುಮಾರು ಒಂದು ವರ್ಷದಿಂದ ಚರ್ಚೆ ನಡೆದು ಅಸ್ಥಿಪಂಜರವನ್ನು ದೇಶದ ಜನತೆಗೆ ಕೊಡುತ್ತಿದ್ದೇವೆ. ತಮ್ಮ ಮುಖಾಂತರ ನಾನು ಕೇಳಿಕೊಳ್ಳುವುದೇನೆಂದರೆ, ಯಾವ ಯಾವ ಮೂಲ, ಯಾವ ಯಾವ ಮಾರ್ಗದಿಂದ, ಯಾವ ಯಾವ ವಿಧದಿಂದ ಯಾರ್‍ಯಾರಿಗೆ ನುಸುಳಿಕೊಂಡು ಹೋಗುವುದಕ್ಕೆ ಅವಕಾಶಕೊಟ್ಟು, ಕೊನೆಯ ಅಧ್ಯಾಯ, ಕೊನೆಯ ಕ್ಲಾಜನ್ನು ತಿದ್ದುಪಡಿ ಮಾಡುವುದರ ಮೂಲಕ ಕೆಲವು ಜನರಿಗೆ ಮತ್ತಷ್ಟು ನುಣುಚಿಕೊಳ್ಳಲು ಅವಕಾಶಮಾಡಿಕೊಟ್ಟು, ಇಡೀ ಕಾನೂನನ್ನು ಅರ್ಥರಹಿತವಾಗಿ ಮಾಡಿದ್ದಾರೆ. ಇದು ಸರಿಯಲ್ಲ, ಇದನ್ನು ಪುನರ್‌ಪರಿಶೀಲನೆ ಮಾಡಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ, ಈ ಕಾನೂನು ತಿದ್ದುಪಡಿ ಮಾಡುವುದರ ಕೊನೆ ಘಟ್ಟದಲ್ಲಿದ್ದೇವೆ. ನನಗೆ ಒಂದು ಮಾತು ಜ್ಞಾಪಕಕ್ಕೆ ಬರುತ್ತದೆ. ಟಿಪ್ಪು ಸುಲ್ತಾನ ಮಹಾಭಾರತ ಕಥೆಯನ್ನು ಕೇಳಿ ಇದು ಬಹಳ ಚೆನ್ನಾಗಿದೆ, ತನ್ನ ಹೆಸರಿನಲ್ಲಿಯೂ ಒಂದು ಮಹಾಭಾರತವನ್ನು ಬರೆಸಬೇಕೆಂದು ಹೇಳಿದನಂತೆ. ಅದಕ್ಕಾಗಿ ದೇಶದಲ್ಲಿದ್ದ ಪಂಡಿತರನ್ನು, ಬುದ್ಧಿವಂತರನ್ನು ಕರೆಸಿ ಶ್ರೀರಂಗಪಟ್ಟಣದಲ್ಲಿ ದೊಡ್ಡ ಬಿಡಾರಕ್ಕೆ ವ್ಯವಸ್ಥೆಯನ್ನು ಮಾಡಿಸಿ ಮಹಾಭಾರತವನ್ನು ಬರೆಯಲು ವ್ಯವಸ್ಥೆ ಮಾಡಿದನಂತೆ. ಅದಕ್ಕಾಗಿ ಎರಡು ಮೂರು ವರ್ಷ ಅವಕಾಶಕೊಟ್ಟು, ಅವರ ಊಟೋಪಚಾರಗಳಿಗೆ ಬೇಕಾದ ಎಲ್ಲ ವ್ಯವಸ್ಥೆಯನ್ನೂ ಮಾಡಿದನಂತೆ. ಸ್ವಲ್ಪ ದಿವಸಗಳನಂತರ ಆ ಪಂಡಿತರನ್ನೆಲ್ಲ ಕರೆದು ಮಹಾಭಾರತವನ್ನು ಎಲ್ಲಿಯತನಕ ಬರೆದಿದ್ದೀರಿ, ಏನೇನು ಬರೆದಿದ್ದೀರೀ ಎಂದು ಕೇಳಿದನಂತೆ. ಆಗ ಪಂಡಿತರು ಬಹಳ ಚೆನ್ನಾಗಿ ಬರೆದಿದ್ದೇವೆ, ಆದರೆ ನಮಗೆ ಒಂದು ಅನುಮಾನ ಬಂದಿದೆ. ಆದರ ಬಗ್ಗೆ ನಿಮ್ಮನ್ನು ಕೇಳಿ ಬಗೆಹರಿಸಬೇಕು ಎಂದಿದ್ದೇವೆ ಎಂದು ಹೇಳಿದ್ದಕ್ಕೆ ಬಿಟ್ಟು ಸುಲ್ತಾನನು ನಿಮ್ಮ ಅನುಮಾನವೇನು ಎಂದು ಕೇಳಿದನಂತೆ. ಆಗ ಪಂಡಿತರು ಹೇಳಿದರು, ಮಹಾಭಾರದಲ್ಲಿ ದ್ರೌಪದಿಗೆ ಐದು ಜನ ಗಂಡಂದಿರು ಇದ್ದಾರೆ, ತಮ್ಮ ಧರ್ಮಪತ್ನಿಯವರಿಗೆ ಎಷ್ಟು ಜನ ಗಂಡಂದಿರು ಎನ್ನುವ ವಿಚಾರವನ್ನು ತಮ್ಮನ್ನು ಕೇಳಿ ಬರೆಯಬೇಕು, ಈ ಬಗ್ಗೆ ನಮಗೆ ಅನುಮಾನ ಬಂದಿದೆ ಎಂದು ಹೇಳಿದಾಗ ಟಿಪ್ಪು ಸುಲ್ತಾನನು ಅವರನ್ನೆಲ್ಲ ಹೊರಟು ಹೋಗಿ, ನೀವು ಬರೆದಿರುವುದನ್ನೆಲ್ಲ ಸುಟ್ಟು ಹಾಕಿ ಎಂದುಹೇಳಿದನಂತೆ ಅದೇ ರೀತಿ ನಮ್ಮ ಸರ್ಕಾರದವರು ಮಾಡುತ್ತಿರುವ ಕೆಲಸವಾಗಿದೆ. ಭೂಮಿ ಇಲ್ಲದವರಿಗೆಲ್ಲ ಭೂಮಿಯನ್ನು ಕೊಡುತ್ತೇನೆ, ಎಂದು ಎಲ್ಲಿ ಹೋದರೂ ಪ್ರಚಾರಮಾಡಿ ಕೊನೆಗೆ ಏನೂ ಇಲ್ಲದಂತೆ ಮಾಡಿದ್ದಾರೆ. ಕೊನೆ ಘಟ್ಟದಲ್ಲಾದರೂ ಏನಾದರೂ ಅನುಕೂಲವಾಗುವಂತೆ ಮಾಡುತ್ತಾರೆ ಎಂದು ಇದ್ದರೆ ಅದಕ್ಕೂ ಅವಕಾಶವಿಲ್ಲದಂತೆ ಒಂದು ಕಡೆ ಪ್ಲಾಂಟೇಷನ್ನುಗಳಿಗೆ ಹಾಕಿದ್ದ ಮಿತಿಯನ್ನು ತೆಗೆದುಹಾಕಿದರು, ಒಂದು ಕಡೆ ಮಿತಿಯನ್ನು ಹೆಚ್ಚು ಮಾಡುತ್ತಿದ್ದಾರೆ. ಇನ್ನು ಉಳಿದಿರತಕ್ಕದ್ದು ಏನೆಂದರೆ, ಶ್ರೀ ದೇವರಾಜ ಅರಸ್ ಅವರು ಮಾಡಬೇಕಾದ್ದು ಏನೆಂದರೆ ಟಿಪ್ಪು ಸುಲ್ತಾನ ಮಹಾಭಾರತವನ್ನು ಬರೆಯಲು ಹೇಳಿ ನಂತರ ಅದನ್ನು ಸುಟ್ಟು ಹಾಕಿಸಿದ ಹಾಗೆ ಇದನ್ನೂ ಸುಟ್ಟು ಹಾಕಬೇಕು, ಆ ರೀತಿಯಾಗಿದೆ. ಆದ್ದರಿಂದ ಈಗ ತಂದಿರುವಂಥ ತಿದ್ದುಪಡಿಗಳ ಬಗ್ಗೆ ಪುನರ್ಪರಿಶೀಲನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

6-30 p. m.

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಸ್ವಾಮೀ, ಮಾನ್ಯ ಸದಸ್ಯರು ಇದರಲ್ಲಿ ಕೆಲವು ಅನುಮಾನಗಳನು ವ್ಯಕ್ತಪಡಿಸಿದ್ದಾರೆ. ಸೆಲೆಕ್ಟ್ ಕಮಿಟಿಯವರ ಉದ್ದೇಶ ಇದರಲ್ಲಿ ಬೆಳೆ ಮುಖ್ಯವಲ್ಲ, ಮತ್ತು ಇದರಿಂದ ಬರತಕ್ಕ ಆದಾಯ ಮುಖ್ಯವಲ್ಲ, ನೀರಿನ ಸವಲತ್ತು ಎಷ್ಟರಮಟ್ಟಿಗೆ ಇದೆ ಅದನ್ನು ನೋಡಿಕೊಂಡು ವರ್ಗೀಕರಣ ಮಾಡಬೇಕು ಎನ್ನುವುದು ಇದರ ಮೂಲ ಉದ್ದೇಶ. ಇದನ್ನು ನಿರ್ದಿಷ್ಟವಾಗಿ ಪಾಲಿಸಿಕೊಂಡು ಬಂದಿದ್ದೇವೆ, ಇದರಲ್ಲಿ ಎರಡು ಬತ್ತದ ಬೆಳೆಗಳು ಎನ್ನುವುದಕ್ಕೆ ನನ್ನ ತಿದ್ದುಪಡಿಯಲ್ಲಿ ಬಿ ಕ್ಲಾಸು ಎಂದು ವರ್ಗೀಕರಣ ಮಾಡಿ ಇದರ ವಿವರಣೆಗಳನ್ನು ಕೂಡ ಹೇಳಲಾಗಿದೆ. ವರ್ಷದಲ್ಲಿ ಹತ್ತು ತಿಂಗಳೂ ನೀರು ಸಿಗುತ್ತಿದ್ದರೆ ಎರಡು ಬತ್ತದ ಬೆಳೆಗಳು ಆಗಬಹುದು, ಕೆಲವು ಸಂದರ್ಭಗಳಲ್ಲಿ ಎರಡು ಬೆಳೆಗಳೂ ಬರಬಹುದು ಕೆಲವು ಸಂದರ್ಭಗಳಲ್ಲಿ ಬಾರದೆ ಇರಬಹುದು, ಇದರಲ್ಲಿ ನಿರ್ದಿಷ್ಟವಾಗಿ ನೀರು ಸಿಗುವುದರ ಬಗ್ಗೆ ತಿಳಿಸಲಾಗಿದೆ.

(ಶ್ರೀ ಎನ್. ಹುಚ್ಚಮಾಸ್ತಿಗೌಡ)

ಇನ್ನೊಂದು ಇದರಲ್ಲಿ ಒಂದು ನೋಟು ಕೊಡಲಾಗಿದೆ ಅದು ಕ್ಲಾಸು ಡಿ ಎಂದಿದೆ. ಕೆಲವರು ಬಾವಿಗಳನ್ನು ತೋಡಿಕೊಂಡು ಇದರ ನೀರಿನ ಸಹಾಯದಿಂದ ಕಬ್ಬು ಇಲ್ಲವೇ ಬತ್ತ ಬೆಳೆಯುತ್ತಾರೆ ಇಲ್ಲವೇ ತರಕಾರಿಗಳನ್ನು ಬೆಳೆಯುತ್ತಾರೆ, ಇವರಿಗೆ ಸೂಕ್ತ ಪರಿಹಾರ ಕೊಡಬೇಕು ಎಂದು ಇದರ ಉದ್ದೇಶ. ಅದಕ್ಕಾಗಿ ಇಲ್ಲಿ ವಿವರಣೆ ಕೊಡಲಾಗಿದೆ.

ಇನ್ನು ಕ್ಲಾಸು ಡಿ ನಲ್ಲಿ ಯಾವ ರೀತಿ ಇದರ ಫಾರಮುಲಾ ಇರಬೇಕೆಂದು ಇದರಲ್ಲಿ ತಿಳಿಸಲಾಗಿದೆ, ಇದರಲ್ಲಿ ಲಿಫ್ಟ ಇರಿಗೇಷನ ಮೂಲಕ ಬೆಳೆ ಮಾಡುತ್ತಾರೆ. ಇಂತಹವರು ಬೆಳೆಯುವ ವರ್ಗವನ್ನು ಒಂದನೇ ವರ್ಗಕ್ಕೆ ಸೇರಿಸಬಾರದು ಎಂದು ಇದನ್ನು ಎರಡನೇ ವರ್ಗಕ್ಕೆ ಸೇರಿಸಲಾಗಿದೆ, ಈ ಪರಿಸ್ಥಿತಿಯಲ್ಲಿ ಇದು ಶಾಸ್ತ್ರಿಯವಾದ ಆಧಾರದ ಮೇಲೆ ಮಾಡಿಲ್ಲ ಎಂದು ಕೆಲವರು ಹೇಳಿದರು. ನಾನು ಸೂಚಿಸಿರುವ ಅಮೆಂಡು ಮೆಂಟು ಪಾರ್ಟು ಬಿ ನಲ್ಲಿ ವಿವರವಾಗಿ ಹೇಳಲಾಗಿದೆ. ಇದರಂತೆ ಹತ್ತು ಎಕರೆ ಇರುವುದು ೧೨ ಎಕರೆಗಳಾಗುತ್ತವೆ, ೧೮ ಇರುವುದು ೨೦ ಎಕರೆಗಳಾಗುತ್ತವೆ, ೨೮ ಎಕರೆಗಳು ಇರುವುದು ೩೦ ಎಕರೆಗಳಾಗುತ್ತವೆ. ಇದನ್ನು ನಿರ್ದಿಷ್ಟವಾಗಿ ಹಾಗೂ ಖಡಾಖಂಡಿತವಾಗಿ ಹೇಳಲಾಗುವುದಿಲ್ಲ. ಇದನ್ನು ಸ್ವಲ್ಪ ಹೆಚ್ಚು ಕಡಿಮೆ ಮಾಡಿ ನೋಡಿ ದಾಮಾಷಾ ಪ್ರಕಾರ ಮಾಡಬೇಕಾಗುತ್ತದೆ. ಇದರ ಉದ್ದೇಶ ಭೂಸುಧಾರಣೆಯನ್ನು ತಂದು ಅದು ಸಫಲವಾಗುವ ಹಾಗೆ ಮಾಡಬೇಕು. ಇದಕ್ಕಾಗಿ ಇಂತಹ ತಿದ್ದುಪಡಿಗಳನ್ನು ಇಲ್ಲಿ ತರಲಾಗಿದೆ. ಇದನ್ನು ಸಭೆಯವರು ಒಪ್ಪಬೇಕೆಂದು ಕೇಳಿಕೊಳ್ಳುತ್ತೇನೆ.

MADAM SPEAKER.—I will now put amendment to Clause 83 to the vote of the House.

The question is:

"That" for Schedule I the following Schedule shall be Substituted.

"SCHEDULE I"

PART A

See Section 2(A) (35A) Classification of Lands

A Class.

Lands having facilities for assured irrigation from such Government canals and Government Tanks as are notified by Government to be capable of supplying water for growing two crops of paddy in a year.

B Class.

(*i*) Lands having facilities for assured irrigation from such Government Canals and Government Tanks as are notified by Government to be capable of supplying water for growing only one crop of paddy in a year

(*ii*) Lands irrigated by such Lift irrigation projects constructed and maintained by Goverment as are notified by Goverament to be capable of supplying water for growing two crops of paddy in a year.

C Class.

(*i*) Lands irrigated from any Government sources of irrigation, including lift irrigation projects construced and maintained by Government other than those coming under A Class and B Class.

(*ii*) Lands on which paddy crop can be raised or areca crop is grown with the help of rain water.

(*iii*) Lands irrigated by lifting water from a river or Government canal or Government tank where the pumping installation or other device for lifting water is provided and maintained by the land owner.

Note :—(1) Lands having facilities for irrigation from a Government source where the system of watter supply is suitable for growing only light irrigated crop namely, crops other than paddy and sugarcane shall come under this class.

(2) Lands growing irrigated garden crop will come under Classes 'A', 'B' or 'C' as the case may be depending upon the source of irrigation and the system of water supply.

Class D.—

(1) Lands classified as dry but not having any irrigation facilities from a Government source.

Note :—Lands growing paddy or garden crops not coming under A Class, B Class or C Class shall come under this class.

(2) For Part B, the following Part shall be substituted namely :—

"Part B"

Formula for determining equivalent extent of different classes :

One acre of A class land having soil classification value above 8 annas=1.3 acres of A Class land having soil classification value below 8 annas=1.5 acres of B Class land having soil classification value above 8 annas=2.0 acres of B Class land having soil classification value below 8 annas=2.5 acres of C Class land having soil classification value above 8 annas=3.0 acres of C Class land having soil classification value below 8 annas=5.4 acres of D Class land."

The motion was adopted

Madam Speaker.—The question is :

"That at part as under D class the following words be added at the end,—

"Fruit Gardens and Coconut Gardens shall also be treated or Class D lands ;

(Madam Speaker)

Under class the following words shall be added at the end of the note :

"Fruit Gardens and Coconut Gardens shall not come under this class"

The motion was negatived

MADAM SPEAKER.—I will now put Clause 83, as amended, to the vote of the House.

The question is :

"That Clause 83, as amended, do stand part of the Bill."

The motion was adopted.

Clause 83 was added to the Bill.

CLAUSE 84

MADAM SPEAKER.—The Hon. Minister may move his amendment to Clause 84.

SRI N. HUTCHMASTY GOWDA.—I beg to move the following amendment :

"Clause 84 shall be renumbered as sub-clause (1) thereof and after the said renumbered sub-clause, the following sub-clauses shall be inserted, namely.—

"(2) All applications, statements and proceedings (including execution proceedings and proceedings in appeal) under the principal Act relating to resumption of land pending before any court immediately before the date of commencement of this Act shall not have any effect and shall abate :

Provided that applications or proceedings in respect of leases permitted by section 5 of the principal Act as amended by this Act shall not so abate but shall stand transferred to the Tahsildar or the concerned appellate authority, as the case may be, and shall be disposed of the Tahsildar or the appellate authority as they had been instituted or commenced before him or it.

(3) All applications or proceedings other than those referred to in sub-section (2), pending before any court or authority immediately before the date of commencement of this Act, which are required to be decided or disposed off by the officer or authority specified in the principal Act as amended by this Act, shall with effect from that date stand transferred to such officer or authority as the case may be and shall be disposed of as if they had been instituted or commenced before such officer or authority."

SUSPENSION OF SRI VATAL NAGARAJ

ಶ್ರೀ ವಾಟಾಳ ನಾಗರಾಜ.—ಈ ಮಸೂದೆ ಬಗ್ಗೆ ನಾವು ಇಲ್ಲಿ ಎಳ್ಳು ತರ್ಪಣ ಬಿಡಬೇಕಾಗಿದೆ.

ಅಧ್ಯಕ್ಷರು.—ಈಗ ಯಾವುದನ್ನೂ ಮಾತನಾಡಲು ಬರುವುದಿಲ್ಲ.

(ಶ್ರೀ ವಾಟಾಳ ನಾಗರಾಜ ಮತ್ತೆ ಎದ್ದು ನಿಂತರು.)

[Interuptions]

ಅಧ್ಯಕ್ಷರು.—ವರದಿಗಾರರು ಯಾವುದನ್ನೂ ಬರೆದು ಕೊಳ್ಳಬೇಡಿ. I request the Press not to take down anything. I request the Hon. Member Mr. Nagaraj, to please sit down.

[Sri Vatal Nagaraj continued to interrupt.]

MADAM SPEAKER —Will the hon. Member withdraw or not?

SRI VATAL NAGARAJ.—No.

MADAM SPEAKER.—If the hon. Member is not going to withdraw, I am going to name him

(Hon. Member did not withdraw)

MADAM SPEAKER.—I name Sri Vatal Nagaraj.

SRI D. DEVARAJ URS.—I move That the hon. Member Sri Vatal Nagaraj be suspended for the rest of the Session."

MADAM SPEAKER.—The question is:—

"That the hon Member Sri Vatal Nagaraj be suspended from the service of the Assembly for the rest of the Session."

The motion was adopted

MADAM SPEAKER.—The hon. Member will have to leave the House.

SRI VATAL NAGARAJ.—No.

As ordered by the Chair the hon. member was removed from the House.

MYSORE LAND-REFORMS (AMENDMENT) BILL, 1973, AS REPORTED BY THE J.S.C. CLAUSE 84 (Contd.)

MADAM SPEAKER.—I request the Press that nothing what the hon. Member is stating should be reported.

MADAM SPEAKER.—Amendment moved.

"That Clause 84 shall be renumbered as sub-clause (1) thereof and after the said renumbered sub-clause, the following sub-clauses shall be inserted, namely.—
(2) All applications, statements and proceedings (including execution proceedings and proceedings in appeal) under the principal Act relating to resumption of land pending before any court immediately before the date of commencement of this Act shall not have any effect and shall abate:

Provided that applications or proceedings in respect of leases permitted by section 5 of the principal Act as amended by this Act shall not so abate but shall stand transferred to the Tasildar or the concerned appellate authority, as the case may be, and shall be disposed of by the Thasildar or the appellate authority as if they had been instituted or commenced before him or it.

(3) All applications or proceedings other than those referred to in sub section (2), pending before any court or authority immediately before the date of commencement of this Act, which are required to be decided or disposed off by the officer or authority specified in the principal Act as amended by this Act, shall with effect from that date stand transferred to such officer or authority as the case may be and shall be disposed of as if they had been instituted or commenced before such officer or authority"

MADAM SPEAKER.—There is an amendment to the amendment by Sri T. R. Shamanna.

SRI T. R. SHAMANNA.—I beg to move.

"That in clause 84, add a new proviso at the end after paras (2) and (3) as follows:

Provided that all cases where a decree has been given by a competent court the appeal shall lie to a competent higher court and not to the Tahsildar."

MADAM SPEAKER.—Amendment moved.

"That in clause 84, add a new proviso at the end (after paras (2) and (3) as follows.

Provided that all cases where a decree has been given by a competent court the appeal shall lie to a competent higher court and not to the Tahsildar"

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ಉದ್ದೇಶ ಏನೆಂದರೆ, ಈಗ ಬೇರೆ ಬೇರೆ ಕೋರ್ಟ್‌ಗಳಲ್ಲಿ ತೀರ್ಮಾನವಾಗದೇ ಉಳಿದಿರುವ ವ್ಯಾಜ್ಯಗಳನ್ನು ತಹಶೀಲ್‌ದಾರರಿಗೆ ವರ್ಗ ಮಾಡಬೇಕು ಎಂಬುದು. ಮತ್ತು ಈಗ ನಡೆಯುತ್ತಿರುವ ವ್ಯವಹಾರಗಳನ್ನು ಅಲ್ಲಿಗೇ ನಿಲ್ಲಿಸಿ ಅದನ್ನೆಲ್ಲಾ ತಹಶೀಲ್‌ದಾರರಿಗೆ ವರ್ಗ ಮಾಡಬೇಕು ಎಂಬುದು ಇಲ್ಲಿ ಮುಖ್ಯವಾದ ಅಂಶ. ಇದಕ್ಕೆ ತಾವೆಲ್ಲ ಬೆಂಬಲ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ.—ಮಾನ್ಯ ಸಭಾಧ್ಯಕ್ಷಿಣಿಯವರೇ, ನಾನು ಈಗಾಗಲೇ ಮಾನ್ಯ ಸಭೆಯ ಗಮನಕ್ಕೆ ತಂದಿರುವಂತೆ, ಈಗ ಅನೇಕ ವ್ಯವಹಾರಗಳು ತೀರ್ಮಾನವಾಗಿ ಡಿಕ್ರಿಯನ್ನು ಕೊಡಲಾಗಿದೆ. ಈ ಕೋರ್ಟ್ ವ್ಯವಹಾರ ಏನಿದೆ, ಇದು ತಹಶೀಲ್‌ದಾರರ ಅಧಿಕಾರಕ್ಕಿಂತ ಹೆಚ್ಚಿನ ಮಟ್ಟದ್ದು. ಆದ್ದರಿಂದ ಮೇಲಿನ ಮಟ್ಟದ ವ್ಯವಹಾರವನ್ನು ಕೆಳಮಟ್ಟಕ್ಕೆ ತೆಗೆದುಕೊಂಡು ಬಂದು ತೀರ್ಮಾನ ಕೊಡಬೇಕು ಎಂದು ಹೇಳುವುದು ಸರಿಯಲ್ಲ. ಮತ್ತು ತಹಶೀಲ್‌ದಾರರಿಗೆ ಪುನಃ ಅಧಿಕಾರ ಕೊಡುವುದು ನ್ಯಾಯಸಮ್ಮತವಲ್ಲ. ನ್ಯಾಯಕ್ಕೆ ಮರ್ಯಾದೆ ಕೊಡುವುದಿದ್ದರೆ ಮತ್ತು ಕೋರ್ಟಿನ ಬಗ್ಗೆ ಜನರಿಗೆ ಇರುವ ನಂಬಿಕೆಯನ್ನು ಉಳಿಸ ಬೇಕೆಂದಿದ್ದರೆ, ಕೋರ್ಟಿನಲ್ಲಿಯೇ ತೀರ್ಮಾನವಾಗುವುದಕ್ಕೆ ಏರ್ಪಾಡು ಮಾಡಬೇಕು. ಈಗಿನ ನಿಯಮದಂತೆ ಪರಿಣಾಮಕಾರಿಯಾದ ತೀರ್ಮಾನವನ್ನು ತೆಗೆದುಕೊಳ್ಳುವುದು ತಡವಾಗುತ್ತದೆ ಎನ್ನುವುದಾದರೆ, ಕೋರ್ಟಿಗೆ ಆದೇಶ ಕೊಟ್ಟು ೩ ತಿಂಗಳೊಳಗೆ ತೀರ್ಮಾನ ಕೊಡಬೇಕು ಎಂದು ಹೇಳುವುದು ಉತ್ತಮ. ಇದನ್ನು ಬಿಟ್ಟು ತಹಶೀಲ್‌ದಾರರಿಗೇ ಮತ್ತೆ ಅಧಿಕಾರ ಕೊಡುವುದು ಯೋಗ್ಯವಲ್ಲ. ನಾನು ತಂದಿರುವ ತಿದ್ದುಪಡಿಯ ಪ್ರಕಾರ ಕೋರ್ಟಿನಲ್ಲಿ ಏನಾದರೂ ಡಿಕ್ರಿ ಕೊಟ್ಟಿದ್ದರೆ, ಮೇಲಿನ ಕೋರ್ಟಿಗೆ ಹೋಗುವುದಕ್ಕೆ ಅವಕಾಶ ಮಾಡಿಕೊಡಬೇಕೇ ವಿನಾ, ತಹಶೀಲ್‌ದಾರರಿಗೇ ಮಾತ್ರ ಅಧಿಕಾರ ಕೊಡುವುದು ಸರಿಯಲ್ಲ ಎಂದು ಹೇಳುತ್ತೇನೆ. ಆದ್ದರಿಂದ ನನ್ನ ತಿದ್ದುಪಡಿಯನ್ನು ಒಪ್ಪಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ತಂದಿರುವ ತಿದ್ದುಪಡಿ ನಾನು ತಂದಿರುವ ತಿದ್ದುಪಡಿಗೆ ತದ್ವಿರುದ್ಧವಾಗಿದೆ. ಆದ್ದರಿಂದ ಅದನ್ನು ಒಪ್ಪಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಹೇಳುತ್ತೇನೆ.

MADAM SPEAKER.—I will put the amendment to the amendment of Sri T. R. Shamanna to the vote of the House.

The question is:—

> "That in clause 84, add a new proviso at the end (after paras (2) and (3) as follows.
>
> Provided that all cases there a decree has been given by a competent court the appeal shall lie to a competent higher court and not to the Thasildar."

The motion was negatived

MADAM SPEAKER.—I will put the amendment of the Hon'ble Revenue Minister to the vote of the House.

The question is.

> "That Clause 84 shall be renumbered as sub-clause (1) thereof and after the said renumbered sub-clause, the following sub-clauses shall be inserted, namely.–
>
> (2) All applications, statements and proceedings (including execution proceedings and proceeding in appeal) under the principal Act relating to resumption of land pending before any court immediately before the date of commencement of this Act shall not have any effect and shall abate:

(Madam Speaker)

Provided that applications or proceedings in respect of leases permitted by section 5 of the principal Act as amended by this Act shall not so abate but shall stand transferred to the Tahsildar or the concerned appellate authority, as the case may be, and shall be disposed of by the Tansildar or the appellate auth rity as if they had been instituted or commenced before him or it.

(3) All applications or proceedings other than those referred to in sub-section (2), pending before any court or authority immediately before the date of commencement of this Act, which are required to be decided or disposed off by the officer or authority specified in the principal Act as amended by this Act, shall with effect from that date stand transferred to such officer or authority as the case may be and shall be disposed of as if they had been instituted or commenced before such officer or authority."

The motion was adopted.

MADAM SPEAKER.—The question is:—

"That Clause 84, do amended at stand part of the Bill."

The mionot was adopted

Clause 84, as amended, was added to the Bill.

CLAUSE 85.

MADAM SPEAKER.—The question is.—

"That Clause 85 do stand part of the Bill"

The motion was adopted.

Clause 85 was added to the Bill.

CLAUSE 1 Etc.

MADAM SPEAEER.—The question is.—

"That clause 1 the long Title and the Preamble and the enacting formula do stand part of the Bill."

The motion was adopted

Clause 1, the long title and the Preamble and the enacting formula were added to the Bill.

MOTION TO PASS

SRI N. HUTCHMASTHY GOWDA.—(Minister for Revenue) I beg to move,

"That the Mysore Land Reforms (Amendment) Bill, 1973 as amended be passed"

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಮೋಷನ್ ಮೂವ್ ಮಾಡಿದ್ದಾರೆ. ನಾನು ಒಂದು ವಿಷಯವನ್ನು ಹೇಳಬೇಕಾಗಿದೆ. ಈಗ ನಡೆದ ಘಟನೆ ಏನಿದೆ, ಅದು ಬಹಳ ದುರದೃಷ್ಟಕರವಾದುದು

ಅಧ್ಯಕ್ಷರು.—ಈಗ ಅದರ ಬಗ್ಗೆ ವಿಷಯ ಸಭೆಯ ಮುಂದೆ ಇಲ್ಲ. ಈಗ ಬಿಲ್ ಪಾಸಾಗಬೇಕಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಆ ರೀತಿಯಾಗುತ್ತದೆಂದು ನಾವು ಎಣಿಸಿರಲಿಲ್ಲ.

ಅಧ್ಯಕ್ಷರು ಮಾನ್ಯ ಸದಸ್ಯರು ಅವರ ಬುದ್ಧಿಗೆ ತೋರಿದ್ದನ್ನೆಲ್ಲಾ ಅಸೆಂಬ್ಲಿಯಲ್ಲಿ ಮಾಡುವುದಿದ್ದರೆ, ಈ ಅಸೆಂಬ್ಲಿಯೇ ಬೇಡ ಎಂದು ಕಾಣುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ಮುಖ್ಯವಾಗಿ ಈ ಭೂಸುಧಾರಣಾ ಕಾನೂನನ್ನು ಭೂಪರಿಮಿತಿಯ ಬಗ್ಗೆ ತೆಗೆದುಕೊಂಡು ಬಂದಿದ್ದು. ಈ ಕಾನೂನಿನ ಬಗ್ಗೆ ಗೇಣಿದಾರರು ಹಾಗೂ ಮತ್ತಿತರರು ಬಹಳಷ್ಟು ಆಶೆಆಕಾಂಕ್ಷೆಗಳನ್ನು ಇಟ್ಟುಕೊಂಡಿದ್ದರು.

ಅಧ್ಯಕ್ಷರು.—ಅವರು ಆ ರೀತಿ ಉದ್ವೇಗದಿಂದ ನಡೆದುಕೊಳ್ಳಬಾರದಾಗಿತ್ತು.

ಶ್ರೀ ಎಂ. ಎಸ್. ಕೃಷ್ಣನ್ : ಅವರು ಉದ್ವೇಗದಿಂದ ನಡೆದುಕೊಂಡಿರಬಹುದು. ನನಗೆ ಏನು ಕಾಣುತ್ತದೆ ಅಂದರೆ, ಹಿಂದೆ ಏನು ಹೇಳಿದ್ದು ಮತ್ತು ಈಗ ಏನು ಮಾಡುತ್ತಿದ್ದೀರಿ ಎಂದು ಆಶ್ಚರ್ಯವಾಗುತ್ತದೆ. ಸುಮಾರು ೩೦-೪೦ ಜನರು ಇದ್ದ ಜಾಯಿಂಟ್ ಸಿಲೆಕ್ಟ್ ಕಮಿಟಿ ಇದನ್ನು ವಿಮರ್ಶೆ ಮಾಡಿದ್ದಾರೆ. ಅದರಲ್ಲಿ ೧೩ ಜನರು ಆಳುವ ಪಕ್ಷದವರೂ ಇದ್ದರು. ಅವರೆಲ್ಲರೂ ಸೇರಿ ಚರ್ಚೆ ಮಾಡಿ ಒಂದು ಅಭಿಪ್ರಾಯವನ್ನು ತೆಗೆದುಕೊಂಡ ಮೇಲೆ ಅದಕ್ಕೆ ಯಾವ ರೀತಿಯ ಬೆಲೆಯೂ ಕೊಡದೆ ಹೊಸ ತಿದ್ದುಪಡಿಗಳನ್ನು ಮಾಡಿ ಪೂರ್ತಿಯಾಗಿ ಬದಲಾವಣೆ ಮಾಡಿದ್ದೀರಿ ಅವರು ಹೇಳಿದ್ದನ್ನು ಒಂದು ಸಹ ನಿರ್ವಹಿಸಿಲ್ಲ. ಭೂ ಪರಿಮಿತಿ ಒಂದು ಉಳಿಯಿತು. ೧೨ ಸಾವಿರ ಇನ್‌ಕಂ ಇದ್ದದು ಹೋಯಿತು ; ೧೨ ಕಿಲೋಮೀಟರ್ ದೂರ ಇದ್ದದು ಹೋಯಿತು. ಇವರು ಎಲ್ಲಿಯ ತನಕ ಹೋಗಿದ್ದಾರೆ ಅಂದರೆ ಮಠಾಧಿಪತಿಗಳಿಗೆ ಎಲ್ಲವನ್ನೂ ಕೊಟ್ಟು ರೈತರಿಗೆ ಏನೂ ಉಳಿಸಿಲ್ಲ. ಇವರು ೮ವರೆ ಲಕ್ಷ ಎಕರೆ ಬರುತ್ತದೆ ಎಂದು ಯಾವ ಆಧಾರದ ಮೇಲೆ ಹೇಳುತ್ತಿದ್ದಾರೆಂದು ಅರ್ಥವಾಗುತ್ತಿಲ್ಲ ನಿಮ್ಮ ಈಗಿನ ತಿದ್ದುಪಡಿಯಾದ ಭೂಮಸೂದೆಯನ್ನು ನೋಡಿದರೆ ರೈತರಿಗೆ ಕೊಡಲು ಸಲ್ಪವೂ ಜಮೀನು ಸಿಗುವುದಿಲ್ಲ: ಮತ್ತು ಎಳ್ಳಷ್ಟೂ ಪ್ರಯೋಜನ ರೈತರಿಗೆ ಆಗುವುದಿಲ್ಲ ಇದು ಇಲ್ಲಿಗೆ ಮುಗಿಯುವುದಿಲ್ಲ. ನಮ್ಮ ರಾಜ್ಯದ ರೈತರು ಇದರ ಬಗ್ಗೆ ಹೋರಾಟ ಮಾಡುತ್ತಾರೆ. ರೈತರು ಇದರ ಮೇಲೆ ಬಹಳ ಆಶೆಯನ್ನು ಇಟ್ಟುಕೊಂಡಿದ್ದರು. ಈ ರೀತಿ ಮಾಡಬಾರದಾಗಿತ್ತು. ಭೂಸ್ವಾಮಿಗಳಿಗೆ ಮತ್ತು ಮಠಾಧಿಪತಿಗಳಿಗೆ ಇನ್ನೂ ಹೆಚ್ಚಿನ ಕನ್‌ಸೆಶನನ್ನು ಕೊಟ್ಟಿದ್ದಾರೆ. ಅವಲ್ಲದರ ಬಗ್ಗೆ ರೈತರು ಹೋರಾಟ ಮಾಡಬೇಕಾಗಿದೆ. ಅನೇಕರ ಪ್ರಭಾವಗಳಿಗೆ ಒಳಗಾಗಿ ಈ ರೀತಿ ಸರ್ಕಾರ ಮಾಡಿದೆ. ರೈತರ ಹಿತಾಸಕ್ತಿಗಳನ್ನು ನಿಮಗೆ ಕಾಪಾಡಬೇಕಾಗಿದ್ದರೆ ಜಾಯಿಂಟ್ ಸಿಲೆಕ್ಟ್ ಕಮಿಟಿಗೆ ಮತ್ತೊಮ್ಮೆ ರೆಫರ್ ಮಾಡಬಹುದಾಗಿತ್ತು. ಅದನ್ನು ಮಾಡದೆ ಕಂತು ಕಂತುಗಳಲ್ಲಿ ಬೇರೆ ಬೇರೆ ತಿದ್ದುಪಡಿಗಳನ್ನು ತೆಗೆದುಕೊಂಡು ಬಂದಿದ್ದಾರೆ. ಆದ್ದರಿಂದ ಇದು ಬರೀ ನಿಸ್ಸಾರವಾಗಿವೆ ಮತ್ತು ಪ್ರಯೋಜನವಿಲ್ಲದ ಹಾಗೆ ಮಾಡಿದ್ದಾರೆ. ಆದ್ದರಿಂದ ನಾನು ನಮ್ಮ ಪಕ್ಷದ ಪರವಾಗಿ ಇದಕ್ಕೆ ಪ್ರತಿಭಟನೆಯನ್ನು ವ್ಯಕ್ತಪಡಿಸಲು ವಾಕ್ ಔಟ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇನೆ.

ಶ್ರೀ ಡಿ. ದೇವರಾಜ ಅರಸ್ : ತಾವು ವಾಕ್ ಔಟ್ ಮಾಡುವ ಮೊದಲು ನಾನು ಹೇಳುವ ಸ್ವಲ್ಪ ಮಾತನ್ನು ಸಹ ಕೇಳಿ ಇಷ್ಟು ದಿವಸ ಈ ಭೂಮಸೂದೆಯನ್ನು ಚರ್ಚೆ ಮಾಡಿ ಅದು ಕಾನೂನಾಗಿ ಬರುವುದರಲ್ಲಿ ಈಗ ಇದೆ. ಇದರ ಮೊದಲು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕೂಲಂಕಷವಾಗಿ ಚರ್ಚೆ ಮಾಡುವುದಕ್ಕೆ ಕಳಿಸಿ ಅವರು ಶ್ರದ್ಧೆ ವಹಿಸಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಅದಕ್ಕೋಸ್ಕರ ಅವರಿಗೆ ನಮ್ಮ ಸರ್ಕಾರದ ಪರವಾಗಿ ಅಭಿನಂದನೆಗಳನ್ನು ಸಲ್ಲಿಸುವುದು ಯೋಗ್ಯವೆಂದು ನನ್ನ ಅಭಿಪ್ರಾಯ. ಪ್ರತಿ ದಿವಸ ಸಭೆ ನಡೆಯುತ್ತಿದ್ದರೂ, ಅದರಲ್ಲಿ ಭಾಗವಹಿಸಿ, ಆ ನಂತರ ೭-೮ ಗಂಟೆಗೆ ಕಮಿಟಿಯವರು ಕೂತು ಕೆಲಸ ಮಾಡಿ, ಆತುರಾತುರವಾಗಿ ಒಂದು ವರದಿಯನ್ನು ನಮ್ಮ ಮುಂದಿಟ್ಟಿದ್ದಾರೆ. ಈಗ ತಾನೇ ಮಾತನಾಡಿದ ನಮ್ಮ ಸ್ನೇಹಿತರು ಸೆಲೆಕ್ಟ್ ಕಮಿಟಿಯು ಮಾಡಿದುದನ್ನು ಬದಲಾವಣೆ ಮಾಡಬಾರದಾಗಿತ್ತು ಎಂದು ಹೇಳಿದರು. ತಾತ್ವಿಕವಾಗಿ ಬದಲಾವಣೆ ಮಾಡಬಾರದು ಎಂದು ಏನೂ ಇಲ್ಲ. ಈ ಸಭೆ ಯಾವುದೇ ವರದಿಯನ್ನು ಇದ್ದಕಿದ್ದ ಹಾಗೆ ಒಪ್ಪಿಕೊಳ್ಳಬಹುದು ಅಥವಾ ಕೆಲವು ಬದಲಾವಣೆಗಳನ್ನು ಮಾಡಬಹುದು ಈ ಕಾನೂನಿಗೆ ಸರ್ಕಾರದವರು ಏನೊಂದು ತಿದ್ದುಪಡಿಯನ್ನು ತಂದಿದ್ದಾರೆ, ಇದರಿಂದ ಮಾನ್ಯ ಸದಸ್ಯರಿಗೆ ಏನು ಕಾಣುತ್ತಿದೆ ಅಂದರೆ, ಈ ಕಾನೂನಿನಿಂದ ಏನೂ ತಲೆಕೆಳಗೆ ಆಗಿಬಿಟ್ಟಿದೆ, ಇದು ನಿಸ್ಸಾರವಾಗಿದೆ ಮತ್ತು ಇದರಿಂದ ಏನೂ ಪ್ರಯೋಜನವಾಗುವುದಿಲ್ಲ : ಇಂಥ ಅಪ್ರಮಾಣಿಕವಾದ ಕಾನೂನನ್ನು ಆಳುವ ಪಕ್ಷ ತರಬಾರದಾಗಿತ್ತು, ಮತ್ತು ಆದಕ್ಕೋಸ್ಕರ ನಾವು ವಾಕ್ ಔಟ್ ಮಾಡುತ್ತೇವೆಂದು ಹೇಳಿದರು ನಮ್ಮ ಮಾನ್ಯ ಸದಸ್ಯರು ಹೇಳುವ ಹಾಗೆ ಇದರಿಂದ ಏನೂ ಪ್ರಯೋಜನವಿಲ್ಲವೆಂದು ಹೇಳುವುದಾದರೆ, ಜಾಯಿಂಟ್ ಸೆಲೆಕ್ಟ್ ಕಮಿಟಿಯು ಮಾಡಿದ ವರದಿಯಿಂದ ಸಹ ಏನೂ ಪ್ರಯೋಜನವಿಲ್ಲದ ಹಾಗೆ ಆಗುತ್ತದೆ. ಆದ್ದರಿಂದ ನಾನು ಹೇಳುವುದನ್ನು ಸ್ವಲ್ಪ ಸಮಾಧಾನದಿಂದ ಕೇಳಿ. ಇವತ್ತು ಅನೇಕರು ಕಾನೂನಿನಲ್ಲಿ ಪೂರ್ತಿಯಾಗಿ ಏನಿದೆ ಎಂದು ತಿಳಿದುಕೊಳ್ಳದೆ ಮಾತನಾಡುವ ಜನರು ಸಹ ಇದ್ದಾರೆ. ಅದನ್ನು ಓದಿ, ಅದರೊಳಗೆ ಏನಿದೆ ಎಂಬುದನ್ನು ತಿಳಿದುಕೊಂಡು ಮಾತನಾಡದೆ ಇದರಿಂದ ಲಕ್ಷಾಂತರ ಎಕರೆ ಬಿಟ್ಟಿದ್ದಾರೆ, ಬಹಳ ಅನಾಹುತವಾಗಿ ಬಿಟ್ಟಿದೆ ಎಂದು ವಾಕ್ ಔಟ್ ಮಾಡುವುದಕ್ಕೆ ಹೋಗುತ್ತಿದ್ದಾರೆ.

7-00 P.M.

ಶ್ರೀ ಎಂ. ಎಸ್. ಕೃಷ್ಣನ್ : ತಾವು ಇಲ್ಲಿಗೆ ಬರುವುದಕ್ಕೆ ಮುಂಚಿತವಾಗಿ ಇವತ್ತು ಬೆಳಗ್ಗೆ ೯ ಗಂಟೆಗೆ ಸರ್ಕಾರದವರು ಅಮೆಂಡಮೆಂಟ್‌ಗಳನ್ನು ಕೊಟ್ಟಿದ್ದಾರೆ ನಿನ್ನೆ ಭಾ.ದ ಅಮೆಂಡ್‌ಮೆಂಟ್ ಕೊಟ್ಟಿದ್ದಾರೆ ನಾವು ಅವುಗಳನ್ನೆಲ್ಲಾ ಇಲ್ಲಿ ಕೂತುಕೊಂಡು ಚರ್ಚೆ ಮಾಡಿದ್ದೇವೆ.

ಶ್ರೀ ಡಿ. ದೇವರಾಜ ಅರಸ್ : ನಾನು ಹೇಳುವಂಥ ಎರಡು ಮಾತುಗಳನ್ನು ಕೇಳುವುದಕ್ಕೆ ಇಷ್ಟೊಂದು ಅಸಮಾಧಾನವೆ? ಅವರು ಮಾತನಾಡುವಾಗ ನಾವು ಏನಾದರೂ ವಿರೋಧ ಮಾಡಿದ್ದೇವೆಯೋ ಪ್ರತಿಭಟನೆ ಮಾಡಿದ್ದೇವೆಯೇ? ನೀವು ಐದೈದು ನಿಮಿಷಗಳು ಮಾತನಾಡಿದಾಗ ನಮ್ಮ ಸಹನೆ ಎಷ್ಟರ ಮಟ್ಟಿಗೆ ಇತ್ತೆಂಬುದನ್ನು ಚೆನ್ನಾಗಿ ಯೋಚಿಸಿ ನೋಡಿ ಗೊತ್ತಾಗುತ್ತದೆ. ಈ ಸಭೆಯಲ್ಲಿ ಇಂತಹ ವಿಚಾರಗಳ ಬಗ್ಗೆ ಚರ್ಚೆ ನಡೆಯುವಾಗ ನೀವು ಏನೇನು ಹೇಳಿದ್ದೀರೋ ಅವೆಲ್ಲವನ್ನೂ ನಾವು ಸಂತೋಷದಿಂದ ಕೇಳಿದ್ದೇವೆ. ನಾವು ಇನ್ನೂ ಏನೂ ಹೇಳುವುದಕ್ಕೆ ಪ್ರಯತ್ನಮಾಡಿಲ್ಲ. ಆಗಲೇ ನೀವು ಕುಣಿದಾಡುತ್ತಿದ್ದೀರಿ. ಇದಕ್ಕೆ ನಾನೇನು ಹೇಳಲಿ? ಇದೇನೋ ಬೂಟಾಟಿಕೆ ಮಾಡುತ್ತಿದ್ದೇವೆಂದು ಕೆಲವರು ಹೇಳಿದರು ಅವರು ಮಾಡುತ್ತಿರುವ ಬೂಟಾಟಿಕೆ ಏನೆಂಬುದನ್ನು ನಾನು ಆಮೇಲೆ ತಿಳಿಸುತ್ತೇನೆ. ಈಗ ಅವರು ತಂದಿರುವ ತಿದ್ದುಪಡಿ ಪ್ರಕಾರ ಅವರು ಬಹಳ ಕ್ರಾಂತಿಕಾರಕವಾದಂಥ ಜನರು, ಇದನ್ನು ಕ್ರಾಂತಿಕಾರಕವನ್ನಾಗಿ ಮಾಡುತ್ತೇವೆಂದು ಹೇಳಿದರು. ಅದೂ ಅಲ್ಲದೆ ಈ ರೀತಿ ಬದಲಾವಣೆಗಳನ್ನು ಮಾಡಿರುವುದರಿಂದ ಇದರಲ್ಲಿನ ಕ್ರಾಂತಿ ಹೋಗುತ್ತದೆ ಎಂದು ಹೇಳಿದರು. ನಾಳೆಯ ದಿವಸ ಯಾವ್ಯಾವ ಸ್ನೇಹಿತರು ಏನೇನು ಹೇಳಿದ್ದಾರೋ ಅವರು ಕ್ರಾಂತಿಕಾರಿಯಾಗಿ ಮತ್ತು ರಿ-ಆಕ್ಷನರಿಯಾಗಿ ಉಳಿಯುತ್ತಾರೆ ಎಂಬುದನ್ನು ತೋರಿಸಿಕೊಡುತ್ತೇನೆ.

ಶ್ರೀ ವಿ ಎನ್. ಪಾಟೀಲ್ : ನಿಮ್ಮ ಮನಸ್ಸು ಅದಕ್ಕೆ ಒಪ್ಪುತ್ತಾ ಇಲ್ಲ. ಬಾಯಲ್ಲಿ ಆರೀತಿಯಾಗಿ ಆಡಿಕೊಳ್ಳೋಣವೆಂದು ಆಡುತ್ತಿದ್ದೀರಿ.

ಶ್ರೀ ಡಿ. ದೇವರಾಜ ಅರಸ್ : ತಾವು ಸುಮ್ಮನೆ ಕೂತುಕೊಳ್ಳಿ. ನೀವು ಏನೇ ಮಾಡಿದರೂ ಖಂಡಿತವಾಗಿ ಜನರನ್ನು ಈ ರೀತಿ ಮರುಳು ಮಾಡುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಮೋಟಿವ್ಸ್ ಏನು, ಕೆಲವು ವಿಷಯಗಳನ್ನು ಎಷ್ಟರಮಟ್ಟಿಗೆ ನೀವು ತಿಳಿದುಕೊಂಡಿದ್ದೀರಿ, ಎಷ್ಟು ತಿಳುವಳಿಕೆ ಇದರಲ್ಲಿ ಇದೆಯೆಂಬುದನ್ನು ಜನರು ಚೆನ್ನಾಗಿ ತಿಳಿದುಕೊಂಡಿದ್ದಾರೆ ಲೇಬರ್ ಫೀಲ್ಡ್‌ನಲ್ಲಿ ನಿಮಗೆ ಹೆಚ್ಚಿಗೆ ಗೊತ್ತಿದೆ ಎಂದು ತಿಳಿದಿರಬಹುದು.

ಶ್ರೀ ವಿ. ಎನ್. ಪಾಟೀಲ್ :—ಅದು ತಮಗೂ ಅನ್ವಯಿಸುತ್ತದೆ.

ಶ್ರೀ ಡಿ. ದೇವರಾಜ ಅರಸ್ :—ಆ ವಿಚಾರದಲ್ಲಿ ನಾವು ನಿಮ್ಮನ್ನು ವಿಚಾರಿಸುತ್ತೇವೆ. ಅದಕ್ಕೆ ಚಿಂತೆಬೇಡ.

ಶ್ರೀ ವಿ. ಎನ್. ಪಾಟೀಲ್ :—ವೈಯಕ್ತಿಕವಾಗಿ ಮಾತನಾಡಬೇಡಿ.

ಶ್ರೀ ಡಿ. ದೇವರಾಜ ಅರಸ್ :—ನಮ್ಮ ಪಕ್ಷದವರಿಗೆ ಈ ವಿಷಯ ಗೊತ್ತಿದೆ. ನಾವು ವಾಸ್ತವಾಂಶವನ್ನು ಅರಿತು ಕಾನೂನಿನಲ್ಲಿ ಕೆಲವು ಬದಲಾವಣೆಗಳನ್ನು ಮಾಡುತ್ತಿದ್ದೇವೆ. ನೀವು ಈಗ ಒಂದೊಂದು ಕಲಂನ್ನು ನೋಡಿ ಇದರಲ್ಲಿ ಏನಿದೆಯೆಂಬುದನ್ನು ಹೆಚ್ಚಿಗೆ ಹೇಳಬೇಕಾದ ಅಗತ್ಯವಿಲ್ಲ. ಇದರಲ್ಲಿ ಮುಖ್ಯವಾಗಿ ೩-೪ ವಿಷಯಗಳ ಬಗ್ಗೆ ಮಾತನಾಡಿದರೆ ಸಾಕಾಗಿದೆ. ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಪ್ಲಾಂಟೇಷನ್ ವಿಷಯ ಬಂತು. ನಮ್ಮ ಪಕ್ಷದಲ್ಲಿ ಇದರ ಬಗ್ಗೆ ಒಂದು ತೀರ್ಮಾನವಾಗಿ ಒಂದು ತಿದ್ದುಪಡಿಯನ್ನು ತಂದಿದ್ದೇವೆ. ಮಾನ್ಯ ಶ್ರೀ ಭೈರೇಗೌಡರು ತಂದಿರತಕ್ಕ ತಿದ್ದುಪಡಿಯನ್ನು ಒಪ್ಪಬಹುದಾಗಿತ್ತು. ಆದರೆ ಅದು ಈ ಸಭೆಯಲ್ಲಿ ಬಿದ್ದುಹೋದುದರಿಂದ ಅದನ್ನು ಬಿಡಬೇಕಾಗಿ ಬಂತು. ಅವರು ಒಳ್ಳೆಯ ಕ್ರಾಂತಿಕಾರಕವಾದ ವ್ಯಕ್ತಿ ಎಂಬುದು ಗೊತ್ತಿದೆ. ಆದರೆ ಈ ಸಭೆ ಇವತ್ತು ನಮ್ಮ ಪಕ್ಷದವರು ತಂದಿರತಕ್ಕ ಅಮೆಂಡ್‌ಮೆಂಟಿಗೆ ಒಪ್ಪಿಗೆ ನೀಡಿದೆ. ಅವರ ಅಮೆಂಡ್‌ಮೆಂಟಿಗೆ ಒಪ್ಪಿಗೆ ಕೊಟ್ಟಿದ್ದರೆ ಈಗ ಬಿಟ್ಟಿರುವುದಕ್ಕಿಂತ ೧೦೦ ಪಟ್ಟು ಜಾಸ್ತಿ ಬಿಡುವುದಕ್ಕೆ ಅವಕಾಶವಿದೆ ಆಗ ಕ್ರಾಂತಿಕಾರಿ ತಿದ್ದುಪಡಿ ನಿಮ್ಮದೋ ಅಥವಾ ನಮ್ಮದೋ ಎಂದು ಸಭೆ ತೀರ್ಮಾನ ಮಾಡಲಿ ನಿಮ್ಮ ತಿದ್ದುಪಡಿ ಪ್ರಕಾರ ಪ್ರಿಸ್ಕ್ರೈಬ್ಡ್ ಅಥಾರಿಟಿ ಎಷ್ಟು ಬಿಡಬೇಕು ಎಂಬುದನ್ನು ನಿಗದಿ ಮಾಡಬೇಕಾಗುತ್ತದೆ. ಅದು ೫ ಎಕರೆ ಬಿಡಬಹುದು ಅಥವಾ ೫೫೦ ಎಕರೆ ಬಿಡಬಹುದು. ಕೇರಳಾ ಆಕ್ಟ್‌ನಲ್ಲಿ ಪ್ರಿಸ್ಕ್ರೈಬ್ಸ್ ಅಥಾರಿಟಿ ಏನು ಹೇಳುತ್ತಾರೋ ಅಷ್ಟು ಬಿಡುವುದು ಎಂದು ಮಾಡಿದ್ದಾರೆ. ಒಂದು ಕಾಲದಲ್ಲಿ ಕೇರಳಾದಲ್ಲಿ ಆಡಳಿತವನ್ನು ಕ್ರಾಂತಿಕಾರಿ ಪಕ್ಷದವರು ನಡೆಸುತ್ತಿದ್ದರು.

ಶ್ರೀ ಬಿ. ವಿ. ಕಕ್ಕಿಲಾಯ : —೧೯೬೯ರಲ್ಲಿ ಕೇಂದ್ರ ಸರ್ಕಾರದ ಒತ್ತಾಯದ ಮೇಲೆ ಅಲ್ಲಿ ಆ ರೀತಿ ಪಾಸ್ ಆಯಿತು.

ಶ್ರೀ ಡಿ. ದೇವರಾಜ ಅರಸ್: ನಮ್ಮ ದೇಶದಲ್ಲಿ ಕೇರಳ ಈ ವಿಚಾರ ಎಲ್ಲಕ್ಕಿಂತಲೂ ಮುಂದುವರಿದಿರುವುದು ಹಾಗೂ ಪ್ರಗತಿದಾಯಕವಾದುದು ಆಗಿದೆ. ಎಂದು ತಿಳಿದುಕೊಂಡಿದ್ದಾರೆ. ಇವತ್ತು ಕೆಲವು ವಿಚಾರಗಳಲ್ಲಿ ಈ ಸಭೆ ಏನು ಒಪ್ಪಿಗೆ ಕೊಡುತ್ತಿದೆ ಅದರಿಂದ ಅದು ಕೇರಳಕ್ಕಿಂತಲೂ ಹೆಚ್ಚಿಗೆ ಪ್ರಗತಿಪರವಾಗಿದೆಯೆಂದು ನಾನು ಸಾರಿಸಾರಿ ಹೇಳುತ್ತೇನೆ.

ಇನ್ನು ಪ್ಲಾಂಟೇಷನ್ ವಿಚಾರ ತೆಗೆದುಕೊಳ್ಳಿ.—ಅದರಲ್ಲಿ ೫೦೦, ೧೦೦೦ ಎಕರೆಗಳಿದ್ದರೂ ಕೇವಲ ೫೪ ಎಕರೆ ಮೇಲೆ ಬಿಡುವುದಿಲ್ಲ. ಇವರು ಹೇಳಿದ ಹಾಗೆ ಮಾಡಿದ್ದರೆ ಕ್ರಾಂತಿಕಾರಿಯೋ ಅಥವಾ ನಾವು ಮಾಡಿದ್ದು ಕ್ರಾಂತಿಕಾರಿಯಲ್ಲವೇ ಎನ್ನುವುದು ಜನರಿಗೆ ಮುಂದೆ ಅರ್ಥವಾಗುತ್ತದೆ.

ಶ್ರೀ ಬಿ. ವಿ. ಕಕ್ಕಿಲಾಯ :— ಇದರಲ್ಲಿ ಮೂಲಭೂತವಾದ ಬದಲಾವಣೆ ಏನೂ ಮಾಡಿಲ್ಲ.

ಶ್ರೀ ಡಿ. ದೇವರಾಜ ಅರಸ್ :—ಪ್ರಿಸ್ಕ್ರೈಬ್ಡ್ ಅಥಾರಿಟಿ ಎಂದು ಹೇಳಿದರೆ ಅದರ ಅರ್ಥವೇನು?

ಶ್ರೀ ಸಿ. ಭೈರೇಗೌಡ ನೀವು ಅದನ್ನು ಸರಿಯಾಗಿ ಹೇಳದೇ ಇರುವುದಕ್ಕೆ ಕಾರಣ ಬೇರೆ ಇದೆ. ಪ್ಲಾಂಟೇಷನ್ ಮಧ್ಯಭಾಗದಲ್ಲಿ ೬೦ ಎಕರೆ ಇರಬಹುದು. ಅದರಲ್ಲಿ ೫೪ ಎಕರೆ ಬಿಟ್ಟರೆ ಇನ್ನುಳಿದ ೬ ಎಕರೆಯನ್ನು ಯಾರಿಗೆ ಕೊಡುತ್ತೀರಿ.

ಶ್ರೀ ಡಿ. ದೇವರಾಜ ಅರಸ್ :—ಈಗ ನೀವು ದಾರಿಗೆ ಬರುತ್ತಿದ್ದೀರಿ. ಅದರಲ್ಲಿ ಕೆಲವು ಪ್ರಾಕ್ಟಿಕಲ್ ಡಿಫಿಕಲ್ಟೀಸ್ ನೀವು ಬಯಲು ಸೀಮೆಯಲ್ಲಿರುವವರಾಗಿರುವುದರಿಂದ ನಿಮಗೆ ಅದು ಅರ್ಥವಾಗಲಿಲ್ಲ. ಅದ್ದರಿಂದ ಲಿಮಿಟ್ಟನ್ನು ೧೦೦ ಎಕರೆ ಇಟ್ಟುಕೊಳ್ಳಲಿ, ಇಂಟರ್‌ಸ್ಪರ್ಸ್ಡ್ ಲ್ಯಾಂಡ್ ೫೦೦ ಎಕರೆ ಒಂದು ಸೀಲಿಂಗ ಲಿಮಿಟ್ಟಿ ಎಂಬುದಾಗಿ ಅವರು ಮಾಡಿದ್ದಾರೆ

ಶ್ರೀ ಸಿ. ಭೈರೇಗೌಡ :—ಪ್ಲಾಂಟೇಷನ್ನಿಗೆ ಮಿತಿ ಇಲ್ಲವೆಂದು ಅವರು ಹೇಳುತ್ತಾರೆ. ಅದರ ಬಗ್ಗೆ ಏನು ಹೇಳುತ್ತೀರಿ?

ಶ್ರೀ ಡಿ. ದೇವರಾಜ ಅರಸ್ :—ಪ್ಲಾಂಟೇಷನ್ನಿಗೆ ಮಿತಿ ಇಟ್ಟಿದ್ದಾರೆ.

ಶ್ರೀ ಬಿ. ವಿ ಕಕ್ಕಿಲಾಯ :— ಪ್ಲಾಂಟೇಷನ್ನಿಗೆ ಮಾಲೀಕರು ಇದರ ಬಗ್ಗೆ ಮಿತಿ ಇಟ್ಟುಕೊಳ್ಳಬಾರದೆಂದು ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿಯೇ ಹೇಳಿದೆ

ಶ್ರೀ ಡಿ. ದೇವರಾಜ ಅರಸ್ .—ನಮ್ಮ ದೇಶದಲ್ಲಿ ಸಾವಿರಾರು ಜನರು ಸಣ್ಣಪುಟ್ಟ ಪ್ಲಾಂಟರ್ಸ್ ಇದ್ದಾರೆ. ಕೇವಲ ೫-೧೦-೨೦ ಎಕರೆ ಇಟ್ಟುಕೊಂಡಿರುವವರೇ ಜಾಸ್ತಿ. ನಮ್ಮಲ್ಲಿ ದೊಡ್ಡದೊಡ್ಡ ಪ್ಲಾಂಟರ್ಸ್ ಬಹಳ ಕಡಿಮೆ ಕೇರಳದಲ್ಲಿ ದೊಡ್ಡ ದೊಡ್ಡ ಪ್ಲಾಂಟೇಷನದಾರರಿದ್ದಾರೆ. ಕೆಲವು ಪ್ಲಾಂಟರ್ಸಿಗೆ ಇಂಟರ್‌ಸ್ಪರ್ಸ್ ಲ್ಯಾಂಡ್ ಇರುತ್ತದೆ, ಕೆಲವರಿಗೆ ಇರುವುದಿಲ್ಲ ಹಾಗೆ ಯಾರಿಗೆ ಇಂಟರ್‌ಸ್ಪರ್ಸ್ ಲ್ಯಾಂಡ್ ಇರುವುದಿಲ್ಲವೋ ಅಂಥವರಿಗೆ ಅನ್ಯಾಯವಾಗಬಾರದೆಂದು ಅಷ್ಟು ಲ್ಯಾಂಡನ್ನು ಅವರಿಗೆ ಬಿಟ್ಟುಕೊಟ್ಟಿದೆ ಆದರೆ ಮೈಸೂರಿನಲ್ಲಿ ಇರತಕ್ಕ ಪ್ಲಾಂಟರುಗಳೆಲ್ಲಾ ಸಣ್ಣ ಪುಟ್ಟ ಪ್ಲಾಂಟರುಗಳು ಆ ಪ್ಲಾಂಟೇಷನ್‌ಗಳಲ್ಲಿ ಮಧ್ಯದಲ್ಲಿ ಏನಾದರೂ ಐವತ್ತು ಎಕರೆ ಭೂಮಿ ಇದ್ದರೆ ಅದನ್ನು ಅವರಿಗೆ ಬಿಡೋಣ ಎಂದು ಹೇಳಿದೆ. ಆ ಭೂಮಿಯನ್ನು ಅವರನ್ನು ಬಿಟ್ಟು ಬೇರೆ ಯಾರಿಗೂ ಕೊಡುವುದಕ್ಕೆ ಆಸ್ಪದವಿರುವುದಿಲ್ಲ ಆದರೆ ನಾನಾಗಲೇ ಹೇಳಿದಂತೆ ನಿಮ್ಮ ಪಕ್ಷದ ಸದಸ್ಯರು ಬೈರೇಗೌಡರು ಕೊಟ್ಟಿದ್ದ ತಿದ್ದುಪಡಿಯನ್ನೂ ಹೇಳಿದ್ದೇನೆ. ಈ ಎರಡರಲ್ಲಿ ಯಾವುದು ಪ್ರಗತಿದಾಯಕವಾದದ್ದು ಎಂಬುದನ್ನು ಈಗ ಸಭೆಯೇ ನಿರ್ಧರಿಸಲಿ,

ಇನ್ನೊಂದು ವಿಷಯ ಬಹಳ ದೊಡ್ಡದಾಗಿ ಹೇಳಿಕೊಳ್ಳುವುದಕ್ಕೆ ಹೊರಟಿದ್ದಾರೆ. ಈ ಕೂಗಿಗಂತು ಮಿತಿಯೇ ಇಲ್ಲ ಇದು ಯಾವುದೆಂದರೆ ರಿಲಿಜಿಯಸ್ ಛಾರಿಟಬಲ್ ಇನ್‌ಸ್ಟಿಟ್ಯೂಷನ್ನುಗಳಿಗೆ ಯಾವುದಕ್ಕೂ ವ್ಯವಸಾಯದ ಭೂಮಿಯನ್ನು ಕೊಡಬಾರದೆಂದು ಮಾಡಿದ್ದೆವು ಆದರೆ ಈ ಮಸೂದೆ ಜಾಯಿಂಟ್ ಸೆಲೆಕ್ಟ್ ಕಮಿಟಿಯ ಮುಂದೆ ಹೋದಾಗ ಅವರು ಕೂಡ ಅದೇ ಅಭಿಪ್ರಾಯವನ್ನು ಒಪ್ಪಿದರು. ಆದರೆ ಈಗ ಈ ಒಂದು ತಿದ್ದುಪಡಿಯನ್ನು ತಂದುದರಿಂದ ನಾವು ಆ ಸಂಸ್ಥೆಗಳನ್ನೆಲ್ಲಾ ಬದುಕಿಸಿದ್ದೇವೆ ಎಂದು ವಿರೋಧಪಕ್ಷದವರು ಹೇಳುತ್ತಿದ್ದಾರೆ. ಅಷ್ಟೇ ಅಲ್ಲ ಅವರನ್ನು ನಾವು ದೊಡ್ಡ ಜಮೀನ್ದಾರರನ್ನಾಗಿ ಮಾಡಿದ್ದೇವೆಂದು ಹೇಳುವುದಕ್ಕೆ ಹೊರಟಿದ್ದಾರೆ. ವಿರೋಧಪಕ್ಷದವರು ದೇಶದಲ್ಲಿ ಒಂದು ದೊಡ್ಡ ಕ್ರಾಂತಿ ಚಕ್ರವನ್ನು ತಿರುಗಿಸುತ್ತಿದ್ದರು ಅದನ್ನು ಈಗ ಆಡಳಿತ ಪಕ್ಷದವರು ತಡೆದು ನಿಲ್ಲಿಸಿಬಿಟ್ಟಿದ್ದಾರೆ ಎಂದು ಹೇಳುವುದರಲ್ಲಿ ಏನು ಹುರುಳಿಲ್ಲ. ಆ ಪಕ್ಷದವರು ದೇಶದ ನಾನಾ ಕಡೆಗಳಲ್ಲಿ ಇಂಥ ಕ್ರಾಂತಿ ಚಕ್ರಗಳನ್ನು ತಿರುಗಿಸಿದ್ದಾರೆ. ಆದರೆ ಫಲಿತಾಂಶ ಮಾತ್ರ ಶೂನ್ಯ ಅವರ ಆ ಕೇರಳ ಆಕ್ಟಿನಲ್ಲಿ ಈ ವಿಚಾರದಲ್ಲಿ ಏನು ಮಾಡಿದ್ದಾರೆ ? ಅಲ್ಲಿ ಈ ಪ್ರಶ್ನೆಯನ್ನು ಲ್ಯಾಂಡ್ ಬೋರ್ಡಿಗೆ ಬಿಟ್ಟಿದ್ದಾರೆ. ಅವರು ಎಷ್ಟು ಬೇಕಾದರೂ ಕೊಡಬಹುದು. ಆದರೆ ನಾವಿಲ್ಲಿ ಇದರ ಬಗ್ಗೆ ಏನೋ ಒಂದು ದೊಡ್ಡ ಅನಾಹುತ ಮಾಡಿದ್ದೇವೆ ಅನ್ನುವಂತೆ ಪತ್ರಿಕೆಗಳಲ್ಲೆಲ್ಲಾ ಸುದ್ದಿ ಹೊರಟಿದೆ. ಈ ದಿವಸ ಎರಡಕ್ಷರ ಓದುವುದಕ್ಕೆ ಮತ್ತು ಬರೆಯುವುದಕ್ಕೆ ಬಂದರೆ ಸಾಕು ಅವರು ಏನು ಬೇಕಾದರೂ ಪತ್ರಿಕೆಗಳಲ್ಲಿ ಬರೆಯಬಹುದು. ಆದರೆ ನಮ್ಮ ರಾಜ್ಯದಲ್ಲಿ ಈ ಒಂದು ವಿಚಾರದಲ್ಲಿ ಹಿಂದಿನಿಂದಲೂ ಏನೊಂದು ನೀತಿಯನ್ನು ಸರ್ಕಾರ ಅನುಸರಿಸಿಕೊಂಡು ಬಂದಿದೆ ? ಶ್ರೀಮಾನ್ ನಿಜಲಿಂಗಪ್ಪನವರ ಕಾಲದಲ್ಲಿ ಶ್ರೀ ಕೆ. ಹನುಮಂತಯ್ಯನವರ ಕಾಲದಲ್ಲಿ ಮತ್ತು ಶ್ರೀ ಕೆ. ಸಿ ರೆಡ್ಡಿಯವರ ಕಾಲದಲ್ಲಿ ಈ ರಾಜ್ಯದಲ್ಲಿರತಕ್ಕ ವಿದ್ಯಾ ಸಂಸ್ಥೆಗಳಿಗೆ ಅಷ್ಟಷ್ಟು ಜಮೀನುಗಳನ್ನು ಕೊಡುತ್ತಾ ಬಂದಿದ್ದಾರೆ. ರಾಜ್ಯಕ್ಕೆ ಅತ್ಯವಶ್ಯಕವಾಗಿ ಬೇಕಾದ ವಿದ್ಯಾಭ್ಯಾಸದ ಬೆಳವಣಿಗೆಯನ್ನು ಮುಂದುವರಿಸಿಕೊಂಡು ಹೋಗಲು ಸರ್ಕಾರ ಒಂದರಿಂದಲೇ ಸಾಧ್ಯವಿಲ್ಲ. ಕೇರಳದಲ್ಲಿ ವಿದ್ಯಾಭ್ಯಾಸವನ್ನು ನ್ಯಾಷನಲೈಜ್ ಮಾಡುವುದಕ್ಕೆ ಹೊರಟರು ಫಲಿತಾಂಶದಲ್ಲಿ ಏನಾಯಿತು ? ನಾವು ಜನರನ್ನು ಬಿಟ್ಟು ಸುಧಾರಣೆಗಳನ್ನು ತರುತ್ತೇವೆಂದರೆ ಅದು ಸಾಧ್ಯವಿಲ್ಲದ ಮಾತು. ಜನರು ಏನು ಹೇಳುತ್ತಾರೆಂಬುದನ್ನೂ ನಾವು ಕೇಳಬೇಕು. ಈಗ ಶ್ರೀ ಕೃಷ್ಣನ್‌ನವರು ಗೋವಿಂದ ಎಂದರೆ, ಬೇರೆ ಕೆಲವರು ಟಿಸ್-ಟಟ್ ಎನ್ನುತ್ತಾರೆ. ಇಂಥಾದ್ದನ್ನೆಲ್ಲಾ ತಪ್ಪಿಸುವುದಕ್ಕೆ ಸಾಧ್ಯವೇ ?

ಶ್ರೀ ಎಂ. ಎಸ್. ಕೃಷ್ಣನ್ .—ಕೇರಳದಲ್ಲಿ ಸರ್ಕಾರವನ್ನು ಯಾರು ಉರುಳಿಸಿದವರು ಎಂಬುದನ್ನು ತಿಳಿದುಕೊಂಡರೆ,

ಶ್ರೀ ಡಿ. ದೇವರಾಜ ಅರಸ್ .—ಅದನ್ನು ಜನರು ಉರುಳಿಸಿದರು ಇರುವುದನ್ನು ಇಲ್ಲದ್ದನ್ನಾಗಿ ಮಾಡುವುದಕ್ಕೆ ಹೋಗಬೇಡಿ, ಮಾತಿನ ಹೊಡೆತವನ್ನು ತಡೆದುಕೊಳ್ಳುವುದಕ್ಕೆ ಶಕ್ತಿ ಇಲ್ಲದೆ ಅವರು ಏನೇನೋ ಹೇಳುವುದಕ್ಕೆ ಹೊರಟಿದ್ದಾರೆ.

ಶ್ರೀ ಎಂ ಎಸ್. ಕೃಷ್ಣನ್ .—ನಾನು ಕೂಡ ನಿಮ್ಮ ಹಾಗೆ ಮಾತನಾಡತಕ್ಕವರನ್ನು ಬಹಳ ಜನರನ್ನು ನೋಡಿದ್ದೇನೆ.

ಶ್ರೀ ಡಿ. ದೇವರಾಜ ಅರಸ್ .—೪ ಜನ ಪ್ರೋಫೆಸರ್‌ಗಳು ೪ ಜನ ಬಿಷಪ್‌ಗಳು ಓಡಾಡಿದರೆ ಸರ್ಕಾರ ಉರುಳುತ್ತದೆಯೇ ?

ಶ್ರೀ ಎಂ. ಎಸ್. ಕೃಷ್ಣನ್ . ಮಾನ್ಯ ಮುಖ್ಯ ಮಂತ್ರಿಗಳು ತುಂಬಾ ಎಗ್ಸಾಜರೇಟ್ ಮಾಡುತ್ತಿದ್ದಾರೆ ವಿಷಯಗಳನ್ನು

ಶ್ರೀ ಡಿ. ದೇವರಾಜ ಅರಸ್ .—ನೀವು ಹೇಳಿದ್ದನ್ನೆಲ್ಲಾ ನಾನು ಪ್ರತಿಭಟನೆ ಮಾಡದಂತೆ ಕೇಳಿದೆ. ಆದರೆ ನಾನು ಹೇಳುತ್ತಿರುವುದನ್ನು ನನ್ನ ವಾದದ ಶಕ್ತಿಯನ್ನು ತಡೆದುಕೊಳ್ಳುವುದಕ್ಕೆ ಚೈತನ್ಯವಿಲ್ಲದೆ ಏಕೆ ಸುಮ್ಮನೆ ಎಗರಾಡುತ್ತಿದ್ದೀರಿ ? ನೀವೆಲ್ಲರೂ ಇನ್ನೂ ಯುವಕರಿದ್ದೀರಿ ಸಹನೆಯನ್ನು ಕಲಿತುಕೊಳ್ಳಿ.

ಶ್ರೀ ಸಿ. ಬೈರೇಗೌಡ .—ಮಾನ್ಯ ಮುಖ್ಯ ಮಂತ್ರಿಗಳು ಮೊದಲು ಮಾತನಾಡುವುದನ್ನು ಸರಿಯಾದ ರೀತಿಯಲ್ಲಿ ಇದೆಯೋ ಎಂಬುದನ್ನು ಅವರು ಅರಿತುಕೊಳ್ಳಬೇಕು, ಆ ಕೇರಳದಲ್ಲಿ ಸರ್ಕಾರವನ್ನು ಉರುಳಿಸಿದವರು ಪ್ರಧಾನಿಯವರು ಎಂದು ಈ ದಿವಸ ಕೂಡ ಎಲ್ಲರ ಬಾಯಲ್ಲೂ ಕೇಳಿ ಬರುತ್ತಿದೆ.

ಶ್ರೀ ಡಿ. ದೇವರಾಜ ಅರಸ್ .—ಈ ಕಮ್ಯೂನಿಷ್ಟರುಗಳಿಗೆಲ್ಲಾ ಆ ಮಾರ್ಕ್ಸಿಸ್ಟ್ ಲೆನಿನ್ ಹೇಳಿದ ಮಾತುಗಳೇ ವೇದವಾಕ್ಯ. ಅದೇ ಈ ದೇಶದಲ್ಲಿ ಬಂದಿರತಕ್ಕಂಥ ಒಂದು ದೊಡ್ಡ ತೊಂದರೆ ನಾನು ಬೆಳಕು ಹರಿಯುವತನಕ ಮಾತನಾಡುವುದಕ್ಕೆ ಹೊರಟರೆ ನೀವುಗಳು ಯಾರೂ ನನಗೆ ತಡೆಯುವುದಿಲ್ಲ. ಇಂಥ ಒಂದು ವಾದಕ್ಕೆ ನಮ್ಮ ದೇಶದಲ್ಲಿ ಅವಕಾಶವಿಲ್ಲ. ರಷ್ಯಾದಲ್ಲೂ ಮತ್ತು ಚೈನಾದಲ್ಲೂ ಯಾವುದೇ ದೇವರಿಲ್ಲ ಅವರು ಏಥೀಸ್ಟ್ಸ್, ಭಾರತದಲ್ಲಿ ಏಥೀಸ್ಟ್ಸ್ ಇವತ್ತಿಲ್ಲ ಇಲ್ಲಿ ಸಾವಿರಾರು ವರ್ಷದಿಂದ ಇದ್ದಾರೆ, ಥೀಯಿಸಂ ಸಹ ಇದೆ ರಷ್ಯಾದಲ್ಲೂ ಕೂಡ ಜನ ಚರ್ಚಿಗೆ ಹೋಗುತ್ತಿಲ್ಲವೆ ? ನಾನು ಅಲ್ಲಿಗೆ ಹೋಗಿಲ್ಲ ಕೃಷ್ಣನ್‌ನವರು ಹೋಗಿದ್ದಾರೆ. ಅಲ್ಲೂ ಜನ ಚರ್ಚಿಗೆ ಹೋಗುತ್ತಿದ್ದಾರೆ. ದೇವರೇ ಬೇಕಿಲ್ಲದಿದ್ದರೆ ಚರ್ಚ್‌ಗಳಿರುತ್ತಿರಲಿಲ್ಲ ದೇವನ ವಿಚಾರದಲ್ಲಿ ನನಗೆ ಬಹಳ ಗೌರವವಿದೆ.

ಶ್ರೀ ಎಂ. ಎಸ್. ಕೃಷ್ಣನ್ .—ಹೋಗುವವರು ಹೋಗುತ್ತಾರೆ, ಹೋಗದಿರುವವರೂ ಇದ್ದಾರೆ.

ಶ್ರೀ ಸಿ. ಬೈರೇಗೌಡ .—ದೇವರ ಪಠ ಬಿಸಾಕಬೇಕೆಂದು ನಾವು ಹೇಳಿಲ್ಲ. ನೀವು ಕಾರ್ಲ್ ಮಾರ್ಕ್ಸ್ ಪಠ ಅಥವಾ ಸ್ಟಾಲಿನ್ ಪಠ ಹಾಕಿಕೊಳ್ಳಿ ಎಂದು ಹೇಳುತ್ತಿದ್ದೀರಿ ಅಷ್ಟೆ. ಇದು ಯಾವ ದೇವರ ಪೂಜೆ ಸ್ವಾಮಿ ?

ಶ್ರೀ ಎಂ. ಎಸ್. ಕೃಷ್ಣನ್ .—ಪೂಜೆ ಮಾಡುವವರು ಮಾಡಲಿ, ಇಟ್ಟುಕೊಳ್ಳಲಿ.

ಶ್ರೀ ಡಿ. ದೇವರಾಜ ಅರಸ್ .—ಒಂದು ಗಾದೆ ಇದೆ, ಯಾವುದೋ ಒಂದು ದೆವ್ವ ಬಾಗಿಲಲ್ಲಿ ಹೋಗಿ ಗವಾಕ್ಷಿಯಲ್ಲಿ ಬಂತಂತೆ. ಬೀದಿಯಲ್ಲಿ ತಳ್ಳಿದರೆ ಗವಾಕ್ಷಿಯಲ್ಲಿ ಬರುತ್ತದೆ. ನಾವು ಮಾಡಿರುವ ಸುಧಾರಣೆ ಎಷ್ಟೋ ಮೇಲು, ಕೇರಳದ ಮಸೂದೆಯಲ್ಲೇನಿದೆ. ಅವರು ಲ್ಯಾಂಡ್ ಬೋರ್ಡ್ ಮಾಡಿ ಈ ಸಂಸ್ಥೆಗಳಿಗೆಷ್ಟು ಜಮೀನು ಬಿಡಬೇಕು ಇವಕ್ಕೆಷ್ಟು ವರಮಾನವಿದೆ ಎಂದು ನೋಡಿ ಕೊಡುವರು. ನಾವು ಮಾಡಿರುವುದಾದರೂ ಏನು ? ನಾವು ಯಾವುದೇ ಒಂದು ಬೋರ್ಡಿಗೆ ಬಿಟ್ಟು, ನೂರು, ಐನೂರು ಎಕರೆ ಕೊಡಲು ಡಿಸ್ಕ್ರೀಷನರಿ ಪವರ್ ಕೊಡದ ಹಾಗೆ ಕೊಟ್ಟು, ಹೆಚ್ಚು ಕಡಿಮೆ ಮಾಡಲು ಅವಕಾಶ ಕೊಡದೆ, ಮ್ಯಾಕ್ಸಿಮಂ ಎರಡು ಸೀಲಿಂಗೆಗೆ ಮಿತಿ ಮಾಡಿದ್ದೇವೆ. ಅನೇಕ ವಿದ್ಯಾಸಂಸ್ಥೆಗಳು ನಮ್ಮ ರಾಜ್ಯದಲ್ಲಿವೆ ಮಠಗಳಿವೆ, ಮಸೀದಿಗಳಿವೆ, ಚರ್ಚುಗಳಿವೆ. ಅವುಗಳಿಗೆ ಆಸ್ತಿ ಇಲ್ಲವೇ? ಇದೆ ಬರೀ ಮಠಗಳಿಗೆ ಬಿಡುತ್ತೇವೆಂದು ಹೇಳಿಲ್ಲ. ಚರ್ಚು ಮಸೀದಿ ಮುಂತಾದುವುಗಳಿಗೂ ಬಿಡುತ್ತೇವೆ. ಇದರಿಂದ ಸಂಸ್ಥೆಗಳಿಗೆ ಸ್ವಲ್ಪಮಟ್ಟಿಗಾದರೂ ಅನುಕೂಲವಾಗುತ್ತದೆ. ಇದಕ್ಕೆ ಅಡ್ಡಿ ಮಾಡುವುದು ಬೇಡ. ಟೆನೆಂಟ್ ಕೈಲಿಲ್ಲದಿರುವ ಜಮೀನು ಇದು. ಯಾವ ಜಮೀನನ್ನು ಟೆನೆಂಟ್ ಮಾಡುತ್ತಿದ್ದಾನೋ ಅವನಿಂದ ಕಿತ್ತುಕೊಳ್ಳುವ ಪ್ರಶ್ನೆಯಿಲ್ಲ. ಅವನು ಖಾಯಂ ಆಗಿ ಅನುಕೂಲ ಪಡೆಯುವನು. ಈಗ ಕೆಲವು ಸಂಸ್ಥೆಗಳಲ್ಲಿ ಸಾವಿರಾರು ಎಕರೆಯಿದೆ. ಖುಷ್ಕಿ ಜಮೀನಾದರೆ ನೂರೆಂಟು ಎಕರೆ ಬರುತ್ತದೆ ಎ ಕ್ಲಾಸ್ ಲ್ಯಾಂಡ್ ಆದರೆ ೨೦ ಎಕರೆ, ಬಿ ಕ್ಲಾಸ್ ಲ್ಯಾಂಡ್ ಆದರೆ ೨೫ ಎಕರೆ ಬರಬಹುದು ಕನಿಷ್ಟ ದರ್ಜೆಯದು ೫೦ ಎಕರೆ ಬರಬಹುದು. ಪರ್ಸನಲ್ ಕಲ್ಟಿವೇಷನ್‌ನಲ್ಲಿದ್ದರೆ ಇಷ್ಟು ಬರಬಹುದು ಬಾಕಿಯಾದ್ದು ತೆಗೆದುಕೊಳ್ಳುತ್ತೇವೆ. ಜಾಯಿಂಟ್ ಸೆಲೆಕ್ಟ್ ಕಮಿಟಿಯವರು ಅನ್ಯುಯಿಟಿ ಕೊಡಲು ಅವಕಾಶ ಮಾಡಿದ್ದಾರೆ. ಟೆನೆಂಟ್ ಇರುವ ಜಮೀನನ್ನು ತೆಗೆದುಕೊಳ್ಳುವಾಗ ಅನ್ಯುಯಿಟಿ ಕೊಡುತ್ತೇವೆ. ಹೆಚ್ಚು ಜಮೀನಿದ್ದರೆ ಅನ್ಯುಯಿಟಿ ರೂಪದಲ್ಲಿ ಪರಿಹಾರ ಕೊಡುತ್ತೇವೆ ಇಷ್ಟು ಜಮೀನು ಬಿಡಬೇಕೆಂದಿದ್ದೇವೆ, ಯಾವುದೇ ಜಾತಿಯವರಿಗೆ ಸೇರಿದ ಮಠಕ್ಕೆ ಬಿಡುತ್ತೇವೆಂದು ಹೇಳುತ್ತಿಲ್ಲ. ಅನೇಕ ಪಂಗಡಗಳಿಗೆ ಸೇರಿದ ಮಠಗಳಿವೆ. ನಮ್ಮ ದೇಶದಲ್ಲಿ ಕೆಲವು ಜಾತಿಗಳವರ ಮಠಗಳಿವೆ. ಜನರು ಅವರಿಗೆ ಬೇಕಾದ ಮಠಗಳಿಗೆ ಹೋಗುವರು. ಕೆಲವರು ತಿಮ್ಮಪ್ಪನ ಗುಡಿಗೆ ಹೋಗುವರು, ಮತ್ತೆ ಕೆಲವರು ನಂಜುಂಡೇಶ್ವರನ ದೇವಾಲಯಕ್ಕೆ ಹೋಗುವರು ಇನ್ನು ಕೆಲವರು ಸಿರಿಗೆರೆ ಮಠಕ್ಕೆ, ಶಂಕರ ಮಠಕ್ಕೆ ಹೋಗುವರು, ಗೋರಿ ಇರುವ ಕಡೆಗೆ ಕೆಲವರು ಹೋಗಿ ಕೈಮುಗಿಯುವರು.

Sri C. M. Armugam. —Sri, the point that we are harping upon the background of mutts must be taken into consideration not places of worship. You can have temples if people want to go there. Let them go But, I want to tell this House and to you you must agree with me if I am resonable. These mutts were controlling all these years both politics and economics. That is the reason why we said itmust be controlled. I can even quote certain instances. They used to consult the mutts before convening the Assembly. Therefore, the mut was controiling and if such muts are to continue I was told you were a wrestler and I was told that Mr Huchmasthi Gowda also was a good wrestler. But you have been defeated by the Mutts. We are not saying that they are not doing educational work I want you not to compare with bed you must compare with good. If you see Kerala, they did not compare with bad So for as the mut is concerned, since muts were there since Rama's time, Devaraj Urs will continue them

ಶ್ರೀ ಬಿ. ವಿ ಕಕ್ಕಿಲಾಯ —ಮೊದಲು ಮಸೂದೆಯಲ್ಲ ವಿನಾಯಿತಿ ಕೊಡಬಾರದೆಂದು ಹೇಳಿ ಈಗ ಸೇರಿಸುತ್ತಿದ್ದೀರಿ ಸೆಲೆಕ್ಟ್ ಕಮಿಟಿಯಲ್ಲಿ ಸೂಕ್ತವಾದ ರೀತಿಯಲ್ಲ ತಿದ್ದುಪಡಿ ಮಾಡಿದ ಮೇಲೆ ಈಗ ಹೀಗೆ ಮಾಡುವುದು ಸೂಕ್ತವಲ್ಲ.

Sri D. Devaraj Urs .—That was in the draft stage. I am glad my friend Sri Armugam raised this point at a very approprer time and reminded me of certain things which I would have omitted otherwise in my talk. His apprehension I very well understand. That is exactly the reason why I started in the beginning to disabuse the mind of some of freinds. It they have any apprehensions that the Government is being coutrolled by some heads of muts and that they are controlling politics, it is not correct.

ನಾನೂ ಹುಚ್ಚಮಾಸ್ತಿಗೌಡರು ಇಬ್ಬರೂ ರೆಸ್ಲರ್ಸ್ ಎಂದು ಹೇಳಿದರು. ಈರೆಸ್ಲರ್ಸ್‌ಗೆ ಇರುವ ನೀತಿ, ಗುಣ ಏನು ಎಂದು ತಿಳಿದುಕೊಳ್ಳಬೇಕು ಯಾರಾದರೂ ಸೋತಾಗ ನಮ್ಮಲ್ಲಿ ಒಂದು ಮಾತು ಇದೆ. ಒಬ್ಬ ಮನುಷ್ಯ ತೆಂಗಿನಮರಕ್ಕೆ ಹತ್ತಿರುತ್ತಾನೆ, ಅಕಸ್ಮಾತ್ ಕೈ ಬಿಟ್ಟು ಅಚಾತುರ್ಯದಿಂದ ಕೆಳಗೆ ಬಿದ್ದರೆ ಗೋದಮಟ್ಟೆಯಿಂದ ಹೊಡೆದ ಎನ್ನುವ ಮಾತು ಇದೆ. ಮಠಗಳಲ್ಲಿ ಪಾಲಿಟಿಕ್ಸ್ ಇದೆಯೋ ಇಲ್ಲವೋ. ಇದೆಯೆಂದು ಮಾತನಾಡಿದರೆ ನಿಂದನೆ ಮಾಡಿದ ಹಾಗೆ ಆಗುತ್ತದೆ ಹಾಗೆ ಆಗಬಾರದು ಒಂದು ವೇಳೆ ಇದೆಯೆಂದು ತಿಳಿದು ಅದನ್ನು ಹತೋಟಿಗೆ ತಾದಿರುವವರು ಯಾರು ? ಹತೋಟಿಗೆ ತಂದಿರುವವರು ನಮ್ಮ ಪಕ್ಷ. ಇನ್ನು ಮುಂದಕ್ಕೆ ಅದು ಆಗುವುದಿಲ್ಲ,. ದೇಶದಲ್ಲಿ ಮಠಗಳು ಮಠಾಧಿಪತಿಗಳು ರಾಜಕೀಯ ವನ್ನು ಕಂಟ್ರೋಲ್ ಮಾಡುವುದಕ್ಕೆ ಸಾಧ್ಯವಿಲ್ಲ. ಇದು ನಮ್ಮ ಪಕ್ಷದಲ್ಲಿ ಇದ್ದಂಥ ಒಂದು ದೊಡ್ಡ ಆಂದೋಳನ, ಗ್ರೇಟ್ ಸ್ಟ್ರಗಲ್‌ನ ರಿಸೆಲ್ಟ್ ಇದು. ಆದ್ದರಿಂದ ನಾವಾದರೂ ಏನು ಹೇಳಿದ್ದೇವೆ ಎಂದರೆ, ಯಾವಾಗಲೂ ಕುಸ್ತಿ ಮಾಡವವರು ಸೋತವನನ್ನು ಗುದ್ದುವುದಕ್ಕೆ ಹೋಗುವುದಿಲ್ಲ. ಇದು ಇವರ ನೀತಿ ನಮ್ಮ ನೀತಿಹಾಗಲ್ಲ ಯಾವಾಗಲೂ ಒಂದು ಸ್ಟ್ಯಾಂಡರ್ಡ್ ಮೈಂಟೇನ್ ಮಾಡತಕ್ಕ ರೆಸ್ಲರ್ಸ್ ಸೋತವನನ್ನು ಗುದ್ದಿ ಗುದ್ದಿ ಫಾಲ್‌ಗೇಮ್ ಆತಿ, ಸೇಡು ತೀರೀಸಿಕೊಳ್ಳುವುದಕ್ಕೆ ಎಂದು ಹೋಗುವುದಿಲ್ಲ.

7-30 P.M.

ಶ್ರೀ ವಿ ಎನ್. ಪಾಟೀಲ್. —ಲ್ಯಾಂಡ್ ರಿಫಾರಮ್ಸ್‌ನಲ್ಲಿ ಸೋತಿದ್ದೀರಿ ಸೋತೀದ್ದೇವೆ. ಎಂದು ಹೇಳಿದರೆ ಗುದ್ದುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಸ್ವಲ್ಪ ಸಮಾಧಾನವಾಗಿ ಕೇಳಿ.

ಶ್ರೀ ಎಂ. ಎಸ್. ಕೃಷ್ಣನ್. ಅದು ಈಗ ತೀರ್ಮಾನವಾಗುವುದಿಲ್ಲ, ನೀವು ರೆಸಲರ್ಸ್ ಇರಬಹುದು, ಮುಂದೆ ನೋಡಬೇಕು.

ಶ್ರೀ ಡಿ. ದೇವರಾಜ ಅರಸ್.—ನಮ್ಮ ದೇಶದಲ್ಲಿ, ಈ ಒಂದು ಮಠಗಳ ಪ್ರಶ್ನೆಯಲ್ಲ, ಇಂಥ ಮಠಗಳು ದೇಶದಲ್ಲಿ ನೂರಾರು ಇವೆ. ಈ ನೂರಾರು ಮಠಗಳಿಂದ ನಾವು ೧೦ ಲಕ್ಷ ಎಕರೆ ಭೂಮಿಯನ್ನು ಕೊಡುತ್ತಿಲ್ಲ. ಒಂದು ಸಾವಿರ ಎಕರೆ ಯಾಗಬಹುದು, ಅನೇಕ ವಿದ್ಯಾಸಂಸ್ಥೆಗಳಲ್ಲಿ ಹುಡುಗರಿಂದ ಗದ್ದೆ ಮಾಡಿಸಿ ಹೊಲಗಳನ್ನು ಮಾಡಿರತಕ್ಕವು ಇವೆ. ಅವರಿಗೆ ಸ್ವಲ್ಪ ಜಮೀನನ್ನು ಬಿಡುವುದರಿಂದ ಏನು ತಲೆಕೆಳಗು ಆಗಿದೆ ಎಂದು ನನಗರ್ಥವಾಗುವುದಿಲ್ಲ. ಆದರೆ ಟೆನೆಂಟ್ಸ್ ಇಟ್ಟುಕೊಂಡು ಭೂಮಿಯನ್ನು ಮಾಡುವುದಕ್ಕೆ ಬಿಡಬಾರದು. ನನಗೆ ಗೊತ್ತಿರುವ ಕೆಲವು ಸಂಸ್ಥೆಗಳಲ್ಲಿ ಹುಡುಗರು ಕಷ್ಟಪಟ್ಟು ಹೊಲ ಮಾಡಿ, ಗದ್ದೆ ಮಾಡುವುದನ್ನು ಇಟ್ಟುಕೊಂಡಿದ್ದರು ಅಂಥ ಸಂಸ್ಥೆಗಳಿಗೆ ಭೂಮಿಯನ್ನು ಏತಕ್ಕೆ ಬಿಡಬಾರದು? ಒಂದು ರೀತಿಯಲ್ಲಿ ನಮ್ಮ ಸರ್ಕಾರದ ನೀತಿ, ಹಿಂದಿನಿಂದಲೂ ವಿದ್ಯಾ ಸಂಸ್ಥೆಗಳಿಗೆ ಜಮೀನು ಕೊಟ್ಟು. ಅವುಗಳಲ್ಲಿ ನಮ್ಮ ಮಕ್ಕಳು ಕೆಲಸ ಮಾಡುವುದು ಒಳ್ಳೆಯದು ಎಂದು ಮಾಡಿದ್ದಾರೆ. ಆದ್ದರಿಂದಲೇ ಲ್ಯಾಂಡ್ಸ್ ಅನ್ನು ಕೆಲವು ಕಾಲೇಜುಗಳಿಗೆ ಅಟ್ಯಾಚ್ ಮಾಡಿದ್ದೇವೆ. ಕೆಲವು ಲ್ಯಾಂಡ್ ಗ್ರ್ಯಾಂಟ್ಸ್ ಇವೆ. ಯೂನಿವರ್ಸಿಟಿಗಳು ಏತಕ್ಕೆ ಇವೆ, ಕೈ ಕೆಲಸ ಕಲಿಯಬೇಕು, ವೃಕ್ಷಬೆಳೆಯುವ ವಿಚಾರವನ್ನು ಕಲಿಯಬೇಕು. ಎಷ್ಟೋ ಮಕ್ಕಳಿಗೆ ಇವತ್ತಿನ ದಿವಸ ನಾವು ಏನು ವಿದ್ಯಾಭ್ಯಾಸವನ್ನು ಕೊಡುತ್ತಿದ್ದೇವೆ ಅದರಿಂದ ಬಿ. ಎ ಡಬ್ಬಲ್ ಗ್ರ್ಯಾಜುಯೇಟ್ಸ್ ಆಗುತ್ತಾರೆಯೇ ವಿನಹ ನೇಗಿಲು ಹಿಡಿಯುವ ತಂದೆತಾಯಿಗಳು ಇದ್ದರೆ ಮಗನಿಗೆ ಅದು ಬರುವುದಿಲ್ಲ. ಸರಿಯಾಗಿ ಬರೆಯುವುದಕ್ಕೆ ಬರುವುದಿಲ್ಲ, ಕೆಲಸ ಮಾಡುವುದಕ್ಕೂ ಬರುವುದಿಲ್ಲ ಆ ರೀತಿ ಮಾಡಿ ಅವರನ್ನು ನಾವು ಕೂಡಿಸಿದ್ದೇವೆ. ಸಂಸ್ಥೆಗಳಿಗೆ ಭೂಮಿಯನ್ನು ಕೊಟ್ಟುಕೊಂಡು ಬಂದಿದ್ದರಿಂದ ಈಗ ನೂರಾರು ಸಂಸ್ಥೆಗಳು ಇವೆ. ಒಂದೊಂದು ಸಂಸ್ಥೆಗೆ ೨೦ ೩೦–೫೦ ಸಾವಿರ ರೂಪಾಯಿ ವರಮಾನ ಬರುವುವೂ ಇವೆ, ನಾವು ಕೊಡುವ ಗ್ರ್ಯಾಂಟ್, ಅದಕ್ಕೆ ಅವರಷ್ಟು ಸೇರಿಸಿಕೊಂಡು ವಿದ್ಯಾಸಂಸ್ಥೆಗಳನ್ನು ನಡೆಸುತ್ತಾರೆ. ಇದರ ಜೊತೆಗೆ ಇನ್ನೊಂದು ವಿಚಾರ, ನೀವು ಎಷ್ಟೇ ರ್ಯಾಷನಲಿಸ್ಟ್ ಎಂದು ಹೇಳಿಕೊಂಡರೂ ಇಡೀ ಭಾರತದಲ್ಲಿಯೇ ಆಗಲೀ, ಮೈಸೂರು ರಾಜ್ಯದಲ್ಲಿಯೇ ಆಗಲಿ, ಅಧ್ಯಕ್ಷರೇ ತಮ್ಮ ಮುಖಾಂತರ ಕೇಳುತೇನೆ, ಭಾರತ ದೇಶದಲ್ಲಿ ದೇವಸ್ಥಾನ ಇಲ್ಲದೆ ಇರುವ ಹಳ್ಳಿ ಯಾವುದಾದರೂ ಇದ್ದರೆ ಇವರು ಹೇಳಲಿ, ಇವರು ತೋರಿಸಿ ಕೊಡಲಿ ನಾನು ಇವರಿಗೆ ಶರಣಾಗುತ್ತೇನೆ. ನಮ್ಮ ತಾತ ನಿಮ್ಮ ತಾತ, ಮುತ್ತಾತಂದಿರು, ನಿಮ್ಮ ಋಷಿಗಳು, ನಮ್ಮ ಋಷಿಗಳು, ನಮ್ಮ ರಾಜರು ನಿಮ್ಮ ರಾಜರು, ಚಕ್ರವರ್ತಿಗಳು ಎಲ್ಲರೂ ಇದಕ್ಕೆ ಕಾರಣಕರ್ತರಾಗಿದ್ದಾರೆ. ನೀವು ಬಂದು ಕಲಿಸುವುದಕ್ಕೆ ಸಾಧ್ಯವಿಲ್ಲ. ನಿಮ್ಮ ಯುಗದಲ್ಲಿ ಸಾಧ್ಯವಿಲ್ಲ. ಏಕೆ ಸುಮ್ಮನೆ ಮಾತನಾಡುತ್ತಿದ್ದೀರಿ? ದೇಶದ ವಿಚಾರವನ್ನು ನೋಡಿದವನಿಗೆ ಇದು ಅರ್ಥವಾಗುತ್ತದೆ. ರಾಮಕೃಷ್ಣ ಹರೇಕೃಷ್ಣ ಎಂದು ಹೇಳುವುದಕ್ಕೆ ಜನ ಹೊರಟಿದ್ದಾರೆ. ಹರೇ ಕೃಷ್ಣ ಬಂದು ಇಡೀ ದೇಶವನ್ನು ಆವರಿಸಿಕೊಂಡು ಬಿಟ್ಟಿದೆ.

ಶ್ರೀ ಕೋಣಂದೂರು ಲಿಂಗಪ್ಪ.—ಹುಚ್ಚರು ಎನ್ನುತ್ತಾರೆ ಅವರನ್ನು.

ಶ್ರೀ ಡಿ. ದೇವರಾಜ ಅರಸ್.—ಅವರ ಹತ್ತಿರ ನೀವು ಹೋಗಿ, ನೀವು ಹುಚ್ಚರು ಎಂದು ಅವರು ತಿಳಿದು ಕೊಂಡಿದ್ದಾರೆ. ಇದೇ ಪ್ರಪಂಚ, ಇದು ನಡೆಯುತಕ್ಕ ವಿದ್ಯಮಾನ, ಶ್ರೀಮಾನ್ ದೇವೇಗೌಡರ ಸ್ಥಳದಲ್ಲಿ ಹೇಮಾವತಿ ಪ್ರಾಜೆಕ್ಟ್ ನಡೆಯುತ್ತಾ ಇದೆ ಕೆಲವು ಹಳ್ಳಿಗಳನ್ನು ಅಲ್ಲಿ ಷಿಫ್ಟ್ ಮಾಡಬೇಕಾಗಿ ಬಂತು, ಆ ಹಳ್ಳಿಯವರು ಮೊದಲು ದೇವಸ್ಥಾನ ಕಟ್ಟಿ, ಎಂದು ಕೇಳುತ್ತಿದ್ದಾರೆ. ಬಸವೇಶ್ವರನೋ, ಮಾರಮ್ಮನೋ ಯಾವುದೊ ಒಂದು ದೇವಾಸ್ಥಾನ ಕಟ್ಟಿ ಎಂದು ಕೇಳುತ್ತಿದ್ದಾರೆ. ದೇವಸ್ಥಾನ ಕಟ್ಟದ ಹೊರತು ಊರು ಕಟ್ಟುವುದಿಲ್ಲ ಎಂದು ಹೇಳುತಾರೆ. ಮಾನ್ಯ ಕೃಷ್ಣನ್ ಅವರನ್ನು ಕರೆದುಕೊಂಡು ಹೋಗಿ ತೋರಿಸಿ. ಆದ್ದರಿಂದ ಕೇವಲ ನನಗೋಸ್ಕರ, ಶ್ರೀಮಾನ್ ಕೃಷ್ಣನ್‌ಗೋಸ್ಕರ ಕಾನೂನು ಮಾಡುತ್ತಾ ಇಲ್ಲ. ದೇಶದಲ್ಲಿ ಜನತೆಯ ಅಭಿಪ್ರಾಯ ಏನು ಇದೆ ? ದೇವರನ್ನು ಬಿಟ್ಟು ಬಿಡಿ ಎಂದು ನನ್ನ ಮೇಲ್ಪಟ್ಟವರೂ ಹೇಳಿದರೂ ಕೇಳುವುದಿಲ್ಲ. ಯಾರು ಹೇಳಿದರೂ ಜನ ಕೇಳುವುದಕ್ಕೆ ತಯಾರು ಇಲ್ಲ. ದೊಡ್ಡ ದೊಡ್ಡ ಆಂದೋಳನಗಳು ದೇಶದಲ್ಲಿ ಜರುಗಿ ಹೋಗಿವೆ ದೇವರು ಇಲ್ಲ, ದೇವರಿದ್ದಾನೆ, ಎಂದು ಚರ್ಚೆಯಾಗುತ್ತಿದೆ. ಅದರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ ನಿಮ್ಮ ವಾದವನ್ನು ಪ್ರಶ್ನಿಸುವುದಕ್ಕಾಗಿ ಹೇಳುತ್ತಿದ್ದೇನೆ. ದಟೀಸ್ ಎಕ್ಸ್ಯಾಕ್ಟ್ಲಿ ಮೈ ಪಾಯಿಂಟ್. ನಂಬಿಕೆ ಏನು ಇದೆ ಅದು ಸುಲಭವಾಗಿ ಹೋಗುವುದಿಲ್ಲ. ಈ ಒಂದು ವಿಚಾರ ದೇಶದಲ್ಲಿ ಇರಬೇಕಾದರೆ, ೪–೫ ಎಕರೆ ಜಮೀನನ್ನು ಎಷ್ಟೋ ದೇವಾಸ್ಥಾನಗಳಲ್ಲಿ ಇನಾಂ ಲ್ಯಾಂಡ್ ಆಗಿದೆ, ಇದೆ ಎಷ್ಟೋ ಹಳ್ಳಿಗಳಲ್ಲಿ, ೫–೧೦ ಎಕರೆ ಜಮೀನನ್ನು ಇಟ್ಟು ಕೊಂಡಿರುವ ದೇವಸ್ಥಾನಗಳು ಇವೆ, ಅವರಿಗೆ ಆನ್ಯುಯಿಟಿ ೫–೧೦ ರೂಪಾಯಿ ಕೊಟ್ಟರೆ, ಪೂಜೆ ಮಾಡುವವರು ಹೇಗೆ ಪೂರೈಸುತ್ತಾರೆ. ಆದ್ದರಿಂದ ಇದನ್ನು ಏತಕ್ಕೆ ಕಿತ್ತುಕೊಳ್ಳಬೇಕು? ಒಂದು ವೇಳೆ ನನಗೆ ಇಷ್ಟ ಇಲ್ಲದೆ ಇರಬಹುದು, ದೇವಸ್ಥಾನ ಪಾಳು ಬೀಳುತ್ತದೆ. ಇದರಿಂದ ಜನರ ಮನಸ್ಸಿಗೆ ನೋವಾಗುತ್ತದೆ. ಇದನ್ನು ಮಾಡುವುದರಿಂದ ಏನು ಪ್ರಯೋಜನ ? ಅವರ ನಂಬಿಕೆ ಅಳಿಸಿ

(ಶ್ರೀ ಡಿ. ದೇವರಾಜ್ ಅರಸ್)

ಹೋಗಿಬಿಡುತ್ತದೆಯೇ ? ಇವನ್ನೆಲ್ಲಾ ಮನಸ್ಸಿನಲ್ಲಿಟ್ಟುಕೊಂಡು ರಿಲಿಜಿಯಸ್ ಇನ್‌ಸ್ಟಿಟ್ಯೂಷನ್ಸ್ ಎಂದು ಹೇಳುವಾಗ ಸಣ್ಣ ಪುಟ್ಟ ದೇವಸ್ಥಾನಗಳು ಬರುತ್ತವೆ ಎಂದು ನಾನು ತಿಳಿದುಕೊಂಡಿದ್ದೇನೆ. ಅವಕ್ಕೆ ಏನಾದರೂ ಭೂಮಿಯನ್ನು ಬಿಡುವುದರಿಂದ ಎಷ್ಟು ಭೂಮಿ ಹೋಗುತ್ತದೆಂದು ನಮ್ಮ ಮಾನ್ಯ ಮಂತ್ರಿವರ್ಯರು ಲೆಕ್ಕ ಹೇಳಬಹುದು ಎಂದು ಕಾಣುತ್ತದೆ. ಇದರಿಂದ ಎಷ್ಟು ಸಹಸ್ರ ಎಷ್ಟು ಲಕ್ಷ ಎಕರೆ ಹೋಗುತ್ತದೆ? ಮಾನ್ಯ ಸ್ನೇಹಿತರಾದ, ಕೃಷ್ಣನ್ ಅವರು ಇದರಲ್ಲಿ, ಏನುಹುರುಳಿಲ್ಲ, ಕ್ರಾಂತಿ ತೆಗೆದುಹಾಕಿದ್ದೇವೆ, ಎಂದು ಹೇಳುವುದು ಸರಿಯಲ್ಲ; ಎಂದು ನಾನು ನಮ್ರತೆಯಿಂದ ಅವರಿಗೆ ಹೇಳುತ್ತೇನೆ. ಇದು ಒಂದು ವಿಷಯ. ಇನ್ನು ಸೀಲಿಂಗ್ ಬಗ್ಗೆ, ಇದರಲ್ಲಿ ನಾವು ಏನು ಬದಲಾವಣೆ ಮಾಡಿದ್ದೇನೆ ? ಇದರ ವಿಚಾರ ಹೇಳುವುದಾದರೆ, ೯೭ ತಾಲ್ಲೂಕುಗಳಿಗೆ ೫೪ ಎಕರೆ ಸೀಲಿಂಗ್ ಮೇಲೆ ೨೦ ಪರ್ಸೆಂಟ್ ಎಂದು ಹೇಳಿದ್ದಾರೆ ಕೊಡಬಹುದು. ಅದನ್ನು ತೆಗೆದು ಹಾಕಿದ್ದೇವೆಂದು ಏನಾದರೂ ಹೇಳಿದ್ದಾರೆಯೆ ? ಅದನ್ನು ಹೇಳುತ್ತಾ ಇಲ್ಲ.

ಶ್ರೀ ಬಿ. ವಿ. ಕಕ್ಕಿಲಾಯ.—ಅದಕ್ಕೆ ತಿದ್ದುಪಡಿಯನ್ನು ನಾವು ಕೊಟ್ಟಿದ್ದೇವೆ.

ಶ್ರೀ ಡಿ. ದೇವರಾಜ್ ಅರಸ —ನಾವೂ ಕೊಟ್ಟಿದ್ದೇವೆ. ನೀವು ಕೊಟ್ಟಿದ್ದೀರಿ, ಜಾಯಿಂಟ್ ಸೆಲೆಕ್ಟ್ ಕಮಿಟಿ ಒಪ್ಪಿರುವ ಮಸೂದೆಗೆ ತಿದ್ದು ಪಡಿ ಸೂಚಿಸುವುದಕ್ಕೆ ಅಧಿಕಾರವಿದೆ. ನಿಮ್ಮ ವಾದದಲ್ಲಿ ತಿರುಳು ಇಲ್ಲ.

ಈಗ ತಾನೇ ಹೇಳಿದಂತೆ ನೀವು ಒಪ್ಪಿಕೊಂಡಿದ್ದರೆ ಅದು ಪ್ರಗತಿದಾಯಕವಾಯಿತೇ ಅಥವಾ ಕ್ರಾಂತಿಕಾರಕವಾಯಿತೇ ? We know the pulse of the people. ಜನರನಾಡಿ ಯಾವ ರೀತಿ ಮಿಡಿಯುತ್ತದೆ ಎನ್ನುವುದು ಚೆನ್ನಾಗಿ ಗೊತ್ತಿದೆ. ನಾವು ನೀವೂ ಕಲಿಯುವುದು ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ದಿಂಡಿಗಲ್‌ನಲ್ಲಿ ಕಲಿತುಕೊಂಡಿರಿ.

ಶ್ರೀ ಡಿ ದೇವರಾಜ್ ಅರಸ್. -ದಿಂಡಿಗಲ್‌ನಲ್ಲಿ ದೇವರಾಜ್ ಅರಸ್ ಇರಲಿಲ್ಲ, ನಾನೇ ಇದ್ದಿದ್ದರೆ ತೋರಿಸಿಕೊಡುತ್ತಿದ್ದೆ.

ಶ್ರೀ ಎಂ. ಎಸ್. ಕೃಷ್ಣ.—ಬೊಂಬಾಯಿಯಲ್ಲಿ ಕಲಿತು ಕೊಂಡಿರಿ, ಅದೇ ರೀತಿ ಮಾಡಿದರೆ ನಿಮಗೆ ಎಲ್ಲಾ ಕಡೆಯೂ ಆಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಬೊಂಬಾಯಿಯಲ್ಲಿ ನಿಮಗೆ ಸಿಕ್ಕಲಿಲ್ಲ, ನೀವು ಹೋಗಿ ಶಿವಸೇನೆಗೆ ಕೊಟ್ಟಿರಿ.

೮೦-೯೦ ತಾಲ್ಲೂಕ್‌ಗಳನ್ನು ಸೇರಿಸಿದ್ದೆವು ಅದರಲ್ಲಿ ಹೋಗುತ್ತಾ ಇದ್ದುದು ೧೦೦ ಎಕರೆಯಲ್ಲಿ ೨೦ ಎಕರೆ In more than half the State for every 100 acres. the proposal was to lose 20 acres or give extra 20 acres to the landlards or the land owners.

ಇವತ್ತು ಇದನ್ನು ತೆಗೆದುಹಾಕಿದ್ದೇವೆ. ಇದು ಪ್ರಗತಿದಾಯಕವಾಗಲಿಲ್ಲವೇ ? ನೀವು ಇದರಲ್ಲಿ ಏನು ಕೊಡುತ್ತಿದ್ದಿರಿ ಅದನ್ನು ತೆಗೆದುಬಿಟ್ಟು ರಿಲಿಜಿಯಸ್ ಚಾರಿಟಬಲ್ ಇನ್‌ಸ್ಟಿಟ್ಯೂಷನ್ಸ್‌ಗೆ ಕೊಡುವುದಕ್ಕೆ ಹೊರಟಿದ್ದೇವೆ. ಇದರ ಕಾಲುಭಾಗಕೂಡ ಅವರಿಗೆ ಕೊಡುವುದಿಲ್ಲ So on the whole I dare say we have gained more from this enactment after this amendment than what it would have been otherwise if he had accepted the joint Select Committee report or it is without amendment.

ಕೊನೆಯದು ಸೀಲಿಂಗ್ ೧೦ ಎಕರೆ ಎಂದು ಮೊದಲಿನಿಂದ ಹೇಳಿಕೊಂಡು ಬಂದಿದ್ದೇವೆ. ೧೦ ಎಕರೆ ಮಿತಿ ಇಟ್ಟುಕೊಂಡಿದ್ದೇವೆ ಎಲ್ಲಾ ದೃಷ್ಟಿಯಿಂದ ನಾವು ನೋಡುವುದಾದರೆ ಅಧ್ಯಕ್ಷರೇ, ಇವತ್ತಿನ ದಿವಸ ಈ ಭೂ ಸುಧಾರಣೆ ಕಾಯದೆಗೆ ಈ ಸಭೆಯ ಮುಖೇನ ನಾವು ಏನು ಅನುಮತಿ ಕೊಡುವುದರಲ್ಲಿ ಇದ್ದೇವೆ ನಾನು ಘಂಟಾಘೋಷವಾಗಿ ಹೇಳುತ್ತೇನೆ, ಕೇವಲ ಈ ಸಭೆಯಲ್ಲಿಯೇ ಅಲ್ಲ ಬಹಿರಂಗವಾಗಿ ಹೇಳುವುದಕ್ಕೂ ಸಿದ್ಧನಿದ್ದೇನೆ—ಭಾರತದಲ್ಲಿ ಎಲ್ಲಿ ಬೇಕಾದರೂ ನಿಂತು ಧೈರ್ಯವಾಗಿ ಹೇಳಬಲ್ಲೆ, ಇದು ಎಲ್ಲಾ ದೃಷ್ಟಿಯಿಂದಲೂ ಕೂಡ ರಿಯಲಿಸ್ಟಿಕ್ ಆಗಿರುವುದರ ಜೊತೆಗೆ ಬಹಳ ಪ್ರಗತಿದಾಯಕವಾಗಿದೆ. ಕೇರಳದ ಆಕ್ಟ್ ತೆಗೆದುಕೊಳ್ಳಿ, ಬಿಹಾರದ ಆಕ್ಟ್ ತೆಗೆದುಕೊಳ್ಳಿ, ಆಂಧ್ರ ಪ್ರದೇಶದ ಆಕ್ಟ್ ತೆಗೆದುಕೊಳ್ಳಿ, ಮಹಾರಾಷ್ಟ್ರದ್ದು ತೆಗೆದುಕೊಳ್ಳಿ, ಎಲ್ಲೇ ನೋಡಿ ಮೈಸೂರು ದೇಶದ್ದು ಎಲ್ಲಕ್ಕಿಂತ ಪ್ರಗತಿದಾಯಕವಾದ ಕಾನೂನು ಎಂದು ಇದರಿಂದ ಅವರಿಗೆ ಸಂತೋಷ ಮತ್ತು ಸಮಾಧಾನವಾಗುತ್ತದೆ ಎಂದು ತಿಳಿದುಕೊಂಡಿದ್ದೇನೆ. ಇದರ ಮೇಲೆ ವಾಕ್ ಔಟ್ ಮಾಡಿದರೆ I wish them well.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ನಮ್ಮ ಮುಖ್ಯಮಂತ್ರಿಗಳು ಸಭೆಯ ಮುಂದೆ ಈಗ ಸಧ್ಯದಲ್ಲಿಯೇ ಪಾಸ್ ಆಗುವುದರಲ್ಲಿರತಕ್ಕಂಥ ಮಸೂದಾ ಕಾನೂನಿನ ಮುಖ್ಯಾಂಶಗಳನ್ನು ಹೇಳಿದರು. ನಾವು ಇಲ್ಲಿ ಸಾಧಿಸಿರತಕ್ಕದು ಎಷ್ಟರಮಟ್ಟಿಗೆ ಸಾಧನೆಯಾಗಿದೆಂದು ತಿಳಿಸಿದ್ದಾರೆ ನಾನು ಆ ವಿಷಯಕ್ಕೆ ಮತ್ತೆ ಹೋಗುವುದಕ್ಕೆ ಇಷ್ಟಪಡುವುದಿಲ್ಲ.

ಶ್ರೀ ಟಿ ಆರ್ ಶಾಮಣ್ಣ —ಅವರು ಹೇಳಿದ್ದು ಅಷ್ಟೂ ಕೇಳಿದ್ದೇನೆ, ನಾನು ಹೇಳಿದ್ದು ಒಂದೂ ಕೊಟ್ಟಿಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಲ್ಲಿ ಅನೇಕ ತಿದ್ದುಪಡಿಗಳು ತಂದಿರತಕ್ಕದ್ದು ಎಲ್ಲಾ ಮೂಲ ಮಸೂದಾ ಕಾನೂನಿಗೆ ಸಹಾಯಕವಾಗಿರತಕ್ಕ ತಿದ್ದುಪಡಿಗಳೇ ಜಾಸ್ತಿ. ಎರಡು ಮೂರು ವಿಷಯಗಳಲ್ಲಿ ವ್ಯತ್ಯಾಸವಾಗಿದೆ. ಒಟ್ಟಿನಲ್ಲಿ ಮಸೂದೆ ಯಾವ ರೂಪದಲ್ಲಿ ಇಟ್ಟುಕೊಳ್ಳಬೇಕೋ ಅದೇ ರೂಪದಲ್ಲಿ ಸ್ಪಷ್ಟಪಡಿಸಿದ್ದೇವೆ. ಒಂದು ಮಾತ್ರ ಈ ಸಭೆಗೆ ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ೧೯೬೧ರನೇ ಇಸ್ವಿಯ ಕಾನೂನು ಇಲ್ಲಿಯವರೆಗೆ ಯಾವ ಯಾವ ಕಾರಣಗಳಿಂದ ಕಾರ್ಯಗತವಾಗುವುದಕ್ಕೆ ಸಾಧ್ಯ ಇರಲಿಲ್ಲವೋ ಆ ಎಲ್ಲಾ ಕಾರಣಗಳನ್ನೂ ವಿವರವಾಗಿ ಸೂಕ್ಷ್ಮವಾಗಿ ಪರಿಶೀಲನೆ ಮಾಡಿ ಆ ಕಾರಣಗಳು ಯಾವು ಯಾವುವು ಇದ್ದವೋ ಅವುಗಳೆಲ್ಲದಕ್ಕೂ ಶ್ರೀ ಕಾಗೋಡು ತಿಮ್ಮಪ್ಪನವರು ಹೇಳಿದಂಥ ಪದ ಉಪಯೋಗಿಸಬೇಕಾದರೆ ತೀರ್ಪನ್ನು ಕೊಟ್ಟಿದ್ದೇವೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದಕ್ಕೆ ಸಹಾಯಕವಾಗಿರತಕ್ಕಂಥ ಎದುರು ಪಕ್ಷದ ಮತ್ತು ನಮ್ಮ ಪಕ್ಷದಲ್ಲಿರತಕ್ಕವರೆಲ್ಲರನ್ನೂ ಕೂಡ ಕೃತಜ್ಞತೆಯಿಂದ ಸ್ಮರಿಸಿಕೊಂಡು ಈ ಕಾನೂನಿಗೆ ಒಪ್ಪಿಗೆ ಕೊಡಬೇಕೆಂದು ಹೇಳಿ ಎಲ್ಲಾ ಸ್ನೇಹಿತರನ್ನೂ ಕಳಕಳಿಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮುಖ್ಯಮಂತ್ರಿಗಳು ನಾವು ಹೊರಗಡೆ ಹೋಗಬೇಕು ಎಂದಾಗ, ತಡೆ ಹಿಡಿದು ನಿಲ್ಲಿಸಿ ಅವರ ಮಾತು ಕೇಳಿ ಬೇಕಾದರೆ ಹೊರಗಡೆ ಹೋಗಿ ಎಂದು ಹೇಳಿದರು. ಅವರು ಅನೇಕ ವಿಷಯಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ ಮತ್ತೆ ಅವುಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಾವು ಹೇಳಿದ್ದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಜಾಯಿಂಟ್ ಸೆಲೆಕ್ಟ್ ಕಮಿಟಿಯಲ್ಲಿ ಒಪ್ಪಿಕೊಂಡಂಥ ಅನೇಕ ಒಳ್ಳೆಯ ಅಂಶಗಳನ್ನು ತಿದ್ದುಪಡಿ ಮಾಡಿ ಈ ಮಸೂದೆಯನ್ನು ಪ್ರತಿಗಾಮಿ ದಿಕ್ಕಿನಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಪ್ರಯತ್ನ ಮಾಡಿದ್ದಾರೆ

ಅಧ್ಯಕ್ಷರು.—ಅದನ್ನು ವಿವರಿಸಿದರು.

ಶ್ರೀ ಎಂ. ಎಸ್. ಕೃಷ್ಣನ್.—ನನಗೆ ಅದರಿಂದ ಸಮಾಧಾನವಾಗಿರಲಿಲ್ಲ, ಅವರು ಬೇರೆ ವಿಷಯ ಹೇಳಿದರು. ಕೇರಳದ ವಿಷಯ ಮಾಸ್ಕೋ ವಿಷಯ ಹೇಳಿದರು ನಾನು ಅದಕ್ಕೆ ಹೋಗುವುದಿಲ್ಲ. ಪ್ರೈವೇಟ್ ಆಗಿ ಮುಖ್ಯಮಂತ್ರಿಗಳು ದೇವರ ವಿಷಯ ಹೇಳಿದರು. ಜೊತೆಗೆ ಮಾತನಾಡೋಣ ಇಲ್ಲಿ ಚರ್ಚೆ ಮಾಡುವುದು ಬೇಡ. ಅವರು ಈ ಮಸೂದೆ ಬಹಳ ಪ್ರಗತಿದಾಯಕವಾಗಿದೆ ಬಹಳ ಮುಂದೆ ಹೋಗಿದ್ದೇವೆ ಎಂದು ಹೇಳಿರುವುದನ್ನು ನಾನು ಒಪ್ಪಿಕೊಳ್ಳುವುದಕ್ಕೆ ತಯಾರು ಇಲ್ಲ. ಎರಡನೆಯದು ಅದರಿಂದ ಏನು ಇವತ್ತು ಲಕ್ಷಾಂತರ ಗೇಣಿದಾರರಿಗೆ ಅನುಕೂಲವಾಗುತ್ತದೆ ಎಂದು ನೀವು ಯೋಜನೆ ಮಾಡಿದ್ದೀರಾ ಅಷ್ಟು ದೂರ ಇದು ಹೋಗುವುದಿಲ್ಲ ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ ಆದುದರಿಂದ ನಾವು ಇವತ್ತಿನ ದಿವಸ ಈ ಮಸೂದೆಯನ್ನು ಒಪ್ಪಿಕೊಳ್ಳದೇ ವಾಕ್ ಔಟ್ ಮಾಡುತ್ತೇವೆ ನೀವು ಪಾಸ್ ಮಾಡಿಕೊಳ್ಳಿ

(SRI C. M. ARUMUGHAM .—stood up to speak)

SRI D DEVARAJ URS .—If you say anything we will have to say something again.

MADAM SPEAKER .—We are on the last stage of the Bill. I must put it to the vote of the House now.

SRI C. M. ARUMUGHAM .—Madam Speaker, the Members both on this side of the House and that side have sat a few hours extra to pass this Bill. The people of the State expected a better Bill-a better land reform-from the present Government. No doubt we have to accept it was not possible for the previous Governments from 1947 onwards, to bring a real Land Reforms Bill for various reasons. It was the expectation of the people of this State that land reforms would be brought by this Government in such a way as to provide the minimum requirements of the agriculturists. Both our Chief Minister and our Revenue Minister were defeated by vested interests. There is also politics in this. They wanted to silence the dissidents. They are now keeping quiet. There are so many reactionary forces, who have, under the garb of Mrs Indira Gandhi, got into your tent. They want to destroy you and you become a party to it. You should have stood like a rock-like the Himalayas-and warded off the attack of the vested interests and brought about these land reforms as envisaged by the Joint Select Committee. Now, madam, if this Bill becomes an Act, it is not going to help any poor people. There are on statistics to show that you will have surplus land. So many persons are to benefited. I want to make one comparison between the present Bil. and the previous Act. The previous Act says that in a family consisting of adults and children ceiling is applicable to both adults and children. But in your Act the ceiling applies to only adults. In what way will it help? In a family, if there are half a dozen adults which one will claim ceiling? Lands will be distributed among the members of the family. It is not going to help the poor man the tenants and the agricultural labour and there is no equal distribution of property of the State should be equally distributed among one and all but I find you brought this in order to awaken the land lords, so that they will have enough time to distribute the land from among the members of the family. That is what you have done now.

ಶ್ರೀ ಎನ್. ಹೆಚ್. ಮಾಸ್ತಿಗೌಡ .—ಸ್ವಾಮಿ, ಹಿಂದಿನ ಕುಟುಂಬ ಚಿಕ್ಕದಾಗಿದ್ದರೂ ಒಂದು ಕುಟುಂಬಕ್ಕೆ ೨೧೬ ಎಕರೆ ಖುಷ್ಕಿ ಜಮೀನು ಬರುತ್ತಿತ್ತು. ಇವತ್ತು ೫೪ ಎಕರೆ ಇದು ೧/೪ ಭಾಗ ಆಗಿದೆ ಎಂದು ಶ್ರೀ ಆರ್ಮುಗಂರವರಿಗೆ ಗೊತ್ತಿಲ್ಲ ಎಂದು ಕಾಣುತ್ತದೆ. ೨೧೬ ಎಕರೆಗೆ ಬದಲಾಗಿ ಈಪ್ರೊತ್ತು ೫೪ ಎಕರೆ ಪರಮಾವಧಿ ಒಂದು ಕುಟುಂಬಕ್ಕೆ ಕೊಡುವುದು.

SRI C. M. ARUMUGHAM .—I have seen a political and economic magazine in which they say. "Land Reform, Long Live Land Reform." To silence your dissidents and reactionary forces, you have brought these several amendments Therefore, we people of the State are dissatisfied. Instead of a big mountain, you have brought a small mouse. You have only wasted the time. The Joint Select Committee wasted its time and the House also wasted its time but ultimately, this Bill is brought, which is not useful and does not serve the purpose for which it was intended. Therefore, as a mark of protest, we stage a walk out.

Sriyuths C. M. Arumugham, and Kagodu Thimmappa withdraw from the House.

ಶ್ರೀ ಕೊಣಂದೂರು ಲಿಂಗಪ್ಪ :— ಗೇಣಿ ಪದ್ಧತಿ ತಗೆದು ಹಾಕುವುದನ್ನು ಒಂದು ಬಿಟ್ಟರೆ ಬಾಕಿ ಎಲ್ಲಾ ಟೊಳ್ಳು ಸಂಧಾರಣ ಅದಕೋಸ್ಕರ ವಾಕ್‌ಔಟ್ ಮಾಡುತ್ತೇನೆ.

ಶ್ರೀ ಸಿ. ಬೈರೇಗೌಡ :—ಯಾವ ಸುಧಾರಣೆ ಕೂಡ, ಯಾವ ರೀತಿಯಲ್ಲೂ ಸರ್ಕಾರ ತಂದಿಲ್ಲ ಅದಕೋಸ್ಕರ ವಾಕ್‌ಔಟ್ ಮಾಡುತ್ತೇನೆ.

(ಶ್ರೀ ಯುತರಾದ ಕೋಣಂದೂರು ಲಿಂಗಪ್ಪ ಮತ್ತು ಸಿ. ಬೈರೇಗೌಡ ಅವರು ಸಭೆಯಿಂದ ನಿರ್ಗಮಿಸಿದರು).

†ಶ್ರೀ ಎಚ್. ಡಿ. ದೇವೇಗೌಡ :—ಮಾನ್ಯ ಸಭಾಧ್ಯಕ್ಷಣೀಯವರೇ ನಾನು ವಾಕೌಟ್ ಮಾಡುವುದಿಲ್ಲ, ವಾಕೌಟ್ ಮಾಡತಕ್ಕ ಪ್ರಮೇಯ ಇದ್ದರೆ ಈವೊತ್ತು ಬೆಳಿಗ್ಗೆ ಸರ್ಕಾರದ ಮೇಲೆ ಒತ್ತಡ ಹಾಕಿ ತಿದ್ದುಪಡಿ ಬಗ್ಗೆ ಪ್ರಸ್ತಾಪ ಮಾಡುತ್ತಿದ್ದೆ. ನಾನು ತಿದ್ದುಪಡಿಗಳನ್ನು ಒತ್ತಾಯ ಮಾಡದೇ ಹೋದಂಥ ಸಂದರ್ಭದಲ್ಲಿ ನನ್ನ ಮಿತ್ರರಾದ ಅರ್ಮುಗಂರವರು ಹೇಳಿದರು ನಾನು ಸದನದಲ್ಲಿ ಟೈಗರ್ ಇದ್ದ ಹಾಗೆ ಇದ್ದವನು ಕ್ಯಾಟ್ ಹಾಗೆ ಆಗಿದ್ದೇನೆ ಎಂದು. ಆ ಬಗ್ಗೆ ನಾನು ಸ್ಪಷ್ಟೀಕರಣ ಮಾಡಲಿಕ್ಕೆ ಇಚ್ಛೆಪಡುತ್ತೇನೆ. ಈ ಸಂದರ್ಭದಲ್ಲಿ ಭೂ ಸುಧಾರಣೆ ಕೇವಲ ಯಾವುದೇ ಒಂದು ಜನಾಂಗಕ್ಕಾಗಲೀ ಅಥವಾ ಪ್ರದೇಶಕ್ಕಾಗಲೀ ಸೀಮಿತವಾದುದಲ್ಲ. ಅದರಲ್ಲೂ. ಪಟ್ಟಣಗಳಿಂದ ಬಂದಿರತಕ್ಕ ಮಿತ್ರರು ಏನಿದ್ದಾರೆ, ಅವರಿಗೆ ಈ ಭೂ ಸುಧಾರಣೆಯ ಪೂರ್ಣ ಪರಿಣಾಮ ಗೊತ್ತಿಲ್ಲ ಅವರು ಇನ್ನೂ ಕೆಲವು ಪದಗಳನ್ನು ಪ್ರಯೋಗ ಮಾಡಿದರು ಇಷ್ಟು ಮಾತ್ರ ಹೇಳಬಲ್ಲೆ. ಅವರು ಸಾಕಷ್ಟು ಅಭ್ಯಾಸಮಾಡಿ ಮಾತನಾಡಿದ್ದರೆ, ಚೆನ್ನಾಗಿತ್ತು ಎಂದು ನನ್ನ ಭಾವನೆ. ನಾನು ಸರ್ಕಾರದ ಜೊತೆಗೆ ಕೈ ಜೋಡಿಸಬೇಕು ಎನ್ನುವ ದೃಷ್ಟಿಯಿಂದ ಸಹಕರಿಸುತ್ತಿದ್ದೇನೆ ಎಂದು ಅಲ್ಲ ನನ್ನ ವೈಯುಕ್ತಿಕ ಅಭಿಪ್ರಾಯವನ್ನು ಸಾಕಷ್ಟು ಈ ಸಭೆಯಲ್ಲಿ ತಿಳಿಸಿದ್ದೇನೆ. ಈ ಸಂದರ್ಭದಲ್ಲಿ ಇಷ್ಟು ಮಾತ್ರ ಹೇಳುತ್ತೇನೆ. ಈವೊತ್ತು ನಾವು ತಿದ್ದುಪಡಿ ಮಸೂದೆಯನ್ನು ಏನು ಪಾಸ್ ಮಾಡುತ್ತಿದ್ದೇವೆ ಏನು ಈ ಸಭೆಯು ಅಂಗೀಕಾರ ಮಾಡುತ್ತಾ ಇದೆ, ಇದರ ಪರಿಣಾಮವಾಗಿ ಈವೊತ್ತು ಎಷ್ಟು ಜಮೀನು ಸರ್ಪ್ಲಸ್ ಲ್ಯಾಂಡ್ ಸಿಗುತ್ತದೆ, ಎಂದು ಅಂಕಿ ಅಂಶ ಕೊಟ್ಟರೆ ಅದರಿಂದ ೧೯೬೧ರ ವಿಧೇಯಕಕ್ಕಿಂತ ಎಷ್ಟು ಪ್ರಗತಿದಾಯಕವಾದ ಮಸೂದೆ ಎಂದು ತೀರ್ಮಾನಕ್ಕೆ ಬರಲಿಕ್ಕೆ ಸಾಧ್ಯ. ಮುಂದೆ ಭೂಮಿಯನ್ನು ಹಂಚತಕ್ಕ ಕಾಲದಲ್ಲಿ ಎಷ್ಟು ಭೂಮಿ ಹಂಚಿದ್ದೀರಿ. ೧೯೬೧ರ ಆಕ್ಟ್ ಪ್ರಕಾರ ಎಷ್ಟು ಸಿಗುತ್ತಿತ್ತು, ೧೯೭೩ರಲ್ಲಿ ಏನು ಪ್ರಗತಿದಾಯಕವಾದ ಮಸೂದೆ ತಂದಿದ್ದೀರಿ ಅದರಿಂದ ಎಷ್ಟು ಸಿಗುತ್ತೆ ಎಂದು ಈ ಸಭೆಯಲ್ಲಿ ಹೇಳುವುದಕ್ಕೆ ಕಾಲಾವಕಾಶ ಇದೆ. ದಯಮಾಡಿ ಆ ವಿವರಣೆಯನ್ನು ಈ ಸಭೆಯಲ್ಲಿ ತಿಳಿಸಿ ಎಂದು ಹೇಳುತ್ತೇನೆ. ಸರ್ಕಾರದ ಜೊತೆಗೆ ಆ ವಿಷಯದಲ್ಲಿ ಏಕೆ ಸಹಕರಿಸಿದೆ ಎಂದು ಹೇಳಬೇಕಾಗಿದೆ ನಮ್ಮ ಪಕ್ಷದವರು, ೧೫ ಎಕರೆ ಗರಿಷ್ಟ ಮಿತಿ ಇರಬೇಕೆಂದು ಒಂದು ನಿಲುವನ್ನು ತಳೆದಿದ್ದರು ನಾನು ಆ ಬಗ್ಗೆ ಒಂದು ಡಿಸೆಂಟಿಂಗ್ ನೋಟ್ ಕೊಟ್ಟಿದ್ದೇನೆ. ಜಾಯಿಂಟ್ ಸಲೆಕ್ಟ್ ಕಮಿಟಿ ರಿಪೋರ್ಟ್ ಬಂದಮೇಲೆ ನಾನು ಒಂದು ತೀರ್ಮಾನಕ್ಕೆ ಬಂದಿದ್ದೆ. ಪಕ್ಷದ ಮುಖಂಡರ ಕೂಡ ಪ್ರಸ್ತಾಪ ಮಾಡಿದ್ದೇನೆ, ಏಕೆಂದರೆ ದೇಶದಲ್ಲಿ ಬಡವರಿಗೆ ಅನುಕೂಲ ಮಾಡುತ್ತೇವೆ ಎನ್ನುವ ವಾದವನ್ನು ಜನತೆ ಮುಂದೆ ಇಟ್ಟು ಆಶ್ವಾಸನೆ ಕೊಟ್ಟು ಬಂದಿರುವ ಸರ್ಕಾರದ ಆಕಾರ್ಯ ಸಾಧನೆಗೆ ಅಡ್ಡಿಪಡಿಸಿದರೆ, ಪ್ರತಿಗಾಮಿ ವಾದವನ್ನು ಪದೇ ಪದೇ ಹೂಡಲಿಕ್ಕೆ ಅನುಕೂಲವಾಗುತ್ತದೆ ಎನ್ನುವ ಅವಕಾಶಗಳನ್ನು ತೊಡೆದು ಹಾಕಬೇಕೆಂದು ೨೯ ತಿದ್ದುಪಡಿಗಳನ್ನು ಕೈ ಬಿಟ್ಟಿದ್ದೇವೆ. ಇಷ್ಟು ಸ್ಪಷ್ಟೀಕರಣ ಮಾಡಿದ್ದೇನೆ.

8. 00 P. M.

ದೇಶದಲ್ಲಿರತಕ್ಕ ಬಡವರಿಗೆ ಅದರಲ್ಲೂ ಜಮೀನು ಇಲ್ಲದೇ ಇರುವವರಿಗೆ ಭೂಮಿಯನ್ನು ಕೊಡುತ್ತೇವೆ ಎನ್ನುವ ವಾಗ್ದಾನ ಈಡೇರಿಸಿ ಎನ್ನುವ ಒಂದೇ ಒಂದು ದಿಸೆಯಿಂದ ನಾವು ಸಹಕರಿಸಿದ್ದೇವೆಯೇ ಹೊರತು ಮತ್ತೆ ಯಾವುದೇ ಒಂದು ಕಾರಣದಿಂದ ಅಲ್ಲ ಎಂದು ಈ ಸಂದರ್ಭದಲ್ಲಿ ತಿಳಿಸಲಿಕ್ಕೆ ಇಚ್ಛೆಪಡುತ್ತೇನೆ. ತಮ್ಮ ವಾಗ್ದಾನ ತಾವು ಕೊಟ್ಟಿರತಕ್ಕ ಭರವಸೆ, ಭೂ ರಹಿತರಾಗಿರತಕ್ಕ ಜನತೆಗೆ ಶ್ರೀಮಾನ್ ಬಸವಲಿಂಗಪ್ಪನವರು ಕೋಲಾರದಲ್ಲಿ ಭೂಮಿ ಕೊಡಲಿಕ್ಕೆ ಸಾಧ್ಯವಿಲ್ಲದೇ ಇದ್ದರೆ ಹಸು ಕೊಡುತ್ತೇವೆ ಎಂದು ಹೇಳಿದರು ಹಸು ಕೊಡುವುದು ಬೇಡ ಭೂಮಿ ಕೊಡಿ, ಭೂಮಿ ಕೊಡದೇ ಹೋದರೆ ಮೈಸೂರು ದೇಶದಲ್ಲಿ ಕೂಡ ದಿಂಡಿಗಲ್ ಚುನಾವಣೆ ಮರುಕಳಿಸುತ್ತದೆ ಎನ್ನುವ ಎಚ್ಚರಿಕೆ ಮಾತುಗಳನ್ನು ಹೇಳುತ್ತೇನೆ. ಸಂಸ್ಥಾ ಕಾಂಗ್ರೆಸ್ಸಿನ ಬಣ್ಣ ತೊಳೆಯುವುದಕ್ಕೆ ಕಾವೇರಿ ನೀರು ಸಾಲುವುದಿಲ್ಲ ಎಂದು ಮುಖ್ಯಮಂತ್ರಿಗಳು ಹೇಳಿದರು. ನಿಮ್ಮ ಬಣ್ಣವನ್ನು ಒಂದು ಕಡೆ ತುಂಗಭದ್ರಾ ನೀರಿನಿಂದ ಇನ್ನೊಂದು ಕಡೆ ಗಂಗಾ ಯಮುನಾ ನೀರಿನಿಂದಾ ತೊಳೆಯುವ ಕಾಲ ಬರುತ್ತದೆ ಎಂದು ನಾನು ಎಚ್ಚರಿಕೆಯ ಮಾತನ್ನು ಹೇಳುತ್ತೇನೆ. ಈ ಮಸೂದೆ ಸರ್ವಾನುಮತದಿಂದ ಪಾಸ್ ಆಗಿದ್ದರೆ ಚೆನ್ನಾಗಿತ್ತು. ಒಬ್ಬರ ವರ್ತನೆ ನನ್ನ ಮನಸ್ಸಿಗೆ ಸಮಾಧಾನವ ಗಿಲ್ಲ. ಕೆಲವು ಮಿತ್ರರು ವಾಕ್‌ಔಟ್ ಮಾಡಿದ್ದಾರೆ. ಈ ಸಭೆಯ ಘನತೆಗೆ, ಗಾಂಭೀರ್ಯಕ್ಕೆ ಮೀರಿ ಕೆಲವು ಘಟನೆಗಳು ನಡೆದಿವೆ. ಈ ಒಂದು ಮಸೂದೆಯನ್ನು ಪಾಸು ಮಾಡುತ್ತಾ ಇರುವ ಕಾಲದಲ್ಲಿ ನನ್ನ ಪೂರ್ಣ ಸಹಕಾರವನ್ನು ನಿಮ್ಮ ಸರ್ಕಾರಕ್ಕೆ ಕೊಟ್ಟಿದ್ದೇನೆ. ಆದರೆ ಎಲ್ಲಾ ಸಂದರ್ಭದಲ್ಲೂ ನನ್ನ ಸಹಕಾರವನ್ನು ಅಪೇಕ್ಷೆ ಮಾಡುವುದಕ್ಕೆ ಸಾಧ್ಯವಿಲ್ಲಾ. ನಾನು ಈ ಮಸೂದೆಗೆ ಸಹಕಾರ ಕೊಟ್ಟಿದ್ದಕ್ಕೆ ನನ್ನ ವಿವರಣೆಯನ್ನು ಕೊಟ್ಟು ನನ್ನ ಮಾತನ್ನು ಮುಗಿಸುತ್ತೇನೆ.

Madam SPEAKER :—The question is :—

"That the Mysore Land Reforms (Amendment) Bill, 1973, as amended, be passed."

The motion was unanimously adopted and the Bill was passed

Madam SPEAKER :—The House now stands adjourned to meet tomorrow at 1.00 P. M.

The House adourned at Two minutes past Eight of the Clock to meet again at One of the Clock on Friday, the 1st June 1973.

WD 20397—GPB—510—24-8-1973.